ಮನುಕುಲ ಲೋಕಮುಖಿಯಾಗಿ ಬದುಕುವುದಕ್ಕೂ ಸತ್ಕರ್ಮದಲ್ಲಿ ತೊಡಗಿಕೊಳ್ಳುವುದಕ್ಕೂ ಧರ್ಮ ಜ್ಞಾನ ಬೇಕಾಗುತ್ತದೆ. ದುರ್ಬುದ್ಧಿಯನ್ನು ದೂರ ಮಾಡುವ ಶಕ್ತಿ ಧರ್ಮಕ್ಕಿದೆ. ಹಿತಾಹಿತಗಳ ಪರಿಕಲ್ಪನೆಯನ್ನು ನೀಡಿ ಸತ್ಕರ್ಮದಲ್ಲಿ ತೊಡಗಿಸುವ ಕಾರ್ಯವನ್ನು ಧರ್ಮ ಮಾಡುತ್ತದೆ.

ಕೇಳುವಿಕೆಯಿಂದಲೇ ಜ್ಞಾನ ವಿಸ್ತಾರಗೊಳ್ಳುತ್ತದೆ. ಧರ್ಮಶಾಸ್ತ್ರಾದಿಗಳ ವಚನ, ಧರ್ಮಜ್ಞ ಹಿತೋಕ್ತಿ, ಜೀವನಾನುಭವಗಳ ಕಥನಗಳು ಆಸಕ್ತರ ಬದುಕಿಗೆ ಬೆಳಕಾಗುತ್ತವೆ, ಜ್ಞಾನವನ್ನು ಪಕ್ವಗೊಳಿಸುತ್ತವೆ. ಜ್ಞಾನಿಯಾದ ಮೇಲೆ ಕೈಗೊಳ್ಳುವ ಕಾರ್ಯವೆಲ್ಲವೂ ವಿವೇಕವಾಗಿರುತ್ತದೆ. ಅಧ್ಯಾತ್ಮದ, ಮೋಕ್ಷಪರವಾದತತ್ತ್ವೋಪದೇಶದಮಾತುಗಳು, ಜ್ಞಾನ ಬಿಂದುಗಳು ಮೋಕ್ಷಕ್ಕೆ ಪೂರಕವಾಗಿ ನಿಲ್ಲುತ್ತವೆ.

ಮೋಕ್ಷವೆಂಬುದು ಪರಮೋನ್ನತವಾದ ಸ್ಥಾನ. ಒಮ್ಮೆ ಮೋಕ್ಷವನ್ನು ಪಡೆದ ಮೇಲೆ ಜನನ ಮರಣಗಳ ಚಕ್ರದಿಂದ ಬಿಡುಗಡೆ ಹೊಂದುತ್ತಾನೆ. ಸಾಧಕರು ಬಯಸುವುದು ಈ ಶಾಶ್ವತ ಪದವನ್ನು. ಹಂತ ಹಂತವಾಗಿ ಮೋಕ್ಷವನ್ನು ಹೇಗೆ ಪಡೆಯಬಹುದು, ಪೂರ್ವಭಾವಿಯಾಗಿ ಏನೆಲ್ಲಾ ಮಾಡಬೇಕು, ಯಾವ ಬಗೆಯ ಸಿದ್ಧತೆ ನಡೆಸಬೇಕು ಎಂಬುದರ ಬಗ್ಗೆ ಈ ಶ್ಲೋಕ ತಿಳಿಸಿ ಕೊಡುತ್ತದೆ.

ಕೇವಲ ಎಣಿಸುವುದರಿಂದ, ಬಯಸುವುದರಿಂದ ಯಾರೂ ಮೋಕ್ಷಕ್ಕೆ ಅರ್ಹರೆನಿಸರು. ಮೊದಲಿನಿಂದಲೂ ಆ ದಿಸೆಯಲ್ಲಿ ಪ್ರಯತ್ನ ನಡೆಸಿ ತಮ್ಮನ್ನು ಅಣಿಗೊಳಿಸಬೇಕು. ಆಗ ಮಾತ್ರ ಸಾಧ್ಯವಾದೀತು. ಕವಿಯು ಉಲ್ಲೇಖಿಸಿದ ಮಾರ್ಗದಲ್ಲಿ ಸಾಗಿದರೆ ಮೋಕ್ಷವೆಂಬುದು ಎಲ್ಲರಿಂದಲೂ ಪಡೆಯಲು ಅಸಾಧ್ಯವಾದರೂ ಒಬ್ಬ ಉತ್ತಮ ವ್ಯಕ್ತಿಯಾಗಿ ಲೋಕಪ್ರಿಯನಾಗಿ ಮೂಡಿಬರಲು ಸಾಧ್ಯವಾಗುತ್ತದೆ. ಈ ಕಾರಣದಿಂದಲಾದರೂ ಪ್ರಯತ್ನ ನಡೆಸಬೇಕು. ರಾಷ್ಟ್ರದ, ಸಮಾಜದ ಸಭ್ಯವ್ಯಕ್ತಿಯಾಗಿ ಎಲ್ಲರ ಮೆಚ್ಚುಗೆಗಾದರೂ ಪಾತ್ರನಾಗಬಹುದು.

ಬೆಳೆಗಳಿಗೆ ಪೂರಕ 'ಗೋಕೃಪಾಮೃತ'



• ಕೆ.ಎನ್. ಶೈಲೇಶ್ ಹೊಳ್ಳ
shyleshholla@gmail.com

ಕಳೆದೆರಡು ವಾರದ ಹಿಂದೆ ಸ್ವತಃ ಗೋಪಾಲ್ ಸುತಾರಿಯಾರವರು ಗುಜರಾತ್‌ನ ಗಾಂಧೀನಗರದಿಂದ ಬೆಂಗಳೂರಿನ ಶಿವಾನಂದ ವೃತ್ತದಲ್ಲಿರುವ ಗಾಂಧೀ ಭವನಕ್ಕೆ ಗೋಕೃಪಾಮೃತದ ಪ್ರಚಾರದ ನಿಮಿತ್ತ ಏರ್ಪಡಿಸಿದ್ದ ರೈತರೊಂದಿಗಿನ ಸಂವಾದ ಕಾರ್ಯಕ್ರಮಕ್ಕೆ ಆಗಮಿಸಿದ್ದರು. ರಾಜ್ಯದ ಹಲವು ಜಿಲ್ಲೆಗಳಿಂದ ಸಾಕಷ್ಟು ರೈತರು, ಗೋಪಾಲಕರು ಸೇರಿದಂತೆ ಸಮಾಜಮುಖಿ ಕಾರ್ಯದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿರುವ ಸಾಕಷ್ಟು ಜನ ಭಾಗವಹಿಸಿದ್ದರು. ತುಂಬಿದ ಸಭಾಂಗಣವನ್ನು ಉದ್ದೇಶಿಸಿ ಇವರು ನೀಡಿದ ಮಾಹಿತಿ ಬಂದಂತಹವರನ್ನು ದಿಗ್ಭ್ರಮೆಗೊಳಿಸಿತ್ತು, ಮೂಕವಿಸ್ಮಿತರನ್ನಾಗಿಸಿತ್ತು. ಕಾರ್ಯಕ್ರಮದ ಕೊನೆಯಲ್ಲಿ ಗೋಕೃಪಾಮೃತವನ್ನು ಉಚಿತವಾಗಿ ಹಂಚಲಾಯಿತು. ಆಗಷ್ಟೇ ನನಗೆ ಅರಿವಾಗಿದ್ದು, ಬಂದವರಲ್ಲಿ ಬಹುತೇಕರು ಬರುವಾಗ ತಮ್ಮೊಂದಿಗೆ ಒಂದು ಖಾಲಿ ಬಾಟಲಿಯನ್ನು ಹಿಡಿದು ತಂದಿದ್ದರ ಹಿಂದಿನ ಮರ್ಮ.

ಇಂದು ಭಾರತ ಸುಭದ್ರವಾಗಿರಬೇಕೆಂದರೆ ಇಲ್ಲಿಯ ಪ್ರತಿಯೊಬ್ಬ ರೈತ ಆರ್ಥಿಕವಾಗಿಮತ್ತುಮಾನಸಿಕವಾಗಿಸದೃಢನಾಗಬೇಕು.ಆಗಷ್ಟೇದೇಶವಾಸಿಗಳು ಆರೋಗ್ಯದಿಂದ ಸದೃಢರಾಗಿ ಸ್ವಾಸ್ಥ್ಯ ಸಮಾಜವನ್ನು ಕಟ್ಟಲು ಸಾಧ್ಯ. ಹೀಗಾಗಿ ರಾಸಾಯನಿಕ ಮುಕ್ತ ಮತ್ತು ಸಾವಯವ ಕೃಷಿಯಲ್ಲಿ ಬೆಳೆದ ಆಹಾರ ಧಾನ್ಯಗಳನ್ನು ಪ್ರತಿಯೊಬ್ಬರು ಮುಂದೊಂದು ದಿನ ಸೇವಿಸುವಂತಾಗಬೇಕು. ಇದೇ ಕಾರಣಕ್ಕೆ ಗೋಕೃಪಾಮೃತದ ಕುರಿತಂತೆ ಜಾಗೃತಿ ಮೂಡಿಸುವುದು ಇಂದಿನ ದಿನಗಳಲ್ಲಿ ಅತ್ಯವಶ್ಯಕವೂ ಮತ್ತು ಅನಿವಾರ್ಯವೂ ಆಗಿದೆ ಎಂಬುದು ಕಾರ್ಯಕ್ರಮದ ಕೊನೆಯಲ್ಲಿ ಬಂದವರೆಲ್ಲರಿಗೂ ಅರಿವಾಗಿತ್ತು.

ಗೋಪಾಲ್ ಸುತಾರಿಯಾರವರಲ್ಲಿರುವ ಜ್ಞಾನಕ್ಕೆ ಒಂದೆರಡು ಗಂಟೆಗಳ ಸೀಮಿತ ಅವಧಿ ಇವರಿಗೆ ಏನೂ ಅಲ್ಲ ಎಂಬುದು ಅಂದೇ ನನಗೂ ಅರಿವಿಗೆ ಬಂದಿದ್ದು. ಇವರೊಬ್ಬ ನಡೆದಾಡುವ ಗೋಜ್ಞಾನಿ. ಸ್ವತಃ ಒಂದು ಗೋಶಾಲೆಯನ್ನು ನಡೆಸುತ್ತಿರುವ ಇವರಿಗೆ ಗೋವಿನ ಬಗ್ಗೆ, ಗೋವಿನ ಉತ್ಪನ್ನಗಳ ಬಗ್ಗೆ, ಗೋ ಆಧಾರಿತ ಸಾಂಪ್ರದಾಯಿಕ ಕೃಷಿಯ ಬಗ್ಗೆ ಮತ್ತು ಮನುಷ್ಯನಿಗೆ ಬಾಧಿಸುವ ನಾನಾ ಕಾಯಿಲೆಗಳಿಗೆ ಗೋವು ಮತ್ತು ಗೋವಿನ ಉತ್ಪನ್ನಗಳಿಂದ ಪರಿಹಾರವನ್ನೊದಗಿಸುವ ಕುರಿತಂತೆ ಅಪಾರವಾದ ಜ್ಞಾನವಿದೆ. ಕೇಳುಗರ ಪ್ರಶ್ನೆಗಳಿಗೆ ಸಮಾಧಾನವಾಗಿ ಮತ್ತು ದೀರ್ಘವಾಗಿಇವರು ನೀಡುವ ಉತ್ತರ ಇವರ ತಾಳ್ಮೆಯನ್ನು ಪರೀಕ್ಷೆಗೊಳಪಡಿಸುತ್ತದೆ.ಹಸನ್ಮುಖರಾದ ಇವರ ಪ್ರತಿಯೊಂದು ಮಾತು ಬಂದವರನ್ನು ಆಲಿಸುವಂತೆ ಮಾಡುತ್ತದೆ. ಹೀಗಾಗಿಯೇ ಅಂದು ಬಂದಿದ್ದ ಪ್ರತಿಯೊಬ್ಬರ ಮುಖ ಮನದಲ್ಲಿ ಈ ಕಾರ್ಯಕ್ರಮ ನಮ್ಮ ಇಂದಿನ ಸಮಯವನ್ನು ವ್ಯರ್ಥ ಮಾಡಲಿಲ್ಲ, ಬದಲಿಗೆ ಇನ್ನಷ್ಟು ಜ್ಞಾನವನ್ನು ಹೊಂದಲು ಸಹಕಾರಿಯಾಯಿತು ಎಂಬ ಭಾವನೆಯನ್ನು ಮೂಡಿಸಿದ್ದು ಎದ್ದು ಕಾಣುತ್ತಿತ್ತು.

ಭಾರತದ ವಿವಿಧ ರಾಜ್ಯಗಳಲ್ಲಿ ಲಕ್ಷಾಂತರ ರೈತರು ಇಂದು ಗೋಕೃಪಾಮೃತವನ್ನು ಕೃಷಿಯಲ್ಲಿ ಬಳಸುತ್ತಿರುವುದರ ಪರಿಣಾಮ ಬೆಳೆದ ಬೆಳೆಯ ಉತ್ಪಾದನೆ ಇಮ್ಮಡಿ ಮುಮ್ಮಡಿಯಾಗಿದ್ದು, ಗುಣಮಟ್ಟವು ಸಹ ಶ್ರೇಷ್ಠವಾಗಿರುವುದು ಕಂಡುಬಂದಿದೆ. ಇದರಿಂದ ರೈತರ ಆರ್ಥಿಕ ಸ್ಥಿತಿಯೂ ಸುಧಾರಿಸುತ್ತಿರುವುದು ಗೋಚರವಾಗಿದೆ. ಹೀಗಾಗಿ ಅನೇಕ ರೈತರು ಇದನ್ನಿಂದು ತಮ್ಮ ಕೃಷಿ ಪದ್ಧತಿಗಳನ್ನು ಸಂಪೂರ್ಣವಾಗಿ ಬದಲಾಯಿಸಿದ ಕ್ರಾಂತಿಕಾರಿ ಉತ್ಪನ್ನವೆಂದೇ ಪರಿಗಣಿಸುವಂತಾಗಿದೆ. ಇದನ್ನು ಬಳಸುವುದರಿಂದ ಕೃಷಿಯಲ್ಲಿ ವಿಭಿನ್ನ ಮಟ್ಟವನ್ನು ತಲುಪಬಹುದು ಎಂಬುದು ರುಜುವಾತಾಗಿದೆ. ಇದು ಪರಿಸರ ಸ್ನೇಹಿ ಮಾತ್ರವಲ್ಲದೆ ಉತ್ತಮ ಗುಣಮಟ್ಟದ ಮತ್ತು ಹೆಚ್ಚಿನ ಇಳುವರಿ ನೀಡುವ ಬೆಳೆಗಳನ್ನು ಉತ್ಪಾದಿಸಲು ರೈತರಿಗೆ ಸಹಾಯ ಮಾಡುವುದು ಶತಃಸಿದ್ಧವಾಗಿದೆ. ಹೇಳಬೇಕೆಂದರೆ ಈ ಉತ್ಪನ್ನವು ಸಾವಯವ ಮತ್ತು ನೈಸರ್ಗಿಕ ಕೃಷಿಯತ್ತ ರೈತರು ಮತ್ತೆ ಮರಳಲು ಬೇಕಾದ ಒಂದು ಪ್ರಮುಖ ಹೆಜ್ಜೆಯಾಗಿದ್ದು, ಭವಿಷ್ಯದಲ್ಲಿ ಗೋಆಧಾರಿತ ಕೃಷಿಯನ್ನು ಪುನರುತ್ಥಾನಗೊಳಿಸುವ ನಿಟ್ಟಿನಲ್ಲಿ ಸಹಕಾರಿಯಾಗಿದೆ.

ಇವರೇ ಹೇಳುವಂತೆ ಗೋಕೃಪಾಮೃತ ಎಂಬುದೊಂದು ದುರ್ಬಲ ಪ್ರಜಾತಿಯ ದೇಶಿ ಗೋವುಗಳ ಪಂಚಗವ್ಯದ ಮಿಶ್ರಣವಾಗಿದೆಯಂತೆ. ಮುಖ್ಯವಾಗಿ ಇದರಲ್ಲಿ ಸುಮಾರು 40ಕ್ಕೂ ಹೆಚ್ಚು ವಿವಿಧ ಸ್ನೇಹಿ ಬ್ಯಾಕ್ಟೀರಿಯಾಗಳಿದ್ದು, ಇದು ಮಣ್ಣಿನ ಗುಣಮಟ್ಟ ಮತ್ತು ರಚನೆಯನ್ನು ಸುಧಾರಿಸುತ್ತದೆ. ಇದರ ಬಳಕೆಯಿಂದ ಸಸ್ಯಗಳ ರೋಗನಿರೋಧಕ ಕ್ಷಮತೆ ಹೆಚ್ಚುತ್ತದೆ. ಇದರಿಂದ ಸಹಜವಾಗಿ ಬೆಳೆಯ ಗುಣಮಟ್ಟ ಮತ್ತು ಉತ್ಪಾದನೆ ಹೆಚ್ಚುತ್ತದೆ. ಈ ಉತ್ಪನ್ನವು ಸಂಪೂರ್ಣವಾಗಿ ನೈಸರ್ಗಿಕ ಮತ್ತು ಸಾವಯವವಾಗಿದ್ದು, ರಾಸಾಯನಿಕ ಗೊಬ್ಬರ ಮತ್ತು ಕೀಟನಾಶಕಗಳಿಗೆ ಪರಿಪೂರ್ಣ ಪರ್ಯಾಯವಾಗಿದೆ.



ಮುಖ್ಯ ವಿಚಾರವೇನೆಂದರೆ ಈ ದ್ರಾವಣದ ಪ್ರಯೋಗವನ್ನು ಮಾಡುವುದರಿಂದಭೂಮಿಯಲ್ಲಿದೊಡ್ಡಪ್ರಮಾಣದಎರೆಹುಳುಗಳವೃದ್ಧಿಯಾಗುವುದು ಕಂಡುಬಂದಿದೆ. ಹೀಗಾಗಿ ಎರೆಹುಳು ಗೊಬ್ಬರವನ್ನು ಬಳಸುವ ಅವಶ್ಯಕತೆ ಇದನ್ನು ಬಳಸಿದ ನಂತರ ಅಷ್ಟಾಗಿ ಬರುವುದಿಲ್ಲ. ಇದರ ಪ್ರಯೋಗದಿಂದ ಭೂಮಿಯ ಗುಣ ಮತ್ತು ಸತ್ವ ವೃದ್ಧಿಯಾಗಿರುವುದು ಲ್ಯಾಬೋರೇಟರಿ ಪರೀಕ್ಷೆಗಳಿಂದ ರುಜುವಾತಾಗಿದೆ. ವಿಶೇಷವಾಗಿ ಇದನ್ನು ಬಳಸಿ ಬೆಳೆದ ವಿವಿಧ ತರಕಾರಿ ಬೆಳೆಗಳು ಹಾಗೂ ತೋಟಗಳಲ್ಲಿನ ಕೃಷಿಯಲ್ಲಿ ಹೆಚ್ಚುವರಿ ಆದಾಯ ಬಂದಿರುವುದಕ್ಕೆ ರಾಜ್ಯದಲ್ಲಿನ ಲಕ್ಷಾಂತರ ರೈತರೇ ಜ್ವಲಂತ ಸಾಕ್ಷಿಯಾಗಿದ್ದಾರೆ.

ಗೋಕೃಪಾಮೃತವನ್ನು ತಯಾರಿಸುವ ವಿಧಾನ ಅತ್ಯಂತ ಸರಳ ಹಾಗೂ ಸುಲಭವೂ ಆಗಿದೆ. ಯಾವುದೇ ವಯೋಮಿತಿ ಇಲ್ಲದೆ ಮನೆಯ ಸದಸ್ಯರಲ್ಲಿ ಯಾರಾದರೊಬ್ಬರು ದಿನದಲ್ಲಿ ಒಂದೈದು ನಿಮಿಷ ಇದಕ್ಕಾಗಿ ಸಮಯ ಕೊಟ್ಟು ಮಾಡಬಹುದಾದ ಸರಳ ವಿಧಾನವಾಗಿದೆ. ಮೊದಲಿಗೆ ಒಂದು ಬಕೆಟ್‌ನಲ್ಲಿ ಸ್ವಲ್ಪ ನೀರನ್ನು ತೆಗೆದುಕೊಂಡು ಅದರಲ್ಲಿ ಎರಡು ಕೆಜಿ ರಾಸಾಯನಿಕ ಮುಕ್ತವಾದ ದೇಶಿ ಬೆಲ್ಲವನ್ನು ಹಾಕಿ ಚೆನ್ನಾಗಿ ಮಿಶ್ರಣ ಮಾಡಬೇಕು. ಆ ಬೆಲ್ಲದ ನೀರನ್ನು ಡ್ರಮ್‌ನಲ್ಲಿರುವ ಇನ್ನೂರು ಲೀಟರ್ ನೀರಿಗೆ ಹಾಕಬೇಕು. ಅದೇ ದಿನದ ದೇಶಿ ಗೋವಿನ ಎರಡು ಲೀಟರ್ ಮಜ್ಜಿಗೆಯನ್ನು ನಂತರ ಅದಕ್ಕೆ ಸೇರಿಸಬೇಕು. ಇಲ್ಲವಾದಲ್ಲಿ ಒಂದೆರಡು ದಿನದ ದೇಶಿ ಗೋವಿನ ಮಜ್ಜಿಗೆಯೂ ಆಗುತ್ತದೆ. ಆದರೆ ಬಹಳ ಹಳೆಯ ಮಜ್ಜಿಗೆಯನ್ನು ಹಾಕಬಾರದು. ಹಾಕಿದಲ್ಲಿ ಅದು ವ್ಯತಿರಿಕ್ತ ಪರಿಣಾಮವನ್ನು ಬೀರುತ್ತದೆ ಎಂದು ಹೇಳಲಾಗುತ್ತದೆ. ಹೀಗೆ ಮಿಶ್ರಣ ಮಾಡಿದ ದ್ರಾವಣದ ಡ್ರಮ್‌ನ್ನು ಸಾಧ್ಯವಾದಷ್ಟು ನೆರಳಿನಲ್ಲಿಯೇ ಇಡಬೇಕು. ಮರದ ನೆರಳು ಹೆಚ್ಚು ಸೂಕ್ತವಾದುದು. ಅನಂತರ ಡ್ರಮ್‌ನ ಬಾಯಿಯನ್ನು ಒಂದು ಸ್ವಚ್ಛ ಹತ್ತಿಯ ಬಟ್ಟೆಯಿಂದ ಮುಚ್ಚಿಟ್ಟು ಕಟ್ಟಿಡಬೇಕು. ಏಕೆಂದರೆ ಅದರ ಒಳಗೆ ಯಾವುದೇ ಕ್ರಿಮಿ ಕೀಟಗಳು ಸೇರಿದಂತೆ ಯಾವುದೇ ಜೀವಿಗಳು ಬೀಳಬಾರದು. ಒಂದೊಮ್ಮೆ ಮರದ ನೆರಳು ಇಲ್ಲವಾದಲ್ಲಿ ಹಸಿರು ಬಲೆ ಅಥವಾ ಶೇಡ್ ನೆಟ್‌ನಿಂದ ನೆರಳನ್ನು ತಾತ್ಕಾಲಿಕವಾಗಿ ಕಲ್ಪಿಸಿ ಅದರ ಅಡಿಯಲ್ಲಿ ದ್ರಾವಣದ ಡ್ರಮ್‌ನ್ನು ಇಡಬಹುದು. ಸ್ವಚ್ಛವಾಗಿರುವ ಒಂದು ಕೋಲಿನಿಂದ ಪ್ರತಿನಿತ್ಯ ಎರಡರಿಂದ ನಾಲ್ಕು ನಿಮಿಷ ಬೆಳಿಗ್ಗೆ ಮತ್ತು ಸಂಜೆ ಈ ದ್ರಾವಣವನ್ನು ತಿರುಗಿಸಬೇಕು. ಎಡದಿಂದ ಬಲಕ್ಕೆ ತಿರುಗಿಸಿದಲ್ಲಿ ಒಳಿತು. ಹೀಗೆ ಪ್ರತಿನಿತ್ಯ ಮಾಡಿದಲ್ಲಿ ಆರರಿಂದ ಏಳು ದಿನಗಳಲ್ಲಿ ಬೆಳೆಗಳಿಗೆ ಪೂರಕವಾದ ಗೋಕೃಪಾಮೃತ ತಯಾರಾಗುತ್ತದೆ. ಹೀಗೆ ತಯಾರಾದ ಗೋಕೃಪಾಮೃತವನ್ನು ನಂತರ ಹೊಲ ಗದ್ದೆಗಳಿಗೆ ಮತ್ತು ಬೆಳೆಗಳಿಗೆ ಸಿಂಪಡಿಸಬಹುದು. ಎಲ್ಲವನ್ನು ಸಿಂಪಡಿಸಿ ಕೇವಲ ಹತ್ತು ಲೀಟರ್‌ನಷ್ಟು ಮಾತ್ರ ಉಳಿದಾಗ ಪುನಃ ಅದರಲ್ಲಿ ಇನ್ನೂರು ಲೀಟರ್ ನೀರು, ಎರಡು ಕೆಜಿ ದೇಶಿ ಬೆಲ್ಲದ ನೀರು ಮತ್ತು ಎರಡು ಲೀಟರ್ ದೇಶಿ ಗೋವಿನ ತಾಜಾ ಮಜ್ಜಿಗೆಯನ್ನು ಹಾಕಿ ದಿನದಲ್ಲಿ ಎರಡು ಬಾರಿ ಎರಡರಿಂದ ನಾಲ್ಕು ನಿಮಿಷ ಒಂದು ಕೋಲಿನಿಂದ ತಿರುಗಿಸಿದಲ್ಲಿ ಪುನಃ ಒಂದು ವಾರದಲ್ಲಿ ಇನ್ನೂರು ಲೀಟರ್ ಗೋಕೃಪಾಮೃತ ತಯಾರಾಗುತ್ತದೆ.

ಹೀಗೆ ತಯಾರಾದ ಗೋಕೃಪಾಮೃತವು ವರ್ಷದಲ್ಲಿ ಸುಮಾರು ನಾಲ್ಕು ಬಾರಿ ತನ್ನ ಬಣ್ಣವನ್ನು ಬದಲಾಯಿಸುತ್ತದೆ. ಹಳೆಯದಾದರೆ ಹಸಿರು ಬಣ್ಣದಾಗುತ್ತದೆ ಮತ್ತು ಸ್ವಲ್ಪ ಕಪ್ಪು ಬಣ್ಣದಲ್ಲಿ ಕಂಡುಬರುತ್ತದೆ. ಯಾವುದೇ ಬಣ್ಣ ಬದಲಾದರೂ ಇದರ ಗುಣ ಮಾತ್ರ ಬದಲಾಗದೇ ಇರುವುದು ಇದರ ವಿಶೇಷ. ಒಂದೊಮ್ಮೆ ದ್ರಾವಣವು ಹಳೆಯದಾಗಿದ್ದು ಅದರಲ್ಲಿ ಸಣ್ಣ ಪುಟ್ಟ ಕ್ರಿಮಿ ಕೀಟಗಳು ಬಿದ್ದಿದ್ದರೆ ಅದನ್ನು ಹೊರತೆಗೆದು ನಂತರ ಎಂದಿನಂತೆ ಉಪಯೋಗಿಸಬಹುದು. ಈ ದ್ರಾವಣವನ್ನು ಏಳುದಿನದನಂತರಇಲ್ಲವೇಒಂದುತಿಂಗಳನಂತರವೂಸಹಉಪಯೋಗಿಸಬಹುದು. ಇದರ ವಾಸನೆ ಪರಿಸ್ಥಿತಿಗೆ ತಕ್ಕಂತೆ ಬೇರೆ ಬೇರೆಯಾಗಿರಬಹುದು. ಒಮ್ಮೊಮ್ಮೆ ಮೇಲಕ್ಕೆ ಕೆನೆ ಕಟ್ಟಬಹುದು, ಕೆನೆ ಕಟ್ಟದೆಯೂ ಇರಬಹುದು. ಆದರೆ ಈಗಾಗಲೇಹೇಳಿದಂತೆಗುಣಮಾತ್ರ ಬದಲಾಗುವುದಿಲ್ಲ. ಇನ್ನೂ ಹೆಚ್ಚಿನಮಾಹಿತಿಗಾಗಿ ತಾವಿರುವ ಸಮೀಪದಲ್ಲಿ ಇದನ್ನು ಬಳಸುತ್ತಿರುವವರನ್ನು ಮುಖತಃ ಸಂಪರ್ಕಿಸಿಪ್ರಾತ್ಯಕ್ಷಿಕೆಮಾಹಿತಿಯನ್ನುಪಡೆದುಕೊಂಡರೆಒಳ್ಳೆಯದು. ಹಾಗೆಯೇ ಅಲ್ಲಿಂದ ಕನಿಷ್ಠ ಒಂದು ಲೀಟರ್ ಗೋಕೃಪಾಮೃತವನ್ನು ತಂದು ಮನೆಯಲ್ಲಿಯೇ ತಯಾರಿಸಿಕೊಳ್ಳಬಹುದು. ಹೀಗೆ ಪ್ರತಿಯೊಬ್ಬ ರೈತರು ಮಾಡಿದ್ದಲ್ಲಿ ಬೆವರಿಗೆ ತಕ್ಕ ಬೆಲೆಯನ್ನು ಪಡೆದು ಆರ್ಥಿಕ ಸುಧಾರಣೆಯನ್ನು ಕಾಣಬಹುದು. ಇದೇ ಗೋಪಾಲ್ ಸುತಾರಿಯಾರವರ ಆಶಯ ಮತ್ತು ಕನಸು.

ಭಾರತದ ಸಂವಿಧಾನವನ್ನು ಅಂಬೇಡ್ಕರ್ ಸಂವಿಧಾನ ಎಂದೆನ್ನುವ ಮುನ್ನ...

▸ ಪ್ರಸಾದ್ ಕುಮಾರ್ ಮಾರ್ನಬೈಲ್

'ಸಂವಿಧಾನದ ಕರಡು ರಚನೆಯ ವಿಚಾರದಲ್ಲಿ ನನಗೆ ನೀಡಿರುವ ಶ್ರೇಯಸ್ಸು ಅದು ನಿಜವಾಗಿಯೂ ನನಗೆ ಸೇರಿದ್ದಲ್ಲ ಬದಲಾಗಿ ಅದು ಸಂವಿಧಾನದ ಸ್ಥೂಲ ಕರಡನ್ನು ಸಿದ್ಧಪಡಿಸಿರುವ ಸಂವಿಧಾನ ಸಭೆಯ ಸಾಂವಿಧಾನಿಕ ಸಲಹೆಗಾರರಾದ ಬಿ.ಎನ್ ರಾವ್ ಅವರಿಗೆ ಸೇರಿದ್ದು' (The credit that is given to me does not really belong to me. It belongs partly to Sir B.N. Rau the Constitutional Advisor to the Constituent Assembly who prepared a rough draft of the Constitution for the consideration of the Drafting Committee.)

ಇದು 1949ರ ನವೆಂಬರ್ 25ರಂದು ಸಂವಿಧಾನ ಸಮಿತಿಯಲ್ಲಿ ಸ್ವತಃ ಡಾ.ಬಿ.ಆರ್.ಅಂಬೇಡ್ಕರ್ ಅವರಾಡಿದ ಮಾತುಗಳು! ಈ ಮೂಲಕ ದೇಶಗಳನ್ನು ಸುತ್ತಿ ಕೋಶಗಳನ್ನು ಓದಿ ಸಂವಿಧಾನ ರಚನೆಗೆ ಆಮೂಲಾಗ್ರ ಕಾಣಿಕೆ ಸಲ್ಲಿಸಿದ ಬೆಣಗಲ್ ನರಸಿಂಗ ರಾವ್ ಅವರಿಗೆ ಸ್ವತಃ ಅಂಬೇಡ್ಕರ್‌ರವರೇ ಅಂದು ಸೆಲ್ಯೂಟ್ ಹೊಡೆದಿದ್ದರು. ಆದರೆ ಕಾಲದ ಜೊತೆಗಿನ ಓಡುವಿಕೆಯಲ್ಲಿ ನಾವುಗಳು ಮಾತ್ರ 'ರಾವ್' ಅವರನ್ನು ಬದಿಗೆ ಸರಿಸಿ ಬರೇ ಅಂಬೇಡ್ಕರ್‌ರವರನ್ನು ಮಾತ್ರ ಹಿಡಿದುಕೊಂಡಿದ್ದೇವೆಯೇನೋ ಎಂದೆನ್ನಿಸುತ್ತಿದೆ!

ಭಾರತದ ಸಂವಿಧಾನ ಅದು ಒಂದು ದಿನದ ಅಥವಾ ಓರ್ವ ವ್ಯಕ್ತಿಯ ಪರಿಶ್ರಮವಂತು ಅಲ್ಲವೇ ಅಲ್ಲ! ನಿಸ್ಸಂಶಯವಾಗಿ ಭಾರತದ ಸಂವಿಧಾನದ ರಚನೆಯ ಹಿಂದ ಡಾ.ಬಿ.ಆರ್.ಅಂಬೇಡ್ಕರ್‌ರವರ ದೊಡ್ಡ ಪರಿಶ್ರಮವಿದೆ. ಹಾಗಂತ ಭಾರತದ ಸಂವಿಧಾನವನ್ನು ಇಡಿಯಾಗಿ 'ಅಂಬೇಡ್ಕರ್ ಸಂವಿಧಾನ'ವೆಂದು ಘೋಷಿಸುವುದು ನಿಜಕ್ಕೂ ಒಪ್ಪತಕ್ಕ ವಿಚಾರವಲ್ಲ. ಬದಲಾಗಿ ಈ ರೀತಿಯಾಗಿ ಹೇಳುವುದು ಅದು ಸಂವಿಧಾನ ರಚನಾ ಸಮಿತಿಗೆ, ಅದರ ಹಿಂದೆ ಅವಿರತವಾಗಿ ಶ್ರಮಿಸಿದ ಇತರ ಸದಸ್ಯರುಗಳಿಗೆ ಮಾಡುವಂತಹ ಅಪಮಾನವಾಗುತ್ತದೆಯಷ್ಟೇ. ಅದರಲ್ಲೂ ಕರ್ನಾಟಕದ (ಮಂಗಳೂರಿನ) ಶ್ರೀಯುತ ಬೆಣಗಲ್ ನರಸಿಂಗ ರಾವ್ (ಬಿ.ಎನ್ ರಾವ್)ರಂಥ ಅಪ್ರತಿಮ ವ್ಯಕ್ತಿತ್ವಕ್ಕೆ ಮಣ್ಣೆರಚಿದಂತಾಗುತ್ತದೆ! ಹೌದು, ಭಾರತದ ಸಂವಿಧಾನದ ರಚನೆಯ ಹಿಂದೆ ಹಲವಾರು ವ್ಯಕ್ತಿಗಳ ಕಠಿಣ ಪರಿಶ್ರಮವಿದೆ. ಅದೇನು ಓರ್ವ ವ್ಯಕ್ತಿಯಿಂದ ರಚಿಸಲ್ಪಟ್ಟ ಪುಸ್ತಕವಲ್ಲ. ಬೇರೆ ಬೇರೆ ವ್ಯಕ್ತಿಗಳು ಬೇರೆ ಬೇರೆ ರೀತಿಯಲ್ಲಿ ತಮ್ಮದೇ ಆದ ಕೊಡುಗೆಗಳನ್ನು ನೀಡಿದ್ದಾರೆ ಎಂಬುದನ್ನು ಅಲ್ಲಗಳೆಯುವಂತಿಲ್ಲ ಹಾಗೂ ಅಲ್ಲಗಳೆಯಬಾರದು.

ಸಂವಿಧಾನ ರಚನೆಯ ಹಾದಿಯತ್ತ ನೋಡುವುದಾದರೆ...

ಡಾ. ರಾಜೇಂದ್ರಪ್ರಸಾದ್‌ರ ಅಧ್ಯಕ್ಷತೆಯಲ್ಲಿ 'ಸಂವಿಧಾನ ರಚನಾ ಸಮಿತಿ' ಎಂಬ ಸಮಿತಿಯು 1946ರಲ್ಲಿ ರೂಪು ತಳೆದಿರುವುದು ಗೊತ್ತೇ ಇರುವಂತಹ ವಿಚಾರ. ಈ ಸಮಿತಿಯ ಉದ್ದೇಶ ದೇಶಕ್ಕೊಂದು ಸಂವಿಧಾನವನ್ನು ರಚಿಸುವುದು. ಅಂದಿನ ಅಖಂಡ ಭಾರತಕ್ಕೆ (ಆಗಿನ್ನು ವಿಭಜನೆಗೊಂಡಿರಲಿಲ್ಲ) ಒಪ್ಪತಕ್ಕ, ಎಲ್ಲರಿಗೂ ನ್ಯಾಯಸಮ್ಮತವಾಗುವಂತಹ, ಉತ್ತರ- ದಕ್ಷಿಣ, ಪೂರ್ವ-ಪಶ್ಚಿಮ ಎಂಬಿತ್ಯಾದಿ ಎಲ್ಲಾ ಸಂಸ್ಕಾರಸಂಸ್ಕೃತಿಗಳಿಗೆ ಅನ್ವಯಿಸುವ, ದೀನ, ದಲಿತ, ಅಲ್ಪ ಸಂಖ್ಯಾತರುಗಳೆಲ್ಲರನ್ನೂ ಒಟ್ಟೊಟ್ಟಿಗೆ ಕರೆದುಕೊಂಡು ಹೋಗಬಹುದಾದ ವಿಶಾಲ ಸಂವಿಧಾನವನ್ನು ರಚಿಸುವುದು ಅಷ್ಟು ಸುಲಭದ ಮಾತಾಗಿರಲಿಲ್ಲ. ಮೇಲಾಗಿ ಆ ದಿನಗಳಲ್ಲಿ ಬ್ರಿಟಿಷ್ ಆಡಳಿತವೇ ಕೊನೆಯಾಗಿರಲಿಲ್ಲ! ಆದ್ದರಿಂದಲೇ ಇವೆಲ್ಲವುಗಳನ್ನು ಗಮನಿಸಿಕೊಂಡು ಸವಿಸ್ತಾರವಾದ ಸಂವಿಧಾನದ ರಚನೆಯಾಗಬೇಕೆಂಬ ಉದ್ದೇಶದಿಂದ ಈ ಸಮಿತಿಯು ಬರೋಬ್ಬರಿ 389 ಸದಸ್ಯರುಗಳನ್ನು ತನ್ನೊಳಗೆ ನೇಮಿಸಿಕೊಂಡು ಕಾರ್ಯಪ್ರವೃತ್ತತೆಗೆ ಇಳಿದಿತ್ತು! ಸರೋಜಿನಿ ನಾಯ್ಡು, ಹನ್ಸ ಮೆಹತಾ, ದುರ್ಗಾ ಬಾಯಿ ದೇಶ್‌ಮುಖ್ ಸೇರಿದಂತೆ ಒಟ್ಟು 15 ಮಹಿಳಾ ಪ್ರತಿನಿಧಿಗಳು ಹಾಗು ಸರ್ದಾರ್ ವಲ್ಲಭಭಾಯಿ ಪಟೇಲ್, ನೆಹರು, ಜೆ.ಬಿ. ಕೃಪಲಾನಿ, ಡಾ.ಬಿ.ಆರ್ ಅಂಬೇಡ್ಕರ್, ಬಿ.ಎನ್. ರಾವ್, ಡಾ. ರಾಜೇಂದ್ರ ಪ್ರಸಾದ್, ಎಸ್. ಎನ್ ಮುಖರ್ಜಿ, ಎನ್. ಗೋಪಾಲಸ್ವಾಮಿ ಅಯ್ಯಂಗಾರ್, ಅಲ್ಲಾಡಿ ಕೃಷ್ಣಸ್ವಾಮಿ ಅಯ್ಯರ್, ಎಸ್.ರಾಧಾಕೃಷ್ಣನ್ ಮುಂತಾದ ಘಟಾನುಘಟಿ ನಾಯಕರುಗಳು ಈ ಸಮಿತಿಯೊಳಗೆ ಇದ್ದರು. (ವಿಭಜನೆಯ ಬಳಿಕ ಈ ಸಂಖ್ಯೆ 299 ಕ್ಕೆ ಇಳಿಕೆಯಾಯಿತು) ಮಾತ್ರವಲ್ಲದೆ ಸಂವಿಧಾನ ರಚನೆಯ ವಿವಿಧ ಸ್ತರಗಳ ಆಳ ಅಧ್ಯಯನಕ್ಕಾಗಿ, ಸಾಧಕ ಬಾಧಕಗಳ ಚರ್ಚೆಗಾಗಿ ಒಟ್ಟು 22 ಉಪಸಮಿತಿಗಳನ್ನು ಕೂಡ ರಚಿಸಿಕೊಂಡಿತ್ತು! ಸಂವಿಧಾನ ಕರಡು ಸಮಿತಿ, ಸಂವಿಧಾನ ಸಲಹಾ ಸಮಿತಿ, ನಿಯಮಗಳ ಪ್ರಕ್ರಿಯಾ ಸಮಿತಿ, ಕೇಂದ್ರೀಯ ಅಧಿಕಾರ ಸಮಿತಿ, ಕೇಂದ್ರೀಯ ಸಂವಿಧಾನ ಸಮಿತಿ, ಪ್ರಾಂತೀಯ ಸಮಿತಿ, ರಾಜ್ಯ ಸಮಿತಿ, ಮಾರ್ಗದರ್ಶಿ ಸಮಿತಿ ಹೀಗೆ ಒಟ್ಟು 8 ಸಮಿತಿಗಳು ತೀರಾ ಪ್ರಮುಖ ಸಮಿತಿಗಳಾಗಿ ಗುರುತಿಸಲ್ಪಟ್ಟಿದ್ದವು.

ಇವೆಲ್ಲ ಸಮಿತಿಗಳು ಬರೇ ನಾಮಕಾವಸ್ಥೆಗೆ ಸೃಷ್ಟಿಯಾದ ಸಮಿತಿಗಳಲ್ಲ, ಬದಲಾಗಿ ಎಲ್ಲಾ ಸಮಿತಿಗಳು ತಮ್ಮ ಪರಿಧಿಯೊಳಗೆ ತಮಗೆ ನೀಡಲ್ಪಟ್ಟ ಕೆಲಸವನ್ನು ಶ್ರಮವಹಿಸಿಕೊಂಡು ಮಾಡಿ ತಮ್ಮ ವರದಿಯನ್ನು ಸಂವಿಧಾನ ಸಮಿತಿಗೆ ನೀಡಬೇಕಾಗಿತ್ತು. ಹಾಗೆಯೇ 1947ರ ಏಪ್ರಿಲ್- ಆಗಸ್ಟ್ ಸುಮಾರಿಗೆ ಅಧ್ಯಯನ ವರದಿಗಳನ್ನು ಈ ಸಮಿತಿಗಳು ಸಂವಿಧಾನ ಸಮಿತಿಗೆ ನೀಡಿದ್ದವು ಕೂಡ. ಇವೆಲ್ಲವೂ ಸುಭದ್ರ ಸಂವಿಧಾನದ ರಚನೆಗೆ ಒಂದಲ್ಲ ಒಂದು ವಿಧದಲ್ಲಿ ಸಹಕಾರಿಯಾಗಿ ನಿಂತ ವರದಿಗಳೇ.

ಸಂವಿಧಾನ ಕರಡು ಸಮಿತಿಗೆ ಅಂಬೇಡ್ಕರ್ ಅಧ್ಯಕ್ಷರಾದರೆ, ಸಂವಿಧಾನ ಸಲಹಾ ಸಮಿತಿಗೆ ಸರ್ದಾರ್ ವಲ್ಲಭ ಬಾಯಿ ಪಟೇಲರ ಅಧ್ಯಕ್ಷತೆಯಿತ್ತು. ನಂಬಲೇ ಬೇಕಾದ ವಿಚಾರವೆಂದರೆ ಭಾರತದ ಸಂವಿಧಾನದ ಮೊದಲ ಕರಡು ರೂಪುಗೊಂಡದ್ದು ನಾವು ಅಂದುಕೊಂಡಂತೆ ಅಂಬೇಡ್ಕರ್‌ರವರ ಕರಡು ಸಮಿತಿಯಿಂದಲ್ಲ, ಬದಲಾಗಿ ಸಂವಿಧಾನ ಸಲಹಾ ಸಮಿತಿಯಿಂದ!

ಹೌದು, ಸಲಹಾ ಸಮಿತಿಯಲ್ಲಿದ್ದ ಮಂಗಳೂರಿನ ಬೆಣಗಲ್ ನರಸಿಂಗ ರಾವ್‌ರವರು ಇನ್ನೋರ್ವ ಮುತ್ಸದ್ದಿ ಎಸ್.ಎನ್. ಮುಖರ್ಜಿಯ ಸಹಾಯದಿಂದ ಮೊತ್ತ ಮೊದಲ ಕರಡನ್ನು ರಚಿಸಿ 1947ರ ಅಕ್ಟೋಬರ್‌ನಲ್ಲಿ 'ಸಂವಿಧಾನ ಕರಡು ಸಮಿತಿಗೆ' ನೀಡಿದ್ದರು ಎಂಬುದು ಗಮನೀಯ. ಈ ಸಂವಿಧಾನದ ಕರಡಲ್ಲಿ ಒಟ್ಟು 243 ವಿಧಿಗಳು ಹಾಗೂ 13 ಪರಿಚ್ಛೇದಗಳಿದ್ದವು. ಮುಂದೆ ಇದೇ ಕರಡನ್ನು ಬ್ಲೂಪ್ರಿಂಟ್ ಎಂಬಂತೆ ಬಳಸಿಕೊಂಡು ಅದಕ್ಕೆ ಒಂದಷ್ಟು ತಿದ್ದುಪಡಿಗಳನ್ನು, ಒಂದಷ್ಟು ಸೇರ್ಪಡೆಗಳನ್ನು ಮಾಡಿಕೊಂಡು ಅಂಬೇಡ್ಕರ್‌ರವರು ಫೆಬ್ರವರಿ 21, 1948 ರಲ್ಲಿ ಸಂವಿಧಾನದ ಇನ್ನೊಂದು ಕರಡನ್ನು ಸಿದ್ಧಪಡಿಸಿ ಸಂವಿಧಾನ ಸಮಿತಿಗೆ ನೀಡಿದ್ದು!

ಹೀಗೆ ತನ್ನ ಟೇಬಲ್‌ಗೆ ಬಂದ 'ಕರಡು ಸಂವಿಧಾನ'ವನ್ನು ಸಂವಿಧಾನ ಸಭೆಯು ಬೇಷರತ್ ಒಪ್ಪಿ ಅಂಗೀಕರಿಸಿಲ್ಲ, ಬದಲಾಗಿ ಅದನ್ನು ಮುದ್ರಿಸಿ ಸಾರ್ವಜನಿಕರ ಅವಗಾಹನೆಗೆ ದೊರೆಯುವಂತೆ ಮಾಡಲಾಯಿತು. ಸಾರ್ವಜನಿಕರಿಂದ ಬಂದ ಟೀಕೆ, ಟಿಪ್ಪಣಿ, ಬದಲಾವಣೆಗಳನ್ನೆಲ್ಲಾ ಸ್ವೀಕರಿಸಿಕೊಂಡು ಅದನ್ನು ವಿಶ್ಲೇಷಿಸಲು ಅದಕ್ಕಾಗಿಯೇ ಒಂದು ವಿಶೇಷ ಸಮಿತಿಯನ್ನು ಕೂಡ ಅಂದು ರಚಿಸಲಾಗಿತ್ತು. ಮಾತ್ರವಲ್ಲದೆ ಸ್ವತಃ ಸಂವಿಧಾನ ಸಮಿತಿಯೇ ಎರಡು ಹಂತಗಳಲ್ಲಿ ಕರಡು ಸಂವಿಧಾನದ ಪ್ರತಿಯೊಂದು ವಿಧಿಗಳನ್ನು ಅಧ್ಯಯನ ನಡೆಸಿ ಸಾಧಕ ಬಾಧಕಗಳ ಬಗ್ಗೆ ಆಳವಾಗಿ ವಿಶ್ಲೇಷಿಸಿತ್ತು. ಇವೆಲ್ಲಾ ಹಂತಗಳನ್ನು ದಾಟಿದ ಬಳಿಕವೇ 1949ರ ನವೆಂಬರ್ 26ರಂದು ಸಂವಿಧಾನ ಅಂತಿಮವಾಗಿ ಅಳವಡಿಕೆಯಾದದ್ದು. ಒಟ್ಟಿನಲ್ಲಿ 1946ರಿಂದ 1949ರ ವರೆಗೆ ಅಂದರೆ ಒಟ್ಟು 2 ವರ್ಷ 11 ತಿಂಗಳು ಹಾಗೂ 18 ದಿನಗಳ ಕಾಲ ಸಂವಿಧಾನ ಸಮಿತಿಯು ಸಂವಿಧಾನ ರಚನೆಗಾಗಿ ಕಠಿಣ ಶ್ರಮವಹಿಸಿತ್ತು ಎಂಬುದು ನಿಸ್ಸಂಶಯ. ಇಂತಹ ಪರಿಶ್ರಮವನ್ನು, ದೇಶ ಸೇವೆಯನ್ನು ನಗಣ್ಯವೆನ್ನಲು ಸಾಧ್ಯವೇ!'

ಸಂವಿಧಾನವನ್ನು 'ಅಂಬೇಡ್ಕರ್ ಸಂವಿಧಾನ'ವೆಂದು ಕರೆದರೆ ಈ ಮೇಲಿನ ಶ್ರಮವನ್ನೆಲ್ಲಾ ಮೂಲೆಗುಂಪು ಮಾಡಿದಂತೆ ಅಲ್ಲವೇ? ಅದರಲ್ಲೂ ಸಂವಿಧಾನದ ಪ್ರಪ್ರಥಮ ಕರಡು ನಿರ್ಮಾಣಗೈದ ನರಸಿಂಗ್ ರಾವ್ ಅವರ ಕಠಿಣ ಶ್ರಮ, ಸಾಧನೆಯನ್ನು ಇಲ್ಲಿ ಪರಿಗಣಿಸಲೇಬೇಕು. ಪ್ರಪಂಚದ ವಿವಿಧ ರಾಷ್ಟ್ರಗಳ ಸಂವಿಧಾನವನ್ನು ಅಭ್ಯಸಿಸುವ ಸಲುವಾಗಿ ಹಾಗೂ ಅಲ್ಲಿನ ಕಾನೂನು ತಜ್ಞರೊಡನೆ , ವಿಷಯ ಪರಿಣಿತರುಗಳೊಡನೆ ಚರ್ಚಿಸುವ ಸಲುವಾಗಿ ಸ್ವತಃ ನರಸಿಂಗ ರಾವ್ ಬೇರೆ ಬೇರೆ ದೇಶಗಳನ್ನು ದಣಿವರಿಯದೇ ಸುತ್ತಿ ಬಂದಿದ್ದರು. ನಿರಂತರ ಅಧ್ಯಯನಶೀಲತೆ, ವಿಶ್ಲೇಷಣೆಗಳ ಮೂಲಕ ಅದ್ಭುತವಾದ ಕರಡು ಸಂವಿಧಾನವನ್ನು ರಚಿಸುವಲ್ಲಿ ಈ ಮೂಲಕ ಯಶಸ್ವಿಯಾಗಿದ್ದರು. ಮೇಲಾಗಿ ಇಷ್ಟೆಲ್ಲಾ ಅವಿರತ ಶ್ರಮಕ್ಕೆ ಅವರು ಒಂದೇ ಒಂದು ರೂಪಾಯಿ ವೇತನವನ್ನು ಕೂಡ ಸರಕಾರದಿಂದ ಪಡೆದುಕೊಂಡಿರಲಿಲ್ಲ! ಅಂದರೆ ಸರಿಸುಮಾರು ಮೂರು ವರ್ಷಗಳ ಕಾಲ ಅವರು ಪುಕ್ಕಟೆಯಾಗಿ ದೇಶಕ್ಕಾಗಿ ದುಡಿದಿದ್ದರು! ಸಂವಿಧಾನದ ರಚನೆಯ ಹಿಂದಿನ ಇವರ ಶ್ರಮವನ್ನು ಗುರುತಿಸಿ ಸಂವಿಧಾನ ಸಭೆಯಲ್ಲಿ ಮಾತನಾಡಿದ ಡಾ. ರಾಜೇಂದ್ರ ಪ್ರಸಾದ್, ''ಡಾ.ಬಿ.ಆರ್‌ಅಂಬೇಡ್ಕರ್‌ವರು ಸಂವಿಧಾನದ ಎಲ್ಲಾ ಹಂತಗಳಲ್ಲೂ ಕೌಶಲ್ಯಪೂರ್ಣ ಪೈಲಟ್ ಆದರೆ ಬಿ.ಎನ್.ರಾವ್ ಯೋಜನೆಯನ್ನು ಅದ್ಭುತವಾಗಿ ಕಲ್ಪಿಸಿಕೊಂಡು ಅದರ ಅನುಷ್ಠಾನಕ್ಕೆ ಅಡಿಪಾಯ ಹಾಕಿದ ಶ್ರೇಷ್ಠ ವ್ಯಕ್ತಿ' ಎಂದು ಗೌರವಿಸಿರುತ್ತಾರೆ.

ಕೈಬರಹದ ಸಂವಿಧಾನ

ಇನ್ನು ಅಂತಿಮ ಹಂತಕ್ಕೆ ಬಂದ ಸಂವಿಧಾನವನ್ನು ಪುಸ್ತಕ ರೂಪಕ್ಕೆ ಇಳಿಸಿದ ಕೆಲಸ ಕೂಡ ಸಣ್ಣದೇನಲ್ಲ. ನೆನಪಿರಲಿ, ಭಾರತದ ಸಂವಿಧಾನ ಅದ್ಯಾವುದೇ ಮೆಷಿನ್ ಪ್ರಿಂಟೆಡ್ ಪುಸ್ತಕವಲ್ಲ. ಬದಲಾಗಿ ಪ್ರೇಮ್ ಬಿಹಾರಿ ನಾರಾಯಣ ರೈಝದ ಎಂಬವರ ಹಸ್ತಾಕ್ಷರದಲ್ಲಿ ಮೂಡಿ ಬಂದಿರುವ ಸುಂದರ ಪುಸ್ತಕವದು. ಅಂದಿನ ಕಾಲದ ಪ್ರಖ್ಯಾತ ಕ್ಯಾಲಿಗ್ರಾಫರ್ ಆಗಿದ್ದ ಇವರು ಭಾರತದ ಸಂವಿಧಾನವನ್ನು ಸುಂದರವಾದ ಚೌಕಟ್ಟಿನೊಳಗೆ ಅಂದವಾಗಿ ಬರೆದು ಸಮರ್ಪಿಸಿದ್ದರು. ಸರಿಸುಮಾರು 250 ಪುಟಗಳ ಸಂವಿಧಾನವನ್ನು ಸುಂದರವಾದ ಇಟಾಲಿಕ್ ಶೈಲಿಯಲ್ಲಿ ಬರೆಯಲು ಅವರು ಬಳಸಿದ್ದು ಬರೋಬ್ಬರಿ 432 ಪೆನ್‌ಗಳನ್ನು ಹಾಗು 303 ನಿಬ್‌ಗಳನ್ನು! ತೆಗೆದು ಕೊಂಡ ಕಾಲಾವಧಿ ಬರೋಬ್ಬರಿ 6 ತಿಂಗಳುಗಳು!

ಸಂವಿಧಾನ ರಚನೆಯ ಹಿಂದಿನ ಈ ಎಲ್ಲಾ ಪರಿಶ್ರಮಗಳನ್ನು ಅಷ್ಟು ಸುಲಭವಾಗಿ ಮರೆಯಲು ಸಾಧ್ಯವೇ?

ಭಾರತದ ಸಂವಿಧಾನದ ರಚನೆಯ ಹಿಂದೆ ಡಾ.ಬಿ.ಆರ್. ಅಂಬೇಡ್ಕರ್‌ವರ ಶ್ರಮ ಖಂಡಿತವಾಗಿಯೂ ಇದೆ. ಬೆಣಗಲ್‌ರವರು ಸಿದ್ಧಪಡಿಸಿ ಕೊಟ್ಟ ಅಧ್ಯಯನಶೀಲ ಕರಡನ್ನು ಮತ್ತೊಂದಷ್ಟು ಅಧ್ಯಯನ, ವಿಶ್ಲೇಷಣೆಗೆ ಒಳಪಡಿಸಿ ಸೂಕ್ತ ತಿದ್ದುಪಡಿಗಳನ್ನು ಮಾಡಿಕೊಂಡು ಪ್ರಬುದ್ಧ ರೂಪದ ಸಂವಿಧಾನವನ್ನು ಭಾರತಕ್ಕೆ ಧಕ್ಕುವಂತೆ ಮಾಡಿದ್ದು ಇದೇ ಅಂಬೇಡ್ಕರ್‌ರವರು ಎಂಬುದು ನಿರ್ವಿವಾದ. ಈ ಬಗ್ಗೆ ಅದ್ಯಾವ ಗೊಂದಲವೂ ಇರಬಾರದು. ಹಾಗಂತ ಈ ದೇಶದ ಸಂವಿಧಾನವನ್ನು ಅವರೊಬ್ಬರೇ ಮಾಡಿದ್ದಾರೆ ಎಂದೆನ್ನುತ್ತಾ ಇತರರ ಕೆಲಸಗಳನ್ನು, ಪಟ್ಟಿರುವ ಕಠಿಣ ಪರಿಶ್ರಮವನ್ನು ಮೂಲೆಗುಂಪಾಗಿಸುವುದು ಮಾತ್ರ ಒಪ್ಪತಕ್ಕ ವಿಚಾರವಲ್ಲ ಎಂಬುದಷ್ಟೇ ಈ ಲೇಖನದ ಉದ್ದೇಶ.

ಧರ್ಮದ ಅಮಲು, ಜಾಗತಿಕ ಅಸ್ಥಿರತೆ ಮತ್ತು ಇಸ್ಲಾಮ್ ಮೂಲಭೂತವಾದ

▸ ಹರ್ಷ ಹೆಗಡೆ ಕೊಂಡದಕುಳಿ

ಧಾರ್ಮಿಕ ಮೂಲಭೂತವಾದಕ್ಕೆ ಅಷ್ಟೊಂದು ಶಕ್ತಿ ಇದೆಯಾ? - ಈ ಹೊತ್ತಿಗೆ ಅಂಥದ್ದೊಂದು ಪ್ರಶ್ನೆ ಕೇಳಿಕೊಳ್ಳಲೇಬೇಕಾದ ಅವಶ್ಯಕತೆಯಿದೆ. ಇವತ್ತು ಜಗತ್ತಿನಲ್ಲಿ ನಡೆಯುತ್ತಿರುವ ವಿದ್ಯಮಾನಗಳನ್ನು ಗಮನಿಸಿದರೆ, ಅದರ ಹಿಂದಿನ ಕಾರಣಗಳನ್ನು ಅವಲೋಕಿಸಿದರೆ ಈ ಪ್ರಶ್ನೆಯ ತೀವ್ರತೆ ಅರ್ಥವಾಗುತ್ತದೆ. ಪ್ರಶ್ನೆಗಿಂತಲೂ ಅದರ ಉತ್ತರದ ವ್ಯಗ್ರತೆ ಇನ್ನೂ ಭಯಾನಕವಾದದ್ದು. ಮನುಷ್ಯ ತನ್ನ ಹಸಿವಿಗಿಂತ, ತನ್ನ ಕುಟುಂಬದ ಭವಿಷ್ಯಕ್ಕಿಂತ ಹೆಚ್ಚಾಗಿ ತನ್ನ ಧರ್ಮದ ಅಸ್ಮಿತೆಯನ್ನು ಆರಾಧಿಸಲು ಶುರುಮಾಡಿದಾಗ ಏನಾಗುತ್ತದೆ ಎಂಬುದಕ್ಕೆ ಇವತ್ತು ನಡೆಯುತ್ತಿರುವ ಜಾಗತಿಕ ಯುದ್ಧಗಳೇ ಸಾಕ್ಷಿ. ಅಲ್ಲಿ ತರ್ಕ, ಮಾನವೀಯ ನೆಲೆ, ಭವಿಷ್ಯ, ಕನಸುಗಳುಇವೆಲ್ಲಾನಗಣ್ಯ.ಇಂದಿನಜಾಗತಿಕವಿದ್ಯಮಾನಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ, ಅದರಲ್ಲೂ ವಿಶೇಷವಾಗಿ ಮಧ್ಯ ಪ್ರಾಚ್ಯ ದೇಶಗಳ 'ಇಸ್ಲಾಮಿಕ್ ಮೂಲಭೂತವಾದ'ದ ಏರಿಳಿತಗಳನ್ನು ನೋಡಿದರೆ, ಮನುಷ್ಯನು ಪ್ರಗತಿಗಿಂತ ಹೆಚ್ಚಾಗಿ ಧರ್ಮದ ಅಮಲಿನಲ್ಲಿ ಅವನತಿಯತ್ತ ಮುಖ ಮಾಡಿರುವುದು ಸ್ಪಷ್ಟವಾಗಿ ಕಾಣುತ್ತದೆ.

ಏನೂ ಇಲ್ಲದ ಬಡ ರಾಷ್ಟ್ರವೊಂದು ತನ್ನ ಧರ್ಮದ ರಕ್ಷಣೆ ಎನ್ನುವ ಘೋಷಣೆ ಕೇಳಿದ ತಕ್ಷಣ ರಣಭಯಂಕರವಾಗಿ ಎದ್ದು ನಿಲ್ಲುತ್ತದೆಎಂದರೆಅದರಹಿಂದಿನಧಾರ್ಮಿಕಮೂಲಭೂತವಾದ ಅದೆಷ್ಟುಗಟ್ಟಿಯಾದದ್ದೆಂದುಅಂದಾಜಿಸಬಹುದು. ಅಲ್ಲಿಆರ್ಥಿಕ ಪ್ರಗತಿಯ ಚರ್ಚೆಗಳಿಗಿಂತಲೂ ಧಾರ್ಮಿಕ ಪ್ರವಚನಗಳು ಹೆಚ್ಚು ಮಹತ್ವ ಪಡೆಯುತ್ತದೆಯೆಂದಾದರೆ, ಶಿಕ್ಷಣದ ಗುರಿಗಳು ಅರ್ಥಹೀನವಾಗುತ್ತವೆ ಎಂದಾದರೆ ಅಲ್ಲಿರುವುದು ಕೇವಲ 'ಧರ್ಮದ ಉಳಿವು' ಎಂಬ ಭಾವನಾತ್ಮಕ ಕಿಚ್ಚೇ ಹೊರತು ಮತ್ತೇನೂ ಅಲ್ಲ. ಇಸ್ಲಾಮಿಕ್ ಮೂಲಭೂತವಾದದ ವಿಷಯಕ್ಕೆ ಬಂದಾಗ ಇದು ಅಕ್ಷರಶಃ ಸತ್ಯ. ಅಲ್ಲದೇ ಸಮಸ್ಯೆಯೆಂದರೆ ಇದು ಕೇವಲ ಒಂದು ದೇಶಕ್ಕೆ ಸೀಮಿತವಾಗಿರದೇ, ಗಡಿಗಳಿಲ್ಲದ ಒಂದು ಸಿದ್ಧಾಂತವಾಗಿ ವಿಶ್ವಾದ್ಯಂತ ಹರಡಿರುವುದು. ಮಧ್ಯಪ್ರಾಚ್ಯದ ಮರಳುಗಾಡಿನಿಂದ ಹಿಡಿದು ಯುರೋಪಿನ ಸುಸಜ್ಜಿತ ನಗರಗಳವರೆಗೆ, ಈ ಮೂಲಭೂತವಾದದ ನೆರಳು ವ್ಯಾಪಿಸಿರುವುದು ಕಳವಳಕಾರಿ ಸಂಗತಿ.

ನಾನಿಲ್ಲಿ ಧರ್ಮವನ್ನು ಆಚರಿಸುವವರ ಕುರಿತು ಆಡುತ್ತಿಲ್ಲ. ಮನುಷ್ಯ ಎಂದಾದ ಮೇಲೆ ಆತ ಒಂದು ನಿಯಮವನ್ನು ಅನುಸರಿಸಲೇಬೇಕು. ಬದುಕು ಹೀಗೀಗೆ ಸಾಗಬೇಕು ಎಂದಾಗಲು, ಉದ್ದೇಶಗಳಿರಲು ಧರ್ಮಕ್ಕಿಂತಲೂ ಸುಲಭವಾದದ್ದು ಬೇರೆಯದಿಲ್ಲ. ಆದರೆ ಇಲ್ಲಿ ಉಲ್ಲೇಖಿಸಿರುವುದು ತಮ್ಮದು ಮಾತ್ರ ಶ್ರೇಷ್ಠ ಎನ್ನುವ ಮಾನಸಿಕತೆಯ ಧರ್ಮಾಂಧ ಮೂಲಭೂತವಾದದ ಬಗ್ಗೆ. ತಮ್ಮ ಧರ್ಮಗ್ರಂಥದ ಅಕ್ಷರಶಃ ಪಾಲನೆಯ ನೆಪ (?) ಮತ್ತು ಅದನ್ನು ಜಗತ್ತಿನ ಮೇಲೆ ಹೇರುವ ಹಠ, ಇಂದು ಅನೇಕ ದೇಶಗಳನ್ನು ಯುದ್ಧಭೂಮಿಯನ್ನಾಗಿ ಮಾಡಿದೆ. ಒಂದು ಕಾಲದಲ್ಲಿ ವ್ಯಾಪಾರದಬಹುಮುಖ್ಯ ಮಾರ್ಗಗಳಾಗಿದ್ದ, ಆರ್ಥಿಕತೆಯನ್ನೇ ಉಸಿರಾಡುತ್ತಿದ್ದ ಪ್ರದೇಶಗಳು ಇಂದು ಮದ್ದು ಗುಂಡುಗಳನ್ನು ಸ್ಫೋಟಿಸುವರಣಭೀಕರತೆಗೆಸಾಕ್ಷಿಯಾಗುತ್ತಿವೆ. ಅಫ್ಘಾನಿಸ್ತಾನದ ಗುಡ್ಡಗಾಡು ಪ್ರದೇಶಗಳಲ್ಲಿ ಅಥವಾ ಸಿರಿಯಾದ ಬೀದಿಗಳಲ್ಲಿ ನಡೆಯುವ ಹೋರಾಟಗಳು ಕೇವಲ ಭೂಮಿಗಾಗಿಯೋ, ಪ್ರಾದೇಶಿಕ ರಕ್ಷಣೆಗಾಗಿಯೋ ನಡೆಯುತ್ತಿರುವುದಲ್ಲ; ಅವು ನಡೆಯುತ್ತಿರುವುದು ಒಂದು ನಿರ್ದಿಷ್ಟ ಜೀವನಶೈಲಿ ಮತ್ತು ನಂಬಿಕೆಯನ್ನು ಜಾರಿಗೊಳಿಸಲು.

ಇದರರ್ಥ ಇಷ್ಟೇ, ವಿನಾಶದ ಹಾದಿಯಲ್ಲಿ ಆದರ್ಶದ ಮುಖವಾಡ ಹೊತ್ತು ನಡೆಯುತ್ತಿರುವುದು. ಅಷ್ಟಕ್ಕೂ ಈ ಮೂಲಭೂತವಾದ ಅಷ್ಟೆಲ್ಲಾ ಮತಿಭ್ರಮಣೆ ಮಾಡುತ್ತದೆಯಾ ಎಂದರೇ, ಮೂಲಭೂತವಾದದ ಅತಿ ದೊಡ್ಡ ಶಕ್ತಿ ಇರುವುದೇ ಅದು ನೀಡುವ 'ಸ್ವರ್ಗದ ಭರವಸೆ'ಯಲ್ಲಿ. ಇಲ್ಲೆಲ್ಲಿಯೂ ಇರದ, ಯಾರೊಬ್ಬರೂ ಕಾಣದ, ಇದೆಯೋ ಇಲ್ಲವೋ ಅದೂ ಗೊತ್ತಿರದ ಸ್ವರ್ಗದ ಜೀವನದ ಆಸೆಯೇ ಇದೆಲ್ಲದರ ಹಿಂದಿನ ಚಾಲಕ ಶಕ್ತಿ. ಒಬ್ಬ ಯುವಕ ತನ್ನ ಮೈಮೇಲೆ ಬಾಂಬು ಕಟ್ಟಿಕೊಂಡು ಜನನಿಬಿಡ ಪ್ರದೇಶಕ್ಕೆ ಕೇವಲ ಸಾಯಲಿಕ್ಕಾಗಿ ನುಗ್ಗುತ್ತಾನೆ ಎಂದರೆ, ಅವನ ಹಿಂದೆ ಕೆಲಸ ಮಾಡಿರುವುದು ಸಾವಿರಾರು ವರ್ಷಗಳ ಕಾಲವೂ ಹರಿದುಕೊಂಡು ಬಂದಿರುವ ಸಿದ್ಧಾಂತದ ಪ್ರಭಾವ. ಆಧುನಿಕ ವಿಜ್ಞಾನ, ಪ್ರಜಾಪ್ರಭುತ್ವ ಮತ್ತು ಮಾನವ ಹಕ್ಕುಗಳಿಗಿಂತಲೂ ಅವನಿಗೆ ತನ್ನ ಧರ್ಮದ ಶ್ರೇಷ್ಠತೆಯೇ ಮಿಗಿಲಾಗಿ ಕಾಣುತ್ತದೆ. ಈ ಮನಸ್ಥಿತಿಯೇ ಇಂದು ಜಗತ್ತಿನ ಅತಿ ದೊಡ್ಡ ಸವಾಲಾಗಿರುವುದು.

ಇಸ್ಲಾಮಿಕ್‌ಮೂಲಭೂತವಾದವುಕೇವಲಧರ್ಮಗ್ರಂಥಗಳ ಮೇಲೆಯೋ, ಉಗ್ರವಾದದ ಮೇಲೆಯೋ ನಿಂತಿಲ್ಲ, ಬದಲಿಗೆ ಅದು ಯುವ ಮನಸ್ಸುಗಳ ತಲೆಕೆಡಿಸುವ Brainwashing ಪ್ರಕ್ರಿಯೆಯಮೇಲೆನಿಂತಿದೆ. ಶಾಲೆಗಳಲ್ಲಿ, ಧಾರ್ಮಿಕಕೇಂದ್ರಗಳಲ್ಲಿ 'ನಮ್ಮವರೇ ಶ್ರೇಷ್ಠ, ಉಳಿದವರೆಲ್ಲ ವಿರೋಧಿಗಳು' ಎಂಬ ವಿಷಬೀಜ ಬಿತ್ತಿದಾಗ, ಅಲ್ಲಿ ಧರ್ಮದ ನಿಜವಾದ ಬೋಧನೆಯ ಬದಲಿಗೆ ದ್ವೇಷದ ಬೆಳೆ ಬೆಳೆಯುತ್ತದೆ. ತಾನು ನಂಬಿದ ದೇವರಿಗಾಗಿ ಪ್ರಾಣ ಕೊಡುವುದು ಮತ್ತು ಇನ್ನೊಬ್ಬರ ಪ್ರಾಣ ತೆಗೆಯುವುದು ಪುಣ್ಯದ ಕೆಲಸ ಎಂದು ನಂಬಿದಾಗ, ನಾಗರಿಕ ಸಮಾಜದ ಬಾಂಧವ್ಯ ಕುಸಿಯತೊಡಗುತ್ತದೆ. ಮೊದಲು ಇದನ್ನು ಅಲ್ಲಗಳೆದಿದ್ದ ಪಾಶ್ಚಿಮಾತ್ಯ ದೇಶಗಳು ಸಹ ಇಂದು ಈ ಇಸ್ಲಾಮ್ ಮೂಲಭೂತವಾದದ ಬಿಸಿ ಅನುಭವಿಸುತ್ತಿವೆ. ವಲಸೆಯ ಹೆಸರಿನಲ್ಲಿ ಹೋದ ಈ ಮೂಲಭೂತವಾದಿಗಳು ಅಲ್ಲಿನಸ್ಥಳೀಯಸಂಸ್ಕೃತಿಯೊಂದಿಗೆಸಂಘರ್ಷಕ್ಕಿಳಿಯುತ್ತಿದ್ದಾರೆ. ಅಭಿವ್ಯಕ್ತಿ ಸ್ವಾತಂತ್ರ್ಯದ ಹೆಸರಿನಲ್ಲಿ ಏನನ್ನಾದರೂ ಹೇಳಿದರೆ ಸಾಕು, ಇಡೀ ಜಗತ್ತಿನ ಮೂಲಭೂತವಾದಿಗಳು ಒಂದಾಗಿ ಬೀದಿಗಿಳಿಯುತ್ತಾರೆ. ಇದು ನಾಗರಿಕ ಸಮಾಜದ ಭವಿಷ್ಯದ ಹಾದಿಯನ್ನೇ ಮುಚ್ಚಿಹಾಕುತ್ತಿದೆ.

ಕೊನೆಯದಾಗಿ, ಧರ್ಮ ಎಂಬುದು ಮನುಷ್ಯನನ್ನು ಸನ್ಮಾರ್ಗಕ್ಕೆ ನಡೆಸುವ ದಾರಿದೀಪವಾಗಬೇಕಿತ್ತು. ಆದರೆ ಇಂದು ಅದು ಪ್ರತಿಷ್ಠೆ ಮತ್ತು ಅಸ್ಮಿತೆಯ ಹಠಕ್ಕೆ ಬಲಿಯಾಗಿದೆ. ಇಸ್ಲಾಮಿಕ್ ಮೂಲಭೂತವಾದದ ಕಿಡಿಗಳು ಜಗತ್ತನ್ನು ಬೂದಿ ಮಾಡುವ ಮುನ್ನ, ಮಾನವತ್ವದ ಮಳೆ ಸುರಿಯಬೇಕಿದೆ. ಇಲ್ಲದಿದ್ದರೆ, ಮುಂದಿನ ಪೀಳಿಗೆಗೆ ಉಳಿಯುವುದು ಕೇವಲ ರಕ್ತಸಿಕ್ತ ಇತಿಹಾಸದ ಪುಟಗಳು ಮಾತ್ರ.

ಅಷ್ಟಕ್ಕೂ ಅದು ಸುಲಭವೇನಲ್ಲ, ಯಾಕೆಂದರೆ ಅದು 'ವಸುಧೈವ ಕುಟುಂಬಕಮ್' ಎಂದು ಬೋಧಿಸಿಯೂ ಇಲ್ಲ, ಧರ್ಮಕ್ಕಿಂತಲೂ ರಾಷ್ಟ್ರ ಮುಖ್ಯ ಎಂದೂ ಹೇಳಿಲ್ಲ.

ಕಿರುಸುದ್ದಿ

ಶ್ರೀ ಕಾಶಿ ವಿಶ್ವನಾಥೇಶ್ವರ ಬ್ರಹ್ಮರಥೋತ್ಸವ



• **ಆನೇಕಲ್** : ತಾಲೂಕಿನ ದೊಮ್ಮಸಂದ್ರ ಗ್ರಾಮದಲ್ಲಿರುವ ಇತಿಹಾಸ ಪ್ರಸಿದ್ಧ ದೇವಾಲಯವಾದ ಶ್ರೀ ಕಾಶಿವಿಶ್ವನಾಥೇಶ್ವರ ಸ್ವಾಮಿಯ ಬ್ರಹ್ಮರಥೋತ್ಸವ ಹಾಗೂ ಶ್ರೀ ಗಣಪತಿ, ಶ್ರೀಸುಬ್ರಹ್ಮಣ್ಯಸ್ವಾಮಿ ಬ್ರಹ್ಮ ರಥೋತ್ಸವ ಅಪಾರ ಭಕ್ತರ ಹಾಗೂ ಗ್ರಾಮಸ್ಥರ ಸಮ್ಮುಖದಲ್ಲಿ ಸಡಗರ ಸಂಭ್ರಮದಿಂದ ನೆರವೇರಿತು. ಇನ್ನು ಶ್ರೀ ಕಾಶಿ ವಿಶ್ವನಾಥೇಶ್ವರ ಸ್ವಾಮಿಯ ಬ್ರಹ್ಮ ರಥೋತ್ಸವ ಅಂಗವಾಗಿ ವೀರಗಾಸೆ, ಡೊಳ್ಳು ಕುಣಿತ, ತಮಟೆ ವಾದ್ಯ ಮತ್ತು ವಿವಿಧ ಕಲಾ ತಂಡಗಳೊಂದಿಗೆ ರಥ ದೊಮ್ಮಸಂದ್ರ ಗ್ರಾಮದ ಪ್ರಮುಖ ರಸ್ತೆಯಲ್ಲಿ ಸಾಗುತ್ತಿದ್ದಂತೆ ಭಕ್ತರು ರಥದ ಮೇಲೆ ಬಾಳೆ ಹಣ್ಣು ಎಸೆದು ತಮ್ಮ ಭಕ್ತಿಯನ್ನು ಸಮರ್ಪಿಸಿದರು. ಜಾತ್ರೆಪ್ರಯುಕ್ತ ಪೊಲೀಸರು ಕಾನೂನು ಸುವ್ಯವಸ್ಥೆ ಜತೆಗೆ ತೇರಿನ ಸುಗಮವಾಗಿ ಸಂಚಾರ ಮಾಡಲು ಕ್ರಮವಹಿಸಲಾಯಿತು. ಸ್ವಾಮಿಯ ದರ್ಶನಕ್ಕೆ ಆಗಮಿಸಿದ ಭಕ್ತರಿಗೆ ಅನ್ನದಾಸೋಹ ಆಯೋಜನೆ ಮಾಡಲಾಗಿತ್ತು.

ಬ್ರಹ್ಮರಥೋತ್ಸವದಲ್ಲಿ ದೊಮ್ಮಸಂದ್ರ ಗ್ರಾಮದ ಮುಖಂಡರಾದ ರಾಜಶೇಖರ್‌ರೆಡ್ಡಿ, ರಾಜಣ್ಣ, ಉಮೇಶ್ ಬಾಬು, ನರೇಶ್, ದೊಮ್ಮಸಂದ್ರ ಗ್ರಾಮಸ್ಥರು ಮತ್ತು ಭಕ್ತಿರು ಭಾಗವಹಿಸಿದ್ದರು. ಹಾಗೆಯೇ ಕರಗ ಮಹೋತ್ಸವ ಮತ್ತು ಪಲ್ಲಕ್ಕಿ ಉತ್ಸವ ನಡೆಯಲಿದೆ. ಸಕಾಲಕ್ಕೆ ಸಾಕಷ್ಟು ಭಕ್ತರು ಬಂದು ದೇವರ ದರ್ಶನ ಪಡೆದರು.

ಆಂಜನೇಯಸ್ವಾಮಿ ದೇಗುಲದಲ್ಲಿ ಕಳವು

• **ದೊಡ್ಡಬಳ್ಳಾಪುರ:** ಮುಜರಾಯಿ ಇಲಾಖೆಗೆ ಒಳಪಡುವ ಆಂಜನೇಯಸ್ವಾಮಿ ದೇವಸ್ಥಾನದಲ್ಲಿ ರಾಮಲಕ್ಷ್ಮಣರಿಗೆ ಅಳವಡಿಸಿದ್ದ ಬೆಳ್ಳಿ ಕಿರೀಟವನ್ನು ಕಳ್ಳರು ಕಳವು ಮಾಡಿರುವ ಘಟನೆ ಕಳೆದ ರಾತ್ರಿ, ತಾಲೂಕಿನ ಮೆಳೇಕೋಟೆ ಗ್ರಾಮದಲ್ಲಿ ನಡೆದಿದೆ. ದೇವಾಲಯದ ಬಾಗಿಲು ಮೀಟಿ ಒಳ ನುಗ್ಗಿರುವ ಕಳ್ಳರು, ರಾಮಲಕ್ಷ್ಮಣ ವಿಗ್ರಹಕ್ಕೆ ಅಳವಡಿಸಿದ್ದ ಸುಮಾರು ಎರಡೂವರೆ ಲಕ್ಷ ಬೆಲೆ ಬಾಳುವ ಬೆಳ್ಳಿ ಕೀರಿಟವನ್ನು ಕಳವು ಮಾಡಿದ್ದಾರೆ. ಘಟನೆ ಸೋಮವಾರ ಬೆಳಗ್ಗೆ ಬೆಳಕಿಗೆ ಬಂದಿದೆ. ಸ್ಥಳಕ್ಕೆ ದೊಡ್ಡಬಳ್ಳಾಪುರ ಗ್ರಾಮಾಂತರ ಠಾಣೆ ಪೊಲೀಸರು, ಬೆರಳಚ್ಚು ತಜ್ಞರು ಭೇಟಿ ನೀಡಿ ಪರಿಶೀಲಿಸಿದರು.

ಹಳೆ ದ್ವೇಷಕ್ಕೆ ಅಪಹರಿಸಿ ಕೊಲೆ: ಬಂಧನ

• **ಆನೇಕಲ್:** ರಿಯಲ್ ಎಸ್ಟೇಟ್ ವ್ಯವಹಾರದಲ್ಲಿ ಉಂಟಾದ ಕಲಹದಿಂದಾಗಿ ವ್ಯಕ್ತಿಯೋರ್ವನನ್ನು ಕರ್ಪೂರು ಗೇಟ್ ಬಳಿ ಅಪಹರಿಸಿ ಕೊಲೆ ನಡೆದಿರುವ ಘಟನೆ ನಡೆದಿದೆ.



ತಾಲೂಕಿನ ಹೊನ್ನಕಳಸಾಪುರದ ಗೋಪಾಲ್ ಹತ್ಯೆಯಾಗಿರುವ ದುರ್ದೈವಿ. ಆರೋಪಿ ಮೋಹನ್‌ಬಾಬುವನ್ನು ಬಂಧಿಸಲಾಗಿದೆ. ಭಾನುವಾರ ಸಂಜೆ ಕೊಲೆಯಾದ ವ್ಯಕ್ತಿ ಗೋಪಾಲ್ ಎಂಬಾತನನ್ನು ಸ್ನೇಹಿತನೊಂದಿಗೆ ಕಾರಿನಲ್ಲಿ ಕರ್ಪೂರು ಗೇಟ್ ಬಳಿ ಹೋಗುತ್ತಿದ್ದಾಗ ದುಷ್ಕರ್ಮಿಗಳು ಹಿಂದಿನಿಂದ ಕಾರಿಗೆ ಗುದ್ದಿದ್ದಾರೆ. ಈ ವೇಳೆ ಗೋಪಾಲ್ ಅವರು ಕಾರನ್ನು ನಿಲ್ಲಿಸುತ್ತಿದ್ದಂತೆ ದುಷ್ಕರ್ಮಿಗಳು ಆತನ ಕಣ್ಣಿಗೆ ಸ್ಪ್ರೇ ಸಿಂಪಡಿಸಿ ಅಪಹರಿಸಿ, ಭೀಕರವಾಗಿ ಹಲ್ಲೆ ಮಾಡಿ ತಮಿಳುನಾಡಿನ ಡೆಂಕಣಿಕೋಟೆ ಬಳಿ ಶವವನ್ನು ಎಸೆದು ಹೋಗಿದ್ದಾರೆ. ಸ್ಥಳೀಯ ಮಾಹಿತಿ ಮೇರೆಗೆ ಶವವನ್ನು ಪತ್ತೆ ಹಚ್ಚಲಾಯಿತು.

ಆರೋಪಿ ಮನೆಗೆ ಕಲ್ಲುತೂರಾಟ: ಹತ್ಯೆ ಪ್ರಕರಣದ ಆರೋಪಿ ಮೋಹನ್‌ಬಾಬು ಮನೆಗೆ ಕಲ್ಲು ತೂರಾಟ ಮಾಡಿ ಸಂಬಂಧಿಕರು, ನಾಗರಿಕರು ಪ್ರತಿಭಟನೆ ನಡೆಸಿದರು. ಪೊಲೀಸರು ಮಧ್ಯೆಪ್ರವೇಶಿಸಿ ಪ್ರತಿಭಟನಾಕಾರರನ್ನು ಸಮಾಧಾನಪಡಿಸಿದರು. ಬೆಂಗಳೂರು ಗ್ರಾಮಾಂತರ ಜಿಲ್ಲಾ ವರಿಷ್ಠಾಧಿಕಾರಿ ಚಂದ್ರಕಾಂತ್ ಮಾತನಾಡಿ, ಕೊಲೆ ಆರೋಪಿ ಮೋಹನ್ ಬಾಬು ಮತ್ತು ಹತ್ಯೆಯಾದ ಗೋಪಾಲ್ ಅವರ ನಡುವೆ ಕಳೆದ ಹತ್ತು ವರ್ಷದಿಂದ ವೈಷಮ್ಯ ಇತ್ತು. ಇವರಿಬ್ಬರೂ ರಿಯಲ್ ಎಸ್ಟೇಟ್ ಉದ್ಯಮದಲ್ಲಿ ತೊಡಗಿದ್ದರು. ಹಾಗಾಗಿ ಇವರಿಬ್ಬರ ಮಧ್ಯೆ ಆಗಾಗ ಜಗಳ ನಡೆಯುತ್ತಿತ್ತು. ಈ ಬಗ್ಗೆ ಕೊಲೆಯಾದ ಪತ್ನಿ ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ಆರೋಪಿಗಳನ್ನು ಬಂಧಿಸಲು ಏಳು ತಂಡ ರಚಿಸಲಾಗಿದೆಂದರು.

ದೇವನಹಳ್ಳಿಯ ಹೆಗ್ಗನಹಳ್ಳಿಯಲ್ಲಿ ಅಕ್ಷರ ಯೋಗ ವಿಜ್ಞಾನ ಕೇಂದ್ರ 'ಪುರಂತ' ಲೋಕಾರ್ಪಣೆ

ಸುಧಾರಿತ ಶಿಕ್ಷಣದಿಂದ ಪ್ರಗತಿ ಸುಲಭ

• **ದೇವನಹಳ್ಳಿ:** ಇಲ್ಲಿನ ಸುಧಾರಿತ ಅಭ್ಯಾಸ ಹಾಗೂ ಶಿಕ್ಷಕರ ಶಿಕ್ಷಣ ಕಾರ್ಯಕ್ರಮಗಳು ಸಾಂಪ್ರದಾಯಿಕ ಜ್ಞಾನದ ಅನ್ವಯಿಕ ಅಧ್ಯಯನಕ್ಕೆ ಒತ್ತು ನೀಡಲಿದೆ ಎಂದು ಸಚಿವ ಕೆ.ಎಚ್.ಮುನಿಯಪ್ಪ ಹೇಳಿದರು.

ಹಿಮಾಲಯನ್ ಸಿದ್ಧ ಅಕ್ಷರ ಅವರ ಮಾರ್ಗದರ್ಶನದಲ್ಲಿ ಅಕ್ಷರ ಯೋಗ ಕೇಂದ್ರವು 'ಪುರಂತ' ಎಂಬ ಜಾಗತಿಕ ಮಟ್ಟದ ಸುಧಾರಿತ ಯೋಗ ಮತ್ತು ಆಧ್ಯಾತ್ಮಿಕ ವಿಜ್ಞಾನ ಕೇಂದ್ರವನ್ನು ದೇವನಹಳ್ಳಿ ತಾಲೂಕಿನ ಹೆಗ್ಗನಹಳ್ಳಿಯಲ್ಲಿ ಉದ್ಘಾಟಿಸಿ ಮಾತನಾಡಿ, ಕೆಂಪೇಗೌಡ ಅಂತರಾಷ್ಟ್ರೀಯ ವಿಮಾನ ನಿಲ್ದಾಣದ ಸಮೀಪ ನಿರ್ಮಾಣವಾಗಿರುವ ಈ ಬೃಹತ್ ಕ್ಯಾಂಪಸ್, ಹಿಮಾಲಯನ್ ಮೂಲದ ಯೋಗ ವಿಜ್ಞಾನವನ್ನು ವಿಶ್ವದೆಲ್ಲೆಡೆ ಪಸರಿಸುವ ಗುರಿಯನ್ನು ಹೊಂದಿದೆಂದರು.

ಸುಮಾರು 1,65,000 ಚದರ ಅಡಿ ವಿಸ್ತೀರ್ಣದಲ್ಲಿ ತಲೆಎತ್ತಿರುವ ಈ ಅತ್ಯಾಧುನಿಕ ಕ್ಯಾಂಪಸ್, ಜಾಗತಿಕ ಮಟ್ಟದಲ್ಲಿ ಹೆಚ್ಚುತ್ತಿರುವ ಯೋಗ ಶಿಕ್ಷಣದ ಬೇಡಿಕೆಯನ್ನು ಪೂರೈಸಲು ಸಜ್ಜಾಗಿದೆ. ಪ್ರತಿ ವರ್ಷ ಬರೋಬ್ಬರಿ ಒಂದು ಲಕ್ಷ ಯೋಗ ಶಿಕ್ಷಕರನ್ನು ತಯಾರಿಗೊಳಿಸುವ ನಿಟ್ಟಿನಲ್ಲಿ ಅಽಕೃತ ಮತ್ತು ವ್ಯವಸ್ಥಿತ ಯೋಗ ಶಿಕ್ಷಣದ ತರಬೇತಿ ನೀಡುವ ಬೃಹತ್ ಗುರಿಯನ್ನು 'ಪುರಂತ' ಅಕ್ಷರ ಯೋಗ ಕೇಂದ್ರ ಹೊಂದಿದೆಂದು ತಿಳಿಸಿದರು.

ನಗರ ಪೊಲೀಸ್ ಕಮೀಷನರ್ ಸೀಮಂತಕುಮಾರ್ ಸಿಂಗ್ ಮಾತನಾಡಿ, ವಿವಿಧ ಯೋಗ ವಿಭಾಗಗಳು ಒಟ್ಟಾಗಿ ಕಾರ್ಯನಿರ್ವಹಿಸಲು ಅನುಕೂಲವಾಗುವಂತೆ ಕ್ಯಾಂಪಸ್ ವಿನ್ಯಾಸಗೊಳಿಸಲಾಗಿದೆ. ಯೋಗ ತರಬೇತಿ, ಧ್ಯಾನ, ಪ್ರಾಣಾಯಾಮ, ಆಯುರ್ವೇದ, ಸಂಶೋಧನೆ ಮತ್ತು ಅಭಿವೃದ್ಧಿ ಹಾಗೂ ವಸತಿಯುತ ಕಲಿಕೆಗೆ ಸುಸಜ್ಜಿತ ಸೌಲಭ್ಯವನ್ನು ಕಲ್ಪಿಸಲಾಗಿದೆಂದು ಹೇಳಿದರು.

ಕೇಂದ್ರ ಸರ್ಕಾರದ ಆಯುಷ್ ಮತ್ತು ಆರೋಗ್ಯ ಖಾತೆ ರಾಜ್ಯ ಸಚಿವ ಪ್ರತಾಪ್‌ರಾವ್ ಗಣಪತ್‌ರಾವ್ ಜಾಧವ್ ಮಾತನಾಡಿ, ಇದೊಂದು ಪ್ರೇರಣಾದಾಯಕ ಉಪಕ್ರಮ ಎಂದು ಬಣ್ಣಿಸಿದ್ದಾರೆ. ಸುಧಾರಿತ ಯೋಗ ಮತ್ತು ಆಧ್ಯಾತ್ಮಿಕ ವಿಜ್ಞಾನಕ್ಕಾಗಿ ಮೀಸಲಾಗಿರುವ ಈ ಕೇಂದ್ರದ ಆರಂಭಕ್ಕಾಗಿ ಅಕ್ಷರ ಯೋಗ ಕೇಂದ್ರ ಹಾಗೂ ಹಿಮಾಲಯನ್ ಸಿದ್ಧ ಅಕ್ಷರ ಅವರಿಗೆ ಶುಭಾಶಯ ತಿಳಿಸಿದ್ದಾರೆ. ಈ ಉಪಕ್ರಮ ವಿಶ್ವಾದ್ಯಂತ ಯೋಗ ಮತ್ತು ಸಮಗ್ರ ಯೋಗ ಕ್ಷೇಮದಲ್ಲಿ ಭಾರತದ ನಾಯಕತ್ವವನ್ನು ಮತ್ತಷ್ಟು ಬಲಪಡಿಸಲಿದೆ ಎಂದು ಅವರು ಶ್ಲಾಘಿಸಿದರು.



ಒಂದೇ ಸೂರಿನಲ್ಲಿ ಅಧ್ಯಯನ

ಹಿಮಾಲಯದ ಯೋಗ ವಿಜ್ಞಾನ ಮತ್ತು ಸಿದ್ಧ ಸಂಪ್ರದಾಯಗಳ ಆಳವಾದ ಅಧ್ಯಯನ, ಅಭ್ಯಾಸ ಮತ್ತು ಸಂಶೋಧನೆಯನ್ನು ಒಂದೇ ಸೂರಿನಲ್ಲಿ ತರುವ ನಿಟ್ಟಿನಲ್ಲಿ ಈ ಕೇಂದ್ರವನ್ನು ಅಭಿವೃದ್ಧಿಪಡಿಸಲಾಗಿದೆ. ಇಲ್ಲಿನ ಸುಧಾರಿತ ಅಭ್ಯಾಸ ಹಾಗೂ ಶಿಕ್ಷಕರ ಶಿಕ್ಷಣ ಕಾರ್ಯಕ್ರಮಗಳು ಸಾಂಪ್ರದಾಯಿಕ ಜ್ಞಾನದ ಅನ್ವಯಿಕ ಅಧ್ಯಯನಕ್ಕೆ ಒತ್ತು ನೀಡಲಿದೆ ಎಂದು ಸಚಿವ ಕೆ.ಎಚ್.ಮುನಿಯಪ್ಪ ಹೇಳಿದರು.

ಸುರಕ್ಷತೆಗೆ ವಿಶೇಷ ಆದ್ಯತೆ

ಕೇಂದ್ರದ ಬೃಹತ್ ಪ್ರಮಾಣ ಮತ್ತು ವಿನ್ಯಾಸ, ಯಾವುದೇ ಅಡೆತಡೆಗಳಿಲ್ಲದೆ ದೀರ್ಘಕಾಲೀನ ಅಧ್ಯಯನ ಮತ್ತು ನಿರಂತರ ಅಭ್ಯಾಸಕ್ಕೆ ಬೆಂಬಲ ನೀಡುವ ಉದ್ದೇಶ ಹೊಂದಿದೆ. ಶಿಸ್ತುಬದ್ಧ ಕಲಿಕೆ, ಕ್ರಮಬದ್ಧವಾದ ಸ್ಪಷ್ಟತೆ ಹಾಗೂ ಸುರಕ್ಷತೆಗೆ ಇಲ್ಲಿ ವಿಶೇಷ ಆದ್ಯತೆ ನೀಡಲಾಗಿದೆ ಎಂದು ನಗರ ಪೊಲೀಸ್ ಕಮೀಷನರ್ ಸೀಮಂತಕುಮಾರ್ ಸಿಂಗ್ ತಿಳಿಸಿದರು.

ಹಿಮಾಲಯನ್ ಸಿದ್ಧ ಅಕ್ಷರ ಮಾತನಾಡಿ, ವ್ಯವಸ್ಥಿತ ಸಾಂಸ್ಥಿಕ ಚೌಕಟ್ಟಿನ ಮೂಲಕ ಹಿಮಾಲಯನ್ ಯೋಗ ಸಂಪ್ರದಾಯಗಳ ಆಳವನ್ನು ಸಂರಕ್ಷಿಸುವ, ಅಧ್ಯಯನ ಮಾಡುವ ಮತ್ತು ಅಭ್ಯಾಸ ಮಾಡುವ ಸ್ಥಳವಾಗಿ ಪುರಂತವನ್ನು ನಿರ್ಮಿಸಲಾಗಿದೆ. ಯೋಗವನ್ನು ಆಂತರಿಕ ವಿಕಾಸದ ವಿಜ್ಞಾನವಾಗಿ ಅನ್ವೇಷಿಸಲು ಬಯಸುವ ಜಗತ್ತಿನಾದ್ಯಂತದ ಸಾಧಕರು ಮತ್ತು ಶಿಕ್ಷಕರಿಗೆ ಬೆಂಬಲ ನೀಡುವುದು ತಮ್ಮ ಪ್ರಮುಖ ಉದ್ದೇಶವಾಗಿದೆ ಎಂದರು.

» ಕೆಂಪೇಗೌಡ ವಿಮಾನ ನಿಲ್ದಾಣದ ಬಳಿ 1.65 ಲಕ್ಷ ಚದರ ಅಡಿ ವಿಸ್ತೀರ್ಣದಲ್ಲಿ ಕ್ಯಾಂಪಸ್ ನಿರ್ಮಾಣ

» ವಾರ್ಷಿಕ ಒಂದು ಲಕ್ಷ ಯೋಗ ಶಿಕ್ಷಕರಿಗೆ ತರಬೇತಿ ನೀಡುವ ಗುರಿ

ಸಾನಿಧ್ಯ ವಹಿಸಿದ್ದ ಬೇಲಿಮಠದ ಶಿವರುದ್ರಸ್ವಾಮೀಜಿ ಮಾತನಾಡಿ, ಹಿಮಾಲಯನ್ ಯೋಗ ಮತ್ತು ಆಧ್ಯಾತ್ಮಿಕ ಜ್ಞಾನದ ವ್ಯವಸ್ಥಿತ ಪ್ರಸರಣಕ್ಕಾಗಿ ಒಂದು ಜಾಗತಿಕ ವೇದಿಕೆಯಾಗಿ ಕಾರ್ಯನಿರ್ವಹಿಸಲು ಈ ಕ್ಯಾಂಪಸ್ ಉದ್ದೇಶಿಸಿದೆಂದು ವಿವರಿಸಿದರು.

ವಸತಿ ತರಬೇತಿ ಕಾರ್ಯಕ್ರಮಗಳು, ಸಾಂಸ್ಥಿಕ ಸಹಯೋಗಗಳು ಮತ್ತು ಅಂತರಾಷ್ಟ್ರೀಯ ಭಾಗವಹಿಸುವಿಕೆಯ ಮೂಲಕ, ವೈವಿಧ್ಯಮಯ ಸಾಂಸ್ಕೃತಿಕ ಮತ್ತು ಶೈಕ್ಷಣಿಕ ಸಂದರ್ಭಗಳಲ್ಲಿ ಯೋಗ ವಿಜ್ಞಾನದ ನಿರಂತರ ಅಧ್ಯಯನ ಮತ್ತು ಪ್ರಸರಣಕ್ಕೆ ಕೊಡುಗೆ ನೀಡಲು ಪುರಂತ ಸಜ್ಜಾಗಿದೆ ಈಗಿನ ಒತ್ತಡದ ಬದುಕು ಆಧುನಿಕ ಜೀವನಶೈಲಿಯ ಜಂಜಾಟದಲ್ಲಿ ತಮ್ಮ ಆರೋಗ್ಯ ಕಾಪಾಡಿಕೊಳ್ಳಲು ಇಂತಹ ಯೋಗಕೇಂದ್ರಗಳ ಸ್ಥಾಪನೆ ಮತ್ತು ಅದರ ಸದ್ವಿನಿಯೋಗ ಅತ್ಯವಶ್ಯವಾಗಿ ಎಲ್ಲರಿಗೂ ಬೇಕಿದೆ. ಇದು ಮುಂದೆ ವಿಶ್ವದಲ್ಲಿ ಅತ್ಯಂತ ದೊಡ್ಡಮಟ್ಟದಲ್ಲಿ ಬೆಳಯುವ ಲಕ್ಷಣಗಳು ಈಗಲೇ ಗೋಚರವಾಗುತ್ತಿದೆ ಎಂದರು. ಹುಟ್ಟುಹಬ್ಬ ಆಚರಿಸಿಕೊಂಡ ಸಚಿವ ಕೆ.ಎಚ್.ಮುನಿಯಪ್ಪ , ಪತ್ನಿ ನಾಗರತ್ನಮ್ಮ ಅವರನ್ನು ಸನ್ಮಾನಿಸಲಾಯಿತು.

ಸಂಸ್ಥಾಪಕ ಸಿದ್ಧ ಅಕ್ಷರ, ಜಿಲ್ಲಾ ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಅಧ್ಯಕ್ಷ ಬಿ.ರಾಜಣ್ಣ, ಯೋಗ ಕೇಂದ್ರದ ಸದಸ್ಯರಿದ್ದರು.

ಸರ್ ಸಿ.ವಿ.ರಾಮನ್ ಪುಸ್ತಕ ಓದಿ, ಬಹುಮಾನ ಗೆಲ್ಲಿ ಕಾರ್ಯಕ್ರಮ

ದೇಶಕ್ಕಾಗಿ ವಿಜ್ಞಾನಿಗಳ ಸೇವೆ ಅಪಾರ

• **ದೊಡ್ಡಬಳ್ಳಾಪುರ:** ಸರ್ ಸಿ.ವಿ. ರಾಮನ್ ಅವರು ಕೇವಲ ಮಹಾನ್ ವಿಜ್ಞಾನಿಯಷ್ಟೇ ಅಲ್ಲ, ಅತ್ಯುನ್ನತ ಪ್ರಾಮಾಣಿಕತೆ ಮತ್ತು ನೈತಿಕ ಮೌಲ್ಯವನ್ನು ಹೊಂದಿದ್ದ ವ್ಯಕ್ತಿಯಾಗಿದ್ದರು ಎಂದು ಬೆಂಗಳೂರು ಗ್ರಾಮಾಂತರ ಜಿಲ್ಲಾ ಕನ್ನಡ ಜಾಗೃತಿ ಸಮಿತಿ ಸದಸ್ಯ ಕೆ.ಮಹಾಲಿಂಗಯ್ಯ ತಿಳಿಸಿದರು.

ನಗರದ ಕನ್ನಡ ಜಾಗೃತ ಭವನದಲ್ಲಿ ಕನ್ನಡ ಸಾಹಿತ್ಯ ಪರಿಷತ್ತು, ಕನ್ನಡ ಜಾಗೃತ ಪರಿಷತ್ತು ಮತ್ತು ವಿಕಾಸ ಪ್ರಶಿಕ್ಷಣ ಕೇಂದ್ರದ ವತಿಯಿಂದ ಸರ್ ಸಿ.ರಾಮನ್ ಪುಸ್ತಕ ಓದಿ ಬಹುಮಾನ ಗೆಲ್ಲಿ ಸ್ಪರ್ಧೆಯ ವಿಜೇತರಿಗೆ ಬಹುಮಾನ ವಿತರಿಸಿ ಮಾತನಾಡಿ, ದೈನಂದಿನ ಜೀವನದಲ್ಲಿ ವಿಜ್ಞಾನದ ಮಹತ್ವವನ್ನು ಜನಸಾಮಾನ್ಯರಿಗೆ ತಿಳಿಸಬೇಕಾಗಿದೆ. ವಿದ್ಯಾರ್ಥಿಗಳು, ಯುವಜನತೆಯಲ್ಲಿ ವೈಜ್ಞಾನಿಕ ಮನೋಭಾವ ಹಾಗೂ ಕುತೂಹಲವನ್ನು ಬೆಳೆಸಬೇಕು. ದೇಶದ ವೈಜ್ಞಾನಿಕ ಪ್ರಗತಿ ಮತ್ತು ವಿಜ್ಞಾನಿಗಳ ಸಾಧನೆಯನ್ನು ಗೌರವಿಸಬೇಕು ಎಂದರು.

ಕನ್ನಡಪರ ಹಿರಿಯ ಹೋರಾಟಗಾರ ತ.ನ.ಪ್ರಭುದೇವ್ ಮಾತನಾಡಿ, ಪುಸ್ತಕ ಓದಿ ಬಹುಮಾನ ಗೆಲ್ಲಿ ಕಾರ್ಯಕ್ರಮ ವಿದ್ಯಾರ್ಥಿಗಳಲ್ಲಿ ಪುಸ್ತಕ ಪ್ರೀತಿ ಬೆಳೆಸಲು ಸಹಕಾರಿಯಾಗಿದೆ. ಪುಸ್ತಕಗಳು ಜೀವನವನ್ನು ಪ್ರೇರೇಪಿಸುವ, ಶಿಕ್ಷಣ ನೀಡುವ ಮತ್ತು ಪರಿವರ್ತಿಸುವ ಶಕ್ತಿಯನ್ನು ಹೊಂದಿವೆ. ದೊಡ್ಡಬಳ್ಳಾಪುರ ತಾಲೂಕಿನಲ್ಲಿ ಪ್ರತಿ ವರ್ಷ ನವೆಂಬರ್ ತಿಂಗಳಲ್ಲಿ ವಿವಿಧ ಶಾಲಾ ಕಾಲೇಜುಗಳಲ್ಲಿ ನಡೆಯುವ ಸಾಹಿತ್ಯ, ವಿಜ್ಞಾನ ಮತ್ತು ಸಂಸ್ಕೃತಿ ಸಮಾಗಮ ಕಾರ್ಯಕ್ರಮ ವಿದ್ಯಾರ್ಥಿಗಳಿಗೆ ಹೆಚ್ಚು ಪ್ರಯೋಜನಕಾರಿಯಾಗಿದೆ ಎಂದರು.

ಎಂಎಸ್‌ವಿ ಪಬ್ಲಿಕ್ ಶಾಲಾ ಶಿಕ್ಷಕ ರಮೇಶ್ ಪೂಜಾರಿ ಮಾತನಾಡಿ,



ಕನ್ನಡ ಪುಸ್ತಕ ಓದಿ ಬಹುಮಾನ ಗೆಲ್ಲಿ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳಲ್ಲಿ ಕನ್ನಡ ಓದುವ ಹವ್ಯಾಸವನ್ನು ಉತ್ತೇಜಿಸುತ್ತದೆ. ಸ್ಪರ್ಧಾತ್ಮಕ ಮನೋಭಾವವನ್ನು ಹೆಚ್ಚಿಸುತ್ತದೆ. ಓದುಗರಲ್ಲಿ ಜ್ಞಾನ, ಕಲ್ಪನಾಶಕ್ತಿ ಮತ್ತು ಜೀವನದ ದೃಷ್ಟಿಕೋನವನ್ನು ವಿಸ್ತರಿಸುವ ಅದ್ಭುತ ಹವ್ಯಾಸ ಪುಸ್ತಕ ಓದು ಆಗಿದೆ. ಪುಸ್ತಕ ಓದು ಮನಸ್ಸಿಗೆ ಸಂತೋಷ, ನೆಮ್ಮದಿ ಮತ್ತು ಹೊಸ ಲೋಕದ ಪರಿಚಯವನ್ನು ನೀಡುತ್ತದೆ ಎಂದರು.

ವಿಕಾಸ ಪ್ರಶಿಕ್ಷಣ ಕೇಂದ್ರದ ಡಾ.ಎ.ಓ.ಆವಲಮೂರ್ತಿ, ಪುಸ್ತಕ ಓದಿ ಬಹುಮಾನ ಗೆಲ್ಲಿ ಕಾರ್ಯಕ್ರಮದ ಸಂಚಾಲಕ ವೆಂಕಟರಾಜು, ಕನ್ನಡ ಜಾಗೃತ ಪರಿಷತ್ತು ಕಾರ್ಯದರ್ಶಿ ಡಿ.ಪಿ.ಆಂಜನೇಯ, ಕಸಾಪ ತಾಲೂಕು ಸಾಹಿತ್ಯ ಅಧ್ಯಕ್ಷ ಪಿ.ಗೋವಿಂದರಾಜು, ಗೌರವ ಕಾರ್ಯದರ್ಶಿ ಎ.ಜಯರಾಮ್, ಪದಾಧಿಕಾರಿಗಳಾದ ಜಿ.ಸುರೇಶ್, ಕೋದಂಡ ರಾಮ್, ಎಚ್.ಎನ್.ಪ್ರಕಾಶ್, ಸಿ.ಅಣ್ಣಯ್ಯ, ರಂಗಸ್ವಾಮಯ್ಯ, ಜಿ.ಸಿ. ಶಿವಕುಮಾರ್, ಸೂರ್ಯನಾರಾಯಣ್, ಗಿರೀಶ್, ಲಕ್ಷ್ಮಿಕಾಂತಮ್ಮ, ಪ್ರಸನ್ನ, ಹಾಡೋನಹಳ್ಳಿ ಗೋವಿಂದರಾಜು ಇದ್ದರು.

ನೆಲಮಂಗಲ ತಾಲೂಕು ಕಚೇರಿ ಆವರಣದಲ್ಲಿ ಸಂಭ್ರಮ

ಶಾಸಕರ ಪರಿಶ್ರಮದಿಂದ ಅಭಿವೃದ್ಧಿ

• **ನೆಲಮಂಗಲ:** ನೆಲಮಂಗಲ ನಗರಕ್ಕೆ ಒಳಚರಂಡಿ ಕಾಮಗಾರಿ ಹಾಗೂ ಶಾಶ್ವತ ಕುಡಿಯುವ ನೀರಿನ ಯೋಜನೆಯಾಗಿ ಕಾವೇರಿ ನೀರನ್ನು ಬಜೆಟ್‌ನಲ್ಲಿ ಘೋಷಣೆಯಾದ ಹಿನ್ನೆಲೆಯಲ್ಲಿ ನಗರದ ಜನರು, ಕಾಂಗ್ರೆಸ್ ಮುಖಂಡರು, ಕಾರ್ಯಕರ್ತರು ಅದ್ದೂರಿ ಸಂಭ್ರಮಾಚರಣೆ ನಡೆಯಿತು.

ನಗರದ ತಾಲೂಕು ಕಚೇರಿ ಮುಂಭಾಗದ ಕೆಂಗಲ್ ಹನುಮಂತಯ್ಯವೃತ್ತದಲ್ಲಿ ಪಟಾಕಿ ಸಿಡಿಸಿ,ಸಿಹಿ ವಿತರಣೆ ಮಾಡುವ ಮೂಲಕ ಶಾಸಕ ಎನ್.ಶ್ರೀನಿವಾಸ್ ಹಾಗೂ ಸಿಎಂ, ಡಿಸಿಎಂ ಸಚಿವರ ಪರ ಘೋಷಣೆ ಕೂಗಿ ಅಭಿನಂದನೆ ಸಲ್ಲಿಸಿ ಮಾತನಾಡಿ, ನೆಲಮಂಗಲ ಯೋಜನಾ ಪ್ರಾಧಿಕಾರದ ಮಾಜಿ ಅಧ್ಯಕ್ಷ ಹೇಮಂತ್‌ಕುಮಾರ್ ಎನ್.ಪಿ ನೆಲಮಂಗಲ ನಗರಕ್ಕೆ ಕನಸಾಗಿಯೇ ಉಳಿದಿದ್ದ ಒಳಚರಂಡಿ, ಶಾಶ್ವತ ನೀರಿನ ಯೋಜನೆಯನ್ನು ನಿರಂತರ ಕಠಿಣ ಪರಿಶ್ರಮದಿಂದ ಶಾಸಕರಾದ ಎನ್.ಶ್ರೀನಿವಾಸ್ ತಂದಿದ್ದರೆಂದರು. ಬ್ಲಾಕ್ ಕಾಂಗ್ರೆಸ್ ನಗರ ಅಧ್ಯಕ್ಷ ಪ್ರದೀಪ್ ಮಾತನಾಡಿ, ನಗರದಲ್ಲಿ ಒಳಚರಂಡಿ ಇಲ್ಲದೆ ಶೌಚಾಲಯದ ನೀರು ಚರಂಡಿಗಳಿಗೆ, ಕೆರೆಗಳಿಗೆ ಸೇರುವ ಜತೆ ಯಾವುದೇ ಸಂಸ್ಕರಣೆ ಇಲ್ಲದೆ ಅಂತರ್ಜಲಕ್ಕೆ ಹೋಗಿ ಬಹಳಷ್ಟು ಆರೋಗ್ಯ ಸಮಸ್ಯೆಗೂ ಕಾರಣವಾಗಿದೆಂದರು. ನೆಲಮಂಗಲದ ಅಧ್ಯಕ್ಷ ಎಂ.ಕೆ.ನಾಗರಾಜು ಮಾತನಾಡಿ, ಶಾಸಕ ಎನ್. ಶ್ರೀನಿವಾಸ್‌ರವರು ನಾವೆಲ್ಲರೂ ಅವರಿಗೆ



ಚಿರಋಣಿಯಾಗಿರಬೇಕೆಂದರು.ಎನ್‌ಪಿಎ ನೆಲಮಂಗಲ ಮಾಜಿ ಅಧ್ಯಕ್ಷ ಎಂ.ನಾರಾ ಯಣಗೌಡ ಮಾತನಾಡಿ, ನಗರದ ಸರ್ವತೋಮುಖ ಅಭಿವೃದ್ಧಿಗೆ ಪಣತೊಟ್ಟು ಅನುದಾನದಲ್ಲಿ ಕೆಲಸ ಮಾಡಿಸುತ್ತಿರುವ ಶಾಸಕರಿಗೆ ವಿಶೇಷ ಧನ್ಯವಾದಗಳೆಂದರು.ನಾಗರಿಕರಿಗೆ ಲಾಡು ವಿತರಿಸಿದರು. ಎನ್‌ಪಿಎ ಅಧ್ಯಕ್ಷ ಎಂ.ಕೆ ನಾಗರಾಜು, ಟಿಎಪಿಸಿಎಂಎಸ್ ಅಧ್ಯಕ್ಷ ಹನುಮಂತರಾಜು, ಮಾಜಿ ಅಧ್ಯಕ್ಷ ನರಸಿಂಹಮೂರ್ತಿ, ಬ್ಲಾಕ್ ಕಾಂಗ್ರೆಸ್ ಕಸಬಾ ಅಧ್ಯಕ್ಷ ಮಂಜುನಾಥಗೌಡ , ಕುಮುದ್ವತಿ ಸಂಸ್ಥೆ ಮಾಲೀಕ ಚಿಕ್ಕಹನುಮೇಗೌಡ, ನಗರಸಭೆ ಸದಸ್ಯರಾದ ಸುಧಾಕೃಷ್ಣಪ್ಪ, ಲೋಲಾಕ್ಷಿಗಂಗಾಧರ್, ವಕೀಲ ಎನ್.ಪಿ.ರಘುನಾಥ್, ಆನಂದ್, ನರಸಿಂಹಮೂರ್ತಿ, ಬಿ.ಜಿ ವಾಸು, ರಾಜಣ್ಣ, ಮಿಲ್ಟ್ರಿಮೂರ್ತಿ, ಚಿಕ್ಕಣ್ಣ, ಭಕ್ತನಪಾಳ್ಯ ಮುನಿರಾಜು, ಯಸಂತ್, ಸಿಎಂಗೌಡ, ಲಕ್ಷ್ಮೀನಾರಾಯಣ್, ಜಗದೀಶ್, ಬೈರನಹಳ್ಳಿವೆಂಕಟೇಶ್, ರಮೇಶ್‌ಬಾಬು ಇದ್ದರು.

ಜೇನುಗೂಡು ಟ್ರಸ್ಟ್‌ನಿಂದ ಮಹಿಳಾ ದಿನಾಚರಣೆ | ಸ್ಪರ್ಧಾ ವಿಜೇತರಿಗೆ ಬಹುಮಾನ ವಿತರಣೆ

ಮಹಿಳೆಯರು ಸ್ವಾಭಿಮಾನಿಗಳಾಗಬೇಕು

• **ಸೂಲಿಬೆಲೆ:** ಇಂದಿನ ಸ್ಪರ್ಧಾತ್ಮಕ ಜಗತ್ತಿನಲ್ಲಿ ಮಹಿಳೆ ಮತ್ತು ಪುರುಷರು ಸಮಾನವಾದ ಅವಕಾಶವನ್ನು ಬಳಸಿಕೊಂಡು ಮುನ್ನುಗ್ಗಬೇಕು. ಸ್ವಾವಲಂಬಿಗಳಾಗಿ ಜೀವನ ಕಟ್ಟಿಕೊಳ್ಳಬೇಕು ಎಂದು ಇಲ್ಲಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಉಪನ್ಯಾಸಕಿ ಡಾ. ಸಂಗೀತಾ ಹೇಳಿದರು.

ಇಲ್ಲಿನ ಸರ್ಕಾರಿ ಪದವಿಪೂರ್ವ ಕಾಲೇಜಿನ ಆವರಣದಲ್ಲಿ ಮೇರಾ ಯುವಭಾರತ್ ಬೆಂಗಳೂರು ಗ್ರಾಮಾಂತರ ಜೇನುಗೂಡು ರೂರಲ್ ಡೆವಲಪ್‌ಮೆಂಟ್ ಅಂಡ್ ಕಲ್ಚರಲ್ ಟ್ರಸ್ಟ್ ಹಾಗೂ ಸೂಲಿಬೆಲೆ ಗ್ರಾಮಪಂಚಾಯತ್, ಆಶ್ರಯ ಸಂಜೀವಿನಿ ಒಕ್ಕೂಟ ಸಂಯುಕ್ತ ಆಶ್ರಯದಲ್ಲಿ ಹಮ್ಮಿಕೊಂಡಿದ್ದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಹಾಗೂ ವಿಶೇಷ ಮಹಿಳಾ ಗ್ರಾಮ ಸಭೆ ಉದ್ಘಾಟಿಸಿ ಮಾತನಾಡಿ, ಹೆಣ್ಣೊಂದುಕಲಿತರೆಶಾಲೆಯೊಂದುತೆರೆದಂತೆಪ್ರತಿಯೊಂದು ಹೆಣ್ಣು ಮಗು ಸಾಮಾಜಿಕ ಜವಾಬ್ದಾರಿ ಮತ್ತು ಕಾಳಜಿ ಬೆಳಸಿಕೊಳ್ಳಬೇಕು. ಶೈಕ್ಷಣಿಕವಾದ ಪ್ರಗತಿಯಿಂದ ಹೊಸ ಬದಲಾವಣೆ ನೀರಿಕ್ಷಿಸಬಹುದು ಎಂದು ಹೇಳಿದರು.

ಜೇನುಗೂಡು ರೂರಲ್ ಡೆವಲಪ್ಮೆಂಟ್ ಅಂಡ್ ಕಲ್ಚರಲ್ ಟ್ರಸ್ಟಿನ ಹಿರಿಯ ನಿರ್ದೇಶಕ ಬಿ.ಶ್ರೀನಿವಾಸ್ ಮಾತನಾಡಿ, ಮಹಿಳೆಯರು ಶಿಕ್ಷಣದಿಂದ ಬದಲಾವಣೆಯನ್ನು ಕಾಣಬಹುದು ಪ್ರತಿಯೊಂದು ಹೆಣ್ಣು ಮಗು ಉನ್ನತ ಶಿಕ್ಷಣ ಪಡೆಯುವ ಮೂಲಕ ತಮ್ಮ ಮೀಸಲು ಹಕ್ಕು



ಪಡೆಯಬೇಕು ಎಂದು ಹೇಳಿದರು. ಗ್ರಾಪಂ ಪಿಡಿಒ ವಿಜಯ ಕುಮಾರಿ ಮಾತನಾಡಿ , ಹೆಣ್ಣು ಮಕ್ಕಳನ್ನು ಭೂಮಿತಾಯಿ, ಪ್ರಕೃತಿಮಾತೆ ಗಂಗೆಮಾತೆಯಾಗಿ ವರ್ಣನೆ ಮಾಡುತ್ತಾರೆ ರಾಜಕೀಯವಾಗಿ ಬದಲಾವಣೆ ಕಾಣಬೇಕಾದರೆ ಮಹಿಳೆಯರ ಮೀಸಲು ಹಕ್ಕು ಪಡೆಯುವುದು ಕಡ್ಡಾಯವಾಗಿದೆ ಎಂದರು.ಜೇನುಗೂಡು ಟ್ರಸ್ಟ್ ನಿರ್ದೇಶಕಿ ವಿಜಯಲಕ್ಷ್ಮೀ ಮಾತನಾಡಿದರು. ಕೆ.ವಿ.ವಿಜಯಲಕ್ಷ್ಮೀ, ಸಾಧಕರಿಗೆ ಗೌರವ ಸನ್ಮಾನ ಹಾಗೂ ರಂಗೋಲಿ ಸ್ಪರ್ದೆ,ಮೆಹಂದಿ ಸ್ಪರ್ಧೆ,ಲೆಮನ್ ಸ್ಪೂನ್, 100 ಮೀಟರ್ ಓಟ, ಮ್ಯೂಸಿಕಲ್ ಚೇರ್, ವಿಜೇಯತರಿಗೆ ಬಹುಮಾನ, ಉಡುಗೋರೆ ವಿತರಣೆ ಮಾಡಿದರು. ಗ್ರಾಮಪಂಚಾಯತ್ ವತಿಯಿಂದ ಊಟದ ವ್ಯವಸ್ಥೆ ಹಾಗೂ ಬಮೂಲ್ ನಿರ್ದೇಶಕರಾದ ಬಿ.ವಿ.ಸತೀಶಗೌಡರಿಂದ ನಂದಿನಿ ಪೇಡಾ ಮಜ್ಜಿಗೆ ವ್ಯವಸ್ಥೆ ಮಾಡಿದ್ದರು.

ರಾಜ್ಯ ಒಕ್ಕಲಿಗ ಸಂಘದ ಮಾಜಿ ನಿರ್ದೇಶಕ ಬಿ.ಎನ್. ಗೋಪಾಲಗೌಡ, ಗ್ರಾಪಂ ಅಧ್ಯಕ್ಷ ಜನಾರ್ದನರೆಡ್ಡಿ, ಆಡಳಿತಾಽಕಾರಿ ಸುಬ್ರಹ್ಮಣಿ, ನಿರ್ದೇಶಕಿ ವಿಜಯಲಕ್ಷ್ಮಿ, ಪ್ರಭಾವತಿ, ನಿರ್ದೇಶಕ ಬಿ.ಶ್ರೀನಿವಾಸ್, ಉಪನ್ಯಾಸಕ ಕುಮಾರ್, ವೈಜ್ಞಾನಿಕ ವಿಜ್ಞಾನಪರಿಷತ್ ಜಿಲ್ಲಾಧ್ಯಕ್ಷ ಉಮೇಶ್, ಶಿಕ್ಷಕ ರಾಮಚಂದ್ರರೆಡ್ಡಿ, ಮಾನವ ಹಕ್ಕುಗಳ ಅಧ್ಯಕ್ಷೆ ರಾಜೇಶ್ವರಿ, ಉಪಾಧ್ಯಕ್ಷೆ ಸುನೀತಾ, ಶುಶ್ರೂಷಕಿ ರುತ್ ಜೆಸೆಂತಾ, ಜೇನುಗೂಡು ಟ್ರಸ್ಟ್ ಉಪಾಧ್ಯಕ್ಷ ಚೌಡೇಗೌಡ, ನಿರ್ದೇಶಕರಾದ ಸೈಯದ್ ಮಹಬೂಬ್, ಜಿಯಾವುಲ್ಲಾ, ಅತ್ತಿಬೆಲೆ ಮಂಜುನಾಥ್, ನಯಾಜ್ ಖಾನ್, ಆಶ್ರಯ ಸಂಜೀವಿನಿ ಒಕ್ಕೂಟದ ಅನುರಾಧಾ, ಸುಜಾತಾ ಇತರರು ಇದ್ದರು.

ಮಾ.13ರಿಂದ ಮದ್ದೂರಮ್ಮ ದೇವಿ ಜಾತ್ರಾ ಮಹೋತ್ಸವ

• **ಆನೇಕಲ್:** ತಾಲೂಕಿನ ಹುಸ್ಕೂರಿನಲ್ಲಿರುವ ಮದ್ದೂರಮ್ಮ ದೇವಿಯ ಜಾತ್ರಾ ಮಹೋತ್ಸವ ಮಾ.13ರಿಂದ 17ರವರೆಗೆ ವಿವಿಧ ಕಾರ್ಯಕ್ರಮಗೊಂದಿಗೆ ಸಂಭ್ರಮದಿಂದ ನಡೆಯಲಿದೆ ಎಂದು ಮದ್ದೂರಮ್ಮ ದೇವಾಲಯದ ವ್ಯವಸ್ಥಾಪಕ ಸಮಿತಿ ಅಧ್ಯಕ್ಷ ಕೆ.ಪಾಪಣ್ಣ ತಿಳಿಸಿದರು.



ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ನೂರಾರು ವರ್ಷದಿಂದಲೂ ಮದ್ದೂರಮ್ಮ ದೇವಿ ಜಾತ್ರಾಮಹೋತ್ಸವ ಆಚರಿಸಿಕೊಂಡು ಬರಲಾಗುತ್ತಿದೆ. ಪ್ರಸಕ್ತ ವರ್ಷವೂ ಇಡೀ ತಾಲೂಕಿನ ಒಗ್ಗೂಡಿಕೊಂಡು ಹಬ್ಬ ಆಚರಿಸಲು ನಿರ್ಧರಿಸಲಾಗಿದೆ ಎಂದರು. ಮಾ.13 ರಂದು ಮದ್ದೂರಮ್ಮ ಅಮ್ಮನಿಗೆ ದೀಪೋತ್ಸವ, ಮಾ.14ರಂದು ತೇರಿನ ಆಗಮನ ಪ್ರಯುಕ್ತ ಜಾತ್ರೆ, ಮಹೋತ್ಸವದ ಪ್ರಮುಖ ಆಕರ್ಷಣೆ, ಹುಸ್ಕೂರು ಸೇರಿದಂತೆ 17ಗ್ರಾಮದಿಂದ ತೇರುಗಳು ಮದ್ದೂರು ದೇವಿ ಆವರಣಕ್ಕೆ ಆಗಮಿಸಲಿವೆ. ಮಾ.15 ರಂದು ರಾತ್ರಿ ಒಂದಕ್ಕೆ ಧರ್ಮರಾಯಸ್ವಾಮಿ ದ್ರೌಪದಮ್ಮನವರ ಕರಗ ಶಕ್ತೋತ್ಸವ, ಮಾ.17ರಂದು ಧ್ವಜಹವಾರೋಹಣ ನಡೆಯಲಿದೆ ಎಂದು ಮಾಹಿತಿ ನೀಡಿದರು.

ಮುಖ್ಯ ಅತಿಥಿಗಳಾಗಿ ಮುಜರಾಯಿ ಇಲಾಖೆ ಸಚಿವ ರಾಮಲಿಂಗಾರೆಡ್ಡಿ, ಶಾಸಕ ಬಿ.ಶಿವಣ್ಣ, ಸಂಸದ ಮಂಜುನಾಥ್, ಮಾಜಿ ಸಂಸದ ಡಿ.ಕೆ.ಸುರೇಶ್, ಮಾಜಿ ಸಂಸದ ಕುಪೇಂದ್ರರೆಡ್ಡಿ, ವಿಧಾನ ಪರಿಷತ್ ಸದಸ್ಯ ರಾಮೋಜಿಗೌಡ, ಗೋಪಿನಾಥ್ ರೆಡ್ಡಿ, ಪುಟ್ಟಣ್ಣ, ದೇವೇಗೌಡ ಸೇರಿದಂತೆ ಹಲವು ಗಣ್ಯರು ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ ಎಂದು ಹೇಳಿದರು. ಗೋಷ್ಠಿಯಲ್ಲಿ ದೇವಾಲಯದ ಟ್ರಸ್ಟ್ ಪದಾಽಕಾರಿಗಳು ಭಾಗವಹಿಸಿದ್ದರು.

ತೂಬಗೆರೆಯ ಸರ್ಕಾರಿ ಪ್ರೌಢಶಾಲೆಯಲ್ಲಿ ಗುರುಪೂಜೆ–ಸ್ನೇಹಮಿಲನ

ಕಲಿತ ಶಾಲೆಯ ಋಣ ನಮ್ಮ ಮೇಲಿದೆ

• **ದೊಡ್ಡಬಳ್ಳಾಪುರ:** ನನ್ನ ಶಾಲೆ ನನ್ನ ಜವಾಬ್ದಾರಿ ಎಂಬ ಧ್ಯೇಯ ವಾಕ್ಯದೊಂದಿಗೆ ತಾನು ಓದಿದ ಸರ್ಕಾರಿ ಶಾಲೆಯ ಪರಿಸ್ಥಿತಿ ಹೇಗಿದೆ ಎಂಬುದನ್ನು ಹಿಂದಿರುಗಿ ನೋಡಿದ ವಿದ್ಯಾರ್ಥಿಗಳೆಂದರೆ 2001-02ನೇ ಸಾಲಿನ ಹಳೆಯ ವಿದ್ಯಾರ್ಥಿಗಳು ಮಾತ್ರ ಎಂದು ನಿವೃತ್ತ ದೈಹಿಕ ಶಿಕ್ಷಕ ವಿಶ್ವನಾಥ್‌ಗೌಡ ಹೇಳಿದರು.

ತಾಲೂಕಿನ ತೂಬಗೆರೆಯ ಸರ್ಕಾರಿ ಪ್ರೌಢ ಶಾಲೆಯ 2001-02ನೇ ಸಾಲಿನ ಹಳೆಯ ವಿದ್ಯಾರ್ಥಿಗಳಿಂದ ಗುರುಗಳಿಗೆ ಪಾದಪೂಜೆ ಹಾಗೂ ಸ್ನೇಹ ಸಮ್ಮಿಲನ ಕಾರ್ಯಕ್ರಮದಲ್ಲಿ ಹಳೆ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿ, ತಾನು ಓದಿದ ಶಾಲೆಗೆ ಸುಮಾರು 50,000 ಮೌಲ್ಯದ ಶಾಲಾ ಪರಿಕರವನ್ನು ನೀಡಿ ತಮ್ಮ ನೆಚ್ಚಿನ ಗುರುವನ್ನು 25 ವರ್ಷದ ನಂತರ ಭೇಟಿ ಮಾಡಿ ಕಾರ್ಯಕ್ರಮಕ್ಕೆ ಮಂಗಳವಾದ್ಯಗಳೊಂದಿಗೆ ಕರೆತಂದು ಪಾದಪೂಜೆ ನೆರವೇರಿಸಿದ ಸಂಸ್ಕೃತಿ ಉಳಿದಿರುವುದು ಅಂದಿನ ವಿದ್ಯಾರ್ಥಿಗಳಿಗೆ ಮಾತ್ರ ಎಂದರು.

ಶಿಕ್ಷಕಿ ಶೋಭಾ ಮಾತನಾಡಿ, ನಾನೊಬ್ಬ ವಿಜ್ಞಾನ ಶಿಕ್ಷಕಿಯಾಗಿ ವಿಜ್ಞಾನವನ್ನು ಬರಿ ಪ್ರಗತಿಗಷ್ಟೇ ಬಳಸಬೇಕು ನಾವು ನಮ್ಮ ನಿತ್ಯ ಜೀವನವನ್ನು ಉತ್ತಮ



ಪರಿಸರದೊಂದಿಗೆ ಜೀವನ ಕಳೆಯಬೇಕು. ಆದ್ದರಿಂದ ನಿಮ್ಮ ಮುಂದಿನ ಪೀಳಿಗೆಗೆ ಉತ್ತಮ ಆರೋಗ್ಯವನ್ನು ಕಾಪಾಡಲು ಪ್ಲಾಸ್ಟಿಕ್ ಮುಕ್ತ ಸಮಾಜ ನಿರ್ಮಿಸಲು ಎಲ್ಲರೂ ಕೈಜೋಡಿಸಿ ಎಲ್ಲರೂ ನಾವು ಹಚ್ಚಿರುವ ದೀಪ ಸುಂದರವಾಗಿ ಬೆಳಗುತ್ತಿದೆ ಎಂದರೆ ಅದು ನಾವು ನೀಡಿದ ಸಂಸ್ಕಾರದಿಂದ ಮಾತ್ರ ಎಂದು ಹೇಳಿದರು.

ನಿವೃತ್ತ ಮುಖ್ಯ ಶಿಕ್ಷಕ ಜಿಎಂ ಮುನಿಕೃಷ್ಣಪ್ಪ ಮಾತನಾಡಿ, ನನ್ನ 30 ವರ್ಷಗಳ ಸೇವಾ ಅವಽಯಲ್ಲಿ 20 ವರ್ಷ ತೂಬಗೆರೆ ಸರ್ಕಾರಿ ಶಾಲೆಯಲ್ಲಿ ಸೇವೆ ಸಲ್ಲಿಸಿದ್ದೇನ. ಇಂತಹ ತೃಪ್ತಿ ನನಗೆ ಬೇರೆ ಯಾವುದೇ ಶಾಲೆಗಳಲ್ಲೂ ದೊರೆತಿಲ್ಲ . ಈ ಬ್ಯಾಚಿನ ಹಳೆಯ ವಿದ್ಯಾರ್ಥಿಗಳ ಎಲ್ಲರಿಗೂ ಶುಭವಾಗಲಿ ಎಂದು ಹಾರೈಸಿದರು.

ಹಿರಿಯ ಕನ್ನಡ ಶಿಕ್ಷಕಿ ರೇಣುಕಾಭಟ್,ಇಂದಿರಾ, ಶೈಲಜಾ , ನಿವೃತ್ತ ಹಿರಿಯ ಶಿಕ್ಷಕ ಅನಂತ ಪದ್ಮನಾಭಶರ್ಮಾ, ಎ.ಆರ್. ಸುಬ್ಬರಾವ್ .ಸಿ.ಕೆ.ಕೃಷ್ಣಪ್ಪ, ನಾರಾಯಣಪ್ಪ , ಮಂಜುನಾಥ್, ಗುಮಾಸ್ತರಾದ ಭಾಗ್ಯಮ್ಮ , ಹಳೆ ವಿದ್ಯಾರ್ಥಿಗಳಾದ ನವೀನ್, ಸುಬ್ರಹ್ಮಣ್ಯ, ಸಂಪತ್ , ವೆಂಕಟೇಶ್, ಗಂಗರಾಜು. ಎನ್. ಶಿವಕುಮಾರ್, ಮಮತಾ, ಚೈತ್ರಾ, ಪಾರ್ವತಿ ಸೇರಿದಂತೆ ನೂರ ಹತ್ತು ಹಳೆ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳಿಂದ ಶಾರದಾ ಮಾತೆಗೆ ಪೂಜೆ : ಸಿಹಿ ವಿತರಣೆ

ವಿದ್ಯಾರ್ಥಿಗಳ ಏಕಾಗ್ರತೆಯಿಂದ ಸಾಧನೆ

• **ಕೋಲಾರ:** ಹೆತ್ತತಾಯಿ,ತಂದೆ, ಕಲಿಸಿದಗುರುವಿನ ಆಶಯವನ್ನು ಈಡೇರಿಸುವ ಸಂಕಲ್ಪದೊಂದಿಗೆ ನೀವು ಬೆಳಗಿಸಿರುವ ಜ್ಯೋತಿ ನಿಮ್ಮ ಬದುಕಿನ ಅಂಧಕಾರ ಹೋಗಲಾಡಿಸಿ ನಿಮ್ಮಲ್ಲಿ ಶ್ರದ್ಧೆ ಓದಲು ಏಕಾಗ್ರತೆ ಮೂಡಿಸಲಿ, ನಿಮ್ಮ ಸಾಧನೆಗೆ ದಾರಿ ತೋರಲಿ ಎಂದು ಅರಾಭಿಕೊತ್ತನೂರು ಸರ್ಕಾರಿ ಪ್ರೌಢಶಾಲೆ ಮುಖ್ಯ ಶಿಕ್ಷಕಿ ತಾಹೇರಾ ನುಸ್ರತ್ ಕರೆ ನೀಡಿದರು.

ಶಾಲೆಯ ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳಿಗೆ ಬೀಳ್ಕೊಡುಗೆ, ಶಾರದಾಪೂಜೆ ಹಾಗೂ ದೀಪ ಬೆಳಗುವ ಮೂಲಕ ಬದುಕಿನ ಕತ್ತಲು ಕಳೆದು ಬೆಳಕಿನಡೆಗೆ ಸಾಗುವ ದೀಪಗಳ ಬೆಳಗುವಿಕೆ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿ, ಎಸ್ಸೆಸ್ಸೆಲ್ಸಿ ಪರೀಕ್ಷೆ ಮಾ.18 ರಿಂದ ಆರಂಭಗೊಳ್ಳುತ್ತಿದೆ. ಹಬ್ಬ, ಹರಿದಿನಗಳ ಆಸೆ ಬಿಡಿ, ಬದ್ಧತೆಯಿಂದ ಓದಿ, ಶಿಕ್ಷಕರು ಹಬ್ಬ ಬಿಟ್ಟು ನಿಮಗಾಗಿ ಪ್ರತಿದಿನ ದೈನಂದಿನ ಶಾಲಾ ಸಮಯದ ಜತೆಗೆ ವಿಶೇಷ ತರಗತಿಗಳನ್ನು ತೆಗೆದುಕೊಳ್ಳುತ್ತಿದ್ದಾರೆ ಎಂದರು.

ಎಸ್‌ಡಿಎಂಸಿ ನಿಕಟ ಪೂರ್ವ ಅಧ್ಯಕ್ಷ ಎ.ಮಹೇಂದ್ರ ಮಾತನಾಡಿ, ನಿಮ್ಮಲ್ಲಿ ಯಾರೂ ಕಡಿಮೆ ಇಲ್ಲ, ಎಲ್ಲರಲ್ಲೂ ಅಪರಿಮಿತ ಶಕ್ತಿ ಇದೆ ಆದರೆ ಅದನ್ನು ಬಳಸಿಕೊಳ್ಳುವ ಸಂಕಲ್ಪ, ಶ್ರದ್ಧೆ ರೂಪಿಸಿಕೊಂಡರೆ ಮಾತ್ರ ಅಂಕ ಗಳಿಸುವ ಶಕ್ತಿ ನಿಮ್ಮದಾಗುತ್ತದೆಂದರು.



ಹಿರಿಯ ಶಿಕ್ಷಕಿ ಸಿದ್ದೇಶ್ವರಿ ಮಾತನಾಡಿ, ನಿಮ್ಮ ತುಂಟಾಟ ನೋಡಿದ್ದೇವೆ. ನೀವು ತಪ್ಪು ಮಾಡಿದಾಗ ನಮ್ಮ ಮಕ್ಕಳನ್ನು ಸರಿದಾರಿಗೆ ತರುವ ಕೆಲಸ ಶಿಕ್ಷಕರು ಮಾಡಿದ್ದಾರೆ, ಪರೀಕ್ಷೆ 8ದಿನ ಇದೆ, ಚೆನ್ನಾಗಿ ಓದಿ ಶಾಲೆಗೆ ಕೀರ್ತಿ ತನ್ನಿ ಎಂದರು. ಹಿರಿಯ ಶಿಕ್ಷಕ ಎಂ.ಆರ್.ಗೋಪಾಲಕೃಷ್ಣ ಮಾತನಾಡಿ, ಪ್ರತಿ ನಿಮಿಷವೂ ವ್ಯರ್ಥವಾಗದಂತೆ ಓದಿದರೆ ಈಗಲೂ ಉತ್ತಮ ಸಾಧನೆ ಮಾಡಲು ಅಡ್ಡಿಯಿಲ್ಲ ಎಂದು ತಿಳಿಸಿ, ವಿದ್ಯಾರ್ಥಿಗಳಿಗೆ ಶುಭ ಕೋರಿದರು.

ತರಗತಿ ಶಿಕ್ಷಕಿ ಸುಗುಣಾ ಮಾತನಾಡಿ, ಪರೀಕ್ಷೆಯಲ್ಲಿ ಎಲ್ಲಾ ಪ್ರಶ್ನೆಗಳಿಗೂ ಉತ್ತರ ಬರೆಯುವ ಪ್ರಯತ್ನ ಮಾಡಿ, ಇನ್ನೂ ಸಮಯವಿದೆಂದರು.ಶಿಕ್ಷಕ ಆರ್. ವೆಂಕಟರೆಡ್ಡಿ ಮಾತನಾಡಿ, ನಿಮ್ಮನ್ನು ಕಲಿಕಾ ದಾರಿಗೆ ತರುವ ಪ್ರಯತ್ನ ಮಾಡಿದ್ದೇವೆ, ಅದು ಸಾರ್ಥಕಗೊಳ್ಳಲು ನೀವು ಪರಿಶ್ರಮ ಹಾಕಿ ಎಂದು ಕಿವಿಮಾತು ಹೇಳಿದರು.ದೈಹಿಕ ಶಿಕ್ಷಣ ಶಿಕ್ಷಕಿ ಕೆ.ಲೀಲಾ, ಶಾಲೆಯಿಂದ ರಾಜ್ಯಮಟ್ಟದ ಕ್ರೀಡಾಕೂಟದಲ್ಲಿ ಪ್ರತಿನಿಧಿಸಿ ಶಾಲೆಗೆ ಕೀರ್ತಿ ತಂದ ನಾಲ್ವರು ವಿದ್ಯಾರ್ಥಿಗಳಿಗೆ ಬಹುಮಾನ, ನೆನಪಿನ ಕಾಣಿಕೆ ವಿತರಿಸಿ, ಎಸ್ಸೆಸ್ಸೆಲ್ಸಿ ಪರೀಕ್ಷಾರ್ಥಿಗಳಿಗೆ ಶುಭಕೋರಿದರು. 10ನೇ ತರಗತಿ ವಿದ್ಯಾರ್ಥಿಗಳಾದ ನಟರಾಜ, ದೀಪ್ತಿ, ಮೌನಿಕಾ, ಅಂಜನಾದ್ರಿ ಇತರರಿದ್ದರು.

ಕಿರುಸುದ್ದಿ

ತಾತಯ್ಯರ ಚಿಂತನಾ ಮಾರ್ಗ ಮಾದರಿ



ಆನೇಕಲ್: ತಾಲೂಕಿನ ಬಲಜಿಗರ ಮಹಾಸಂಘದ ವತಿಯಿಂದ ಸದ್ಗುರು ಯೋಗಿ ನಾರಾಯಣ ಯತೀಂದ್ರ ಕೈವಾರ ತಾತಯ್ಯ ಅವರ ಜಯಂತ್ಯುತ್ಸವ ಕಾರ್ಯಕ್ರಮವನ್ನು ವಿಜೃಂಭಣೆಯಿಂದ ಆಚರಿಸಲಾಯಿತು.

ತಾಲೂಕಿನ ಪ್ರಮುಖ ಬೀದಿಯಲ್ಲಿ ಕೈವಾರ ತಾತಯ್ಯ ಭಾವಚಿತ್ರವನ್ನು ಬೆಳ್ಳಿರಥದಲ್ಲಿ ಮೆರವಣಿಗೆ ಮಾಡಲಾಯಿತು. ಪೂಜಾ ಕುಣಿತ, ವೀರಗಾಸೆ, ಡೊಳ್ಳುಕುಣಿತ, ಗೊರವರ ಕುಣಿತ, ಹಾಲಕ್ಕಿ ಸುಗ್ಗಿ ಕುಣಿತ, ಬೇಡವರ ವೇಷ, ನಂದಿ ಧ್ವಜ ಸೇರಿದಂತೆ ರಾಸುಗಳ ಮೆರವಣಿಗೆ ಮೆರಗು ತಂದವು. ಬಲಿಜ ಮಹಾ ಸಂಘದ ಹಿರಿಯ ಮುಖಂಡರಾದ ವೇಣುಗೋಪಾಲ್ ಮಾತನಾಡಿ, ಕೈವಾರ ತಾತಾಯ್ಯನವರು ತನ್ನ ತತ್ವಗಳ ಮೂಲಕ ಸಮಾಜದ ಬದಲಾವಣೆಗೆ ಕೆಲಸ ಮಾಡಿ ಮಹಾನ್ ವ್ಯಕ್ತಿ. ಅವರ ದಿನಾಚರಣೆಯನ್ನು ಅರ್ಥ ಪೂರ್ಣವಾಗಿ ಆಚರಿಸುವುದು ನಮ್ಮೆಲ್ಲರ ಜವಾಬ್ದಾರಿ ಯಾಗಿದೆ. ಇನ್ನು ಅವರ ಅದರ್ಶವನ್ನು ಪ್ರತಿಯೊಬ್ಬರು ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದರು.

ಬಲಜಿಗರ ಸಂಘದಿಂದ ಕೈವಾರ ತಾತಯ್ಯ ಜಯಂತಿ

ಬಲಿಜ ಸಮುದಾಯದ ಮುಖಂಡ ಪಿ.ರಾಜು ಮಾತನಾಡಿ, ಯೋಗಿ ನಾರಾಯಣ ಅವರ ತತ್ವ ಸಿದ್ಧಾಂತಗಳು ಸದಾ ಕಾಲಕ್ಕೂ ಪ್ರಸ್ತುತವಾಗಿದೆ. ಅವರು ಹಾಕಿಕೊಟ್ಟ ಚಿಂತನಾ ಮಾರ್ಗದಲ್ಲಿ ಸಾಗುವ ಮೂಲಕ ಬದುಕನ್ನು ಅರ್ಥಪೂರ್ಣಗೊಳಿಸೋಣವೆಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಶಾಸಕ ಶಿವಣ್ಣ,ಬಿ.ನಾಗರಾಜ್, ಶಿವರಾಮ್, ನಾರಾಯಣಸ್ವಾಮಿ, ಗೋಪಾಲಪ್ಪ, ನಂದ ಕುಮಾರ್, ನವೀನ್, ಮಂಜುನಾಥ್ ಸೇರಿದಂತೆ ಸಮುದಾಯದ ಮುಖಂಡರು ಭಾಗವಹಿಸಿದ್ದರು.

ಹುಟ್ಟುಹಬ್ಬ ಆಚರಣೆ: ಸಚಿವ ಕೆಎಚ್ಎಂಗೆ ಸನ್ಮಾನ



ದೇವನಹಳ್ಳಿ : ಸರಳ ಸಜ್ಜನಿಕೆಯ ಹಿರಿಯ ರಾಜಕಾರಣಿ ಸಚಿವ ಕೆ.ಎಚ್.ಮುನಿಯಪ್ಪ ಎಂದು ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಎಚ್.ಎಂ. ರವಿಕುಮಾರ್ ತಿಳಿಸಿದರು. ಸಚಿವರ ಮನೆಗೆ ತೆರಳಿ ಹುಟ್ಟುಹಬ್ಬದ ಶುಭಾಶಯ ತಿಳಿಸಿದ ಬಳಿಕ ಮಾತನಾಡಿ , ಸನ್ಮಾನ್ಯರು ಯಾವುದೇ ಪಕ್ಷ ಬೇಧವಿಲ್ಲದೇ ಎಲ್ಲರ ಜತೆ ಬೆರೆತು ಕೆಲಸ ಮಾಡುತ್ತಾರೆ. ಅವರು ನೂರ್ಕಾಲ ಬಾಳಿ ಬಡಜನರ ಆಶಾಕಿರಣವಾಗಲಿ ಎಂದು ತಿಳಿಸಿದರು. ಮುಖಂಡರಾದ ಆರ್.ಕೆ. ನಂಜೇಗೌಡ, ಎಚ್.ಎಂ. ರವಿಕುಮಾರ್, ಬಿ.ಕೆ. ನಾರಾಯಣ ಸ್ವಾಮಿ, ಬಿ.ರಾಜಣ್ಣ ಇತರರು ಭಾಗವಹಿಸಿದ್ದರು.

ಇಂದಿನಿಂದ ಕ್ಯಾನ್ಸರ್ ನಿರೋಧಕ ಲಸಿಕೆ

ಆಲೂರು: 14 ವರ್ಷ ತುಂಬಿದ ಹೆಣ್ಣು ಮಕ್ಕಳಿಗೆ ಗರ್ಭಕೊರಳು ಕ್ಯಾನ್ಸರ್ ನಿರೋಧಕ ವ್ಯಾಕ್ಸಿನ್‌ನ್ನು ಎಲ್ಲ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಉಚಿತವಾಗಿ ಕೊಡಲಾಗುವುದು ಎಂದು ತಾಲೂಕು ಆರೋಗ್ಯಾಧಿಕಾರಿ ಡಾ.ನಿಸಾರ್ ಫಾತಿಮ ತಿಳಿಸಿದರು. ಪಟ್ಟಣದ ಎಂ.ಎಚ್.ಪಿ.ಎಸ್.ಶಾಲೆಯಲ್ಲಿ ಆಲೂರು ಕ್ಲಸ್ಟರ್ ಶಿಕ್ಷಕಿಯರು ಏರ್ಪಡಿಸಿದ್ದ ವಿಶ್ವ ಮಹಿಳಾ ದಿನಾಚರಣೆ ಸಂದರ್ಭದಲ್ಲಿ, 14 ವರ್ಷ ತುಂಬಿದ ಎಲ್ಲ ಹೆಣ್ಣುಮಕ್ಕಳು ಗರ್ಭಕೊರಳು ಕ್ಯಾನ್ಸರ್ ನಿರೋಧಕ ಲಸಿಕೆ ಪಡೆಯಬೇಕು ಎಂಬ ಘೋಷವಾಕ್ಯದೊಂದಿಗೆ ಮಹಿಳಾ ದಿನಾಚರಣೆ ಆಚರಿಸಿದರು. ಡಾ. ನಿಸಾರ್ ಫಾತಿಮರವರು ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಈಗಾಗಲೆ ತಾಲ್ಲೂಕಿನಲ್ಲಿ ಪ್ರತಿ ಮನೆಗೆ ತೆರಳಿ 14 ವರ್ಷ ವಯಸ್ಸು ತುಂಬಿದ ಹೆಣ್ಣು ಮಕ್ಕಳ ವಿವರ ಪಡೆದು ಕ್ರಿಯಾಯೋಜನೆ ರೂಪಿಸಲಾಗಿದೆ. ಈವರೆಗೆ ಖಾಸಗಿ ಆಸ್ಪತ್ರೆಯಲ್ಲಿ ಹಣ ನೀಡಿ ಲಸಿಕೆ ಪಡೆಯಬೇಕಾಗಿತ್ತು. ಕ್ಷೇತ್ರ ಶಿಕ್ಷಣಾಧಿಕಾರಿ ಎ.ಜೆ. ಕೃಷ್ಣೇಗೌಡ ರವರು, ಪ್ರತಿ ಕುಟುಂಬದಲ್ಲಿ ಆರೋಗ್ಯವಂತ ಹೆಣ್ಣು ಮಕ್ಕಳಿದ್ದರೆ ಸಂಸಾರ ಸುಗಮವಾಗಿರುತ್ತದೆ ಎಂದರು. ಕ್ಷೇತ್ರ ಸಮನ್ವಯಾಧಿಕಾರಿ ವಿಜಯಕುಮಾರ್, ಸಿಆರ್‌ಪಿ ಮೈಮುನ, ಆರೋಗ್ಯ ಇಲಾಖೆ ಸಹಾಯಕ ಸತೀಶ್, ಮುಖ್ಯ ಶಿಕ್ಷಕಿಯರಾದ ವಿನೋದ, ಪುಷ್ಪಲತಾ ಮತ್ತು ಕ್ಲಸ್ಟರ್ ಶಿಕ್ಷಕಿಯರು ಭಾಗವಹಿಸಿದ್ದರು.

ಬೇವಿನಹಳ್ಳಿ, ಕೊತ್ತತ್ತಿಯಲ್ಲಿ ರಾಶಿ, ಭೂಮಿ, ಗೋಪೂಜೆ | ನಿರ್ಮಲಾನಂದನಾಥ ಸ್ವಾಮೀಜಿ ಸಲಹೆ

ರೈತರು ಕೃಷಿ ಭೂಮಿ ಕಳೆದುಕೊಳ್ಳಬಾರದು



ಮಂಡ್ಯ: ಕೃಷಿ ಕ್ಷೇತ್ರದಲ್ಲಿ ದೊಡ್ಡ ಮಟ್ಟದ ಆಧಾಯವಿಲ್ಲ ಎಂಬ ಕಾರಣಕ್ಕೆ ನಿರುತ್ಸಾಹ ಹೊಂದುವ ಅಥವಾ ಭೂಮಿಯನ್ನು ಮಾರಿಕೊಳ್ಳಲು ರೈತರು ಮುಂದಾಗಬಾರದು. ಇನ್ನು 10 ವರ್ಷದಲ್ಲಿ ವ್ಯವಸಾಯಕ್ಕೆ ಎಲ್ಲಿಲ್ಲದ ಬೇಡಿಕೆ ಬರಲಿದೆ ಎಂಬ ಆಶಾ ಭಾವವನ್ನು ಆದಿಚುಂಚನಗಿರಿ ಪೀಠಾಧ್ಯಕ್ಷ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ವ್ಯಕ್ತಪಡಿಸಿದರು.

ಬೇವಿನಹಳ್ಳಿ ಹಾಗೂ ಕೊತ್ತತ್ತಿ ಗ್ರಾಮಸ್ಥರು ತಾಲೂಕಿನ ಕೊತ್ತತ್ತಿ ಗ್ರಾಮದಲ್ಲಿ ಬಿಜೆಪಿ ಮುಖಂಡ ಇಂಡುವಾಳು ಎಸ್.ಸಚ್ಚಿದಾನಂದ ಅವರ ನೇತೃತ್ವದಲ್ಲಿ ನಡೆದ ರಾಶಿಪೂಜೆ, ಭೂಮಿಪೂಜೆ, ಗೋಪೂಜೆ ಹಾಗೂ ಸತ್ಸಂಗ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿ, ಕೃಷಿ ಉದ್ಯಮ ಲಾಭದಾಯಕ ಎನ್ನುವ ಅಭಿಪ್ರಾಯವನ್ನು ದಟ್ಟವಾಗಿ ಸೃಷ್ಟಿಸಲಾಗುತ್ತಿದೆ. ಇದರಿಂದ ಕಂಗಾಲಾಗುತ್ತಿರುವ ರೈತರು ಕೃಷಿಯಿಂದ ವಿಮುಖರಾಗುತ್ತಿದ್ದಾರೆ. ಯುವಜನರಲ್ಲೂ ಕೃಷಿಯಆಸಕ್ತಿ ಕಳೆದುಹೋಗುತ್ತಿದೆ. ಈ ಕಾರಣದಿಂದಲೇ ಕೃಷಿ ಭೂಮಿಯನ್ನು ಮಾರುವ ನಿರ್ಧಾರಕ್ಕೆ ರೈತರು ಬರುತ್ತಿದ್ದಾರೆ ಎಂದು ಆತಂಕ ವ್ಯಕ್ತಪಡಿಸಿದರು.

ಇಂದಿನ ಎಐ ಯುಗದಲ್ಲಿ ಎಲ್ಲ ಬಗೆಯ ತಾಂತ್ರಿಕ ಉದ್ಯೋಗವನ್ನು ಕೃತಕ ಬುದ್ಧಿ ಮತ್ತೆ ಕಸಿದುಕೊಳ್ಳುತ್ತಿದೆ. ಇದರಿಂದಾಗಿ ಸಾಫ್ಟ್‌ವೇರ್ ಕ್ಷೇತ್ರದಲ್ಲೂ ನಿರುದ್ಯೋಗ ಸೃಷ್ಟಿಯಾಗುವ ಸಾಧ್ಯತೆ ಇದೆ. ಭವಿಷ್ಯದ 10 ವರ್ಷದ ವೇಳೆಗೆ ಭೂಮಿ ಉಳ್ಳವರಿಗೆ ಹೆಚ್ಚಿನ ಬೇಡಿಕೆ ಬರಲಿದ್ದು, ಅಲ್ಲಿಯವರೆಗೆ ರೈತರು ತಮಗಾಗುವ ನಷ್ಟ ಮತ್ತು ಕಷ್ಟಗಳನ್ನು ಸಹಿಸಿಕೊಂಡು ಕೃಷಿಯನ್ನು ಮುಂದುವರಿಸಬೇಕು ಎಂದು ಸಲಹೆ ನೀಡಿದರು.

ಕೃಷಿ ವಿಶ್ವವಿದ್ಯಾಲಯಗಳಲ್ಲಿ ಆಧುನಿಕ ಕೃಷಿ ಪದ್ಧತಿಯನ್ನು ಕಲಿಯಬಹುದಾಗಿದೆ. ರೈತ ಮಕ್ಕಳು ಅಲ್ಲಿ ಕಲಿತು ತಮ್ಮ ಜಮೀನಿನಲ್ಲಿ ಆಧುನಿಕ ಯಾಂತ್ರೀಕರಣದ ಕೃಷಿಯಲ್ಲಿ ತೊಡಗಿಸಿಕೊಂಡಲ್ಲಿ ವ್ಯವಸಾಯವನ್ನೂ ಸಹ ಲಾಭದಾಯಕ ಕ್ಷೇತ್ರವನ್ನಾಗಿ ಮಾಡಬಹುದು ಎಂದು ಅಭಿಪ್ರಾಯಿಸಿದರು.

ಹಳ್ಳಿಗಾಡಿನ ಜನರು ಸಂಸ್ಕೃತಿ, ನಾಗರೀಕತೆ ಎಲ್ಲವನ್ನೂ ಹಿಡಿದಿಟ್ಟುಕೊಂಡಿದ್ದಾರೆ ಎಂದು ಸಂತಸ ವ್ಯಕ್ತಪಡಿಸಿದ ಅವರು, ಅತಿಯಾದ ಯಶಸ್ಸು ಬಂದರೂ ಅದನ್ನು ತಡೆದುಕೊಂಡು ಮುಂದೆ ಹೋಗಬೇಕು. ಅದೇ ರೀತಿ ಸಂಪತ್ತು ಬಂದರೂ ಅದನ್ನು ಸರಿಯಾದ ನಿಟ್ಟಿನಲ್ಲಿ ಕೊಂಡೊಯ್ಯದಿದ್ದರೆ ಸಾರ್ಥಕವಾಗದು ಎಂದು ಉದಾಹರಣೆ ಸಮೇತ ಅರಿವು ಮೂಡಿಸಿದರು.

ರೈತರು ಹಲವು ಏರು-ಪೇರುಗಳ ನಡುವೆ ಎಲ್ಲವನ್ನೂ ಸಹಿಸಿಕೊಂಡು ಯಶಸ್ಸಿನ ಹಾದಿಯಲ್ಲಿ ನಡೆಯುತ್ತಿದ್ದಾರೆ. ಒಂದೊಮ್ಮೆ ಕಷ್ಟಗಳು ಬರುತ್ತವೆ. ಆದರೆ ಅದನ್ನು ಸವಾಲಾಗಿ ಸ್ವೀಕರಿಸಿ ಮನಸ್ಸಿನಲ್ಲಿ ಕಟು ನಿರ್ಧಾರದಿಂದ ಹಿಮ್ಮೆಟ್ಟಿಸುವ ಪ್ರಯತ್ನ ಮಾಡಿದಲ್ಲಿ ಸಾಫಲ್ಯವನ್ನು ಪಡೆಯಲು ಸಾಧ್ಯ ಎಂದು ಹೇಳಿದರು.

ಹಣದಿಂದ ಏನನ್ನೂ ಮಾಡಲಾಗದು. ಆದರೆ ಮನಸ್ಸಿನಿಂದ ಎಲ್ಲವನ್ನೂ ಮಾಡಬಹುದು ಎಂಬುದನ್ನು ಈಗಾಗಲೇ ಸಾಬೀತಾಗಿದೆ. ಮನಸ್ಸು ಶುದ್ಧವಾಗಿರಬೇಕು. ಭೌತಿಕ ಸೌಂದರವಿದ್ದುಘಿ, ಮನಸ್ಸಿನೊಳಗೆ ಕಲ್ಮಶವನ್ನು ಇಟ್ಟುಕೊಂಡರೆ ಏನನ್ನೂ ಸಾಽಸಲು ಸಾಧ್ಯವಿಲ್ಲಘಿ. ಕೇವಲ ಅಪನಂಬಿಕೆಯನ್ನು ಮಾತ್ರ ಪಡೆದುಕೊಳ್ಳುವುದಕ್ಕೆ ಸೀಮಿತವಾಗುತ್ತದೆ ಎಂದು ತಿಳಿಸಿದರು.

ಮನಸ್ಸಿನ ಸರೋವರದಲ್ಲಿ ಚಿಂತನೆಗಳು ತಿಳಿಯಾಗಿದ್ದರೆ ಎಂತಹುದ್ದೇ ಕಷ್ಟ ನಷ್ಟಗಳು ಬಂದರೂ ಧೈರ್ಯವಾಗಿ ಎದುರಿಸಲು ಸಾಧ್ಯವಿದೆ. ಆದರೆ ಮನಸ್ಸಿನ ಆಲೋಚನೆಗಳೇ ಸರಿಯಿಲ್ಲ ಎಂದಾದರೆ ಹೇಗೆ ನಿಭಾಯಿಸಲು ಸಾಧ್ಯ ಎಂದು ಪ್ರಶ್ನಿಸಿದರು.

ರೈತರು ಮುಗ್ಧರು. ಆದರೆ ಕೆಲವೊಮ್ಮೆ ಮುಗ್ಧರೆಂದು ತೋರಿಸಿಕೊಳ್ಳುವ ಸಲುವಾಗಿ ಅಪಾಯಕ್ಕೆ ಸಿಲುಕಿಕೊಳ್ಳುವ ಸಾಧ್ಯತೆಗಳೇ ಹೆಚ್ಚಿರುತ್ತವೆ. ಇಂತಹುದ್ದರ ಬಗ್ಗೆ ಎಚ್ಚರಿಕೆ ವಹಿಸುವುದು ಅಗತ್ಯ ಎಂದು ಪ್ರತಿಪಾದಿಸಿದರು.

ಬಿಜೆಪಿ ಮುಖಂಡ ಇಂಡುವಾಳು ಎಸ್.ಸಚ್ಚಿದಾನಂದ ಮಾತನಾಡಿ, ಆದಿಚುಂಚನಗಿರಿ ಕ್ಷೇತ್ರ ದೇಶ ವಿದೇಶದಲ್ಲೂ ತನ್ನ ಶಾಖೆಗಳನ್ನು ಹೊಂದಿದೆ. ಸುಮಾರು 650 ವಿದ್ಯಾಸಂಸ್ಥೆಗಳನ್ನು ನಡೆಸುತ್ತಿದೆ. ಲಕ್ಷಾಂತರ ಮಂದಿ ವಿದ್ಯಾರ್ಥಿಗಳಿಗೆ ಅಕ್ಷರ, ಅನ್ನದಾಸೋಹ ನೀಡುತ್ತಿದೆ ಎಂದು ಹೇಳಿದರು.

ಇಂತಹ ಮಹತ್ತರ ಸಾಧನೆ ಮಾಡುತ್ತಿರುವ ಶ್ರೀಮಠಕ್ಕೆ ರೈತರು ಪ್ರತೀ ವರ್ಷ ತಾವು ಬೆಳೆದ ಒಂದು ಭಾಗದ ಧವಸ-ಧಾನ್ಯವನ್ನು ಕೊಡುವ ಪರಿಪಾಠ ಬೆಳೆಸಿಕೊಂಡು ಬಂದಿದ್ದಾರೆ. ಈ ಬಾರಿ ರೈತರು ಕೊಡುವ ಧಾನ್ಯವನ್ನು ಅತ್ಯಂತ ಪ್ರೀತಿ, ಅಭಿಮಾನದಿಂದ ಸ್ವೀಕರಿಸಬೇಕು. ಅಷ್ಟೇ ಗೌರವದಿಂದ ಕೊಡಬೇಕು ಎಂಬ ಉದ್ದೇಶದಿಂದ ಬೇಲೂರು ಮತ್ತು ಕೊತ್ತತ್ತಿ ಗ್ರಾಮಸ್ಥರು ರಾಶಿಪೂಜೆ ನಡೆಸಿ ಶ್ರೀಕ್ಷೇತ್ರಕ್ಕೆ ನೀಡಲು ಈ ಕಾರ್ಯಕ್ರಮ ಹಮ್ಮಿಕೊಂಡಿದ್ದೇವೆ ಎಂದು ವಿವರಿಸಿದರು.

ಮೈಸೂರು ಶಾಖಾ ಮಠದ ಶ್ರೀ ಸೋಮೇಶ್ವರನಾಥಸ್ವಾಮೀಜಿ, ಮಂಡ್ಯದ ಕೊಮ್ಮೇರಹಳ್ಳಿ ವಿಶ್ವಮಾನವ ಕ್ಷೇತ್ರದ ಶ್ರೀ ಪುರುಷೋತ್ತಮಾನಂದನಾಥ ಸ್ವಾಮೀಜಿ, ಶ್ರೀಶೈಲನಾಥ ಸ್ವಾಮೀಜಿ, ಹಾಸನ ಶಾಖಾ ಮಠದ ಶ್ರೀ ಶಂಭೂನಾಥಸ್ವಾಮೀಜಿ, ಶ್ರೀ ಸತ್ಕೀರ್ಥಿನಾಥ ಸ್ವಾಮೀಜಿ, ಶ್ರೀಶೈಲನಾಥಸ್ವಾಮೀಜಿ, ಬಿಜೆಪಿ ಜಿಲ್ಲಾಧ್ಯಕ್ಷ ಡಾ. ಇಂದ್ರೇಶ್, ಮುಖಂಡರಾದ ಡಾ. ಸಿದ್ದರಾಮಯ್ಯಘಿ, ಅಶೋಕ್ ಜಯರಾಂ ಸೇರಿದಂತೆ ಹಲವರು ಸಮಾರಂಭದಲ್ಲಿ ಭಾಗವಹಿಸಿದ್ದರು.

ರೈತರ ಆತ್ಮಗೌರವ ಹೆಚ್ಚಲಿ

ರೈತರ ಉತ್ಪನ್ನಗಳಿಗೆ ಹೆಚ್ಚಿನ ಬೆಲೆ ದೊರಕುವಂತಾಗಬೇಕು. ರೈತರ ಬದುಕು ಹಸನಾಗಬೇಕು. ರೈತರಿಗೆ ಸರ್ಕಾರದ ಸಹಾನುಭೂತಿ ಬೇಡ, ಆತ್ಮಗೌರವ ಸಿಗಬೇಕು ಎಂಬ ನಿಟ್ಟಿನಲ್ಲಿ ರೈತರಿಗೆ ತಿಳುವಳಿಕೆ ಮೂಡಿಸಬೇಕು ಎಂದು ಬಿಜೆಪಿ ಮುಖಂಡ ಇಂಡುವಾಳು ಎಸ್.ಸಚ್ಚಿದಾನಂದ ಅವರು ಶ್ರೀಗಳಲ್ಲಿ ಪ್ರಾರ್ಥಿಸಿದರು.

ಶ್ರೀಗಳಿಗೆ ರೈತರ ಬಗ್ಗೆ ಅಪಾರವಾದ ಪ್ರೀತಿ, ಕಾಳಜಿ ಇದೆ. ಶ್ರೀಗಳು ಸ್ವತಃ ವಿಜ್ಞಾನಿಗಳಾಗಿರುವುದರಿಂದ ತಾಂತ್ರಿಕವಾಗಿಯೂ ಹೆಚ್ಚಿನ ಮಟ್ಟದ ಸಾಧನೆ ತೊಡಗಿಸಿಕೊಂಡಿದ್ದಾರೆ. ರೈತರಿಗೂ ಹಲವಾರು ಆಧುನಿಕ ಕೃಷಿ ಪದ್ಧತಿ ಪರಿಚಯಿಸುತ್ತಿದ್ದಾರೆ. ರೈತರ ವಾಣಿಜ್ಯ ಬೆಳೆಯನ್ನು ಬೆಳೆಯುವ ನಿಟ್ಟಿನಲ್ಲಿ ಪ್ರೋತ್ಸಾಹಿಸುತ್ತಿದ್ದಾರೆ.

■ **ಇಂಡುವಾಳು ಎಸ್.ಸಚ್ಚಿದಾನಂದ, ಬಿಜೆಪಿ ಮುಖಂಡ**

ಗಡಿಗೇನಹಳ್ಳಿಯಲ್ಲಿ ಭಂಡಾರ ಪೆಟ್ಟಿಗೆಗೆ ಸ್ವಾಗತ

ಏ.4ರಂದು ದೊಡ್ಡದೇವರ ಜಾತ್ರೆ ನಿಗದಿ

ತಾವರೆಕೆರೆ: ಇಲ್ಲಿನ ಗಡಿಗೇಗಹಳ್ಳಿ ಗ್ರಾಮದಲ್ಲಿ ವದಲೀ ರಾಮೇಶ್ವರ, ಕಂಬಿ ಯಜಮಾನರು ಸೇರಿದಂತೆ ಅಪ್ಪಸಂದ್ರ ಬತ್ತೇಶ್ವರ, ತಾವರೆಕೆರೆ ರಾಮೇಶ್ವರ, ಸಿದ್ದೇಶ್ವರ ಒಕ್ಕಲಿನವರು ದೇವರ ಬಸವ ಹಾಗೂ ಭಂಡಾರ ಪೆಟ್ಟಿಗೆಗೆ ಅದ್ದೂರಿ ಸ್ವಾಗತ ಕೋರಲಾಯಿತು.

ತಾವರೆಕೆರೆ ರಾಮೇಶ್ವರ ದೇವಾಲಯ ಟ್ರಸ್ಟ್ ನ ಗೌರವಾಧ್ಯಕ್ಷರಾದ ಕಸ್ತೂರಿ ನಂಜಪ್ಪ ಮಾತನಾಡಿ, ನಮ್ಮ ಹಿರಿಯರು ಆವರಿಸಿರು ಧಾರ್ಮಿಕ ಸಂಪ್ರದಾಯವನ್ನು ಪಾಲಿಸುವುದು ನಮ್ಮ ಆದ್ಯ ಕರ್ತವ್ಯ ಎಂದು ತಿಳಿಸಿದರು.

ತಾವರೆಕೆರೆಯ ರಾಮೇಶ್ವರ ಸಿದ್ದೇಶ್ವರ, ಬಿದರಹಳ್ಳಿ ಬತ್ತೇಶ್ವರ ವಾಗಟ ರಾಮೇಶ್ವರ ಅಪ್ಪಸಂದ್ರ ಬತ್ತೇಶ್ವರ ಬಾಣಮಾಕನಹಳ್ಳಿ ವದಲೀ ರಾಮೇಶ್ವರ ದೇವರುಗಳ ದೊಡ್ಡದೇವರ ಜಾತ್ರಾಮಹೋತ್ಸವ 11ವರ್ಷದ ನಂತರ ನಡೆಯುತ್ತಿರುವ ಹಿನ್ನೆಲೆಯಲ್ಲಿ ಗ್ರಾಮಕ್ಕೆ ಆಗಮಿಸಿದ ದೇವರ ಬಸವ, ಭಂಡಾರ ಪೆಟ್ಟಿಗೆ ಕಾಲಾಟ ತೆಂಗಿನಕಾಯಿ ಪವಾಡ ತಂಡಗಳೊಂದಿಗೆ ಸ್ವಾಗತಿಸಲಾಯಿತು.

ಮೇಲಿನ 6 ದೇವರ ಒಕ್ಕಲಿನವರು ರಾಜ್ಯದ ವಿವಿಧ ಮೂಲೆಯಲ್ಲಿ ನೆಲೆಸಿರುವ ಗ್ರಾಮಗಳಿಗೆ ತೆರಳಿ ಸಾವಿರಾರು ವರ್ಷದಿಂದ ಹಿರಿಯರು ಆಚರಿಸಿಕೊಂಡು ಬಂದಿರುವ ಸಂಪ್ರದಾಯವನ್ನು ಪಾಲಿಸುವ ನಿಟ್ಟಿನಲ್ಲಿ ದೇವರ ಎತ್ತು ಭಂಡಾರ ಪೆಟ್ಟಿಗೆಯಲ್ಲಿ ಮೂಲ ಮೂರ್ತಿಗಳನ್ನಿಟ್ಟು ತಲೆ ಹೊತ್ತು ಹಲಸಹಳ್ಳಿಯ ಗ್ರಾಮದೇವರಾದ ದೊಡ್ಡಮ್ಮದೇವಿ, ಸುಗ್ಗಲಮ್ಮ ದೇವಿ, ಶನೇಶ್ವರಸ್ವಾಮಿ, ವೀರಾಂಜನೇಯ, ಓಂಶಕ್ತಿ, ಅಯ್ಯಪ್ಪ ಸ್ವಾಮಿ ದೇವಾಲಯದಲ್ಲಿ ಪೂಜೆ ಸಲ್ಲಿಸಲಾಯಿತು.

ಕಾಲಾಟ ತೆಂಗಿನಕಾಯಿ ಪವಾಡ ಮಂಗಳವಾದ್ಯಗಳೊಂದಿಗೆ ಮೆರವಣಿಗೆ ಮಾಡಿ ಪೂಜಿಸಲಾಯಿತು. ಏ.6ರವರೆಗೆ ದೇವರ ಕಟ್ಟುಪಾಡು ಪಾಲಿಸಲು ಬದ್ಧರಾಗಿರುತ್ತೇವೆ ಎಂಬ ಗಡುವು ನಿಗದಿಮಾಡಲಾಯಿತು. ಗಡಿಗೇನಹಳ್ಳಿ ಕಂಬಿಯಜಮಾನರು ಕೆಂಪರಾಜು ಮಾತನಾಡಿ, ವಿಶ್ವದಲ್ಲಿಯೇ ಕುರುಬಕುಲಕ್ಕೆ ಮಾತ್ರ ಒಲಿದು ಬಂದಿರುವ ತೆಂಗಿನಕಾಯಿ ಪವಾಡದ ಮತ್ತು ಭಂಡಾರವನ್ನು ಧರಿಸುವ ಮೂಲಕ ಬಸವನ ತಲೆ ಮೇಲೆ ಮತ್ತು ದೀಕ್ಷೆ ಪಡೆದ ವೀರಕುಮಾರರ ತಲೆ ಮೇಲೆ ತೆಂಗಿನಕಾಯಿ ಹೊಡೆಯುವ ಮೂಲಕ ಗ್ರಾಮದ ವದಲಿ ರಾಮೇಶ್ವರ, ಅಪ್ಪಸಂದ್ರ ಬತ್ತೇಶ್ವರ, ತಾವರೆಕೆರೆ ರಾಮೇಶ್ವರ ಸಿದ್ದೇಶ್ವರ ದೇವರ ಭಕ್ತರು ಪೂಜೆಗಳನ್ನು ಸಲ್ಲಿಸಿದರು ಎಂದು ತಿಳಿಸಿದರು.

ತಾವರೆಕೆರೆ ರಾಮೇದೇವರ ಟ್ರಸ್ಟ್ ಗೌರವಾಧ್ಯಕ್ಷ ಕಸ್ತೂರಿ ನಂಜಪ್ಪ, ಗಡಿಗೇನಹಳ್ಳಿ ಕಂಬಿ ಯಜಮಾನ ಕೆಂಪರಾಜು, ಗೌಡರು ನಂಜಪ್ಪ, ರಾಮಪ್ಪ, ಮಂಜೇಶ್, ಅಮರನಾಥ್, ಹಿರಿಯ ಮುಖಂಡ ಕೆಂಪಣ್ಣ, ಕಂಬಿ ಯಜಮಾನರು ಭತ್ತೆಪ್ಪ, ತಿಮ್ಮಣ್ಣ, ತಿಮ್ಮರಾಯಪ್ಪ ಇತರರಿದ್ದರು.



ಮರಳಕುಂಟೆಯಲ್ಲಿ ಭಕ್ತರಿಗೆ ಅನ್ನ ಸಂತರ್ಪಣೆ, ಪ್ರಸಾದ ವಿನಿಯೋಗ

ವಿವಿಧ ದೇವರ ಮೂರ್ತಿ ಪ್ರತಿಷ್ಠಾಪನೆ



ದಾಬಸ್ ಪೇಟೆ: ನೆಲಮಂಗಲ ತಾಲೂಕು ಸೋಂಪುರ ಹೋಬಳಿ ಮರಳಕುಂಟೆ ಗ್ರಾಮದ ಶ್ರೀವಿನಾಯಕ ಗೆಳೆಯರ ಬಳಗ ಸೇವಾ ಟ್ರಸ್ಟ್ ಮತ್ತು ಗ್ರಾಮಸ್ಥರಿಂದ ಶ್ರೀ ವಿನಾಯಕಸ್ವಾಮಿ, ಶ್ರೀ ಗಂಗಾಧರೇಶ್ವರಸ್ವಾಮಿ, ಶ್ರೀ ಸುಬ್ರಹ್ಮಣ್ಯ ಸ್ವಾಮಿ ಪ್ರತಿಷ್ಠಾಪನೆ ಮತ್ತು ದೇವಾಲಯದ ಲೋಕಾರ್ಪಣೆ ಕಾರ್ಯಕ್ರಮ ನೆರವೇರಿತು.

ಕಾರ್ಮಕ್ರಮದ ಅಂಗವಾಗಿ ಹಲವು ಪೂಜಾ ಕಾರ್ಯವನ್ನು ನಡೆಸಲಾಯಿತು ಗಂಗಾಧರೇಶ್ವರಸ್ವಾಮಿಗೆ ಏಕವಾರ ರುದ್ರಾಭಿಷೇಕ ನಂತರ ಮಹಾರುದ್ರಹೋಮ, ವೃಷಭ ಹೋಮ, ಮಹಾಪೂರ್ಣಾಹುತಿ ತದನಂತರ ಶ್ರೀ ವಿನಾಯಕಸ್ವಾಮಿ, ಶ್ರೀ ಸುಬ್ರಹ್ಮಣ್ಯ ಸ್ವಾಮಿ, ಶ್ರೀ ಬಸವೇಶ್ವರಸ್ವಾಮಿಯ ಜೀವಕಳೆ, ಪ್ರಾಣಪ್ರತಿಷ್ಠಾಪನೆ ನೇತ್ರೋನ್ಮಿಲನ ನಂತರ ಕೂಷ್ಮಾಂಡುಭೇದನ, ಕದಳಿಭೇದನ, ರಾಜೋಪಚಾರ, ಅಷ್ಟೋತ್ತರ ಸಹಿತ ಮಹಾಮಂಗಳಾರತಿ ಹಾಗೂ ತೀರ್ಥಪ್ರಸಾದ ವಿನಿಯೋಗ ನಡೆಯಲಿದೆ.

ಪೂಜಾ ಕಾರ್ಯದಲ್ಲಿ ವಿಮಾನಗೋಪುರ, ಕಲಶಾರೋಹಣ ಪ್ರತಿಷ್ಠಾಪನಾ ಕಾರ್ಯಕ್ರದಲ್ಲಿ ಮೇಲಣಗವಿ ಮಠದ ಮಲಯ ಶಾಂತಮುನಿ ದೇಶೀಕೇಂದ್ರ ಶಿವಾಚಾರ್ಯ ಸ್ವಾಮೀಜಿ, ಪವಾಡ ಬಸವಣ್ಣ ದೇವರ ಮಠದ ಸಿದ್ದಲಿಂಗಸ್ವಾಮೀಜಿ, ಹೊನ್ನಮ್ಮಗವಿ ಮಠದ ರುದ್ರಮುನಿ ಶಿವಾಚಾರ್ಯ ಸ್ವಾಮೀಜಿ, ಕುಂಚಿಟಿಗರ ಮಹಾಸಂಸ್ಥಾನ ಮಠದ ಹನುಮಂತನಾಥ ಸ್ವಾಮೀಜಿ, ಮತ್ತು ಅಪಾರ ಭಕ್ತರು ಭಾಗವಹಿಸಿದ್ದರು. ಶಾಸಕರು ಎನ್. ಶ್ರೀನಿವಾಸ್ ಮಾತನಾಡಿ, ಚುನಾವಣೆ ಸಂಧರ್ಭದಲ್ಲಿ ನೀಡಿದ್ದ ವಾಗ್ದಾನದಂತೆ ಕಾಮಗಾರಿಯನ್ನು ಮಾಡಲಾ ಗಿದೆ. ಅಲ್ಲದೆ, ದೇವಾಲಯದ ನಿರ್ಮಾಣಕ್ಕೂ ಸಹ ಹೆಚ್ಚಿನ ಸಹಕಾರ ನೀಡಿದ್ದೇನೆಂದರು.

ಬಸವಣ್ಣದೇವರ ಮಠದ ಸಿದ್ದಲಿಂಗ ಸ್ವಾಮೀಜಿ ಮಾತನಾಡಿ, ಮರಳಕುಂಟೆ ಗ್ರಾಮದ ಜನ ದೈವಭಕ್ತರಾಗಿದ್ದಾರೆ. ಗ್ರಾಮದಲ್ಲಿ ಸುಂದರ ದೇವಾಲಯ ನಿರ್ಮಾಣ ಕಾರ್ಯವನ್ನು ಯಶಸ್ವಿಯಾಗಿ ನಡೆಸಿದ್ದಾರೆ ಎಂದರು. ಮಕ್ಕಳಿಂದ ಭರತ ನಾಟ್ಯ ಕಾರ್ಯಕ್ರಮ ನಡೆಸಲಾಯಿತು.

ರುದ್ರಮುನಿಶಿವಾಚಾರ್ಯ ಸ್ವಾಮೀಜಿ, ಹನುಮಂತನಾಥ ಸ್ವಾಮೀಜಿ, ಮುಖಂಡ ಜಗದೀಶ್ ಚೌದರಿ ಮಾತನಾಡಿದರು. ವೇದಿಕೆಯಲ್ಲಿ ಗ್ರಾಪಂ ಮಾಜಿ ಸದಸ್ಯೆ ಮಂಗಳಮ್ಮ, ತಾಪಂ ಮಾಜಿ ಸದಸ್ಯ ನಾಗಭೂಷಣ್, ಜಿಪಂ ಮಾಜಿ ಸದಸ್ಯ ಪುರುಷೋತ್ತಮ್ ಮುಖಂಡ ಗಂಗಣ್ಣ, ಶಿವರುದ್ರಣ್ಣ ಉಪಸ್ಥಿತರಿದ್ದರು.



ವಿಜಯನಗರದ ಭೈರವರಾಗ ಮ್ಯೂಸಿಕಲ್ ಅಕಾಡೆಮಿ ಸಭಾಂಗಣದಲ್ಲಿ ವಿಶ್ವ ಮಹಿಳಾ ದಿನವನ್ನು ಅಚರಿಸಲಾಯಿತು. ಡಾ.ಪದ್ಮನಾಭನ್, ವಿಜಯ, ಸುಧಾ, ಸ್ಮಿತಾ ಸೇರಿದಂತೆ ಹಲವಾರು ಮಹಿಳೆಯರನ್ನು ಭೈರವರಾಗದ ಸುಜಾತಾ ಅವರು ಸನ್ಮಾನಿಸಿದರು.

ತಾವರೆಕೆರೆ ಗ್ರಾಪಂನಲ್ಲಿ ಮಹಿಳಾ ದಿನಾಚರಣೆ | ಕಾರ್ಮಿಕರಿಗೆ ಸನ್ಮಾನ

ಹೆಣ್ಣಿನಿಂದ ಸಮಾಜದ ಅಭಿವೃದ್ಧಿ



ತಾವರೆಕೆರೆ: ಹೆಣ್ಣು ಸಂಸಾರದ ಕಣ್ಣು ಇದ್ದಂತೆ, ಆದ್ದರಿಂದ ನಮ್ಮ ದೇಶದ ಎಲ್ಲಾ ಮಹಿಳೆಯರಿಗೂ ಗೌರವ ನೀಡಬೇಕು . ಸಂಸಾರ ಸರ್ವತೋಮುಖಅಭಿವೃದ್ಧಿ ಹೊಂದಲು ಹೆಣ್ಣು ಮುಖ್ಯಕಾರಣ ಎಂದು ತಾಲೂಕು ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಮುನಿಗಂಗಯ್ಯ ಹೇಳಿದರು.

ನಂದಗುಡಿ ಹೋಬಳಿ ತಾವರೆಕೆರೆ ಗ್ರಾಮ ಪಂಚಾಯಿತಿಯಲ್ಲಿ ಕರ್ನಾಟಕ ಸಂಪಾದಕರು ಹಾಗೂ ವರದಿಗಾರರ ಸಂಘದಿಂದ ಏರ್ಪಡಿಸಿದ್ದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ಸ್ವಚ್ಛತಾ ಮಹಿಳಾ ಕಾರ್ಮಿಕರಿಗೆ ಸನ್ಮಾನಿಸಿದ ಬಳಿಕ ಮಾತನಾಡಿ, ಹೆಣ್ಣಿಗೆ ಮಹತ್ತರವಾದ ಗೌರವ ಇದೆ. ಹೆಣ್ಣೊಂದು ಕಲಿತರೆ ಶಾಲೆಯೊಂದು ತೆರೆದಂತೆ ರಾಷ್ಟ್ರದ ಪ್ರಥಮ ಪ್ರಜೆ ಸಹ ಒಂದು ಹೆಣ್ಣು , ಸರ್ಕಾರ ಸಹ ಎಲ್ಲಾ ಕ್ಷೇತ್ರದಲ್ಲಿ ಶೇಕಡಾ 33ಮೀಸಲು ನೀಡಿದೆಂದರು.

ಇತ್ತೀಚೀನ ದಿನದಲ್ಲಿ ಮಹಿಳೆ ಎಲ್ಲಾ ಕ್ಷೇತ್ರದಲ್ಲೂ ಪುರುಷರಿಗೆ ಸಮಾನವಾಗಿ ದುಡಿಯುತ್ತಿದ್ದಾರೆ. ಅವರಿಗೆ ಇನ್ನಷ್ಟ ಉತ್ತೇಜನ ನೀಡಿದರೆ ಮತ್ತೀಷ್ಟು ಎತ್ತರಕ್ಕೆ ಬೆಳೆಯಲಿದ್ದಾರೆ. ಪ್ರತಿಯೊಬ್ಬರು ಹೆಣ್ಣನ್ನು ಗೌರವಿಸಬೇಕು. ಪ್ರತಿ ಪುರುಷನ ಯಶಸ್ಸಿನ ಹಿಂದೆ ಹೆಣ್ಣೊಬ್ಬಳು ಇರುತ್ತಾಳೆ. ಗಂಡಿನಂತೆ ಹೆಣ್ಣು ಸಹ ಸಮಾನಳಾಗಿ ಎಲ್ಲಾ ಕ್ಷೇತ್ರದಲ್ಲಿ ಯಶಸ್ಸು ಸಾಽಸುವ ಮೂಲಕ ತಮ್ಮ ಶಕ್ತಿ ಪ್ರದರ್ಶಿಸುತ್ತಿದ್ದಾರೆಂದರು.

ರಾಜ್ಯ ಉಪಾಧ್ಯಕ್ಷ ತಾವರೆಕೆರೆ ಟಿ.ನಾಗರಾಜ್ ಮಾತನಾಡಿ, ಗ್ರಾಮೀಣ ಭಾಗದಲ್ಲಿರುವ ಮಹಿಳೆಯರು ಸಂಸಾರ ಸಾಗಿಸುವುದರ ಜತೆಗೆ ಗ್ರಾಮೀಣ ಭಾಗದ ಕ್ರೀಡೆಯಲ್ಲಿ ಭಾಗವಹಿಸಿ ಆರೋಗ್ಯ ಉತ್ತಮ ಗೊಳ್ಳುತ್ತದೆಂದು ತಿಳಿಸಿದರು. ಸರ್ಕಾರ ಅನೇಕ ಸೌಲಭ್ಯ ನೀಡಿದೆ ಇದರ ಸದ್ಬಳಕೆ ಅರ್ಹ ಫಲಾನುಭವಿಗಳು ಪಡೆದುಕೊಳ್ಳಬೇಕು. ಹೆಚ್ಚಿನ ಮಾಹಿತಿಗಾಗಿ ಪಂಚಾಯತ್ ಅಽಕಾರಿಗಳೊಂದಿಗೆ ಸಮಾಲೋಚಿಸಿ, ಮನೆಯ ಸುತ್ತ ಮುತ್ತಲೂ ಸ್ವಚ್ಛತೆಯನ್ನು ಕಾಪಾಡಿಕೊಳ್ಳಬೇಕು. ಬೇಸಿಗೆ ಕಾಲವಾಗಿರುವುದರಿಂದ ಮಿತವಾಗಿ ನೀರು ಬಳಸಬೇಕೆಂದು ಸಲಹೆ ನೀಡಿದರು.

ನೀರಿನ ಸಮಸ್ಯೆ ಇರುವ ಕಡೆ ಟ್ಯಾಂಕರ್‌ಗಳ ಮೂಲಕ ನೀರನ್ನು ಪೂರೈಸಲಾಗುವುದು. ಅತಿಯಾದ ಬಿಸಿಲಿನ ತಾಪಕ್ಕೆ ಪಕ್ಷಿಗಳಿಗೆ ಎಲ್ಲೂ ಸಹ ನೀರು ಸಿಗುತ್ತಿಲ್ಲ . ಆದ್ದರಿಂದ ಮನೆಯ ಮೇಲ್ಛಾವಣಿ ಮೇಲೆ ನೀರನ್ನು ಇಟ್ಟು ಪಕ್ಷಿಗಳ ದಾಹ ತೀರಿಸಿ ಎಂದು ಹೇಳಿದರು.

ದೊಡ್ಡಬಳ್ಳಾಪುರದಲ್ಲಿ ಸೂಪರ್ ಸ್ಪೆಷಾಲಿಟಿ ನೇತ್ರ ಚಿಕಿತ್ಸಾ ಕೇಂದ್ರಕ್ಕೆ ಗಣ್ಯರಿಂದ ಚಾಲನೆ

ನಾಗರಿಕರಿಗೆ ವಿಶ್ವ ದರ್ಜೆ ಆರೋಗ್ಯ ಸೇವೆ ಗುರಿ



ದೊಡ್ಡಬಳ್ಳಾಪುರ: ಸ್ಥಿರವಾದ ವೈದ್ಯಕೀಯ ಸೇವೆ ಮತ್ತು ರೋಗಿಗಳ ಅತ್ಯುತ್ತಮ ಚಿಕಿತ್ಸಾ ಫಲಿತಾಂಶಗಳೇ ನಮ್ಮ ಶಕ್ತಿಯಾಗಿದೆ ಎಂದು ನೇತ್ರಧಾಮದ ಅಧ್ಯಕ್ಷ ಹಾಗೂ ವ್ಯವಸ್ಥಾಪಕ ನಿರ್ದೇಶಕ ಡಾ.ಶ್ರೀಗಣೇಶ್ ಹೇಳಿದರು.

ನಗರದ ಯಲಹಂಕ ರಸ್ತೆಯ ನೂತನ ಸೂಪರ್ ಸ್ಪೆಷಾಲಿಟಿ ನೇತ್ರ ಚಿಕಿತ್ಸಾ ಕೇಂದ್ರಕ್ಕೆ ಚಾಲನೆ ನೀಡಿ ಮಾತನಾಡಿ, ವೇಗವಾಗಿ ಅಭಿವೃದ್ಧಿ ಹೊಂದುತ್ತಿರುವ ಉತ್ತರ ಬೆಂಗಳೂರಿನಲ್ಲಿ ಅತ್ಯಾಧುನಿಕ ನೇತ್ರ ಚಿಕಿತ್ಸೆಗೆ ಹೆಚ್ಚುತ್ತಿರುವ ಬೇಡಿಕೆಯನ್ನು ಪೂರೈಸಲಿದೆ.

ಈ ಅತ್ಯಾಧುನಿಕ ಸೌಲಭ್ಯ ಕರ್ನಾಟಕದಲ್ಲಿ ನೇತ್ರಧಾಮ ಆಸ್ಪತ್ರೆಯ ಅಸ್ತಿತ್ವವನ್ನು ಬಲಪಡಿಸುವುದಲ್ಲದೆ, ಸುರಕ್ಷತೆ, ವೈದ್ಯಕೀಯ ಶ್ರೇಷ್ಠತೆ ಮತ್ತು ಉತ್ತಮ ನೇತ್ರ ಚಿಕಿತ್ಸಾ ಫಲಿತಾಂಶದ ಮೇಲೆ ಗಮನ ಕೇಂದ್ರೀಕರಿಸಿದೆ ಎಂದು ತಿಳಿಸಿದರು.

ನೇತ್ರಧಾಮದ ಸಿಇಓ ಮತ್ತು ನಿರ್ದೇಶಕ ಡಾ. ಸುಮನ್ .ಆರ್ ಮಾತನಾಡಿ, ಬೆಂಗಳೂರಿನ ವೇಗವಾಗಿ ಅಭಿವೃದ್ಧಿ ಹೊಂದುತ್ತಿರುವ ಪ್ರದೇಶಗಳಿಗೆ ತಂತ್ರಜ್ಞಾನ ಆಧಾರಿತ ನೇತ್ರ ಚಿಕಿತ್ಸೆ ಒದಗಿಸುವುದು. ಪರಿಣಿತ ತಜ್ಞರು, ವ್ಯವಸ್ಥಿತ ತರಬೇತಿ ಮತ್ತು ಸುಧಾರಿತ ತಂತ್ರಜ್ಞಾನವನ್ನು ಸಂಯೋಜಿಸುವ ಮೂಲಕ, ನೈತಿಕತೆ ಮತ್ತು ವೈದ್ಯಕೀಯ ಮಾನದಂಡವನ್ನು ಕಾಪಾಡಿಕೊಂಡು ನಿಖರವಾದ ಫಲಿತಾಂಶಗಳನ್ನು ನೀಡುವುದು ನಮ್ಮ ಗುರಿಯಾಗಿದೆಂದರು.ಈ ಹೊಸ ಕೇಂದ್ರದಿಂದಾಗಿ ಯಲಹಂಕ, ದೊಡ್ಡಬಳ್ಳಾಪುರ, ಚಿಕ್ಕಬಳ್ಳಾಪುರ, ಕೋಲಾರ ಮತ್ತು ಸುತ್ತಮುತ್ತಲಿನ ಪ್ರದೇಶದ ನಿವಾಸಿಗಳು ಲೇಸರ್ ಕ್ಯಾಟರಾಕ್ಟ್ ಶಸ್ತ್ರಚಿಕಿತ್ಸೆ, ರಿಫ್ರಾಕ್ಟಿವ್ ಪ್ರಕ್ರಿಯೆಗಳು, ರೆಟಿನಾ, ಗ್ಲುಕೋಮಾ ಮತ್ತು ಕಾರ್ನಿಯಾ ಚಿಕಿತ್ಸೆಯಂ ತಹ ಸುಧಾರಿತ ಸೇವೆಗಳನ್ನು ತಮ್ಮ ಮನೆಗೆ ಹತ್ತಿರದಲ್ಲೇ ಪಡೆಯಬಹುದಾಗಿದೆ. ಇದರಿಂದ ದೂರದ ಪ್ರಯಾಣ ಮಾಡಬೇಕಾದ ಅಗತ್ಯವಿರುವುದಿಲ್ಲವೆಂದು ತಿಳಿಸಿದರು.ನೇತ್ರಧಾಮದ ಕಾರ್ಯನಿರ್ವಾಹಕ ನಿರ್ದೇಶಕಿ ಡಾ. ಸುಪ್ರಿಯಾ ಶ್ರೀಗಣೇಶ್ ಮಾತನಾಡಿ, ಉತ್ತರ ಬೆಂಗಳೂರಿನ ಜನತೆಗೆ ಸುಧಾರಿತ ಕಣ್ಣಿನ ಆರೈಕೆ ಸೇವೆಯನ್ನು ಹತ್ತಿರವಾಗಿಸುತ್ತಿರುವುದು ನೇತ್ರಧಾಮದ ಪಾಲಿಗೆ ಒಂದು ಮಹತ್ವದ ಹೆಜ್ಜೆಯಾಗಿದೆಂದರು.

ಈ ಭಾಗವು ಅತ್ಯಂತ ವೇಗವಾಗಿ ಬೆಳೆಯುತ್ತಿರುವುದರಿಂದ, ಉತ್ತಮ ಗುಣ ಮಟ್ಟದ, ಉತ್ಕೃಷ್ಟ ಮತ್ತು ತಂತ್ರಜ್ಞಾನ ಆಧಾರಿತ ಆರೋಗ್ಯ ಸೇವೆಯ ಲಭ್ಯತೆಯನ್ನು ಹೆಚ್ಚು ಒದಗಿಸುವುದು ಹೆಚ್ಚು ಮಹತ್ವದ್ದಾಗಿದೆ. ರೋಗಿಗಳಿಗೆ ಮತ್ತು ಅವರ ಕುಟುಂಬಗಳಿಗೆ ಸಕಾಲಿಕ ರೋಗ ನಿರ್ಣಯ, ಆರಂಭಿಕ ಚಿಕಿತ್ಸೆ ಮತ್ತು ಹೆಚ್ಚಿನ ಅನುಕೂಲತೆಯನ್ನು ಒದಗಿಸುವ ನಮ್ಮ ಬದ್ಧತೆಯನ್ನು ಪ್ರತಿಬಿಂಬಿಸುತ್ತದೆ; ಜತೆಗೆ ಈ ಭಾಗದ ಒಟ್ಟಾರೆ ಆರೋಗ್ಯ ವ್ಯವಸ್ಥೆಯನ್ನು ಬಲಪಡಿಸುತ್ತದೆ ಎಂದು ತಿಳಿಸಿದರು.

ಶಾಸಕ ಎಸ್. ಆರ್. ವಿಶ್ವನಾಥ್ , ವೈದ್ಯಕೀಯ ಅಽಕ್ಷಕಿ ಡಾ. ಪ್ರೀತಿ, ಅವರು ನೂತನವಾಗಿ ಪ್ರಾರಂಭಿಸಲಾದ ಆಸ್ಪತ್ರೆಗೆ ಭೇಟಿ ನೀಡಿ, ತಂಡಕ್ಕೆ ಶುಭ ಹಾರೈಸಿದರು.

ಲೋಕಾಗೆ ದೂರು ಕೊಟ್ಟರೂ ನಿರ್ಲಕ್ಷ್ಯ | ಸಾಮಾಜಿಕ ಕಾರ್ಯಕರ್ತ ಆರೋಪ

ಅರ್ಜಿ ಪೂಜೆಗೆ ಗಂಧದ ಕಡ್ಡಿ ರವಾನೆ



ಮಂಡ್ಯ: ದೂರು ಅರ್ಜಿಗೆ ಯಾವುದೇ ಕ್ರಮ ವಹಿಸದೇ ಅರ್ಜಿಯನ್ನು ವರ್ಷಗಟ್ಟಲೆ ಕಡತದಲ್ಲಿ ಇಟ್ಟುಕೊಂಡಿ ದ್ದೇವೆ ಎಂದು ಹಿಂಬರಹ ನೀಡಿದ್ದ ಲೋಕಾಯುಕ್ತ ಅಧಿಕಾರಿಗಳ ನಿರ್ಲಕ್ಷ್ಯವನ್ನು ಖಂಡಿಸಿ ಕಡತಕ್ಕೆ ಪ್ರತಿದಿನ ಪೂಜೆ ಮಾಡಿ ಎಂದು ಗಂಧದಕಡ್ಡಿಯನ್ನು ಕಳುಸುವ ಮೂಲಕ ಸಾಮಾಜಿಕ ಕಾರ್ಯಕರ್ತ ಎಚ್.ಬಿ.ಮಂಜು ನಾಥ್ ತಮ್ಮ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಕೆ.ಆರ್.ಪೇಟೆ ಪಟ್ಟಣದಲ್ಲಿ ಇರುವ ಖಾಸಿಂಖಾನ್ ಸಮುದಾಯ ಭವನದ ಆವ ರಣದಲ್ಲಿ ಹೆಚ್ಚುವರಿ ಹಾಲ್ ನಿರ್ಮಾಣ ಮಾಡಲಾಗಿದೆ ಎಂದು ಸುಮಾರು 50 ಲಕ್ಷ ರೂಪಾಯಿ ಹಣವನ್ನು ಖರ್ಚು ತೋರಿಸಲಾಗಿತ್ತು.

ಆದರೆ ಖಾಸಿಂಖಾನ್ ಸಮುದಾಯ ಭವದಲ್ಲಿ ಹೆಚ್ಚುವರಿ ಹಾಲ್ ನಿರ್ಮಾಣ ಮಾಡಿರಲಿಲ್ಲ, ಈ ಬಗ್ಗೆ ಎಚ್.ಬಿ.ಮಂಜುನಾಥ್ ಲೋಕಾಯುಕ್ತಕ್ಕೆ ದೂರು ನೀಡಿದ್ದ ದೂರಿನ ಸಂಖ್ಯೆ ಲೊಕಾ 2106/2022 ಆಗಿರುತ್ತದೆ. ಹೆಚ್ಚುವರಿ ಹಾಲ್ ನಿರ್ಮಾಣ ಮಾಡಲಾಗಿದೆಯೋ ಇಲ್ಲವೋ ಎಂದು ತನಿಖೆ ಮಾಡಲು ಲೋಕಾಯುಕ್ತ ಇಲಾಖೆಯಿಂದ ಬಂದಿದ್ದ ಎಂಜಿನಿಯರ್ ಅವರು ಪ್ರಕರಣದ ಒಬ್ಬರು ಎದುರುದಾರರ ಪರವಾಗಿ ನಿಂತು ಕಟ್ಟಡ ಕಟ್ಟಿಲ್ಲ ಎಂದು ನೈಜ ವರದಿಯನ್ನು ನೀಡುವ ಬದಲಿಗೆ ಹಳೆ ಕಟ್ಟಡ ದುರಸ್ತಿ ಮಾಡಲಾಗಿದೆ ಎಂದು ವರದಿ ಮಾಡಿದ್ದರು.

ಈ ಬಗ್ಗೆ ಸೂಕ್ತ ದಾಖಲೆಗಳೊಂದಿಗೆ ಮಂಜುನಾಥ್ ಲೋಕಾಯುಕ್ತ ಕಚೇರಿಗೆ ಮತ್ತೊಂದು ದೂರನ್ನು 2024ರ ನ.21ರಂದು ಸಲ್ಲಿಸಿ ತಪ್ಪು ಮಾಹಿತಿ ನೀಡಿರುವ ಅಧಿಕಾರಿಯ ವಿರುದ್ಧ ಕಾನೂನು ಕ್ರಮ ಜರುಗಿಸುವ ಜೊತೆಗೆ ಮತ್ತೊರ್ವ ಅಧಿಕಾರಿಯಿಂದ ಅವರ ದೂರಿನ ಬಗ್ಗೆ ತನಿಖೆ ನಡೆಸಲು ಮನವಿ ಮಾಡಿದ್ದರು.

ಆದರೇ ಲೋಕಾಯುಕ್ತ ಕಚೇರಿಯಲ್ಲಿ ಈ ಬಗ್ಗೆ ಯಾವುದೇ ಕ್ರಮ ವಹಿಸದೇ ನಿರ್ಲಕ್ಷ್ಯ ವಹಿಸಿದ್ದರಿಂದ ಮಾಹಿತಿ ಹಕ್ಕು ಕಾಯ್ದೆಯಲ್ಲಿ ಮಾಹಿತಿ ಕೋರಿದಾಗ ಲೋಕಾಯುಕ್ತದವರು ಅವರ ಅರ್ಜಿಗೆ ಯಾವುದೇ ಕ್ರಮ ವಹಿಸದೆ ವರ್ಷಗಟ್ಟಲೆ ಕಡತದಲ್ಲಿ ಇಡಲಾಗಿದೆ ಎಂಬ ಉತ್ತರ ನೀಡಿದ್ದಾರೆ. ಈ ಕಾರಣದಿಂದ ಬೇಸರಗೊಂಡ ಅವರು ಲೊಕಾಯುಕ್ತ ಕಚೇರಿಯಲ್ಲಿ ದೂರಿನ ಬಗ್ಗೆ ಸರಿಯಾಗಿ ಕೆಲಸ ಮಾಡಲು ಆಗದಿದ್ದರೆ ಕಡತಗಳಿಗೆ ಪೂಜೆಯನ್ನಾದರೂ ಮಾಡಿಕೊಂಡು ಇರಲಿ ಎಂದು ಗಂಧದಕಡ್ಡಿಯನ್ನು ಕಳುಹಿಸುತ್ತಿದ್ದೇನೆ ಎಂದು ತಿಳಿಸಿದ್ದಾರೆ.

ಕಿರುಸುದ್ದಿ

ಕ್ರೀಡೆಯಿಂದ ಶಿಸ್ತು, ಸದೃಢತೆ



• **ಕೋಲಾರ:** ಯುವಕರಲ್ಲಿ ವಿದ್ಯಾಭ್ಯಾಸದ ಜೊತೆಗೆ ಕ್ರೀಡೆ, ಕಲೆ, ಸಾಹಿತ್ಯ, ಸಂಸ್ಕೃತಿ ಬಗ್ಗೆ ಆಸಕ್ತಿ ಮೂಡಿದಾಗ ಮಾತ್ರ ವ್ಯಕ್ತಿತ್ವ ವಿಕಸನಗೊಳ್ಳಲು ಸಾಧ್ಯ ಹಾಗೂ ಇದು ಸದೃಢ ಸಮಾಜದ ನಿರ್ಮಾಣಕ್ಕೆ ಸಹಕಾರಿಯಾಗುತ್ತದೆ ಎಂದು ಕರುನಾಡ ಜನಪದ ಕಲಾ ಸಂಘದ ಅಧ್ಯಕ್ಷರಾದ ಕಲಾವಿದ ಸುನಿಲ್ ತಿಳಿಸಿದರು.

ಮೈ ಭಾರತ್ ಕೇಂದ್ರ, ಕೋಲಾರ, ಜನವಿಕಾಸ ಯುವಜನ ಸೇವಾ ಸಂಸ್ಥೆ, ಕರುನಾಡ ಜಾನಪದ ಇವರ ಸಹಯೋಗದಲ್ಲಿ ಸೋಮವಾರ ಕೋಲಾರ ನಗರದ ಸರ್ ಎಂ ವಿಶ್ವೇಶ್ವರಯ್ಯ ಕ್ರೀಡಾಂಗಣದಲ್ಲಿ ಕೋಲಾರ ಜಿಲ್ಲೆಯ ಜಿಲ್ಲಾ ಮಟ್ಟದ ಕ್ರೀಡಾಕೂಟದಲ್ಲಿ ವಿಜೇತರಿಗೆ ಪ್ರಶಸ್ತಿ ಪತ್ರ ವಿತರಿಸಿ ಮಾತನಾಡಿ, ಮುಂದುವರೆದು ಕ್ರೀಡೆಗಳು ಕೇವಲ ಸೋಲು-ಗೆಲುವಿನ ಪ್ರದರ್ಶನವಲ್ಲ, ಅವು ಯುವಜನರಲ್ಲಿ ಶಿಸ್ತು, ಏಕಾಗ್ರತೆ ಮತ್ತು ತಂಡದ ಮನೋಭಾವವನ್ನು ಬೆಳೆಸುತ್ತವೆಂದರು.

ಸರ್ಕಾರಿ ಉಪಕರಣಗಾರ ಮತ್ತು ತರಬೇತಿ ಕೇಂದ್ರ ಪ್ರಾಂಶುಪಾಲರಾದ ವಿಕಾಸ್ ಡಿ, ಮೈ ಭಾರತ್ ಕೇಂದ್ರ ಕೋಲಾರ ಯುವಜನ ಅಧಿಕಾರಿಗಳಾದ ರಾಜೇಶ್ ಕಾರಂತ್, ಜನವಿಕಾಸ ಯೋಜನಾ ಸೇವಾ ಸಂಸ್ಥೆಯ ಅಧ್ಯಕ್ಷರಾದ ಪ್ರವೀಣ್ ಕುಮಾರ್.ಎಸ್, ದೈಹಿಕ ಶಿಕ್ಷಕರಾದ ರಾಜೇಶ್ ಕುಮಾರ್, ಚಂದ್ರಶೇಖರ್, ಕುಶಾಲ್ ಕುಮಾರ್, ಅಭಿಲಾಶ್ ಮುಂತಾದವರಿದ್ದರು.

ಪಂಡಿತ್ ವಿಶ್ವನಾಥ್‌ಗೆ ಗೌರವ ಡಾಕ್ಟರೇಟ್



• **ಬೆಂಗಳೂರು:** ಪಾರಂಪರಿಕ ವೈದ್ಯಕೀಯ ಕ್ಷೇತ್ರದಲ್ಲಿ ಸಾಧನೆ ಮಾಡುತ್ತಿರುವ ಪಂಡಿತ್ ವಿಶ್ವನಾಥ್ ಆರ್. ಅವರಿಗೆ ಇತ್ತೀಚೆಗೆ ಅಮೆರಿಕನ್ ವಿಸ್ಡಮ್ ಪೀಸ್ ಯುನಿವರ್ಸಿಟಿಯಿಂದ ಗೌರವ ಡಾಕ್ಟರೇಟ್ ಪದವಿ ನೀಡಲಾಗಿದೆ. ಶ್ರೀವೆಂಕಟೇಶ್ವರ ಆಯುರ್ ಫಾರ್ಮಾ ಸಂಸ್ಥಾಪಕರಾದ ಪಂಡಿತ್ ವಿಶ್ವನಾಥ್ ಅವರು ರಾಷ್ಟ್ರೀಯ ಭ್ರಷ್ಟಾಚಾರ ವಿರೋಧಿ ದಳದ ರಾಜ್ಯ ಪ್ರಧಾನಕಾರ್ಯದರ್ಶಿಯಾಗಿಯೂ ಕಾರ್ಯ ನಿರ್ವಹಿಸುತ್ತಿದ್ದಾರೆ. ವೆಂಕಟೇಶ್ವರ ಆಯುರ್ ಫಾರ್ಮ್ ಒಂದುಪಾರಂಪರಿಕ ಆಯುರ್ವೇದ ಸಂಸ್ಥೆ ಆಗಿದ್ದು, ಜನರ ಆರೋಗ್ಯಕ್ಕೆ ಸಂಬಂಧಿಸಿದ ಹಲವಾರು ಉತ್ಪನ್ನವನ್ನು ಮಾರುಕಟ್ಟೆಗೆ ಪರಿಚಯಿ ಸಿದೆ. ಅಸ್ತಮಾ ಆಯುರ್ವೇದಿಕ್ ಕಾಫ್ ಸಿರಪ್ ಹಾಗೂ ಜಾಯಿಂಟ್ ಪೇನ್ ಆಯಿಲ್ ಹಲವು ಪಾರಂಪರಿಕ ಆಯುರ್ವೇದ ಔಷಧಿ ತಯಾರಿಸುತ್ತಿದೆ.

ಎರಡು ಹಂತದಲ್ಲಿ ಗಣತಿ | ಜಿಲ್ಲಾ, ತಾಲೂಕುಮಟ್ಟದಲ್ಲಿ ಅಧಿಕಾರಿಗಳ ಸಿದ್ಧತೆ

ಪ್ರಥಮ ಡಿಜಿಟಲ್ ಜನಗಣತಿ

• **ದೇವನಹಳ್ಳಿ:** ಜನಗಣತಿ-2027 ಭಾರತದ 16ನೇ ಜನಗಣತಿ ಮತ್ತು ಸ್ವಾತಂತ್ರ್ಯದ ನಂತರದ 8ನೇ ಜನಗಣತಿ ಏಪ್ರಿಲ್ 1, 2026ರಿಂದ ಸೆಪ್ಟೆಂಬರ್ 30 ರವರೆಗೆ ನಡೆಯಲಿದೆ. ಮೊದಲ ಹಂತದ ಮನೆ ಪಟ್ಟಿ ಮತ್ತು ವಸತಿ ಗಣತಿಯನ್ನು ಒಳಗೊಂಡಿದೆ. ಎರಡನೇ ಹಂತದ ಜನಸಂಖ್ಯಾ ಗಣತಿ 2027ರ ಫೆಬ್ರವರಿ 9ರಿಂದ ಫೆಬ್ರವರಿ 28ರವರೆಗೆ ನಡೆಯಲಿದೆ.

ಈ ಹಿಂದೆ 2011ರಲ್ಲಿ ಕೊನೆಯ ಬಾರಿಗೆ ಜನಗಣತಿ ನಡೆದಿತ್ತು. ಬಳಿಕ 2021ರಲ್ಲಿ ಜನಗಣತಿ ನಡೆಯಬೇಕಾಗಿತ್ತು. ಆದರೆ, ಕೋವಿಡ್ ಕಾರಣಕ್ಕೆ ಹತ್ತು ವರ್ಷಗಳಿಗೊಮ್ಮೆ ನಡೆಯಬೇಕಾದ ಜನಗಣತಿ ನಡೆದಿರಲಿಲ್ಲ, ಇದೀಗ 2026-27ನೇ ಸಾಲಿನಲ್ಲಿ ಜನಗಣತಿ ನಡೆಯುತ್ತಿದೆ.

ಮೊದಲ ಹಂತದಲ್ಲಿ ಏಪ್ರಿಲ್ 01 ರಿಂದ 15ರವರೆಗೆ ಸಾರ್ವಜನಿಕರು ಜನಗಣತಿ ಆ್ಯಪ್ ಅಥವಾ ಪೋರ್ಟಲ್ ಮೂಲಕ ಸ್ವಯಂ ಮಾಹಿತಿ ದಾಖಲಿಸಿಕೊಳ್ಳಬಹುದು. ನಂತರ ಏಪ್ರಿಲ್ 16ರಿಂದ ಮೇ 16ರವರೆಗೆ ಗಣತಿದಾರರು ಮನೆಪಟ್ಟಿ, ಮನೆ ಗಣತಿ ಕ್ಷೇತ್ರ ಕಾರ್ಯ ಮಾಡಲಿದ್ದಾರೆ.

ಗಣತಿದಾರರ ಸ್ಮಾರ್ಟ್ ಫೋನ್ ಮೀಸಲಾದ ಮೊಬೈಲ್ ಆ್ಯಪ್ ಮೂಲಕ ಆನ್‌ಲೈನ್‌ನಲ್ಲಿ ಮಾಹಿತಿ ಸಂಗ್ರಹಿಸಲಾಗುತ್ತಿದೆ. ಆಫ್‌ಲೈನ್‌ನಲ್ಲಿಯೂ ಈ ಆ್ಯಪ್ ಕೆಲಸ ಮಾಡಲಿದೆ. ನೆಟ್‌ವರ್ಕ್ ವ್ಯಾಪ್ತಿಗೆ ಬಂದಾಗ ಸಂಗ್ರಹಿಸಿದ ಮಾಹಿತಿಗಳು ಸರ್ವರ್‌ಗೆ ಸಂಯೋಜನೆ ಆಗಲಿವೆ.

ಗಣತಿ ಪ್ರಕ್ರಿಯೆಯನ್ನು ಆರಂಭದಿಂದ ಮುಕ್ತಾಯದವರೆಗೆ ನಿರ್ವಹಿಸಲು ಜನಗಣತಿ ನಿರ್ವಹಣೆ ಮತ್ತು ಮಾನಿಟರಿಂಗ್ ಸಿಸ್ಟಂ' (ಸಿಎಂಎಂಎಸ್) ಎಂಬ ವಿಶೇಷ ವೆಬ್ ಪೋರ್ಟಲ್ ಅಭಿವೃದ್ಧಿಪಡಿಸಲಾಗಿದೆ.



> ಜನಗಣತಿ-2027 ಗೆ ಜಿಲ್ಲಾಡಳಿತದಿಂದ ಸಕಲ ಸಿದ್ಧತೆ ಕೈಗೊಳ್ಳಲಾಗಿದೆ. ಮೂರು ದಿನಗಳ ಕಾಲ ಚಾರ್ಜ್ ಆಫೀಸರ್‌ಗಳಿಗೆ ತರಬೇತಿ ನೀಡಲಾಗುವುದು. ಗಣತಿದಾರರಿಗೂ ತರಬೇತಿ ನೀಡಲಾಗುತ್ತಿದೆ. ಸಾರ್ವಜನಿಕರು ಜನಗಣತಿಗೆ ನಿಖರವಾದ ಮಾಹಿತಿ ನೀಡಿ ಸಹಕರಿಸಬೇಕು.
> ■ ಡಾ.ಕೆ.ಎನ್.ಅನುರಾಧಾ, ಜಿಲ್ಲಾಧಿಕಾರಿ

ಜನಗಣತಿ ಸಲುವಾಗಿ ಬ್ಲಾಕ್ ರಚಿಸಲಾಗಿದ್ದು 150 ರಿಂದ 200 ಮನೆಗಳು ಅಥವಾ 700 ರಿಂದ 800 ಜನಸಂಖ್ಯೆಗೆ ಓರ್ವ ಗಣತಿದಾರರನ್ನು ಮತ್ತು ಪ್ರತಿ ಆರು ಜನ ಗಣತಿದಾರರಿಗೆ ಓರ್ವ ಮೇಲ್ವಿಚಾರಕರನ್ನು ನೇಮಿಸಲಾಗಿದೆ.

ಜಿಲ್ಲೆಯ ಜಿಲ್ಲಾಧಿಕಾರಿಗಳು ಪ್ರಧಾನ ಜನಗಣತಿ ಅಧಿಕಾರಿಗಳಾಗಿದೆ. ಜಿಲ್ಲಾ ಜನಗಣತಿ ಅಧಿಕಾರಿಗಳಾಗಿ ಅಪರ ಜಿಲ್ಲಾಧಿಕಾರಿಗಳು, ಹೆಚ್ಚುವರಿ ಜಿಲ್ಲಾ ಜನಗಣತಿ ಅಧಿಕಾರಿಗಳಾಗಿ ಜಿಪಂ ಮುಖ್ಯ ಯೋಜನಾಧಿಕಾರಿ, ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕರು, ಶಾಲಾ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರು, ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳು ಕಾರ್ಯ ನಿರ್ವಹಿಸಲಿದ್ದಾರೆ, ಉಪ ವಿಭಾಗಾಧಿಕಾರಿಗಳು ಉಪ ವಿಭಾಗ ಹಂತದ ಚಾರ್ಜ್ ಅಧಿಕಾರಿಗಳಾಗಿ, ಗ್ರಾಮೀಣ ಪ್ರದೇಶದ ಚಾರ್ಜ್ ಅಧಿಕಾರಿಗಳಾಗಿ ತಹಶೀಲ್ದಾರರು, ನಗರ ಪ್ರದೇಶಕ್ಕೆ ಆಯಾ ಸ್ಥಳೀಯ ಸಂಸ್ಥೆಗಳ ಮುಖ್ಯಾಧಿಕಾರಿಗಳು ಚಾರ್ಜ್ ಅಧಿಕಾರಿಗಳಾಗಿರುವರು.

ಮೊದಲ ಹಂತದಲ್ಲಿ ಮನೆ ಗಣತಿ 'ಮೊದಲ ಹಂತದಲ್ಲಿ ಮನೆ ಗಣತಿ ಮಾತ್ರ ನಡೆಯಲಿ. ಕ್ಷೇತ್ರ ಮಟ್ಟದ ಗಣತಿದಾರರು ಎಚ್ ಎಲ್‌ಬಿ (ಹೌಸ್ ಲಿಸ್ಟಿಂಗ್ ಬ್ಲಾಕ್) ಕ್ರಿಯೇಟರ್ ಆ್ಯಪ್ ಬಳಸಿ ಪ್ರತಿ ಬ್ಲಾಕ್‌ನ ಮನೆಗಳ ಲೋಕೇಶನ್ ಮತ್ತು ವ್ಯಾಪ್ತಿಯನ್ನು ಜಿಯೋ ಟ್ಯಾಗಿಂಗ್ ಮೂಲಕ ಗುರುತಿಸಲಿದ್ದಾರೆ. ಮೊದಲ ಹಂತದಲ್ಲಿ 33 ಪ್ರಶ್ನೆ ಒಳಗೊಂಡಿದೆ. ಮನೆಗಳ ಸಂಖ್ಯೆ, ಗೋಡೆ, ಛಾವಣಿ ನಿರ್ಮಾಣಕ್ಕೆ ಬಳಸಿದ ವಸ್ತುಗಳು, ಕುಡಿಯುವ ನೀರು, ಶೌಚಾಲಯ, ವಿದ್ಯುತ್ ಮತ್ತು ಮನೆಯಲ್ಲಿರುವ ಸೌಲಭ್ಯಗಳ ಬಗ್ಗೆ ಮಾಹಿತಿ ಸಂಗ್ರಹಿಸಲಾಗುತ್ತದೆ.

ಎರಡನೇ ಹಂತ ಜನಸಂಖ್ಯಾ ಗಣತಿ ಎರಡನೇ ಹಂತದಲ್ಲಿ ಪ್ರತಿ ವ್ಯಕ್ತಿಯ ವಯಸ್ಸು, ಲಿಂಗ, ಶಿಕ್ಷಣ, ಉದ್ಯೋಗ, ಧರ್ಮ ಮತ್ತು ಭಾಷೆಯಂತಹ ವೈಯಕ್ತಿಕ ವಿವರವನ್ನು ಸಂಗ್ರಹಿಸಲಾಗುತ್ತದೆ.

ಗ್ಯಾರಂಟಿಯಿಂದ ಮಹಿಳಾ ಸಬಲೀಕರಣ

• **ಮೈಸೂರು:** ರಾಜ್ಯ ಸರ್ಕಾರದ ಮಹತ್ವದ ಪಂಚ ಗ್ಯಾರಂಟಿ ಯೋಜನೆಗಳಿಂದ ಮಹಿಳಾ ಸಬಲೀಕರಣ ಸಾಧ್ಯವಾಗಿದೆ ಎಂದು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಜಿಲ್ಲಾ ಅಧ್ಯಕ್ಷರಾದ ಎಸ್.ಅರುಣ್ ಕುಮಾರ್ ತಿಳಿಸಿದರು.

ಇಲವಾಲದಲ್ಲಿ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ

ಜಿಪಂ, ಮೈಸೂರು ತಾಪಂನಿಂದ ಇಲವಾಲ ಗ್ರಾಮದ ಸಮುದಾಯ ಭವನದಲ್ಲಿ ಸೋಮವಾರ ಹಮ್ಮಿಕೊಳ್ಳಲಾಗಿದ್ದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಹಾಗೂ ಪಂಚ ಗ್ಯಾರಂಟಿ ಯೋಜನೆಗಳ ಬಗ್ಗೆ ಅರಿವು ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿ, ನಮ್ಮ ಸರ್ಕಾರ ಗ್ಯಾರಂಟಿ ಯೋಜನೆಗಳನ್ನು ಜಾರಿ ಮಾಡಿ ನುಡಿದಂತೆ ನಡೆದಿದೆ. ಬಡವರು ಹಾಗೂ ಮಹಿಳೆಯರ ಏಳಿಗೆಗೆ ಗ್ಯಾರಂಟಿ ಯೋಜನೆ ಸಹಕಾರಿಯಾಗಿದೆ ಎಂದರು. ಜಿಪಂಉಪಕಾರ್ಯದರ್ಶಿ ಎಂ.ಬಿ.ಸವಿತಾ ಅವರು ಮಾತನಾಡಿ, ಇಂದು ಎಲ್ಲಾ ಕ್ಷೇತ್ರಗಳಲ್ಲಿ ಮಹಿಳೆಯರು ತಮ್ಮದೇ ಆದ ಜವಾಬ್ದಾರಿಯನ್ನು ಸಮರ್ಥವಾಗಿ ನಿಭಾಹಿಸುತ್ತಿದ್ದಾರೆ. ಯಾವುದೇ ಹಿಂಜರಿಕೆಗೆ ಒಳಗಾಗಬಾರದು ಎಂದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ತಾಲೂಕು ಅಧ್ಯಕ್ಷ ಗುರುಸ್ವಾಮಿ ಮಾತನಾಡಿ, ನಮ್ಮ ಸರ್ಕಾರದ ಗ್ಯಾರಂಟಿ ಯೋಜನೆಗಳಿಂದ ಅನೇಕರು ಸ್ವಾವಲಂಬಿ ಜೀವನ ನಡೆಸುತ್ತಿದ್ದಾರೆ ಎಂದು ತಿಳಿಸಿದರು. ಜಿಲ್ಲಾ ಗ್ಯಾರಂಟಿ ಯೋಜನಗಳ ಅನುಷ್ಠಾನ ಸಮಿತಿಯ ಉಪಾಧ್ಯಕ್ಷರಾದ ಬಿ.ಕರೀಗೌಡ, ಬಸವಣ್ಣ, ತಾಲೂಕು ಸಮಿತಿ ಸದಸ್ಯರಾದ ಚನ್ನಪ್ಪ, ಕರೀಗೌಡ, ರಾಣಿ, ನವೀನ್, ಗ್ರಾಮಾಂತರ ಸಿಡಿಪಿಒ ತಿಮ್ಮಯ್ಯ, ಆಹಾರ ಶಿರಸ್ತೆದಾರ್ ಮಹೇಶ್ ಕುಮಾರ್, ಜಿಲ್ಲಾ ಕೌಶಲ್ಯಾಭಿವೃದ್ಧಿ ಅಧಿಕಾರಿ ರಾಣಿ, ಆಹಾರ ನಿರೀಕ್ಷಕರಾದ ನಂದಿನಿ, ಇಲವಾಲ ಗ್ರಾಪಂ ಪಿಡಿಒ ಹೇಮಂತ್ ಸೇರಿದಂತೆ ಮುಂತಾದವರಿದ್ದರು.

ಮಾತಾಜಿ ಪಾನ್ ಬ್ರೋಕರ್ ವಿರುದ್ಧ ಕ್ರಮಕ್ಕೆ ಆಗ್ರಹ

ಉಪ ನಿಬಂಧಕರಿಗೆ ರೈತ ಸಂಘ ದೂರು

• **ಕೋಲಾರ:** ಬೇತಮಂಗಲ ಮತ್ತು ಸುತ್ತಮುತ್ತಲ ಗ್ರಾಮಗಳ ಸಾರ್ವಜನಿಕರಿಗೆ, ರೈತರಿಗೆ ಮೋಸ ಮಾಡಿರುವ ಬೇತಮಂಗಲದ ಮಾತಾಜಿ ಪಾನ್ ಬ್ರೋಕರ್ ಸಂಸ್ಥೆಯ ವಿರುದ್ಧ ಕಾನೂನು ಕ್ರಮಕ್ಕೆ ಒತ್ತಾಯಿಸಿ ನಮ್ಮ ಕೋಲಾರ ರೈತ ಸಂಘವು ಸಹಕಾರ ಸಂಘಗಳ ಉಪ ನಿಬಂಧಕರಿಗೆ ದೂರು ನೀಡಿದರು.

ಕೋಲಾರ ಜಿಲ್ಲೆ, ಕೆಜಿಎಫ್ ತಾಲೂಕಿನ ಬೇತಮಂಗಲದಲ್ಲಿರುವ ಮಾತಾಜಿ ಪಾನ್ ಬ್ರೋಕರ್ ಮಾಲೀಕರಾದ ಕಲ್ಯಾಣ್‌ಸಿಂಗ್ ಬಿನ್ ದುರ್ಗಾ ರಾಮ್‌ಜಿ ಇವರು ಕೆ.ಜಿ.ಎಫ್ ರಸ್ತೆಯ ಬೇತಮಂಗಲದಲ್ಲಿ ಗೋಲ್ಡ್ ಶಾಪ್ ಅನ್ನು ಸರ್ಕಾರದ ಗಮನಕ್ಕೆ ತರದೆ ಮುಚ್ಚಿದ್ದು, ಗಿರಿವಿ ಅಂಗಡಿ ವ್ಯವಹಾದಲ್ಲಿ ಹಲವಾರು ಮಂದಿಗೆ ಮೋಸ ಮಾಡಿ ಈಗ ಮಹಾಲಕ್ಷ್ಮಿ ಬೆಟ್ಟಿ ಅಂಗಡಿಯನ್ನು ಇದೇ ಬೇತಮಂಗಲದಲ್ಲಿ ತೆರೆದು ವ್ಯಾಪಾರ ನಡೆಸುತ್ತಿದ್ದಾರೆ ಎಂದು ಆರೋಪಿಸಿದರು.

ಬೇತಮಂಗಲ ಸುತ್ತಮುತ್ತ ಗ್ರಾಮಸ್ಥರಿಗೆ ಆಭರಣಗಳನ್ನು ಗಿರಿವಿ ಇಟ್ಟುಕೊಂಡು ಬಿಳಿ ಚೀಟಿಗಳನ್ನು ನೀಡಿ ಸರ್ಕಾರಕ್ಕೆ ತೆರಿಗೆ ಕಟ್ಟದೆ ವಂಚನೆ ಮಾಡಿಕಾನೂನು ಉಲ್ಲಂಘನೆ ಮಾಡಿದ್ದಾರೆ. ಸುಮಾರು 6 ಕೆ.ಜಿ.ಯಷ್ಟು ಚಿನ್ನದ ಒಡವೆಯನ್ನು ಗಿರಿವಿ ಇಟ್ಟು ಕೊಂಡು ಈಗ ಅಂಗಡಿಯನ್ನು ಮುಚ್ಚಿದ್ದಾನೆ. ಸುಮಾರು 15 ವರ್ಷಗಳಿಂದ ಗಿರಿವಿ ಇಟ್ಟಿರುವವರು ನೂತನ ಬಟ್ಟೆ ಅಂಗಡಿಯ ಬಳಿ ಹೋಗಿ ಕೇಳಿದರೆ, ನಾಳೆ, ತಿಂಗಳು ಎಂದು ಸಬೂಬು ಹೇಳಿಕೊಂಡು ಯಾಮಾರಿಸುತ್ತಿದ್ದಾರೆ. ಈತನ ವಿಚಾರವಾಗಿ ಹಲವಾರು ದೂರುಗಳು ಬಂದಿರುತ್ತದೆ. ಕೋಟಿಗಾನಹಳ್ಳಿ ವೆಂಕಟಮ್ಮ ಕೋಂ ಎತ್ತುಗಳಪ್ಪ ಇವರ 79.6ಗ್ರಾಂ ಚೈನ್,



ಕೋಟಿಗಾನಹಳ್ಳಿ ರವಿ ಎಂಬುವರ 1 ಬ್ರಾಸ್‌ಲೈಟ್, 2 ಉಂಗುರ 25ಗ್ರಾಂ ಚಿನ್ನವನ್ನು ಮತ್ತು ಅಂಕತಟ್ಟಹಳ್ಳಿ ಶಂಕರಪ್ಪನವರ 40 ಗ್ರಾಂ ನೆಕ್ಲೇಸ್, ಸುಂಡ್ರಪಾಳ್ಯ ವೆಂಕಟೇಶ್ ಎಂಬುವರ 35ಗ್ರಾಂ ಚೈನ್. ಅಲ್ಲದೆ ಸುಮಾರು ದೂರುಗಳು ಕೇಳಿಬಂದಿವೆ.

ಮಾತಾಜಿ ಪಾನ್ ಬ್ರೋಕರ್ ವಿರುದ್ಧ ಕಾನೂನಾತ್ಮಕ ತನಿಖೆ ಮಾಡಿ, ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಂಡು ಗಿರಿವಿ ಇಟ್ಟಿರುವ ಗ್ರಾಹಕರ ಒಡವೆಗಳನ್ನು ವಾಪಸ್ಸು ಕೊಡಲು ಸಂಘಟನಾಕಾರರು ಒತ್ತಾಯಿಸಿದ್ದಾರೆ. ಈ ಸಂದರ್ಭದಲ್ಲಿ ಬಂಗಾರಪೇಟೆ ತಾಲ್ಲೂಕು ಅಧ್ಯಕ್ಷ ಆನಂದಗೌಡ, ಕೆಂಬೋಡಿ ನಾರಾಯಣಸ್ವಾಮಿ, ಕೃಷ್ಣಪ್ಪ, ತಮ್ಮೇಗೌಡ, ವೆಂಕಟಮ್ಮ, ರವಿ, ವೆಂಕಟೇಶಪ್ಪ, ಶಂಕರಪ್ಪ, ಸದಾನಂದ ಹಾಜರಿದ್ದರು.

ದಂಪತಿ ಆತ್ಮಹತ್ಯೆ


• **ಕೆ.ಆರ್.ಪೇಟೆ:** ಪಟ್ಟಣದ ಜಯನಗರ ಬಡಾವಣೆಯ ಶ್ರೀ ಲಕ್ಷ್ಮೀ ವೆಂಕಟೇಶ್ವರ ಸಮುದಾಯ ಭವನದ ಹಿಂಭಾಗ 'ದಲ್ಲಿ ದಂಪತಿ ಒಂದೇ ಕುಣಿಕೆಗೆ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುತ್ತಾರೆ.

ತಾಲೂಕಿನ ಹೊಸಕೋಟೆ ಗ್ರಾಮದ ಗಣೇಶಗೌಡ ಮತ್ತು ಮಂಜುಳಾ ದಂಪತಿಯ ಪುತ್ರ ದರ್ಶನ್ (29) ಮತ್ತು ಪತ್ನಿ ಎನ್.ಎಲ್.ದಿವ್ಯಾ(25) ಆತ್ಮಹತ್ಯೆ ಮಾಡಿಕೊಂಡವರು. ನಾಟನಹಳ್ಳಿ ಗ್ರಾಮದ



ಲಕ್ಷ್ಮಣಗೌಡ ಮತ್ತು ಸುನಂದ ದಂಪತಿ ಪುತ್ರಿಯನ್ನು ಕಳೆದ ಮೂರು ವರ್ಷದ ಹಿಂದೆ ದರ್ಶನ್ ಅವರಿಗೆ ವಿವಾಹ ಮಾಡಿಕೊಡಲಾಗಿತ್ತು. ಕಳೆದ ಒಂದು ವರ್ಷ ದಿಂದದಂಪತಿ ಕೆ.ಆರ್.ಪೇಟೆ ಪಟ್ಟಣದ ಜಯನಗರ ಬಡಾವಣೆಯ ಬಾಡಿಗೆ ಮನೆ ಯೊಂದರಲ್ಲಿ ವಾಸವಾಗಿದ್ದರು. ದರ್ಶನ್ ಕ್ಯಾಬ್ ಚಾಲಕನಾಗಿದ್ದರೆ, ಪತ್ನಿ ದಿವ್ಯಾ ಖಾಸಗಿ ನರ್ಸಿಂಗ್ ಹೋಂ ವೊಂದರಲ್ಲಿ ಉದ್ಯೋಗ ಮಾಡುತ್ತಿದ್ದರು.

ಸಹಕಾರ ರತ್ನ ಪುರಸ್ಕೃತ ಕೋಡಿಹಳ್ಳಿ ಟಿ.ಸೊಣ್ಣಪ್ಪ ನಿಧನ



• **ಹೊಸಕೋಟೆ:** ತಾಲೂಕಿನ ಮೊದಲ ಸಹಕಾರ ರತ್ನ ಪುರಸ್ಕೃತ ಕೋಡಿಹಳ್ಳಿ ಟಿ.ಸೊಣ್ಣಪ್ಪ (87) ಸೋಮವಾರ ವಯೋಸಹಜ ಕಾಯಿಲೆಯಿಂದ ನಿಧನರಾಧರು. ಮೃತರು ಪತ್ನಿ, ಮೂವರು ಪುತ್ರರು ಹಾಗೂ ಓರ್ವ ಹೆಣ್ಣು ಮಗಳನ್ನು ಅಗಲಿದ್ದಾರೆ, ಮಂಗಳವಾರ ಸ್ವಗ್ರಾಮದಲ್ಲಿ ಅಂತ್ಯ ಸಂಸ್ಕಾರ ಮಾಡಲಾಗುವುದು ಎಂದು ಬಂದುವರ್ಗ ತಿಳಿಸಿದೆ. ಮಾಜಿ ಸಂಸದ ಬಿ.ಎನ್ . ಬಚ್ಚೇಗೌಡ, ಶಾಸಕ ಶರತ್ ಬಚ್ಚೇಗೌಡ ಹಾಗೂ ತಾಲೂಕಿನ ಹಿರಿಯ ಮುಖಂಡರು ಅಭಿಮಾನಿಗಳು ಸೊಣ್ಣಪ್ಪ ಅವರ ಆತ್ಮಕ್ಕೆ ಶಾಂತಿ ಕೋರಿದ್ದಾರೆ.

ತೀವ್ರಗೊಂಡ ಮಧ್ಯಪ್ರಾಚ್ಯ ಯುದ್ಧ: ತೈಲ ಉತ್ಪಾದನೆ, ಪ್ರಮುಖ ಹಡಗು ಮಾರ್ಗಗಳಿಗೆ ಅಡ್ಡಿ

ಜಾಗತಿಕ ತೈಲ ಮಾರುಕಟ್ಟೆಯಲ್ಲಿ ತಲ್ಲಣ

ಚಿಕಾಗೋ: ಮಧ್ಯಪ್ರಾಚ್ಯದಲ್ಲಿ ಯುದ್ಧ ತೀವ್ರಗೊಂಡು ತೈಲ ಉತ್ಪಾದನೆ ಮತ್ತು ಪ್ರಮುಖ ಹಡಗು ಮಾರ್ಗಗಳಿಗೆ ಅಡ್ಡಿಯಾಗಿರುವ ಹಿನ್ನೆಲೆಯಲ್ಲಿ, ಸೋಮವಾರ ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ತೈಲ ಬೆಲೆ ಪ್ರತಿ ಬ್ಯಾರೆಲ್‌ಗೆ 120 ಡಾಲರ್‌ಗಳ ಗಡಿ ತಲುಪಿ ನಂತರ ಅಲ್ಪ ಕುಸಿತ ಕಂಡಿತು.

ಮಾರುಕಟ್ಟೆ ಏರಿಕೆ ಮತ್ತು ಪೂರೈಕೆ ಭೀತಿ: ದಿನದ ಆರಂಭದಲ್ಲಿ ಬ್ರೆಂಟ್ ಕಚ್ಚಾ ತೈಲದ ಬೆಲೆ 119.50 ಡಾಲರ್‌ಗೆ ಏರುವ ಮೂಲಕ ಭಾರಿ ಜಿಗಿತ ದಾಖಲಿಸಿತು. ಜಿ7 ರಾಷ್ಟ್ರಗಳು ತಮ್ಮ ತುರ್ತು ತೈಲ ದಾಸ್ತಾನುಗಳನ್ನು ಬಿಡುಗಡೆ ಮಾಡುವ ಸಾಧ್ಯತೆಯ ವರದಿಗಳ ನಂತರ ಬೆಲೆ ಸುಮಾರು 106 ಡಾಲರ್‌ಗೆ ಇಳಿಕೆಯಾದರೂ, ಅಸ್ಥಿರತೆ ಮುಂದುವರಿದಿದೆ. ವಿಶ್ವದ ಶೇ.20ರಷ್ಟು ತೈಲ ಸಾಗಣೆಯಾಗುವ ಹಾರ್ಮುಜ್ ಜಲಸಂಧಿಯಲ್ಲಿ ತೈಲ ಟ್ಯಾಂಕರ್‌ಗಳ ಸಂಚಾರ ಬಹುತೇಕ ಸ್ಥಗಿತಗೊಂಡಿರುವುದು ಆತಂಕ ಹೆಚ್ಚಿಸಿದೆ. ರಫ್ತು ನಿರ್ಬಂಧಗಳಿಂದಾಗಿ ಇರಾಕ್, ಕುವೈತ್ ಮತ್ತು ಯುಎಇ ಈಗಾಗಲೇ ತೈಲ ಉತ್ಪಾದನೆಯಲ್ಲಿ ಕಡಿತಗೊಳಿಸಿವೆ.

ಮೂಲಸೌಕರ್ಯಗಳ ಮೇಲೆ ದಾಳಿ: ಇಂಧನ ಮತ್ತು ಸೌಲಭ್ಯಗಳ ಮೇಲೆ ನಡೆದ ಉದ್ದೇಶಿತ ದಾಳಿಗಳಿಂದಾಗಿ ಬಿಕ್ಕಟ್ಟು ಮತ್ತಷ್ಟು ಉಲ್ಬಣಗೊಂಡಿದೆ. ಇರಾನ್‌ನಿಂದ ಪ್ರಮುಖ ನೀರು ಶುದ್ಧೀಕರಣ ಘಟಕದ ಮೇಲೆ ದಾಳಿ ನಡೆದಿದೆ ಎಂದು ಆರೋಪಿಸಲಾಗಿದ್ದು, ತನ್ನ ಸಂಸ್ಕರಣಾ ಘಟಕಕ್ಕೆ ಬೆಂಕಿ ಬಿದ್ದ ಹಿನ್ನೆಲೆಯಲ್ಲಿ ಬಹ್ರೇನ್‌ನ ರಾಷ್ಟ್ರೀಯ ತೈಲ ಕಂಪನಿ ಫೋರ್ಸ್ ಮೆಜರ್(ಅನಿವಾರ್ಯ ಪರಿಸ್ಥಿತಿಯ ಕಾರಣ ಒಪ್ಪಂದದಿಂದ ವಿನಾಯಿತಿ) ಘೋಷಿಸಿದೆ. ಟೆಹ್ರಾನ್‌ನ ತೈಲ ಡಿಪೋಗಳ ಮೇಲೆ ಇಸ್ರೇಲ್ ನಡೆಸಿದ ದಾಳಿ ಇಂಧನ ಕೊರತೆಯ ಭೀತಿಯನ್ನು ಹೆಚ್ಚಿಸಿದೆ.

ಆರ್ಥಿಕ ಪರಿಣಾಮ: ತೈಲ ಬೆಲೆ ಏರಿಕೆಯ ಬಿಸಿ ಜಾಗತಿಕವಾಗಿ ತಟ್ಟುತ್ತಿದ್ದು, ಅಮೆರಿಕದಲ್ಲಿ ಪೆಟ್ರೋಲ್ ಬೆಲೆ ಒಂದೇ ವಾರದಲ್ಲಿ 50 ಸೆಂಟ್ಸ್‌ಗಳಷ್ಟು ಏರಿಕೆಯಾಗಿದೆ. ಮಧ್ಯಪ್ರಾಚ್ಯದ ಆಮದಿನ ಮೇಲೆ ಹೆಚ್ಚು ಅವಲಂಬಿತವಾಗಿರುವ ಏಷ್ಯಾದ ಆರ್ಥಿಕತೆಗಳು ಈ ಬೆಲೆ ಏರಿಕೆಯಿಂದ ತೀವ್ರ ಸಂಕಷ್ಟಕ್ಕೆ ಸಿಲುಕಿದ್ದು, ಷೇರು ಮಾರುಕಟ್ಟೆಗಳು ಭಾರಿ ಕುಸಿತ ಕಂಡಿವೆ.

ವದಂತಿ ಹರಡಿದ ಆರೋಪ: 313ಕ್ಕೂ ಅಧಿಕ ಮಂದಿ ಬಂಧನ

ಇರಾನ್ ಕೊಲ್ಲಿ ದೇಶಗಳ ಮೇಲೆ ನಡೆಸಿದ ದಾಳಿಗಳಿಗೆ ಸಂಬಂಧಿಸಿ ತಪ್ಪು ಮಾಹಿತಿ ಹರಡಿದ ಮತ್ತು ವದಂತಿಗಳನ್ನು ಹಂಚಿಕೊಂಡ ಪ್ರಜೆಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳುತ್ತಿರುವ ಗಲ್ಫ್ ದೇಶಗಳು, ಇಂತಹ ವದಂತಿ ಹಂಚಿಕೊಂಡ ಮತ್ತು ತಪ್ಪು ಮಾಹಿತಿ ಹರಡಿದ ಆರೋಪದ ಮೇಲೆ 313ಕ್ಕೂ ಅಧಿಕ ಮಂದಿಯನ್ನು ಬಂಧಿಸಿವೆ. ಇರಾನ್ ವಿಮಾನ ನಿಲ್ದಾಣಗಳನ್ನು, ಸೇನಾ ನೆಲೆಗಳನ್ನು ಮತ್ತು ಇಂಧನ ಸ್ಥಾವರಗಳ ಮೇಲೆ ದಿನನಿತ್ಯ ಡ್ರೋನ್ ಮತ್ತು ಕ್ಷಿಪಣಿ ದಾಳಿಗೆ ಸಂಬಂಧಿಸಿ ಈ ವದಂತಿಗಳನ್ನು ಹರಡಲಾಗಿದ್ದು, ವಿಡಿಯೋ ಕ್ಲಿಪ್ಸ್‌ಗಳನ್ನು ಹಂಚಿಕೊಂಡ ಮತ್ತು ತಪ್ಪು ಮಾಹಿತಿಗಳನ್ನು, ವದಂತಿಗಳನ್ನು ಹರಡಿ ಜನರನ್ನು ಪ್ರಚೋದಿಸಿದ ಆರೋಪದಡಿ ಈ ಬಂಧನ ನಡೆದಿದೆ ಎಂದು ಖತಾರ್‌ನ ಗೃಹಸಚಿವಾಲಯದ ಹೇಳಿಕೆ ತಿಳಿಸಿದೆ. ಬಂಧಿತರಲ್ಲಿ ಕುವೈತ್, ಬಹ್ರೈನ್, ಸಂಯುಕ್ತ ಅರಬ್ ಎಮಿರೇಟ್ಸ್, ಸೌದಿ ಅರೇಬಿಯಾ ಸೇರಿದಂತೆ ವಿವಿಧ ದೇಶಗಳ ಜನರು ಸೇರಿದ್ದು, ಆರ್ಥಿಕ ಮತ್ತು ಸೈಬರ್ ಕ್ರೈಮ್‌ಗಳಿಗಾಗಿ ಇರುವ ಇಲಾಖೆಯ ಮೂಲಕ ಈ ಬಂಧನ ನಡೆದಿದೆ. ಅರಬ್ ದೇಶಗಳಲ್ಲಿ ದೇಶದ ವಿರುದ್ಧ, ಅಪಪ್ರಚಾರ ನಡೆಸುವಂತಹವರ ವಿರುದ್ಧ ಕಟ್ಟುನಿಟ್ಟಿನ ಕಾನೂನು ಕ್ರಮ ಕೈಗೊಳ್ಳಲಾಗುತ್ತಿದೆ.



ತೈಲ ಬೆಲೆ ಮತ್ತು ಪೂರೈಕೆಯಲ್ಲಿ ಸ್ಥಿರತೆ ಕಾಯಲು ಭಾರತ ನೆರವು

ಭಾರತ ರಷ್ಯಾದಿಂದ ತೈಲ ಆಮದು ಮಾಡಿಕೊಳ್ಳುತ್ತಿರುವ ಕಾರಣ ಜಾಗತಿಕ ತೈಲ ಬೆಲೆ ಮತ್ತು ಪೂರೈಕೆ ಸರಪಣಿಯಲ್ಲಿ ಸ್ಥಿರತೆ ಉಂಟಾಗಿರುವುದನ್ನು ಇಲ್ಲಿ ಸ್ಮರಿಸಬಹುದು. ವಿಶ್ವದ 3ನೇ ಅತಿದೊಡ್ಡ ತೈಲ ಆಮದು ದೇಶವಾಗಿರುವ ಭಾರತವು, ಜಗತ್ತಿನ 4ನೇ ಅತಿದೊಡ್ಡ ಸಂಸ್ಕರಣಾದಾರ ಮತ್ತು 5ನೇ ಅತಿದೊಡ್ಡ ರಫ್ತುದಾರ ದೇಶವಾಗಿದೆ. ಮಧ್ಯಪ್ರಾಚ್ಯ ಬಿಕ್ಕಟ್ಟಿನ ಹಿನ್ನೆಲೆಯಲ್ಲಿ ತೈಲ ಪೂರೈಕೆ ಸರಪಣಿಯನ್ನು ಸ್ಥಿರವಾಗಿ ಕಾಯ್ದುಕೊಳ್ಳುವಲ್ಲಿ ಭಾರತ ವಹಿಸಿರುವ ಪಾತ್ರವೀಗ ಜಗತ್ತಿನ ಗಮನ ಸೆಳೆದಿದೆ. ತೈಲ ಬೆಲೆ ಪ್ರತಿ ಬ್ಯಾರೆಲ್‌ಗೆ 100 ಡಾಲರ್ ಆಸುಪಾಸಿನಲ್ಲಿ ಉಳಿಯುವ ಸಾಧ್ಯತೆ ಇದೆ ಎಂದು ಜಾಗತಿಕ ತಜ್ಞರು ಅಭಿಪ್ರಾಯಪಟ್ಟಿದ್ದಾರೆ. ದೇಶದಲ್ಲಿ ಯಾವುದೇ ಪೆಟ್ರೋಲ್, ಡೀಸೆಲ್ ಪಂಪ್‌ಗಳಲ್ಲಿ ಪೆಟ್ರೋಲ್, ಡೀಸೆಲ್ ಕೊರತೆ ಇಲ್ಲಫ್ಲ, ಪೂರೈಕೆ ವ್ಯವಸ್ಥೆ ಸಮರ್ಪಕವಾಗಿದೆ. ಯಾವುದೇ ಅಡಚಣೆಗಳ ಅಪಾಯವನ್ನು ನಿವಾರಿಸಲು ಕೇಂದ್ರ ಸರ್ಕಾರವು ಹಾರ್ಮುಜ್ ಜಲಸಂಧಿಯ ಮಾರ್ಗವನ್ನು ಹೊರತುಪಡಿಸಿ ಪರ್ಯಾಯ ಮಾರ್ಗಗಳ ಮೂಲಕ ತೈಲ ಪಡೆಯುವ ಪ್ರಕ್ರಿಯೆಗೆ ಇನ್ನಷ್ಟು ವೇಗ ನೀಡಿದೆ ಎಂದು ಮೂಲಗಳು ತಿಳಿಸಿವೆ. ಭಾರತವೀಗ ವಿಮಾನ ಇಂಧನವನ್ನು ಸಾಕಷ್ಟು ಪ್ರಮಾಣದಲ್ಲಿ ಸಂಗ್ರಹ ಹೊಂದಿದ್ದು, ಯಾವುದೇ ಕಳವಳಕ್ಕೆ ಅವಕಾಶ ಇಲ್ಲ. ಭಾರತವು ಪ್ರಮುಖ ವೈಮಾನಿಕ ಇಂಧನ ಉತ್ಪಾದಕ ಮತ್ತು ರಫ್ತುದಾರನೂ ಆಗಿರುವುದರಿಂದ ವಿಮಾನ ಇಂಧನ ಪೂರೈಕೆ ಬಗೆಗೆ ಚಿಂತೆ ಬೇಕಾಗಿಲ್ಲ ಇತರ ಅನೇಕ ದೇಶಗಳಲ್ಲಿ ಈಗ ತೈಲ ಬಿಕ್ಕಟ್ಟು ಉಂಟಾಗಿರುವುದಕ್ಕೆ ಹೋಲಿಸಿದರೆ ಭಾರತ ತೈಲ ಕ್ಷೇತ್ರದಲ್ಲಿ ಸಾಕಷ್ಟು ಸುಭದ್ರವಾಗಿದೆ ಎಂದು ಮೂಲಗಳು ಬೊಟ್ಟು ಮಾಡಿವೆ. ಕೇಂದ್ರ ಸರ್ಕಾರ ತೈಲ ಪೂರೈಕೆ ಕ್ಷೇತ್ರದಲ್ಲಿ ಸ್ಥಿರತೆಯನ್ನು ಕಾಯ್ದುಕೊಳ್ಳುವುದಕ್ಕಾಗಿ ಸರ್ವ ಕ್ರಮಗಳನ್ನು ಕೈಗೊಳ್ಳುತ್ತಿದೆ.

ಯುದ್ಧ ನಿಲ್ಲಲು ಮೋದಿಯ ಒಂದು ಕರೆ ಸಾಕು: ಯುಎಇ

ಹೊಸದಿಲ್ಲಿ: ಭಾರತದ ಪ್ರಧಾನಿ ನರೇಂದ್ರ ಮೋದಿ ಅವರು ಇಸ್ರೇಲ್ ಮತ್ತು ಇರಾನ್‌ಗೆ ಒಂದೇ ಒಂದು ಫೋನ್ ಕರೆ ಮಾಡಿ ಸಂಘರ್ಷ ನಿಲ್ಲಿಸುವಂತೆ ಹೇಳಿದರೆ ಎಲ್ಲ ಸಮಸ್ಯೆಗಳು ಬಗೆಹರಿಯುತ್ತದೆ ಎಂದು ಯುಎಇ ರಾಯಭಾರಿ ಹುಸೇನ್ ಹಸನ್ ಮಿರ್ಜಾ ಹೇಳಿದ್ದಾರೆ. ಸಂಘರ್ಷದಲ್ಲಿ ಯುಎಇ ಭಾಗಿಯಾಗಲು ಯಾವುದೇ ಕಾರಣವಿಲ್ಲ. ಅಬುಧಾಬಿ ಸೂಕ್ಷ್ಮ ಭೌಗೋಳಿಕ ರಾಜಕೀಯ ಸ್ಥಾನದಲ್ಲಿದೆ. ಇದು ಇರಾನ್‌ಗೆ ನೆರೆಯ ರಾಷ್ಟ್ರ ಮತ್ತು ಅಬ್ರಹಾಂ ಒಪ್ಪಂದಗಳಲ್ಲಿ ಇಸ್ರೇಲ್‌ಗೆ ಪಾಲುದಾರ. ಆ ನಿಲುವು ನಿಖರವಾಗಿ ಯುಎಇಯನ್ನು ಉಪಯುಕ್ತವಾಗಿಸುತ್ತದೆ ಎಂದು ಮಿರ್ಜಾ ಹೇಳಿದರು.



ಸೌದಿಯಲ್ಲಿ ಯಾವುದೇ ಭಾರತೀಯ ಸತ್ತಿಲ್ಲ

ದುಬೈ: ಸೌದಿ ಅರೇಬಿಯಾದಲ್ಲಿ ಸಂಭವಿಸಿದ ಕ್ಷಿಪಣಿ ದಾಳಿಯಲ್ಲಿ ಭಾರತೀಯ ಯುವಕ ಮೃತಪಟ್ಟಿಲ್ಲ ಎಂದು ರಿಯಾದ್‌ನಲ್ಲಿರುವ ಭಾರತೀಯ ರಾಯಭಾರ ಕಚೇರಿ ಸ್ಪಷ್ಟನೆ ನೀಡಿದೆ. ದಾಳಿಯಲ್ಲಿ ಭಾರತೀಯನೊಬ್ಬ ಗಾಯಗೊಂಡಿದ್ದು ಸದ್ಯ ಚಿಕಿತ್ಸೆ ಪಡೆಯುತ್ತಿದ್ದಾನೆ ಎಂದು ತಿಳಿಸಿದೆ. ಈ ವಿಷಯಕ್ಕೆ ಸಂಬಂಧಿಸಿದಂತೆ ಸಂಬಂಧಿತ ಸೌದಿ ಅಧಿಕಾರಿಗಳೊಂದಿಗೆ ಸಂಪರ್ಕದಲ್ಲಿದ್ದೇವೆ ಎಂದು ರಾಯಭಾರ ಕಚೇರಿ ತಿಳಿಸಿದೆ.

ಭಾರತದ ಮೇಲೆ ಯುದ್ಧದ ಬಿಸಿ

ತನ್ನ ತೈಲ ಅಗತ್ಯದ ಶೇ.85ರಷ್ಟು ಭಾಗವನ್ನು ಆಮದು ಮಾಡಿಕೊಳ್ಳುವ ಭಾರತಕ್ಕೆ ಜಾಗತಿಕ ತೈಲ ಬೆಲೆ ಏರಿಕೆ ಭಾರಿ ಹೊಡೆತ ನೀಡಲಿದೆ ಎನ್ನಲಾಗಿದೆ. ಕಚ್ಚಾ ತೈಲ ಬೆಲೆ ಪ್ರತಿ ಬ್ಯಾರೆಲ್‌ಗೆ 120 ಡಾಲರ್ ತಲುಪಿದರೆ ದೇಶದಲ್ಲಿ ಪೆಟ್ರೋಲ್, ಡೀಸೆಲ್ ಬೆಲೆಗಳು ಗಣನೀಯವಾಗಿ ಏರಲಿವೆ. ಇದು ಸಾರಿಗೆ ವೆಚ್ಚವನ್ನು ಹೆಚ್ಚಿಸಿ, ಅಗತ್ಯ ವಸ್ತುಗಳ ಬೆಲೆ ಏರಿಕೆಗೆ(ಹಣದುಬ್ಬರ) ಕಾರಣವಾಗಲಿದೆ.

ಹೂಡಿಕೆದಾರರಿಗೆ ನಷ್ಟ

ಮಧ್ಯಪ್ರಾಚ್ಯ ಯುದ್ಧದ ಪರಿಣಾಮ ಷೇರುಪೇಟೆಯಲ್ಲಿ ರಕ್ತಪಾತವಾಗಿದೆ. ಕಚ್ಚಾ ತೈಲ ಬೆಲೆ 120 ಡಾಲರ್ ಗಡಿ ದಾಟಿ ಗಗನಕ್ಕೇರಿದ್ದು, ಭಾರತೀಯ ಷೇರುಪೇಟೆ ಮೇಲೆ ನಕಾರಾತ್ಮಕ ಪರಿಣಾಮವಾಗಿದೆ. ಸೋಮವಾರದ ಬೆಳಗಿನ ವಹಿವಾಟು ಆರಂಭವಾದ ಕೆಲವೇ ನಿಮಿಷಗಳಲ್ಲಿ, ಬಿಎಸ್‌ಇ ಸೆನ್ಸೆಕ್ಸ್ ಸುಮಾರು 2,400 ಅಂಕಗಳಷ್ಟು ಕುಸಿದು 76,424ರ ಮಟ್ಟಕ್ಕೆ ಇಳಿಯಿತು. ಅದೇ ರೀತಿ, ಎನ್‌ಎಸ್‌ಇ ನಿಫ್ಟಿ ಕೂಡ 700ಕ್ಕೂ ಹೆಚ್ಚು ಅಂಕಗಳನ್ನು ಕಳೆದುಕೊಂಡು 23,750ರ ಸಮೀಪಕ್ಕೆ ಕುಸಿದಿದೆ. ಈ ಭಾರೀ ಪತನದಿಂದಾಗಿ ಬಿಎಸ್‌ಇಯಲ್ಲಿ ಲಿಸ್ಟ್ ಆಗಿರುವ ಕಂಪನಿಗಳ ಒಟ್ಟು ಮಾರುಕಟ್ಟೆ ಮೌಲ್ಯದಲ್ಲಿ ಬರೋಬ್ಬರಿ 12.39 ಲಕ್ಷ ಕೋಟಿ ರೂ.ಗಳಷ್ಟು ನಷ್ಟವಾಗಿದೆ. ಕೇವಲ 10 ನಿಮಿಷಗಳಲ್ಲಿ, ಒಟ್ಟು ಮಾರುಕಟ್ಟೆ ಮೌಲ್ಯ 437 ಲಕ್ಷ ಕೋಟಿ ರೂ.ಗೆ ಕುಸಿದಿದ್ದು, ಸಾಮಾನ್ಯ ಹೂಡಿಕೆದಾರರಿಂದ ಹಿಡಿದು ದೊಡ್ಡ ಸಂಸ್ಥೆಗಳವರೆಗೆ ಎಲ್ಲರ ಸಂಪತ್ತಿಗೂ ದೊಡ್ಡ ಪೆಟ್ಟು ಬಿದ್ದಿದೆ.

ಇಸ್ರೇಲ್ ದಾಳಿಗೆ ಅಮೆರಿಕ ಆಕ್ಷೇಪ

ವಾಷಿಂಗ್ಟನ್: ಇರಾನ್‌ನ ಸುಮಾರು 30 ತೈಲ ಘಟಕಗಳ ಮೇಲೆ ಇಸ್ರೇಲ್ ನಡೆಸಿದ ವ್ಯಾಪಕ ದಾಳಿಯ ನಂತರ ಅಮೆರಿಕ ಮತ್ತು ಇಸ್ರೇಲ್ ನಡುವೆ ಭಿನ್ನಾಭಿಪ್ರಾಯ ಉಂಟಾಗಿದೆ. ವರದಿಗಳ ಪ್ರಕಾರ, ದಾಳಿಯ ತೀವ್ರತೆ ಅಮೆರಿಕ ನಿರೀಕ್ಷಿಸಿದ್ದಕ್ಕಿಂತಲೂ ಹೆಚ್ಚಾಗಿದ್ದರಿಂದ ಶ್ವೇತಭವನ ಟೆಲ್ ಅವಿವ್‌ಗೆ ಎಂಬ ಆಶ್ಚರ್ಯ ಮತ್ತು ಆಕ್ರೋಶದ ಸಂದೇಶ ರವಾನಿಸಿದೆ.

ಇರಾನ್ ತೈಲ ಘಟಕಗಳ ಮೇಲೆ ದಾಳಿ

ಟೆಹ್ರಾನ್ ಬಳಿಯ ಮೂರು ತೈಲ ಡಿಪೋಗಳು ಮತ್ತು ಒಂದು ಸಂಸ್ಕರಣಾ ಘಟಕದ ಮೇಲೆ ನಡೆದ ಈ ದಾಳಿ ಭೀಕರ ಬೆಂಕಿ ಮತ್ತು ಆಮ್ಲ ಮಳೆಗೆ ಕಾರಣವಾಗಿದೆ. ಇಂಧನ ಮೂಲಸೌಕರ್ಯಗಳನ್ನು ನಾಶಪಡಿಸುವುದರಿಂದ ಜಾಗತಿಕ ತೈಲ ಬೆಲೆಗಳು ಏರಿಕೆಯಾಗುತ್ತವೆ ಮತ್ತು ಇರಾನ್‌ನ ಸಾಮಾನ್ಯ ನಾಗರಿಕರು ನಮ್ಮ ವಿರುದ್ಧ ತಿರುಗಿಬೀಳಬಹುದು ಎಂದು ಅಮೆರಿಕದ ಅಧಿಕಾರಿಗಳು ಕಳವಳ ವ್ಯಕ್ತಪಡಿಸಿದ್ದಾರೆ. ಪ್ರಸ್ತುತ ಬ್ರೆಂಟ್ ಕಚ್ಚಾ ತೈಲದ ಬೆಲೆ ಪ್ರತಿ ಬ್ಯಾರೆಲ್‌ಗೆ 107 ಯುಎಸ್ ಡಾಲರ್ ದಾಟಿದೆ. ಈ ತಾಣಗಳು ಕ್ಷಿಪಣಿ ಉಡಾವಣೆಗೆ ಇಂಧನ ಪೂರೈಸುತ್ತಿದ್ದವು ಎಂದು ಇಸ್ರೇಲ್ ವಾದಿಸಿದರೂ, ಪ್ರಾದೇಶಿಕ ಉದ್ವಿಗ್ನತೆಯ ಬಗ್ಗೆ ಟ್ರಂಪ್ ಅಸಮಾಧಾನ ವ್ಯಕ್ತಪಡಿಸಿದ್ದಾರೆ ಎನ್ನಲಾಗಿದೆ.

ಸುಳ್ಳು ಆರೋಪಗಳಿಂದ ತನ್ನ ಮೇಲೆ ದಾಳಿ: ಸೌದಿ

ರಿಯಾದ್: ಇರಾನ್ ''ಸುಳ್ಳು ಆರೋಪ''ಗಳನ್ನು ಆಧರಿಸಿ ಸೌದಿ ಅರೇಬಿಯಾದ ಮೇಲೆ ತನ್ನ ದಾಳಿಗಳನ್ನು ಮುಂದುವರಿಸಿದೆ ಎಂಬುದಾಗಿ ಸೌದಿ ಅರೇಬಿಯಾ ತೀವ್ರ ಆಕ್ರೋಶ ವ್ಯಕ್ತಪಡಿಸಿದೆ. ತನ್ನ ಯುದ್ಧ ವಿಮಾನಗಳು ಮತ್ತು ಮರು ಇಂಧನ ತುಂಬುವಿಕೆಯೊಂದಿಗೆ ಸಮರ ವಿಮಾನಗಳು ನೇರವಾಗಿ ಯುದ್ಧದಲ್ಲಿ ಪಾಲ್ಗೊಂಡಿವೆ ಎಂಬುದಾಗಿ ಇರಾನ್ ಮಾಡುತ್ತಿರುವ ಆರೋಪಗಳನ್ನು ಸೌದಿ ಅರೇಬಿಯಾ ಖಂಡಿಸಿದೆ.

ಕೊಲ್ಲಿ ದೇಶಗಳ ಮೇಲೆ ದಾಳಿ ನಡೆಸಿದ್ದಕ್ಕಾಗಿ ಶನಿವಾರ ಇರಾನಿನ ಅಧ್ಯಕ್ಷ ಮಸೌದ್ ಪೆಜೆಶ್ಕಿಯನ್ ಅರಬ್ ಕೊಲ್ಲಿ ದೇಶಗಳ ಕ್ಷಮೆಯಾಚಿಸಿದ್ದು, ಇನ್ನು ಮುಂದೆ ಈ ದೇಶಗಳಿಂದಲೇ ದಾಳಿಗಳಾಗದ ಹೊರತಾಗಿ ಅವುಗಳ ಮೇಲೆ ದಾಳಿ ನಡೆಸುವುದಿದಲ್ಲ ಎಂಬುದಾಗಿ ಹೇಳಿಕೆ ನೀಡಿದ್ದರು. ಆದರೆ ಇರಾನ್ ಅಧ್ಯಕ್ಷರ ಈ ಹೇಳಿಕೆ ವಾಸ್ತವದಲ್ಲಿ ಜಾರಿಯಾಗಿಲ್ಲ ಎಂಬುದಾಗಿ ಸೌದಿ ಅರೇಬಿಯಾದ ವಿದೇಶಾಂಗ ಸಚಿವಾಲಯ ಸೋಮವಾರ ಹೇಳಿದೆ. ಇರಾನ್ ಆಧಾರರಹಿತ ಆರೋಪಗಳ ಮೂಲಕ ಕೊಲ್ಲಿ ದೇಶಗಳ ಮೇಲೆ ದಾಳಿಗಳನ್ನು ಮುಂದುವರಿಸಿದೆ. ಯುದ್ಧ ವಿಮಾನಗಳು ಮತ್ತು ಯುದ್ಧದಲ್ಲಿ ತೊಡಗಿರುವ ಯುದ್ಧ ವಿಮಾನಗಳಿಗೆ ಮರುಇಂಧನ ತುಂಬುವಿಕೆಯಂತಹ ಇರಾನಿನ ಆರೋಪಗಳು ಸುಳ್ಳು ಮತ್ತು ಆಧಾರರಹಿತವಾದುದು ಎಂಬುದನ್ನು ಈ ಹಿಂದೆಯೇ ಸ್ಪಷ್ಟೀಕರಿಸಲಾಗಿದ್ದರೂ, ಇರಾನ್ ದಾಳಿಯನ್ನು ಮುಂದುವರಿಸಿದೆ ಎಂದು ಅದು ಕಿಡಿ ಕಾರಿದೆ.

ತನ್ನ ಯುದ್ಧ ವಿಮಾನಗಳ ಗಸ್ತು ತಿರುಗುವಿಕೆಯು ಆತ್ಮರಕ್ಷಣಾ ಉದ್ದೇಶದ್ದಾಗಿವೆ ಎಂದಿರುವ ಸೌದಿ ಅರೇಬಿಯಾ, ಇರಾನಿನ ದಾಳಿಗಳು ಮುಂದುವರಿದಿರುವುದು ಸಂಘರ್ಷವನ್ನು ಇನ್ನಷ್ಟು ಉಲ್ಬಣಿಸುವ ಕೃತ್ಯವಾಗಿದೆ. ಅಲ್ಲದೆ ಇದು ಈಗ ಮತ್ತು ಭವಿಷ್ಯದ ದ್ವಿಪಕ್ಷೀಯ ಸಂಬಂಧಗಳ ಮೇಲೆ ಗಂಭೀರ ಪರಿಣಾಮ ಬೀರಲಿದೆ ಎಂದು ಎಚ್ಚರಿಕೆ ನೀಡಿದೆ. ಇರಾನ್ ಈಗ ಕೊಲ್ಲಿ ದೇಶಗಳ ವಿರುದ್ಧ ಏನು ಕೃತ್ಯಗಳನ್ನು ಎಸಗುತ್ತಿದೆಯೋ ಅದು ಇರಾನಿಗೆ ಭಾರೀ ಹಾನಿಯನ್ನುಂಟು ಮಾಡಲಿದೆ ಎಂದೂ ಅದು ಹೇಳಿದೆ.

ಇರಾನ್ ಸೇನಾ ನೆಲೆಗಳ ಮೇಲೆ ಇಸ್ರೇಲ್ ದಾಳಿ

ಜೆರುಸಲೇಂ: ಇರಾನ್‌ನ ಟೆಹ್ರಾನ್, ಇಸ್ಫಹಾನ್ ಮತ್ತು ದಕ್ಷಿಣ ಭಾಗದ ಆಯಕಟ್ಟಿನ ಮಿಲಿಟರಿ ಮೂಲಸೌಕರ್ಯಗಳ ಮೇಲೆ ಸೋಮವಾರ ಇಸ್ರೇಲ್ ರಕ್ಷಣಾ ಪಡೆಗಳು (ಐಡಿಎಫ್) ವ್ಯಾಪಕ ವೈಮಾನಿಕ ದಾಳಿ ನಡೆಸಿವೆ. ಇಸ್ಲಾಮಿಕ್ ರೆವಲ್ಯೂಷನರಿ ಗಾರ್ಡ್ ಕಾರ್ಪ್ಸ್(ಐಆರ್‌ಜಿಸಿ)ನ ಕಮಾಂಡ್ ಕೇಂದ್ರಗಳು ಮತ್ತು ಇಸ್ಫಹಾನ್‌ನಲ್ಲಿರುವ ಕ್ಷಿಪಣಿ ಎಂಜಿನ್ ಉತ್ಪಾದನಾ ಘಟಕಗಳನ್ನು ಈ ಭಾರಿ ಬಾಂಬ್ ದಾಳಿಯ ಮೂಲಕ ಗುರಿಯಾಗಿಸಲಾಗಿದೆ. ಭಯೋತ್ಪಾದಕ ಆಡಳಿತದ ಮೂಲಸೌಕರ್ಯಗಳನ್ನು ಹತ್ತಿಕ್ಕಲು ಈ ಕಾರ್ಯಾಚರಣೆ ಅನಿವಾರ್ಯ ಎಂದು ಇಸ್ರೇಲ್ ಘೋಷಿಸಿದೆ. ತೈಲ ಡಿಪೋಗಳ ಮೇಲೆ ನಡೆದ ದಾಳಿಯಿಂದಾಗಿ ಇಡೀ ರಾಜಧಾನಿ ನಗರ ಕಪ್ಪು ಹೊಗೆಯಿಂದ ಆವೃತವಾಗಿದೆ ಎಂದು ವರದಿಯಾಗಿದೆ.

ಕಿರುಸುದ್ದಿ

ಹೋಳಿ ಹಬ್ಬ ಗಲಾಟೆ: ಏಳು ಆರೋಪಿಗಳ ಸೆರೆ

ಹೊಸದಿಲ್ಲಿ: ನೈಋತ್ಯ ದಿಲ್ಲಿಯ ಉತ್ತಮ್ ನಗರದಲ್ಲಿ ಹೋಳಿ ಹಬ್ಬದಂದು ಎರಡು ಕುಟುಂಬಗಳ ನಡುವಿನ ಗಲಾಟೆಯಲ್ಲಿ ಯುವಕನ ಹತ್ಯೆಗೆ ಸಂಬಂಧಿಸಿದಂತೆ ದಿಲ್ಲಿ ಪೊಲೀಸರು ಇನ್ನೂ ಏಳು ಆರೋಪಿಗಳನ್ನು ಬಂಧಿಸಿದ್ದಾರೆ. ಆ ಮೂಲಕ ಈ ಪ್ರಕರಣದಲ್ಲಿ ಬಂಧಿಸಲಾದ ಒಟ್ಟು ಆರೋಪಿಗಳ ಸಂಖ್ಯೆ 14ಕ್ಕೆ ಏರಿದೆ. ಇದರಲ್ಲಿ ಇಬ್ಬರು ಅಪ್ರಾಪ್ತರೂ ಇದ್ದಾರೆ.

ನ್ಯಾ. ಹೆರಾಲ್ಡ್ ಪ್ರಕರಣ: ಏಪ್ರಿಲ್‌ನಲ್ಲಿ ವಿಚಾರಣೆ

ಹೊಸದಿಲ್ಲಿ: ಗಾಂಧಿ ಕುಟುಂಬದ ವಿರುದ್ಧ ಜಾರಿ ನಿರ್ದೇಶನಾಲಯ(ಇಡಿ) ಸಲ್ಲಿಸಿರುವ ಮೇಲ್ಮನವಿಯ ವಿಚಾರಣೆಯನ್ನು ದಿಲ್ಲಿ ಹೈಕೋರ್ಟ್ ಸೋಮವಾರ ಏ.20ಕ್ಕೆ ನಿಗದಿಪಡಿಸಿದೆ. ನ್ಯಾಷನಲ್ ಹೆರಾಲ್ಡ್ ಅಕ್ರಮ ಹಣ ವರ್ಗಾವಣೆ ಪ್ರಕರಣದಲ್ಲಿ ತನ್ನ ಚಾರ್ಜ್‌ಶೀಟ್ ಮಾನ್ಯ ಮಾಡಲು ನಿರಾಕರಿಸಿದ ವಿಚಾರಣಾ ನ್ಯಾಯಾಲಯದ ಆದೇಶವನ್ನು ಇಡಿ ಪ್ರಶ್ನಿಸಿದೆ. ಇಡಿ ಪರ ವಕೀಲರು ಅಲ್ಪಾವಧಿಯನ್ನು ಕೋರಿದ ನಂತರ ನ್ಯಾಯಮೂರ್ತಿ ಸ್ವರ್ಣಕಾಂತ ಶರ್ಮಾ, ವಿಚಾರಣೆ ಮುಂದೂಡಿದರು. ಈ ಪ್ರಕರಣ, ಸುಮಾರು 2,000 ಕೋಟಿ ರೂ. ಮೌಲ್ಯದ ಆಸ್ತಿಯನ್ನು ಅಕ್ರಮವಾಗಿ ಸ್ವಾಧೀನಪಡಿಸಿಕೊಂಡಿರುವ ಮತ್ತು ಪಿತೂರಿ ನಡೆಸಿರುವ ಆರೋಪಗಳನ್ನು ಒಳಗೊಂಡಿದೆ.

ಸಂಸತ್ ಆವರಣದಲ್ಲಿ ವಿಪಕ್ಷಗಳ ಪ್ರತಿಭಟನೆ

ಹೊಸದಿಲ್ಲಿ: ಸಂಸತ್ ಆವರಣದಲ್ಲಿ ಮಧ್ಯಪ್ರಾಚ್ಯ ಸಂಘರ್ಷದ ಬಗ್ಗೆ ಕೇಂದ್ರ ಸರ್ಕಾರದ ಮೌನವನ್ನು ಪ್ರಶ್ನಿಸಿ ಮತ್ತು ಈ ಬಗ್ಗೆ ಸಂಸತ್‌ನಲ್ಲಿ ಸಂಪೂರ್ಣ ಚರ್ಚೆ ಮಾಡುವಂತೆ ಕಾಂಗ್ರೆಸ್ ರಾಷ್ಟ್ರಾಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ , ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಸೇರಿದಂತೆ ಇತರರು ಪ್ರತಿಭಟನೆ ನಡೆಸಿದ್ದಾರೆ. ಈ ಬಗ್ಗೆ ಎಕ್ಸ್ ಪೋಸ್ಟ್‌ವೊಂದರಲ್ಲಿ ಖರ್ಗೆ ಅವರು, ಬಜೆಟ್‌ನ ಅಧಿವೇಶನದ ದ್ವಿತೀಯಾರ್ಧದಲ್ಲಿ, ಮಧ್ಯಪ್ರಾಚ್ಯದ ಯುದ್ಧದ ಕುರಿತು ಸಂಪೂರ್ಣವಾಗಿ ಚರ್ಚಿಸಬೇಕು. ವಿದೇಶಾಂಗ ಸಚಿವ ಜೈಶಂಕರ್ ಅವರೊಬ್ಬರ ಹೇಳಿಕೆ ಪಡೆದರೆ ಸಾಲದು. ಜಾಗತಿಕ ವಿಚಾರದ ಬಗ್ಗೆ ಮತ್ತು ಇದರಿಂದ ಭಾರತಕ್ಕೆ ಆಗುವಂತಹ ಸಮಸ್ಯೆಯನ್ನು ಹೇಗೆ ಎದುರಿಸಬಹುದು ಎಂಬುದರ ಕುರಿತು ಚರ್ಚಿಸಬೇಕು. ಅಂತೆಯೇ ಸಾಗರೋತ್ತರ ವ್ಯವಹಾರ ಮತ್ತು ಇದರಿಂದಾಗುವ ಬೆಲೆ ಏರಿಕೆ ಬಗ್ಗೆ ಚರ್ಚಿಸಿ ದೇಶದ ಜನತೆಗೆ ಸಮಸ್ಯೆಯಾಗದಂತೆ ತಡೆಯಬೇಕು ಎಂದು ಹೇಳಿದ್ದಾರೆ.

ಮುಗಿಯದ ಬಂಗಾಳ ಎಸ್‌ಐಆರ್ ಸಂಘರ್ಷ

ಕೋಲ್ಕತ್ತಾ: ಪಶ್ಚಿಮ ಬಂಗಾಳದಲ್ಲಿ ಎಸ್‌ಐಆರ್ ಬಗ್ಗೆ ರಾಜಕೀಯ ಸಂಘರ್ಷ ದಿನೇ ದಿನೇ ಹೆಚ್ಚಾಗುತ್ತಿದೆ. ಈ ಬೆನ್ನಲ್ಲೇ ಸೋಮವಾರ ಪಕ್ಷಗಳು ಪ್ರತ್ಯೇಕವಾಗಿ ಚುನಾವಣಾ ಆಯೋಗವನ್ನು ಭೇಟಿಯಾದವು. ಕೋಲ್ಕತ್ತಾದ ನ್ಯೂ ಟೌನ್ ಹೋಟೆಲ್‌ನಲ್ಲಿ ನಡೆದ ಸಂವಾದದಲ್ಲಿ ಆಡಳಿತಾರೂಢ ತೃಣಮೂಲ ಕಾಂಗ್ರೆಸ್, ಬಿಜೆಪಿ, ಸಿಪಿಐ (ಎಂ), ಕಾಂಗ್ರೆಸ್ ಮತ್ತು ಇತರ ಪಕ್ಷಗಳ ನಿಯೋಗಗಳು ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ನೇತೃತ್ವದ ಆಯೋಗದ ಪೂರ್ಣ ಪೀಠವನ್ನು ಭೇಟಿ ಮಾಡಿ ತಮ್ಮ ಕಳವಳಗಳನ್ನು ತಿಳಿಸಿದೆ. ಮತದಾರರನ್ನು ಹೊರಗಿಡುವ ಮತ್ತು ಒಳನುಸುಳುವಿಕೆ ಮತ್ತು ಚುನಾವಣಾ ಸಮಗ್ರತೆಯ ಬಗ್ಗೆ ಪ್ರತಿ-ಹಕ್ಕುಗಳ ಆರೋಪಗಳನ್ನು ಹುಟ್ಟುಹಾಕಿರುವ ಎಸ್‌ಐಆರ್ ಪ್ರಕ್ರಿಯೆಯ ಬಗ್ಗೆ ಆಡಳಿತಾರೂಢ ಟಿಎಂಸಿ ಮತ್ತು ಬಿಜೆಪಿ ಮತ್ತು ಚುನಾವಣಾ ಆಯೋಗದ ನಡುವೆ ತೀವ್ರಗೊಳ್ಳುತ್ತಿರುವ ರಾಜಕೀಯ ಸಂಘರ್ಷದ ಮಧ್ಯೆ, ಈ ಸಮಾಲೋಚನೆಗಳು ನಡೆಯುತ್ತಿವೆ. ಆಯೋಗದೊಂದಿಗಿನ ಸಭೆಯಿಂದ ಹೊರಬಂದ ಟಿಎಂಸಿ, ಪರಿಷ್ಕರಣೆ ಪ್ರಕ್ರಿಯೆಯು ಸಾಮಾನ್ಯ ನಾಗರಿಕರ ಕಿರುಕುಳಕ್ಕೆ ಕಾರಣವಾಗಿದೆ ಎಂದು ಆರೋಪಿಸಿದೆ. ಸಂವಾದದ ಸಮಯದಲ್ಲಿ ತನ್ನ ಕಳವಳಗಳನ್ನು ಸಮರ್ಪಕವಾಗಿ ಆಲಿಸಲಾಗಿಲ್ಲ ಎಂದು ಹೇಳಿದೆ. ಕಳೆದ ಕೆಲವು ತಿಂಗಳಿನಿಂದ ಎಸ್‌ಐಆರ್ ಪ್ರಕ್ರಿಯೆಯು ರಾಜ್ಯದ ಅತ್ಯಂತ ವಿವಾದಾತ್ಮಕ ರಾಜಕೀಯ ವಿಷಯಗಳಲ್ಲಿ ಒಂದಾಗಿದ್ದು, ಈ ಪರಿಷ್ಕರಣೆಯು ಮತದಾರ ಪಟ್ಟಿಯಿಂದ ರಾಜ್ಯದ ಮತದಾರರನ್ನು ತೆಗೆದುಹಾಕುವ ಗುರಿಯನ್ನು ಹೊಂದಿದೆ ಎಂದು ಟಿಎಂಸಿ ಆರೋಪಿಸಿದ್ದು, ಈ ಆರೋಪವನ್ನು ಚುನಾವಣಾ ಆಯೋಗ ತಿರಸ್ಕರಿಸಿದೆ.

ವಿಪಕ್ಷ ಗದ್ದಲ: ನಡೆಯದ ಬಿರ್ಲಾ ಪದಚ್ಯುತಿ ಚರ್ಚೆ

ಹೊಸದಿಲ್ಲಿ: ವಿಪಕ್ಷೀಯರು ಮಧ್ಯಪ್ರಾಚ್ಯ ಸನ್ನಿವೇಶ ಬಗ್ಗೆ ಚರ್ಚೆಗೆ ಪಟ್ಟು ಹಿಡಿದು ಕೋಲಾಹಲ ನಡೆಸಿದ್ದರಿಂದ, ಸೋಮವಾರ ಸದನ ಹಲವು ಬಾರಿ ಮುಂದೂಡಲ್ಪಟ್ಟಿತಲ್ಲದೆ, ಲೋಕಸಭಾ ಸಭಾಪತಿ ಓಂ ಬಿರ್ಲಾ ಅವರ ಪದಚ್ಯುತಿಗೆ ಆಗ್ರಹಿಸುವ ನಿರ್ಣಯವನ್ನು ಚರ್ಚೆಗೆತ್ತಿಕೊಳ್ಳಲು ಸದನಕ್ಕೆ ಸಾಧ್ಯವಾಗಲಿಲ್ಲ.

ವಿಪಕ್ಷೀಯರು ತಮ್ಮ ಬೇಡಿಕೆಗಳಿಗಾಗಿ ಸದನದ ಕಲಾಪಗಳನ್ನು ಒತ್ತೆಸೆರೆಯಲ್ಲಿಡುತ್ತಿದ್ದಾರೆ ಎಂದು ಸರಕಾರ ಹಾಗೂ ಸಭಾಪತಿ ಪೀಠದಲ್ಲಿದ್ದ ಕಲಾಪಗಳ ಅಧ್ಯಕ್ಷರು ವಿಪಕ್ಷಗಳನ್ನು ತರಾಟೆಗೆತ್ತಿಕೊಂಡ ಬೆಳವಣಿಗೆಯೂ ನಡೆದಿದೆ. ವಿಪಕ್ಷೀಯರ ನಿರಂತರ ಪ್ರತಿಭಟನೆಗಳಿಂದಾಗಿ ಬೆಳಗ್ಗಿನಿಂದಲೇ ಮುಂದೂಡಲ್ಪಟ್ಟಿದ್ದ ಸದನ ಮಧ್ಯಾಹ್ನ 3ಗಂಟೆಗೆ ಮತ್ತೆ ಸೇರಿದಾಗ, ವಿಪಕ್ಷೀಯರು ಮತ್ತೆ ಘೋಷಣೆ ಕೂಗತೊಡಗಿದರು. ಸಭಾಪತಿಗಳ ಆಸನದಲ್ಲಿದ್ದು ಕಲಾಪಗಳ ನಿರ್ವಹಿಸುತ್ತಿದ್ದ ಜಗದಂಬಿಕ ಪಾಲ್, ಸಭ್ಯತೆ ಎತ್ತಿಹಿಡಿದು, ಸದನವು ಬಿರ್ಲಾ ವಿರುದ್ಧ ನಿರ್ಣಯ ಅಂಗೀಕರಿಸಲು ಅವಕಾಶ ಕೊಡಿ ಎಂದು ವಿಪಕ್ಷೀಯರನ್ನು ಒತ್ತಾಯಿಸಿದ್ದರು. ಸ್ಪೀಕರ್ ವಿರುದ್ಧದ ಅವಿಶ್ವಾಸ ನಿರ್ಣಯ ಸದನದ ಕಲಾಪ ಪಟ್ಟಿಯಲ್ಲಿದೆ. ಹಾಗಾಗಿ ಪ.ಏಷ್ಯಾ ಬಿಕ್ಕಟ್ಟಿನ ಕುರಿತ ನಿಮ್ಮ ನಿಲುವಳಿ ಗೊತ್ತುವಳಿಯನ್ನು ಚರ್ಚೆಗೆ ಎತ್ತಿಕೊಳ್ಳಲಾಗದು ಎಂದು ಪಾಲ್ ವಿಪಕ್ಷೀಯರಿಗೆ ಮನವರಿಕೆ ಮಾಡಿದ್ದರು.

ವಿಪಕ್ಷೀಯರು ಕಿವಿಗೊಡದಿದ್ದಾಗ, ವಿಪಕ್ಷೀಯರು ತಮ್ಮ ಬೇಡಿಕೆಗಳಿಗಾಗಿ ಸದನದ ಕಲಾಪಗಳನ್ನು ಒತ್ತೆಸೆರೆ ಮಾಡೋ ಮುಖೇನ, ನಿತ್ಯ ತೆರಿಗೆ ಪಾವತಿದಾರರ 9 ಕೋಟಿ ರೂ. ಹಣವನ್ನು ಅಪವ್ಯಯ ಮಾಡುತ್ತಿದ್ದಾರೆ. ವಿಪಕ್ಷೀಯರ ನಡವಳಿಕೆ ತೀರಾ ಅಪ್ರಬುದ್ಧ ಮತ್ತು ಬೇಜವಾಬ್ದಾರಿಯದ್ದಾಗಿದೆ ಎಂದು ಅಧ್ಯಕ್ಷರು ಆರೋಪಿಸಿದರು.

ಜೈಶಂಕರ್ ಹೇಳಿಕೆ ವೇಳೆ ವಿಪಕ್ಷ ಸಭಾತ್ಯಾಗಕ್ಕೆ ಕಿಡಿ

ಹೊಸದಿಲ್ಲಿ: ಪಶ್ಚಿಮ ಏಷ್ಯಾ ಸಂಘರ್ಷದ ಕುರಿತು ವಿದೇಶಾಂಗ ಸಚಿವ ಎಸ್. ಜೈಶಂಕರ್ ಹೇಳಿಕೆ ನೀಡುತ್ತಿದ್ದಾಗ ಸಭಾತ್ಯಾಗ ಮಾಡಿದ ಪ್ರತಿಪಕ್ಷಗಳ ನಡವಳಿಕೆಯನ್ನು ಕೇಂದ್ರ ಸಚಿವ ಜೆ.ಪಿ. ನಡ್ಡಾ ಸೋಮವಾರ ತೀವ್ರವಾಗಿ ಖಂಡಿಸಿದ್ದಾರೆ. ಪ್ರತಿಪಕ್ಷಗಳು ಅರಾಜಕತೆ ಸೃಷ್ಟಿಸುತ್ತಿವೆ ಎಂದು ಅವರು ಆರೋಪಿಸಿದ್ದಾರೆ.

ಸಚಿವರ ಅಧಿಕೃತ ಹೇಳಿಕೆಗೂ ಮುನ್ನ ಪೂರ್ಣ ಪ್ರಮಾಣದ ಚರ್ಚೆ ನಡೆಸಬೇಕು ಎಂದು ಪ್ರತಿಪಕ್ಷದ ನಾಯಕ ಮಲ್ಲಿಕಾರ್ಜುನ



ಖರ್ಗೆ ಒತ್ತಾಯಿಸಿದಾಗ ಕಲಾಪಕ್ಕೆ ಅಡ್ಡಿ ಉಂಟಾಯಿತು. ಗಲ್ಫ್ ರಾಷ್ಟ್ರಗಳಲ್ಲಿರುವ ಒಂದು ಕೋಟಿ ಭಾರತೀಯ ಕಾರ್ಮಿಕರ ಸುರಕ್ಷತೆ ಮತ್ತು 51 ಬಿಲಿಯನ್ ಡಾಲರ್ ಮೊತ್ತದ ವಿದೇಶಿ ಹಣದ ಒಳಹರಿವಿನ ಮೇಲೆ ಉಂಟಾಗಬಹುದಾದ ಪರಿಣಾಮಗಳ ಬಗ್ಗೆ ಖರ್ಗೆ ಆತಂಕ ವ್ಯಕ್ತಪಡಿಸಿದರು. ಈ ನಡುವೆ, ವರದಿ ನೀಡುವಂತೆ ಸಭಾಪತಿ ವಿದೇಶಾಂಗ ಸಚಿವರಿಗೆ ಸೂಚಿಸಿದರು.

ಕಾಂಗ್ರೆಸ್ ಮತ್ತು ಇತರ ಪ್ರತಿಪಕ್ಷಗಳ ಸಂಸದರು ಘೋಷಣೆಗಳನ್ನು ಕೂಗುತ್ತಾ ಸಾಮೂಹಿಕವಾಗಿ ಸಭಾತ್ಯಾಗ ಮಾಡಿದರು. ಇದೊಂದು ಬೇಜವಾಬ್ದಾರಿ ಮತ್ತು ಖಂಡನೀಯ ನಡವಳಿಕೆ ಎಂದು ಜೆ.ಪಿ. ನಡ್ಡಾ ಬಣ್ಣಿಸಿದ್ದಾರೆ. ರಾಷ್ಟ್ರೀಯ ಭದ್ರತೆಯ ಬಗ್ಗೆ ಚರ್ಚಿಸುವ ಬದಲು ಗದ್ದಲ ಸೃಷ್ಟಿಸುವುದೇ ಪ್ರತಿಪಕ್ಷಗಳ ಏಕೈಕ ಗುರಿಯಾಗಿದೆ, ಎಂದು ಅವರು ಪ್ರತಿಪಾದಿಸಿದರು. ಬಜೆಟ್ ಮತ್ತು ವಕ್ಫ್ ಮಸೂದೆಯಂತಹ ನಿರ್ಣಾಯಕ ಚರ್ಚೆಗಳ ಸಂದರ್ಭದಲ್ಲೂ ಪ್ರತಿಪಕ್ಷಗಳು ಇದೇ ರೀತಿ ಸಭಾತ್ಯಾಗ ಮಾಡಿದ್ದನ್ನು ಅವರು ನೆನಪಿಸಿದರು.

ಸಿಇಸಿ ಪದಚ್ಯುತಿ ನಿರ್ಣಯಕ್ಕಾಗಿ ವಿಪಕ್ಷಗಳ ಸಜ್ಜು

ಹೊಸದಿಲ್ಲಿ: ಅನಿರೀಕ್ಷಿತ ಬೆಳವಣಿಗೆಯೊಂದರಲ್ಲಿ ಮುಖ್ಯ ಚುನಾವಣಾ ಆಯುಕ್ತ(ಸಿಇಸಿ) ಜ್ಞಾನೇಶ್ ಕುಮಾರ್ ಅವರನ್ನು ಪದಚ್ಯುತಗೊಳಿಸಲು ಪ್ರತಿಪಕ್ಷಗಳು ಅಧಿಕೃತ ನೋಟಿಸ್ ಸಲ್ಲಿಸಲು ಸಿದ್ಧತೆ ನಡೆಸಿವೆ. ಈ ವಾರವೇ ಈ ಕರಡು ಪ್ರತಿಯನ್ನು ಸಲ್ಲಿಸುವ ಸಾಧ್ಯತೆಯಿದೆ ಎಂದು ಮೂಲಗಳು ತಿಳಿಸಿವೆ. ತೃಣಮೂಲ ಕಾಂಗ್ರೆಸ್ ನಾಯಕರು ಈ ಕ್ರಮವನ್ನು ಎಲ್ಲಾ ಸಮಾನ ಮನಸ್ಕ ಪಕ್ಷಗಳ ಸಾಮೂಹಿಕ ತಂಡದ ಪ್ರಯತ್ನ ಎಂದು ಬಣ್ಣಿಸಿದ್ದಾರೆ. ಕಾಂಗ್ರೆಸ್ ಮತ್ತು ಇಂಡಿ ಒಕ್ಕೂಟದ ಇತರ ಸದಸ್ಯರು ಇದಕ್ಕೆ ಬೆಂಬಲ ಸೂಚಿಸಿದ್ದಾರೆ. ಲೋಕಸಭೆಯ 100 ಮತ್ತು ರಾಜ್ಯಸಭೆಯ 50 ಸಂಸದರ ಸಹಿಗಳನ್ನು ಸಂಗ್ರಹಿಸಲಾಗುತ್ತಿದೆ. ನಿಯಮದ ಪ್ರಕಾರ, ಸಾಬೀತಾದ ದುರ್ನಡತೆ ಅಥವಾ ಅಸಮರ್ಥತೆಯ ಆಧಾರದ ಮೇಲೆ, ಸಂಸತ್ತಿನ ವಿಶೇಷ ಬಹುಮತದ ಮೂಲಕ ಮಾತ್ರ ಸಿಇಸಿ ಅವರನ್ನು ಪದಚ್ಯುತಗೊಳಿಸಲು ಸಾಧ್ಯವಿದೆ.

ಎಐ, ಆಟೊಮೇಷನ್, ಡಿಜಿಟಲ್ ಆರ್ಥಿಕತೆಗೆ ಹೊಂದುವ ಪಠ್ಯಕ್ರಮ ಅಗತ್ಯ

ವಾಸ್ತವಿಕ ಆರ್ಥಿಕತೆಗೆ ಶಿಕ್ಷಣ ಜೋಡಣೆಯಾಗಲಿ

ಪೋಸ್ಟ್ ಬಜೆಟ್ ವೆಬಿನಾರ್‌ನಲ್ಲಿ ಪ್ರಧಾನಿ ಮೋದಿ ಅಭಿಪ್ರಾಯ

ಹೊಸದಿಲ್ಲಿ: ದೇಶದ ಶಿಕ್ಷಣ ವ್ಯವಸ್ಥೆಯನ್ನು ವಾಸ್ತವಿಕ ಆರ್ಥಿಕತೆ, ಉದ್ಯೋಗ ಹಾಗೂ ಉದ್ಯಮಶೀಲತೆಯೊಂದಿಗೆ ಜೋಡಿಸುವ ಪ್ರಕ್ರಿಯೆಯನ್ನು ವೇಗಗೊಳಿಸುವ ಅಗತ್ಯವಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದರು.

ಸೋಮವಾರ ನಡೆದ ಪೋಸ್ಟ್-ಬಜೆಟ್ ವೆಬಿನಾರ್‌ನಲ್ಲಿ



ಮಾತನಾಡಿದ ಅವರು, ಜನರ ಆಶಯಗಳನ್ನು ಈಡೇರಿಸುವುದು ಸರ್ಕಾರದ ಮೂಲ ಗುರಿಯಾಗಿದ್ದು, ಶಿಕ್ಷಣ, ಕೌಶಲ್ಯಾಭಿವೃದ್ಧಿ, ಆರೋಗ್ಯ, ಪ್ರವಾಸೋದ್ಯಮ, ಕ್ರೀಡೆ ಮತ್ತು ಸಂಸ್ಕೃತಿ ಕ್ಷೇತ್ರಗಳು ಈ ಗುರಿ ಸಾಧನೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ ಎಂದರು.

ದೇಶದಲ್ಲಿ ಶಿಕ್ಷಣವನ್ನು ಉದ್ಯೋಗ ಮತ್ತು ಉದ್ಯಮಶೀಲತೆಗೆ ಸಂಪರ್ಕಿಸುವ ನಿರಂತರ ಪ್ರಯತ್ನಗಳು ನಡೆಯುತ್ತಿವೆ. ರಾಷ್ಟ್ರೀಯ ಶಿಕ್ಷಣ ನೀತಿ(ಎನ್‌ಇಪಿ) ಮಾರುಕಟ್ಟೆಯ ಅಗತ್ಯತೆಗಳಿಗೆ ಹೊಂದುವ ಪಠ್ಯಕ್ರಮ ರೂಪಿಸಲು ಭದ್ರ ನೆಲೆ ಒದಗಿಸಿದೆ. ವಿಶೇಷವಾಗಿ ಕೃತಕ ಬುದ್ಧಿಮತ್ತೆ(ಎಐ), ಆಟೊಮೇಷನ್ ಮತ್ತು ಡಿಜಿಟಲ್ ಆರ್ಥಿಕತೆ ಕ್ಷೇತ್ರಗಳಿಗೆ ಶಿಕ್ಷಣ ವ್ಯವಸ್ಥೆ ಹೊಂದಿಕೊಳ್ಳಬೇಕು ಎಂದು ಪ್ರಧಾನಿ ತಿಳಿಸಿದರು.

ಭಾರತವು ನಾವೀನ್ಯತೆ ಆಧಾರಿತ ಆರ್ಥಿಕತೆಯತ್ತ ಸಾಗುತ್ತಿದೆ ಎಂದು ಹೇಳಿದ ಅವರು, ಶಿಕ್ಷಣ ಸಂಸ್ಥೆಗಳು ತಮ್ಮ ಕ್ಯಾಂಪಸ್‌ಗಳನ್ನು ಉದ್ಯಮ ಸಹಕಾರ ಮತ್ತು ಸಂಶೋಧನೆ ಆಧಾರಿತ ಕಲಿಕೆಯ ಕೇಂದ್ರಗಳಾಗಿ ರೂಪಿಸಬೇಕೆಂದು ಕರೆ ನೀಡಿದರು. ಯುವ ಸಂಶೋಧಕರು ಹೊಸ ಆಲೋಚನೆಗಳ ಮೇಲೆ ನಿರ್ಬಂಧವಿಲ್ಲದೆ ಪ್ರಯೋಗ ಮಾಡಲು ಅವಕಾಶ ದೊರೆಯುವಂತೆ ಬಲವಾದ ಸಂಶೋಧನಾ ವಾತಾವರಣ ನಿರ್ಮಿಸಬೇಕು ಎಂದರು.

ವಿಜ್ಞಾನ, ತಂತ್ರಜ್ಞಾನ, ಇಂಜಿನಿಯರಿಂಗ್ ಮತ್ತು ಗಣಿತ ಕ್ಷೇತ್ರಗಳಲ್ಲಿ ದೇಶದ ಯುವತಿಯರು ಹೆಚ್ಚಾಗಿ ಆಸಕ್ತಿ ತೋರಿಸುತ್ತಿರುವುದು ಸಂತೋಷಕರ ಬೆಳವಣಿಗೆ ಎಂದು ಮೋದಿ ಹೇಳಿದರು.

ಭವಿಷ್ಯದ ತಂತ್ರಜ್ಞಾನ ಕ್ಷೇತ್ರಗಳಲ್ಲಿ ಅವಕಾಶಗಳ ಕೊರತೆಯಿಂದ ಯಾವ ಹುಡುಗಿಯೂ ಹಿಂದೆ ಬೀಳದಂತೆ ನೋಡಿಕೊಳ್ಳಬೇಕು ಎಂದು ಅವರು ಒತ್ತಿಹೇಳಿದರು.

ಆರೋಗ್ಯ ಕ್ಷೇತ್ರದಲ್ಲಿ ಆಯುಷ್ಮಾನ್ ಭಾರತ ಯೋಜನೆ ಹಾಗೂ ಆರೋಗ್ಯ ಮಂದಿರಗಳು ಗ್ರಾಮೀಣ ಪ್ರದೇಶಗಳಿಗೂ ಆರೋಗ್ಯ ಸೇವೆಗಳನ್ನು ತಲುಪಿಸುವಲ್ಲಿ ಮಹತ್ತರ ಪಾತ್ರ ವಹಿಸಿವೆ ಎಂದು ಪ್ರಧಾನಿ ಹೇಳಿದರು. ಹಿರಿಯ ನಾಗರಿಕರ ಸಂಖ್ಯೆ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಕೇರ್ ಎಕಾನಮಿಗೆ ಸಂಬಂಧಿಸಿದ ತರಬೇತಿ ಮಾದರಿಗಳನ್ನು ಅಭಿವೃದ್ಧಿಪಡಿಸುವ ಅಗತ್ಯವಿದೆ ಎಂದರು.

ಮುಖ್ಯಾಂಶಗಳು

- ಶಿಕ್ಷಣವನ್ನು ಉದ್ಯೋಗ ಮತ್ತು ಉದ್ಯಮಶೀಲತೆಗೆ ಜೋಡಿಸುವ ಪ್ರಕ್ರಿಯೆ ವೇಗಗೊಳಿಸಲು ಕರೆ
- ಶಿಕ್ಷಣ ಸಂಸ್ಥೆಗಳು ಉದ್ಯಮ ಸಹಕಾರ ಮತ್ತು ಸಂಶೋಧನಾ ಕೇಂದ್ರಗಳಾಗಬೇಕು
- ಆಯುಷ್ಮಾನ್ ಭಾರತ, ಖೇಲೋ ಇಂಡಿಯಾ ಯೋಜನೆಗಳ ಸಾಧನೆ ಉಲ್ಲೇಖ

ಮುಂದಿನ ಪಿಎಂ ಷಾಗೆ ಮೋದಿ ಶುಭಾಶಯ

ಭಾರತ-ನೇಪಾಳ ನಡುವಿನ ಸಂಬಂಧಕ್ಕೆ ಹೊಸ ಅಧ್ಯಾಯ

ಕಠ್ಮಂಡು: ನೇಪಾಳದ ಬಹುನಿರೀಕ್ಷಿತ ಸಾರ್ವತ್ರಿಕ ಚುನಾವಣೆಯ ಫಲಿತಾಂಶ ಹೊರಬಂದಿದ್ದು, ಹೊಸ ಪಕ್ಷವೊಂದು ದಾಖಲೆಯ ಗೆಲುವು ಸಾಧಿಸಿದೆ. ಈ ಗೆಲುವು ಭಾರತ ಮತ್ತು ನೇಪಾಳ ನಡುವಿನ ಸಂಬಂಧದಲ್ಲಿ ಹೊಸ ಅಧ್ಯಾಯವನ್ನು ತೆರೆಯುವ ನಿರೀಕ್ಷೆ ಇದೆ. ಇತ್ತೀಚಿನ ವರ್ಷಗಳಲ್ಲಿ ಉಂಟಾಗಿರುವ ಉದ್ವಿಗ್ನತೆಯನ್ನು ಕಡಿಮೆ ಮಾಡಲು ಇದು ಸಹಾಯ ಮಾಡುತ್ತದೆ ಎಂದು ಅನೇಕ ತಜ್ಞರು ಭರವಸೆ ವ್ಯಕ್ತಪಡಿಸಿದ್ದಾರೆ. ಇದರ ಜತೆಗೆ ಭಾರತ ಮತ್ತು ಚೀನಾ ನಡುವಿನ ತಮ್ಮ ನಂಟನ್ನು ಸರಿದೂಗಿಸಿಕೊಂಡು ಹೋಗಲು ನಿರ್ಧರಿಸಿದಂತಿದೆ.

ನಮಗೇಕೆ ಮುಖ್ಯ?: ನೇಪಾಳದಲ್ಲಿ ರಾಜಕೀಯ ಅಧಿಕಾರವು ಬದಲಾದಾಗಲೆಲ್ಲಾ, ಅದರ ಸುತ್ತ ಮುತ್ತಲಿನ ದೇಶಗಳು ಗಮನ ಹರಿಸುತ್ತವೆ. ಕಾರಣ ಸರಳವಾಗಿದೆ. ನೇಪಾಳವು ಭಾರತ ಮತ್ತು ಚೀನಾ ಎಂಬ ಎರಡು ಪ್ರಮುಖ ಶಕ್ತಿಗಳ ನಡುವೆ ನೆಲೆಗೊಂಡಿದೆ.

ನೂತನ ಪಕ್ಷಕ್ಕೆ ಭಾರೀ ಗೆಲುವು: ರಾಷ್ಟ್ರೀಯ ಸ್ವತಂತ್ರ ಪಕ್ಷವು (ಆರ್‌ಎಸ್‌ಪಿ) ನೇರ ಮತದಾನದ ಮೂಲಕ 124 ಸ್ಥಾನಗಳನ್ನು ಗಳಿಸಿದ್ದು, ಸೋಮವಾರ ನೇಪಾಳದ ಸಂಸದೀಯ ಚುನಾವಣೆಗಳಲ್ಲಿ 3ನೇ ಎರಡರಷ್ಟು ಬಹುಮತಕ್ಕೆ ಹತ್ತಿರವಾಗಿದೆ. ಈ ಮೂಲಕ ಪ್ರಧಾನಿ ಅಭ್ಯರ್ಥಿ ಬಲೇನ್ ಷಾ ಇತಿಹಾಸ ಬರೆಯಲಿದ್ದಾರೆ.

IN THE COURT OF THE ASSISTANT COMMISSIONER AT TUMAKURU
RA/KUN/1026/2022

APPELLANT : Byrashetty -V/s-
RESPONDENTS: The Tahsildar, Kunigal Taluk and others.

To, **R-2 Narayanashetty**, S/o Venkaiah @ Venkatappa @ Motaiah Shetty, aged about 72 years. **R-3 Lalithama**, W/o Lakshminarayana, **R4 K.C. Narayanshetty**, S/o Late K.T. Channaiah, **R-5 K.C.Thimmaiah**, S/o Late K.T. Channaiah, **R-6 Radha,** W/o K.C. Thimmaiah, **R-7 K.C. Ramachandraiah** S/o Late K.C. Channaiah, **R-8 Shakunthala**, W/o K.C. Ramachandra, R/at Hosapete Village, Huliyurudurga Hobli, Kunigal Taluk, Tumkur Dist.

NOTICE

The appellants preferred the above appeal against the respondents on the file of the Hon'ble Assistant Commissioner, Tumakuru Sub-Division, Tumakuru in RA/KUN/1026/2022 for set aside the M.R. order passed by the 1st respondent in MR H47/2013-14 dated: 18/01/2014 pertaining to land bearing Sy. No. 320 measuring 0-19.00 guntas jatha measuring 0-16.00 guntas, situated at Hasigehobli Village, Huliyurudurga Hobli, Kunigal Taluk. You are respondent No.2 to 8 in the above Appeal. Hence your appearance is required in person or through pleader on **13/03/2026** at Kunigal before the Hon'ble Assistant Commissioner, Tumakuru Sub-Division, Tumakuru, to defend the case and in default of your appearance on the day specified, the case will be heard by placing you ex-parte.

Given under my hand the seal of the court on this 09/03/2026

By order of the Court, Assistant Commissioner at Tumakuru

M.B. NAVEEN KUMAR, Advocate
Sadashivanagara Tumakuru.

PUBLIC NOTICE

IT IS HEREBY INFORMED TO THE GENERAL PUBLIC that My Clients **Mrs. PUSHPA G.N** W/o. Shivananda Murthy. and Mrs. Aishwarya, D/o. Shivananda Murthy. Residing at No.19, 'KANASU', SMR. Township, Near Banjara layout, Kalkere, Bangalore- 560043, are the absolute owners in possession and enjoyment of [01]- All that part and parcel of the residential house premises bearing door No. 19, 'KANASU', SMR. Township, Near Banjara layout, Kalkere, Bangalore- 560043, and [02]- All that part and parcel of the agricultural land bearing Sy. No. 4/6, 4/7, 4/8, 4/9, and 4/10 measuring 1.17 acre, 0.21 gunta, 08 guntas, 34 guntas, and 17 guntas respectively, situated at Virupakshipura, Gubbi taluk, Nittoor hobli, in Tumkur district. It is further informed and warned the General public that any transactions or investments, loans done in the past, doing at present, or to be done in the future by and with one Ranjith, Residing at : # 2, 7th B cross road, Yelahanka satellite town, Yelahanka, Bangalore-560064 or with his persons shall be NULL AND VOID and such documents are at their own risks and consequences. and SHALL NOT BE BINDING ON MY CLIENTS. Because the said Ranjith and his persons are trying to make fake mannuel documents regarding the above properties to dispose in favour of third parties without the knowledge of my clients. My client lost the Original R.C, Signed but unfilled 29, 30 forms of i20 sportz, 1.2 Kappa IVT, car along with Voter ID, Aadhaar & PAN cards on 11-12th of February 2026, If any such transactions of above car or properties found anywhere, my clients are not responsible and binding. It is hereby requested that, those may be please contact and inform to the below mentioned mobile Number.

Mrs. AISHWARYA
Mob: 9008114029

ಮಾನ್ಯ 2ನೇ ಅಪರ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು

ಕ್ರಿ.ಮಿಸ್. ನಂ. 170/2026

ಅರ್ಜಿದಾರರು : **1) ಹೆಚ್. ರಾಯಪ್ಪ** ಬಿನ್. ಲೇಟ್ ಹೃದಯರಾಜ್, ಮತ್ತು ಲೇಟ್ ಫಿಲೋಮಿನಾ ವಯಸ್ಸು : 56 ವರ್ಷ **2) ರಾಜಮ್ಮ**, ಕೋಂ. ಲೇಟ್ ಆಂತೋಣಿಸ್ವಾಮಿ ವಯಸ್ಸು : 78 ವರ್ಷ, **3) ಜೋಸ್ ಪೀಸ್**, ಕೋಂ. ಲೇಟ್ ಸಗಾಯರಾಜ್, ವಯಸ್ಸು : 46 ವರ್ಷ, **4) ಪ್ರಸಿಲ್ಲಾ**, ಬಿನ್. ಲೇಟ್ ಅಂತೋಣಿ ಸ್ವಾಮಿ, ವಯಸ್ಸು : 54 ವರ್ಷ, **5) ಇರುದಯಮೇರಿ** ಬಿನ್ ಲೇಟ್ ಆಂತೋಣಿ ಸ್ವಾಮಿ, ವಯಸ್ಸು : 52 ವರ್ಷ, **6) ಉತ್ತರಿಮೇರಿ** ಬಿನ್ ಲೇಟ್ ಆಂತೋಣಿ ಸ್ವಾಮಿ, ವಯಸ್ಸು : 48 ವರ್ಷ, **7) ಅಂತೋಣಿ ಮೇರಿ,** ಬಿನ್. ಲೇಟ್ ಜಾಕೋಬ್, ವಯಸ್ಸು : 46 ವರ್ಷ, **8) ಕಾರ್ಮೇಲ್‌ರಾಣಿ**, ಬಿನ್. ಲೇಟ್ ಜಾಕೋಬ್, ವಯಸ್ಸು : 39 ವರ್ಷ, **9) ಸಗಾಯ ರಾಜ್** ಬಿನ್. ಲೇಟ್ ಹೃದಯರಾಜ್, ವಯಸ್ಸು : 59 ವರ್ಷ, **10) ಶಾಂತರಾಜ್** ಬಿನ್. ಲೇಟ್ ಮೋಸೆಸ್ ವಯಸ್ಸು : 50 ವರ್ಷ, **11) ಅಂತೋಣಿ,** ಬಿನ್. ಲೇಟ್ ಮೋಸೆಸ್ ವಯಸ್ಸು : 48 ವರ್ಷ, **12) ಪೀಟರ್** ಬಿನ್. ಲೇಟ್ ಮೋಸೆಸ್, ವಯಸ್ಸು : 46 ವರ್ಷ, **13) ಪೌಲ್** ಬಿನ್. ಲೇಟ್ ಮೋಸೆಸ್ ವಯಸ್ಸು : 45 ವರ್ಷ, **14) ಮರೀನಾ** ಬಿನ್. ಲೇಟ್ ಮೋಸೆಸ್ ವಯಸ್ಸು : 43 ವರ್ಷ, **15) ತೋಮಾಸ್** ಬಿನ್. ಲೇಟ್ ಮೋಸೆಸ್ ವಯಸ್ಸು : 42 ವರ್ಷ **16) ಜಾಯ್ ಸಿಲ್ಲೀಸಿಯಾ** ಬಿನ್. ಲೇಟ್ ಫಿಲಿಫ್ ವಯಸ್ಸು : 47 ವರ್ಷ, **17) ಆಂತೋಣಿ ಮೇರಿ** ಬಿನ್. ಲೇಟ್ ಫಿಲಿಫ್ ವಯಸ್ಸು : 42 ವರ್ಷ **18) ಅಮಲ ಮೇರಿ** ಬಿನ್. ಲೇಟ್ ಫಿಲಿಪ್ ವಯಸ್ಸು 39 ವರ್ಷ, **19) ವಿನ್ಸೆಂಟ್**, ಬಿನ್. ಲೇಟ್ ರಾಯಪ್ಪ, ವಯಸ್ಸು 73 ವರ್ಷ, ಎಲ್ಲರ ವಾಸ : ಸಿಲುವೆಪುರ ಗ್ರಾಮ ಚಿಕ್ಕಬಾಣಾವರ ಅಂಚೆ, ಹೆಸರಘಟ್ಟ ಹೋಬಳಿ, ಯಲಹಂಕ ತಾಲ್ಲೂಕು, ಬೆಂಗಳೂರು ಉತ್ತರ, ಬೆಂಗಳೂರು-560090.
ಇವರನ್ನು ಪ್ರತಿನಿಧಿಸುವವರು ಜಿ.ಪಿ.ಎ. ಹೋಲ್ಡರ್ ಕ್ರಮ ಸಂಖ್ಯೆ : 2 ರಿಂದ 19 ರವರೆಗೆ ಶ್ರೀ. ಹೆಚ್ ರಾಯಪ್ಪ
-ವಿರುದ್ಧ - ಪ್ರತಿವಾದಿ : ಮಾನ್ಯ ತಹಶೀಲ್ದಾರ್ ಜನನ ಮತ್ತು ಮರಣ ನೋಂದಣಿ ಇಲಾಖೆ, ಕೆ.ಜಿ. ರಸ್ತೆ, ಬೆಂಗಳೂರು-560 009.

ಸಾರ್ವಜನಿಕ ಪ್ರಕಟಣೆ

ಈ ಮೇಲ್ಕಂಡ ಅರ್ಜಿದಾರರಿಗೆ ಅಜ್ಜಿಯಾದ ಮೃತ **ಆರೋಗ್ಯಮ್ಮ ಕೋಂ. ಲೇಟ್ ರಾಯಪ್ಪ ರವರು ದಿನಾಂಕ : 18/09/2002** ರಂದು ತಟ್ಟಗುಪ್ಪೆ ಗ್ರಾಮ, ಬೆಂಗಳೂರು ದಕ್ಷಿಣ, ಬೆಂಗಳೂರು ನಗರ ರಲ್ಲಿ ಮೃತಪಟ್ಟಿರುತ್ತಾರೆ.
ಸದರಿ ಮೃತರ ಮರಣ ದಿನಾಂಕವನ್ನು ನೋಂದಣಿ ಮಾಡಿಸಿಕೊಂಡ ಮರಣ ಪ್ರಮಾಣ ಪತ್ರ ಪಡೆಯಲು ಸದರಿ ನ್ಯಾಯಾಲಯದಲ್ಲಿ ಪ್ರಕರಣ ಹೂಡಿದ್ದು, ಇದಕ್ಕೆ ಹಿತಾಸಕ್ತಿದಾರರು ಯಾರಾದರೂ ಇದ್ದಲ್ಲಿ ತಮ್ಮ ಆಕ್ಷೇಪಣೆಯನ್ನು ಸಲ್ಲಿಸಲು ಇಚ್ಛಿಸಿದಲ್ಲಿ **ದಿನಾಂಕ : 06.04.2026 ರಂದು ಬೆಳಿಗ್ಗೆ 11.00 ಗಂಟೆಗೆ** ಮಾನ್ಯ ನ್ಯಾಯಾಲಯಕ್ಕೆ ಖುದ್ದಾಗಿ ಅಥವಾ ವಕೀಲರ ಮೂಲಕ ಆಕ್ಷೇಪಣೆ ಸಲ್ಲಿಸಬೇಕು. ಇಲ್ಲವಾದರೆ ಏಕಪಕ್ಷೀಯ ಪ್ರಕರಣವೆಂದು ತೀರ್ಮಾನಿಸಲಾಗುವುದು.
ದಿನಾಂಕ : 09.03.2026 ರಂದು ನ್ಯಾಯಾಲಯದ ಆದೇಶದಂತೆ ಈ ಮೂಲಕ ನ್ಯಾಯಾಲಯದ ಮೊಹರಿ-ನೊಂದಿಗೆ ನೀಡಲಾಗಿದೆ.

By Order of the Court, Sheristedar, Court of Chief Judicial Magistrate, Bangalore Rural District, Bangalore.
ಅರ್ಜಿದಾರರ ಪರ ವಕೀಲರು :
ಶ್ರೀ. ಮಂಜುನಾಥ ಆರ್.ಎ, ವಕೀಲರು
ನಂ. 17, ಸರಳ ವಿಲ್ಲಾ, ಮಂಜುನಾಥ ಬಡಾವಣೆ, ಸೀಗೇಹಳ್ಳಿ, ಬೆಂಗಳೂರು-560 049.

IN THE COURT OF THE CIVIL JUDGE AND JMFC AT SRINIVASPURA, OS No.131/2015

Plaintiff : Raheemunnisa @ Gulabjan and others
V/s
Defendants : Iyyappa Reddy dead by LR's

SUIT SUMMONS TO DEFENDANT No.1 LR No. E,F,I,J and K THROUGH PAPER PUBLICATION UNDER ORDER 5 RULE 20 OF CPC

E) Loknatha Reddy S/o Late Iyyappareddy, Aged about 54 years, F) Lakshminarayana S/o Late Iyyappa reddy, Aged about 52 years, Both are residing at C.Hosuru Village Kasaba Hobli, Srinivaspura Taluk. I) Lalithamma W/o Late Venkataramanareddy, Aged about 70 years, J) Babu Reddy S/o Late Venkataramareddy, Aged 45 years, Both are residing at M.G.Road, Srinivaspura Town. K) Lakshmi D/o Late Venkataramareddy, W/o Sriramareddy, Aged about 40 years. R/at Doddabommanahalli Village, Chinthamani Taluk.

SUIT SUMMONS TO DEFENDANT No.1 LR No. E,F,I,J and K

Wherefore the plaintiff have institute the above suit against the defendants for the relief of Declaration and Injunction and such other reliefs. You the defendant evading to receive the suit summons issued by this Hon'ble court hence you are hereby summoned to appear on this court in person or by the advocate on 16/4/2026 at 11 A.m to answer the same failing, which the suit will be disposed of ex-parte.
Give under my hand seal of the court on this day 5/3/2026 at Srinivaspura.

By order of the court,
Shirasthedar, Pri. Civil Judge & JMFC Court, Srinivasapura.
B M ESHWAR GOWDA, Advocate, Srinivaspura Town.

IN THE COURT OF THE PRL CIVIL JUDGE AND JMFC AT ANEKAL
C.Misc. No. 315/2026

BETWEEN : 1. Sri. Chinna Venkatagiriyappa S/o Late Venkatappa Aged about 76 years, **2. Sri. Narayanappa** S/o Chinna Venkatagiriyappa, Aged about 46 years, **3. Kum. Kishor .A,** S/o Late Anjappa, Aged about 12 years since he is minor natural guardian Rep. By 2nd petitioner All are R/at Gudisadhanapalli Village, Berigai, Hosur Taluk, Krishnagiri District, Tamil Nadu-635105. **...Petitioners**

AND : The Tahasildhar, Anekal Taluk. **...Respondent**

PAPER PUBLICATION

Whereas the petitioners have filed the above petition for seeking the death Certificate of son of 1st petitioner, elder brother of 2nd petitioner and father of the 3rd petitioner namely **Anjappa S/o Chinnavenkatagiriyappa who was died on 17.05.2024** at Avalahalli Village, Sarjapura Hobli, Anekal Taluk, Bangalore District before the Prl. Civil Judge and JMFC at Anekal, whereas the above petition is fixed for hearing **date 15.04.2026 at 11.00 AM** if anybody interest in this matter regard to appear in this court in person or by a pleader to file objections the same of you failing which the petition will be disposed on enquiry.
Given under my hand and seal of the Court on this 09.03.2026.

By Order of the Court, Sheristedar, Civil Judge (Jr.Dv.) and JMFC Court, Anekal.
Advocate for Petitioner: **Sri. Nandish.P,** Advocate Office at Rachamanahalli Besthamanahalli Post, Anekal Taluk, Bangalore District.

ಸಾರ್ವಜನಿಕ ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ ಶ್ರೀಮತಿ. ಗಿರಿಯಮ್ಮ ಅವರು ಹೊಸ ಮುನಿಸಿಪಲ್ ಸಂಖ್ಯೆ-1459/12, (ಹಳೇ ಮುನಿಸಿಪಲ್ ಸಂಖ್ಯೆ-1459), ಸ್ವತ್ತಿನ ಮಾಲೀಕರಾಗಿದ್ದು, ಸ್ವತ್ತಿನ ಸ್ವಾಧೀನಾನುಭವ-ದಲ್ಲಿರುತ್ತಾರೆ. ಸದರಿ ಸ್ವತ್ತಿನ ದಾಖಲಾತಿ ಅಂದರೆ ದಿನಾಂಕ 23.07.1973 ರಂದು ಶ್ರೀರಾಂಪುರ ಉಪ-ನೋಂದಣಾಧಿಕಾರಿ ಕಛೇರಿಯಲ್ಲಿ ದಾಖಲಾಗಿರುವ ದಾಖಲಾತಿ ಸಂಖ್ಯೆ 1464/1973-74ರ ಕ್ರಯ ಪತ್ರದ ಐದು, ಆರು, ಏಳು ಪುಟಗಳು ಕಳೆದುಹೋಗಿರುತ್ತದೆ. ಈ ಸಂಬಂಧ'ವಾಗಿ 09.03.2026 ರಂದು ಪೊಲೀಸ್ ಕಂಪ್ಲೇಂಟ್ ನಂಬರ್: 2099358/2026 ಮೂಲಕ ಪೊಲೀಸ್ ಠಾಣೆಯಲ್ಲ ದೂರು ದಾಖಲಿಸಿರುತ್ತಾರೆ.
ಯಾವುದೇ ವ್ಯಕ್ತಿ ಅಥವಾ ವ್ಯಕ್ತಿ/ಗಳು, ಕರ್ನಾಟಕ ಸರ್ಕಾರ/ಬ್ಲಾಕ್ ಡೆವಲಪ್ಮೆಂಟ್ ಅಧಿಕಾರಿ ತಹಸೀಲ್ದಾರ್, ಹಣಕಾಸು ಸಂಸ್ಥೆಗಳು ಸಹಕಾರಿ ಸೊಸೈಟಿ ಲಿಮಿಟೆಡ್/ಬಿಡಿಎ/ಶಾಸನಬದ್ಧ ಸಂಸ್ಥೆಗಳು/ಇತ್ಯಾದಿ. ಯಾವುದೇ ಹಕ್ಕು, ಶೀರ್ಷಿಕೆ ಅಥವಾ ಆಸಕ್ತಿ/ಹಕ್ಕುಗಳನ್ನು ಹೊಂದಿರುವ/ಪ್ರತಿಪಾದಿಸುವ ಅಥವಾ/ಇತ್ಯಾದಿಗಳಿಗೆ ಒತ್ತಾಯಿಸಿ ಯಾವುದೇ ರೀತಿಯಲ್ಲಿ ಈ ಸೂಚನೆಯ ಪ್ರಕಟಣೆಯಿಂದ 15 (ಹದಿನೈದು) ದಿನಗಳಲ್ಲಿ ಬರವಣಿಗೆ ಅಥವಾ ಇ-ಮೇಲ್ ಮೂಲಕ ಈ ಕೆಳಗೆ ನಮೂದಿಸಿರುವ ವಕೀಲರಿಗೆ ತಮ್ಮ ಆಕ್ಷೇಪಣೆಗಳನ್ನು ಸಲ್ಲಿಸಬಹುದು. ತದನಂತರ ಬರುವ ಡಾಕ್ಯುಮೆಂಟರಿ ಪುರಾವೆ, ಹಕ್ಕುಗಳನ್ನು ಪರಿಗಣಿಸಲಾಗುವುದಿಲ್ಲ.

ಷೆಡ್ಯೂಲ್ ಸ್ವತ್ತು

ಬೆಂಗಳೂರು, ಶ್ರೀರಾಂಪುರ, ಬಂಡಿರೆಡ್ಡಿಪಾಳ್ಯ 6ನೇ ಅಡ್ಡ ರಸ್ತೆಯಲ್ಲಿರುವ ಹೊಸ ಮುನಿಸಿಪಲ್ ಸಂಖ್ಯೆ-1459/12, (ಹಳೇ ಮುನಿಸಿಪಲ್ ಸಂಖ್ಯೆ-1459), ಇ-ಪಿಐಡಿ ನಂ.6301349296, ಸ್ವತ್ತಿನ ನಂ.1459/7/12, ಪೂರ್ವದಿಂದ ಪಶ್ಚಿಮಕ್ಕೆ 18 ಅಡಿಗಳು, ಉತ್ತರದಿಂದ ದಕ್ಷಿಣಕ್ಕೆ 63 ಅಡಿಗಳು ಒಟ್ಟು 1134 ಚದರ ಅಡಿಗಳುವುಳ್ಳ ಸ್ವತ್ತಿಗೆ ಚಕ್ಕುಬಂದಿ:- ಪೂರ್ವಕ್ಕೆ : ಸುಬ್ಬಯ್ಯರವರ ಸ್ವತ್ತು, ಪಶ್ಚಿಮಕ್ಕೆ : ರಸ್ತೆ, ಉತ್ತರಕ್ಕೆ : ನಾರಾಯಣಪ್ಪರವರ ಸ್ವತ್ತು ಮತ್ತು ರಸ್ತೆ, ದಕ್ಷಿಣಕ್ಕೆ : ರಸ್ತೆ

ಶ್ರೀ. ನಂದಿ ಅಸೋಸಿಯೇಟ್ಸ್,
ಶ್ರೀ. ಸಿದ್ದನಂಜಪ್ಪ ಎಮ್.ಎನ್, ವಕೀಲರು
#1468, 3ನೇ ಕ್ರಾಸ್, ಕಾರ್ಪೋರೇಷನ್ ಕಾಲೋನಿ, ಗೋವಿಂದರಾಜನಗರ ಬೆಂಗಳೂರು-560 079,
ದಿನಾಂಕ: 09/03/2026

IN THE COURT OF THE 3rd ADDITIONAL DISTRICT AND SESSIONS JUDGE AT ANEKAL
P & S.C.No. 5008/2026

PETITIONER: Sri R.Narasimha Murthy, S/o late Revanna@ Revappa, Aged about 44 years, R/at Indlabele Village, Attibele Hobli, Anekal Taluk, Bengaluru Urban District -V/s-
RESPONDENTS: NILL

PUBLIC NOTICE

Whereas the plaintiff/petitioner has filed above petition against the respondent seeking the relief of Issue of probate of registered will dated:08-02-2021 executed by late Revanna @ Revappa vide document No.107/2020-21 (who died on 13-11-2025) in favor of the petitioner in respect of the property bearing Kanishmari No.45, measuring East to west 50 feets, North to South 37 ½ Feets, situated at Indlabele Village, Attibele Hobli, Anekal Taluk, Bangalore Urban District and bounded by: East by: Vacant place belongs to Nagamma, West by: Survey No. 1/1 and lands of Muniyamma, Chandrappa, North by: Road, South by: Property of R.Narasimha Murthy and Revanna
If any person has got any objections in respect of the above case. You are hereby summoned to appear before this court in person or by pleader on **10-4-2026** at 11'o' clock to answer the same, failing which the suit will be disposed of ex-party.
Given under my hand Seal of the court on 06-03-2026.
By order of the court, Chief Ministerial Officer, 3rd ADDL Dist & Sessions Judge's Court, Anekal, Bangalore Rural District.

Sri. N. VENKATA SWAMY, Advocate
Attibele Road, Anekal Town, Bengaluru Urban District.

AFFIDAVIT

I, **SHABEER KHAN**, Son of Ayakhan, Aged about 52 years, residing at No. 7/3, Baba Late, 2nd Cross, Nizamuddin Mohalla, Bengaluru City, do hereby declare that, my date of birth is 01-01-1974. By oversight my name has been entered in the Birth Certificate of my daughter **Arshiya Khanum** issued by Registrar of Births and Deaths, BBMP, Bengaluru as SHAFFIR, instead of **SHABEER KHAN.** I state that, my correct / original name is **SHABEER KHAN** and the same is correctly entered in my family records and also in my Aadhaar Card. Vide affidavit dated 04.03.2026 sworn before A.C. Subbu Swamy, Advocate & Notary Public, Bengaluru.

ಮಾನ್ಯ 2ನೇ ಅಪರ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಬೆಂಗಳೂರು

ಕ್ರಿ. ಮಿಸ್. ನಂ. 2483/2026

ಅರ್ಜಿದಾರರು: 1) ಶ್ರೀ ಫಾರೂಖ್ ಅಹ್ಮದ್ ಎ.ಎಂ. ಬಿನ್. ಲೇಟ್ ಅಮೀರ್ ಅಹ್ಮದ್ ಎ.ಎಂ., ವಯಸ್ಸು 50 ವರ್ಷ **2) ಶ್ರೀಮತಿ. ಅಲ್ಪಿಯಾ ಫಾತಿಮ,** ಬಿನ್. ಲೇಟ್ ಅಮೀರ್ ಅಹ್ಮದ್ ಎ.ಎಂ., ವಯಸ್ಸು : 47 ವರ್ಷ **3) ಶ್ರೀಮತಿ ಸುಮೈರಾ ಬಾನು. ಎ** ಬಿನ್. ಲೇಟ್ ಅಮೀರ್ ಅಹ್ಮದ್ ಎ.ಎಂ., ವಯಸ್ಸು : 45 ವರ್ಷ, ಎಲ್ಲರ ವಾಸ : ನಂ. 26, 7ನೇ ಕ್ರಾಸ್, ಸೋಮೇಶ್ವರನಗರ, ಜಯನಗರ, 1ನೇ ಬ್ಲಾಕ್, ಬೆಂಗಳೂರು-560011 ...ವಿರುದ್ಧ...
ಪ್ರತಿವಾದಿ: ಮಾನ್ಯ ತಹಶೀಲ್ದಾರ್, ಜನನ ಮತ್ತು ಮರಣ ನೋಂದಣಿ ಇಲಾಖೆ ಬೆಂಗಳೂರು ದಕ್ಷಿಣ ತಾಲ್ಲೂಕು, ಬೆಂಗಳೂರು

ಈ ಮೇಲ್ಕಂಡ ಅರ್ಜಿದಾರರಿಗೆ ತಾಯಿಯಾದ ಮೃತ ಶ್ರೀಮತಿ. ಪಿ.ಶಾಬುನ್ನೀಸಾ ಕೋಂ ಲೇಟ್ ಅಮೀರ್ ಅಹ್ಮದ್ ಎ.ಎಂ. ರವರು ದಿನಾಂಕ:03.02.2020 ರಂದು ನಂ.26, 7ನೇ ಕ್ರಾಸ್, ಸೋಮೇಶ್ವರನಗರ, ಜಯನಗರ, 1ನೇ ಬ್ಲಾಕ್, ಬೆಂಗಳೂರು -560 011 ರಲ್ಲಿ ಮೃತಪಟ್ಟಿರುತ್ತಾರೆ.
ಸದರಿ ಮೃತರ ಮರಣ ದಿನಾಂಕವನ್ನು ನೋಂದಣಿ ಮಾಡಿಸಿಕೊಂಡ ಮರಣ ಪ್ರಮಾಣ ಪತ್ರ ಪಡೆಯಲು ಸದರಿ ನ್ಯಾಯಾಲಯದಲ್ಲಿ ಪ್ರಕರಣ ಹೂಡಿದ್ದು, ಇದಕ್ಕೆ ಹಿತಾಸಕ್ತಿದಾರರು ಯಾರಾದರೂ ಇದ್ದಲ್ಲಿ ತಮ್ಮ ಆಕ್ಷೇಪಣೆಯನ್ನು ಸಲ್ಲಿಸಲು ಇಚ್ಛಿಸಿದಲ್ಲಿ **ದಿನಾಂಕ : 30/04/2026** ರಂದು ಬೆಳಗ್ಗೆ 11 ಗಂಟೆಗೆ ಮಾನ್ಯ ನ್ಯಾಯಾಲಯಕ್ಕೆ ಖುದ್ದಾಗಿ ಅಥವಾ ವಕೀಲರ ಮೂಲಕ ಆಕ್ಷೇಪಣೆ ಸಲ್ಲಿಸಬೇಕು. ಇಲ್ಲವಾದರೆ ಏಕಪಕ್ಷೀಯ ಪ್ರಕರಣವೆಂದು ತೀರ್ಮಾನಿಸಲಾಗುವುದು.
ಸದರಿ ಪತ್ರಿಕಾ ಪ್ರಕಟಣೆಯನ್ನು ಕನ್ನಡ-ಹೊಸದಿಗಂತ ಮತ್ತು ಇಂಗ್ಲೀಷ್ ಬಿಸಿನೆಸ್ ಸ್ಟಾಂಡರ್ಡ್ ದಿನಪತ್ರಿಕೆಯಲ್ಲಿ ಪ್ರಕಟಿಸಲು ಅನುಮತಿಗಾಗಿ ಕೋರಿದೆ.
ದಿನಾಂಕ : 09/03/2026. ರಂದು ನ್ಯಾಯಾಲಯದ ಆದೇಶದಂತೆ ಈ ಮೂಲಕ ನ್ಯಾಯಾಲಯದ ಮೊಹರಿನೊಂದಿಗೆ ನೀಡಲಾಗಿದೆ.

ನ್ಯಾಯಾಲಯದ ಆದೇಶದಂತೆ, ಶಿರಸ್ತೇದಾರರು,
2ನೇ ಅಪರ ಮುಖ್ಯ ನ್ಯಾಯಿಕ, ದಂಡಾಧಿಕಾರಿಯವರ ನ್ಯಾಯಾಲಯ, ಬೆಂಗಳೂರು
ಜಿ.ಆರ್.ಪ್ರಕಾಶ್
ಜಿ.ಪಿ. ಕಿರಣ್ ಕುಮಾರ್, ವಕೀಲರು, ನಂ. 12, 13ನೇ ಕ್ರಾಸ್, ಕಬ್ಬನ್‌ಪೇಟೆ, ಕಂದಾಯ ಭವನದ ಮುಂಭಾಗ, ಬೆಂಗಳೂರು-02.

BEFORE THE KARNATAKA WAKF TRIBUNAL, BENGALURU DIVISION, HAMEEDSHA COMPLEX, # 24 and 26, 2ND FLOOR, CUBBONPET MAIN ROAD, BENGALURU.
O.S No. 22/2018

BETWEEN: Ibrahim Shah Makan (Sunni), Jamia Masjid, Shivapura Village, Doddaballapura Taluk, Bangalore Rural District, Rep by its Secretary Mr. Mohammed Ibrahim ... **PLAINTIFF**

AND: Sri.Ameer, Since deceased by his LR's and others ... **DEFENDANTS**

SUIT SUMMONS TO DEFENDANT No. 6, 7, 9 AND 11

6. Smt. M.C. Lingamma, D/o Sri. Channaveerappa, W/o Sri. Muniraju, Aged about 53 years, R/at Hardeshnahalli village, Kundana Hobli, Devanahalli Taluk, Bengaluru Rural. **7. Sri. Muni Raju,** S/o Chikkanna, Aged about 59 years, R/at Hardeshnahalli village, Kundana Hobli, Devanahalli Taluk, Bengaluru Rural. **9. Sri. Guru Prasad,** S/o Sri. Chetan M, Aged about 09 years, Since minor represented by his father Sri. Chethan M, R/at Hardeshnahalli village, Kundana Hobli, Devanahalli Taluk, Bengaluru Rural. **11. Ranjith. T,** S/o O.K. Thangappan, Aged about 40 years, Karnataka State Naukarara, Guruha Sarkari Society Prathinidi, R/at No.B1-201, Janapriya Green Wood Apartments, Sommashetti Halli, Bangalore - 560 090.

SUIT SUMMONS TO DEFENDANT NO.6,7,9 and 11

Whereas, this suit has been filed by Sri. A.R.K.Usmani, Advocate before this Tribunal under Order VII Rule1 and 2 of Code of Civil Procedure R/W Section 85 of the Waqf Act, 1995, for the relief of Permanent Injunction and other consequential relief.

SUIT SCHEDULE PROPERTY

All that piece and parcel of the land belonging to Ibrahim Shah Makan measuring 3 acres 07 guntas, in Sy. No.191 situated at Shivapura Village, Kasaba Hobli, Doddaballapura Taluk, Bangalore Rural District, bounded on the; East by: Shanbhog Service Inam Land, West by: Hanumanthappa's Land, North by: Road, South by: Khasim Sab's Land, Hence suit summons is hereby is given to you Defendant no. 6, 7, 9 and 11 and directed to appear before this Tribunal now situated at # 24, 2nd Floor, Hameed Shah Complex, Cubbonpet Main Road Bangalore in person or through an Advocate duly instructed or through someone authorized by law to act for yourself in this case at 11.00 A.M on **06-04-2026** In default of your appearance on the day mentioned above the suit will be heard and determined in your absence, on merits.
Issued under my hand and seal of this Tribunal on 03-03-2026.
By order of the Tribunal, I/C Sheristedar, Karnataka Wakf Tribunal, Bangalore

Mr. A.R.K.USMANI, Advocate
No.SF-28, 2nd Floor, HMS Complex, Cubbonpet Main Road, Bangalore - 560 002

ಸಾರ್ವಜನಿಕ ಪ್ರಕಟಣೆ

ನನ್ನ ಕಕ್ಷೀದಾರರಾದ ಶ್ರೀಮತಿ. ಉಮಾ ಜೆ. ರೆಡ್ಡಿ @ ಉಮಾದೇವಿ ಜಗನ್ ರೆಡ್ಡಿ ರವರು ಬೆಂಗಳೂರು ಗ್ರಾಮಾಂತರ ಜಿಲ್ಲೆ, ನೆಲಮಂಗಲ ತಾಲ್ಲೂಕು, ಕಸಬಾ ಹೋಬಳಿ, ಅರಿಶಿನಕುಂಟೆ ಹಳ್ಳಿ, ಸರ್ವೆ ಸಂಖ್ಯೆ 56/3 ರಲ್ಲಿ ನಿರ್ಮಿಸಿರುವಂತ ಆದರ್ಶನಗರ ಬಡಾವಣೆಯ ಖಾನೇಷುಮಾರಿ ಸಂಖ್ಯೆ 238/54, ಸ್ವತ್ತಿನ ನಂ.54, ಈ ಮಧ್ಯೆ ಇರುವ ಪೂರ್ವ-ಪಶ್ಚಿಮ 12-0 ಮೀಟರ್ ಮತ್ತು ಉತ್ತರ ದಕ್ಷಿಣ 18-0 ಮೀಟರಗಳು, ಒಟ್ಟು 216 ಚದರ ಮೀಟರುಗಳುಳ್ಳ ಸ್ವತ್ತನ್ನು ಮೂಲ ಮಾಲೀಕರಿಂದ ದಿನಾಂಕ 28-09-1990 ರಂದು ನೆಲಮಂಗಲ, ಉಪ-ನೋಂದಣಾಧಿಕಾರಿಗಳ ಕಛೇರಿಯಲ್ಲಿ 608/1991-92 ರಲ್ಲಿ ನಂಬರ್ ಆಗಿ ನೋಂದಣಿಯಾಗಿರುವ ಕ್ರಯಪತ್ರದ ಮೂಲಕ ಖರೀದಿ ಮಾಡಿರುತ್ತಾರೆ.
ನಂತರ ನಮ್ಮ ಕಕ್ಷಿದಾರರಾದ ಶ್ರೀಮತಿ ಉಮಾ ಜೆ ರೆಡ್ಡಿ @ ಉಮಾದೇವಿ ಜಗನ್ ರೆಡ್ಡಿ, ತಮ್ಮ ಜಿ.ಪಿ.ಎ. ಹೋಲ್ಡರ್ ಆದ ಶ್ರೀ ಕೆ. ಸಂಜೀವ ರೆಡ್ಡಿ, ಅವರ ಮೂಲಕ ಘೋಷಣೆ ಮತ್ತು ಶಾಶ್ವತ ತಡೆಯಾಜ್ಞೆ ಪಡೆಯಲು ಹಾಗೂ 28.02.1994ರ ಮಾರಾಟಪತ್ರವನ್ನು ರದ್ದುಪಡಿಸಲು ದಾವೆ ಹೂಡಿದ್ದರು. ಆ ಮಾರಾಟ ಪತ್ರವು ಸಂಖ್ಯೆ ನಂ.2014/1993-94 ಎಂದು ದಾಖಲಾಗಿತ್ತು. ಈ ದಾವೆ ನೆಲಮಂಗಲದ ಪ್ರಿನ್ಸಿಪಲ್ ಸಿವಿಲ್ ಜಡ್ಜ್ ಮತ್ತು ಜೆ. ಎಂ. ಎಫ್.ಸಿ. ನ್ಯಾಯಾಲಯದಲ್ಲಿ **O.S.** ಸಂಖ್ಯೆ.42/2020 ಎಂದು ದಾಖಲಾಗಿ ಶ್ರೀಮತಿ ಹೇಮಲತಾ ಅವರ ವಿರುದ್ಧ ನಡೆಯಿತು.
ಆ ದಾವೆ ನಮ್ಮ ಗ್ರಾಹಕರ ಪರವಾಗಿ ತೀರ್ಪಾಗಿದ್ದು, ಮೇಲ್ಕಂಡ ಕ್ರಯ ಪತ್ರದ ಸಂಖ್ಯೆ.2014/1993-94 ರ ಮಾರಾಟಪತ್ರವನ್ನು ರದ್ದುಪಡಿಸಲಾಗಿದೆ.
ಇದೀಗ ನಮ್ಮ ಗ್ರಾಹಕರು ಮೇಲ್ಕಂಡ ಆಸ್ತಿಯನ್ನು ಶ್ರೀ ನಾಗರಾಜು ಬಿ ಅವರಿಗೆ ಮಾರಾಟ ಮಾಡಲು ಉದ್ದೇಶಿಸಿದ್ದಾರೆ. ಅವರು ಈ ಆಸ್ತಿಯನ್ನು ಖರೀದಿಸಲು **LIC-HFL** (ಎಲ್.ಐ.ಸಿ. ಹೌಸಿಂಗ್ ಫೈನಾನ್ಸ್ ಲಿಮಿಟೆಡ್) ನಲ್ಲಿ ಸಾಲಕ್ಕಾಗಿ ಅರ್ಜಿ ಸಲ್ಲಿಸಿದ್ದಾರೆ.
ಸದರಿ ಸ್ವತ್ತಿಗೆ ಸಂಭಂದಪಟ್ಟಂತೆ ಯಾರಾದರೂ ಹಕ್ಕನ್ನು / ಮೇಲ್ಮನವಿ ಹೊಂದಿದ್ದರೆ ತಕರಾರು ಸಲ್ಲಿಸಲು 15 ದಿವಸ ಕಾಲವಕಾಶ ನೀಡುತ್ತಿದ್ದೇವೆ. ಇಲ್ಲವಾದರೆ, ನನ್ನ ಕಕ್ಷಿದಾರರು ಸದರಿ ಜಾಗದಲ್ಲಿ ಮನೆ ಕಟ್ಟಲು ಮುಂದುವರೆಯುತ್ತಾರೆ.

ಷೆಡ್ಯೂಲ್ ವಿವರ

ಬೆಂಗಳೂರು ಗ್ರಾಮಾಂತರ ಜಿಲ್ಲೆ ನೆಲಮಂಗಲ ತಾಲ್ಲೂಕು, ಕಸಬಾ ಹೋಬಳಿ, ಅರಿಶಿನಕುಂಟೆ ಹಳ್ಳಿ, ಸರ್ವೆ ಸಂಖ್ಯೆ 56/3 ರಲ್ಲಿ ನಿರ್ಮಿಸಿರುವಂತ ಆದರ್ಶನಗರ ಬಡಾವಣೆಯ ಖಾನೇಷುಮಾರಿ ಸಂಖ್ಯೆ 238/54, ಸ್ವತ್ತಿನ ನಂ.54, ಈ ಮಧ್ಯೆ ಇರುವ ಪೂರ್ವ-ಪಶ್ಚಿಮ 12-0 ಮೀಟರ್ ಮತ್ತು ಉತ್ತರ ದಕ್ಷಿಣ 18-0 ಮೀಟರುಗಳು, ಒಟ್ಟು 216 ಚದರ ಮೀಟರುಗಳುಳ್ಳ ಸ್ವತ್ತಿಗೆ ಚಕ್ಕು ಬಂದಿ:- ಪೂರ್ವಕ್ಕೆ: ಸ್ವತ್ತಿನ ಸಂಖ್ಯೆ 55 ಪಶ್ಚಿಮಕ್ಕೆ : ಸ್ವತ್ತಿನ ಸಂಖ್ಯೆ 52, ಉತ್ತರಕ್ಕೆ: ಸ್ವತ್ತಿನ ಸಂಖ್ಯೆ 47, ದಕ್ಷಿಣಕ್ಕೆ: ರಸ್ತೆ

ಶ್ರೀ. ನಂದಿ ಅಸೋಸಿಯೇಟ್ಸ್
ಶ್ರೀ. ಸಿದ್ದನಂಜಪ್ಪ ಎಂ.ಎನ್, ವಕೀಲರು
ಕಛೇರಿ ವಿಳಾಸ : #1468, 3ನೇ ಕ್ರಾಸ್, ಕಾರ್ಪೊರೇಷನ್ ಕಾಲೋನಿ, ಗೋವಿಂದರಾಜನಗರ, ಬೆಂಗಳೂರು-560079.
ಮೊ: 9731652398, ಇಮೇಲ್: **siddesh.advocate@gmail.com,**
ದಿನಾಂಕ:09-03-2026

PUBLIC NOTICE FOR LOSS OF ORIGINAL DOCUMENTS

Notice is hereby given to the public that **M/s United Telecom Ltd,** having its registered office at No. 18A/19, Doddanekudi Industrial Area, Mahadevapura Post, Bengaluru, has lost/misplaced the original property documents pertaining to the property bearing Plot No. 113, 114 and 115 situated at **Sy. No. 151,** EPIP Industrial Area, Hoodi Village, K R Puram Hobli, Whitefield, Bengaluru- 560 066, purchased from KIADB under Registered Sale Deed dated 08.05.2007 bearing **Document No. MDP-1-00589-2007-08 stored in Book I, C.D. No. MDPD3,** registered before the jurisdictional Sub-Registrar. The lost documents include the original title deed, khata extract, planning report and other connected records. A complaint regarding the loss of the said documents has been lodged with Mahadevapura Police Station, Bengaluru, on 05.03.2026, and a lost report has been registered vide **Reference No. 2094718/2026.** Despite diligent search, the original documents could not be traced, and the Company has applied for certified copies of the same. Any person who finds or comes into possession of the aforesaid original documents is hereby requested to kindly hand over the same to the undersigned immediately.

Tarun Gurram, Precinct legal,
No. 43, S2 ,TNT Towers, Infantry Road
Bangalore 560 001 **Ph: 9632333850**
Place: Bangalore Date: 10.03.2026

IN THE COURT OF THE XVII ADDL. CITY COURT AT BENGALURU (CCH-16)
P & SC No.547/2019

BETWEEN: 1. SMT. ADITI AMBEKAR, Wife Late Haribhau Ambekar, aged about 63 years, **2. SMT. ASHLESHA AMBEKAR,** W/o Late. Shrirang. H Ambekar, aged about 33 years. **3. MASTER. ATHARVA SHRIRANG AMBEKAR,** S/o, Late. Shrirang H Ambekar, aged about 6 years, Petitioner No 3 being minor Represented by his mother and natural Guardian SMT. ASHLESHA AMBEKAR, W/o Late Shrirang H. Ambekar, Petitioner No.1 to 3 residing at No. T-3, Bhagyalakshmi, Avenue Apartment, at Nyanapanahalli Village, Near Begur Hobli Road, Near Government School, Bannerghatta Road, Bangalore South Taluk, Bangalore- 560 068, **4. KUM. UMA AMBEKAR,** D/o. Late. Haribhau Ambekar, aged about 33 years, residing at 1-203, Lokmanya Pan Bazar Association, Eastern Express Highway, Near K.J Somaiya, Hospital Sion, Chunabhatti, Mumbai, Maharashtra- 400 022 **...PETITIONERS**

AND: NIL ...RESPONDENTS

PUBLIC NOTICE

Whereas the above named filed an application under Section 376 of Indian Succession Act, for the grant of extension of Succession Certificate in favour of the petitioners, in respect of release of salary arrears of Rs.5,13,760.09 from SIMPL to the estate of Late Shrirang H Ambekar who died on 28/07/2019, the petitioner No. 1 is mother, petitioner No. 2 is the wife, petitioner No.3 is the daughter, petitioner No. 4 is the younger sister of Late Sri Shrirang H. Ambekar respectively.
Interested parties are hereby called upon to appear before this Court in person or by pleader duly instructed on **27/03/2026** at **11:00 AM.,** infrom to show cause against the Petitioners failing wherein the appearance will be heard and declared as Exparte.
Given under my hand & Seal of the Court, on this 09/03/2026.
By Order of the Court, Senior Sheristedar, City Civil Court, Bengaluru

Venkataram C.R, Advocate
Office at No.78, 34th 'A' Main, 27th Cross, Raghavendra layout, Hulimavu, Bannerghatta Road, Bengaluru-560 076.

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

IN THE COURT OF THE HON'BLE REGIONAL JOINT DIRECTOR OF LAND RECORDS AT KOLAR
JDLR. APL.No.43/2025

APPELLANTS : Naarayanaswamy
V/S
RESPONDENTS: The Deputy Director of Land Records Kolar, Taluk and others.

SUMMONS/NOTICE TO RESPONDENT No.5 AND 6 THROUGH PAPER PUBLICATIONS AS PER UNDER ORDERS RULES 20 OF CPC:-

RESPONDENT No.5 AND 6.

5 H.G. Shekar S/o Late H.K.G. Srinivas Aged about 65 years, R/o Doddanekkundi Village, K.R.Puram Taluk and Hobli, Bengaluru East Taluk-560037, **6 K. Balajisingh** S/o Late Krishnasingh Propritor Balaji Grainite Works Aged about 75 years, R/o Jayaramashetty layout, Devasandra Main Road, K.R. Puram, Bengaluru East Taluk-560036.
Whereas, the appellant in the above case prefer this appeal against the Hissa Phodi Dhurasth in Sy.No.187 of the K.B.Hosahalli Village, Narasapura Hobli, Kolar Taluk shall be cancelled the Phodi Durasth since measurements and boundaries not tallying with possession of the parties and different with each other further praying that the Phodi Dhurasthi made in Sy. No: 187 shall be set aside and there is the boundaries. and you are hereby advised to appear before Hon'ble court person by a pleader on the day 11-03-2026 take notice that in default of you are appearance on the day and time above the mentioned you shall be placed ex parte and the case will be heard and determined in your absence. March
Given under my seal and signature on this 9th day March 2026 at Kolar.

By order of the court
Regional Director of Land Records Bengaluru
Advocate for appellant.
N. Manjunath, M. Srinivasa, Advocates, Kolar.
Kolar, Date: 04-03-2026

IN THE COURT OF THE HON'BLE SENIOR CIVIL JUDGE AT TIPTUR.
O.S.No.131/2024

Plaintiffs: Smt. Girijamma and another **-V/s- Defendants:** Sri. Mahanthesh and others.

DRAFT PAPER PUBLICATION
Notice to the defendant No.1 Under Order 5 Rule 20 of CPC in the above case.

Defendant No.1 : Sri. Mahanthesh S/o Late Veeranna, R/at Ayyanapalya, Aged about 65 years, Hatna Village, Kibbanahalli Hobli, Tipturu Taluk, Tumakuru District.
Whereas, the plaintiffs have filed the above suit against the defendants for partition and separate possession and the notice and summons were ordered to serve from the Hon'ble Court through court summons and also through RPAD to defendants, but the defendant NoI is avoiding to take summons from this Hon'ble Court to drag on the proceedings. Hence the summons is issued through by way of paper publication.
The defendant No.1 is hereby directed to appear before this Hon'ble Senior Civil Judge at Tiptur on 9-4-2026 at 11:00 A.M. in person or through his counsel or through an authorized agent, failing which the above case will be decided ex-parte and determined as per law.
Given under my hand and seal of this court, this 28th day of February 2026.

By Order of the Court,
Sd/- **Senior Sheritedar,**
Senior Civil Judge & JMFC Court, Tiptur.
Advocate for plaintiff
Sd/- **HANUMANTHARJU,** Advocate.
Gangadharappa Building, Christian Street, Mandipete, Tumakuru. M.No.9945047792

ಬೆಂಗಳೂರು ಕೇಂದ್ರ ನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರವರ ಕಛೇರಿ, ವಿದ್ಯುತ್ ವಿಭಾಗ, 16ನೇ ಮಹಡಿ, ಪಿಯು ಕಟ್ಟಡ, ಎಂ.ಜಿ ರಸ್ತೆ, ಬೆಂಗಳೂರು – 01

ಸಂ. ಬೆಕೇನಪಾ/ಕಾಅ/ವಿ/ಟೆಂಡರ್/04/2025–26 ದಿನಾಂಕ : 09–03–2026

ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ)
(ಏಕ ಲಕೋಟೆ / ಅಲ್ಪಾವಧಿ) (ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ಆಯುಕ್ತರು, ಬೆಕೇನಪಾ ಇವರ ಪರವಾಗಿ ಕಾರ್ಯಪಾಲಕ ಅಭಿಯಂತರರು (ವಿದ್ಯುತ್), ಬೆಕೇನಪಾ, ಇವರು ಕೆಟಿಪಿಪಿ ನಿಯಮಗಳು 2000ಗೆ ಅನುಸಾರವಾಗಿ ಕೆಳಕಂಡ ಕೋಷ್ಟಕದಲ್ಲಿ ವಿವರಿಸಲಾದ ವಿದ್ಯುತ್ ಕಾಮಗಾರಿಗಳಿಗಾಗಿ ಬೆಂಗಳೂರು ಕೇಂದ್ರ ನಗರ ಪಾಲಿಕೆ / ಕೆಪಿಡಬ್ಲ್ಯುಡಿ / ಸಿಪಿಡಬ್ಲ್ಯುಡಿ / ರೈಲ್ವೆ / ಎಂಇಎಸ್ / ರಾಷ್ಟ್ರೀಯ ಹೆದ್ದಾರಿ ಇವುಗಳಲ್ಲಿ ನೋಂದಣಿಯಾದ ಅಥವಾ ಕೇಂದ್ರ / ರಾಜ್ಯ ಸರ್ಕಾರದ ಯಾವುದೇ ಸಂಸ್ಥೆಯಲ್ಲಿ ಸಮಾನ ನೋಂದಣಿ ಹೊಂದಿರುವ ಅರ್ಹ ಗುತ್ತಿಗೆದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ	ಕಾಮಗಾರಿಯ ಹೆಸರು
	ಇತರರು
1	ಬೆಂಗಳೂರು ಕರಗ – 2026 ಸಂಭ್ರಮಾಚರಣೆಯ ಅಂಗವಾಗಿ ಬೆಂಗಳೂರು ಕೇಂದ್ರ ನಗರ ಪಾಲಿಕೆಯ ಅಡಿಯಲ್ಲಿನ ಆಯ್ದ ಪ್ರಮುಖ ರಸ್ತೆಗಳು ಮತ್ತು ವೃತ್ತಗಳು, ಬಿಬಿಎಂಪಿ ಕೇಂದ್ರ ಕಛೇರಿಗೆ ಅಲಂಕಾರಿಕ ಬೆಳಕಿನ ವ್ಯವಸ್ಥೆಯನ್ನು ಒದಗಿಸುವುದು. **ಟೆಂಡರ್‌ಗಿಟ್ಟ ಮೊತ್ತ** : ರೂ.28.92 ಲಕ್ಷಗಳು. **ಇಎಂಡಿ** : ರೂ.58,000/–
2	ಬೆಂಗಳೂರು ಕರಗ – 2026 ಸಂಭ್ರಮಾಚರಣೆಯ ಅಂಗವಾಗಿ ಶ್ರೀ ಧರ್ಮರಾಯ ಸ್ವಾಮಿ ದೇವಸ್ಥಾನದ ಸುತ್ತಲಿನ ಪ್ರದೇಶಗಳು, ಹಳೇ ನಗರ ಪ್ರದೇಶ, ಸಂಪಂಗಿ ಕೆರೆ ಮತ್ತು ಮುಖ್ಯವಾದ ಕರಗ ಮಾರ್ಗಗಳಿಗೆ ಅಲಂಕಾರಿಕ ಬೆಳಕಿನ ವ್ಯವಸ್ಥೆಯನ್ನು ಒದಗಿಸುವುದು. **ಟೆಂಡರ್‌ಗಿಟ್ಟ ಮೊತ್ತ** : ರೂ.10.14 ಲಕ್ಷಗಳು. **ಇಎಂಡಿ** : ರೂ.25,500/–

ವೇಳಾಪಟ್ಟಿ : (1) ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್‌ನಿಂದ (**https://kppp.karnataka.gov.in**) ಟೆಂಡರ್ ದಾಖಲೆಗಳನ್ನು ಡೌನ್‌ಲೋಡ್ ಮಾಡಬಹುದಾದ ದಿನಾಂಕ : **10–03–2026 ರಂದು 16.30 ಗಂಟೆಯಿಂದ** (2) ಬಿಡ್‌ಗಳನ್ನು ಕೆಪಿಪಿ ಪೋರ್ಟಲ್ ಮೂಲಕ ಆನ್‌ಲೈನ್‌ನಲ್ಲಿ **17–03–2026 ರಂದು 16:00 ಗಂಟೆಗೆ** ಅಥವಾ ಮುಂಚಿತವಾಗಿ ಸಲ್ಲಿಸಬೇಕು. (3) ಟೆಂಡರ್‌ಗಳನ್ನು ತೆರೆಯುವ ದಿನಾಂಕ : **18–03–2026 ರಂದು 16.00 ಗಂಟೆಗೆ**

ಸಹಿ/– ಕಾರ್ಯಪಾಲಕ ಅಭಿಯಂತರರು (ವಿದ್ಯುತ್),
ಬೆಂಗಳೂರು ಕೇಂದ್ರ ನಗರ ಪಾಲಿಕೆ

IN THE COURT OF THE CIVIL JUDGE AND JMFC AT SRINIVASPURA, OS No.130/2015

Plaintiff : Mumtaj
V/s
Defendants : Iyyappa Reddy dead by LR's

SUIT SUMMONS TO DEFENDANT No.1 LR No. E,F,G,I,J and L. THROUGH PAPER PUBLICATION UNDER ORDER 5 RULE 20 OF CPC

E) Loknatha Reddy S/o Late Iyyappareddy, Aged about 54 years, F) Lakshminarayana S/o Late Iyyappareddy. Aged about 52 years, G) Sudhamani D/o Late Iyyappareddy, Aged about 48 years, I) Lalithamma W/o Late Venkataramanareddy, Aged about 70 years. J) Babu Reddy S/o Late Venkataramareddy, Aged about 45 years, L) Govindareddy S/o Late Iyyappareddy, Aged about 75 years, All are R/at C.Hosuru Village, Kasaba Hobli, Srinivaspura Taluk, Kolar District.

SUIT SUMMONS TO DEFENDANT No.1 LR No. E,F,G,I,J and L

Wherefore the plaintiff have institute the above suit against the defendants for the relief of Declaration and Injunction and such other reliefs. You the defendant evading to receive the suit summons issued by this Hon'ble court hence you are hereby summoned to appear on this court in person or by the advocate on 16/4/2026 11 AM to answer the same failing, which the suit will be disposed of ex-parte.
Give under my hand seal of the court on this day 4/3/2026 at Srinivaspura.

By order of the court ,
Shirasthedar, Pril.Civil judge & JMFC Court, Srinivasapura.
B.M.ESHWAR GOWDA, Advocate, Srinivaspura Town.

ಕಾವೇರಿ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ
ನಂ.2, ವಿಶ್ವೇಶ್ವರಯ್ಯ ನಾಲಾ ವಿಭಾಗ, ಮದ್ದೂರು, ಮಂಡ್ಯ ಜಿಲ್ಲೆ
ಪಿನ್‌ಕೋಡ್–571428

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ :10/2025–26 ದಿ:04.03.2026

ಈ ಕಛೇರಿಯ ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ:10/2025–26 ದಿನಾಂಕ: 04.03.2026 ರಲ್ಲಿ ಒಟ್ಟು 13 ಕಾಮಗಾರಿ (ಕನಿಷ್ಠ ಅಂದಾಜು ಮೊತ್ತ 75.00 ಲಕ್ಷಗಳು ಮತ್ತು ಗರಿಷ್ಠ ಅಂದಾಜು ಮೊತ್ತ ರೂ.499.00 ಲಕ್ಷ ರೂಪಾಯಿ)ಗಳಿಗೆ ಅರ್ಹ ಕೆ.ಡಬ್ಲ್ಯೂ–3 ಮತ್ತು ಕೆ.ಡಬ್ಲ್ಯೂ–4 ರನ್ವಯ ಟೆಂಡರ್ ಆಹ್ವಾನಿಸಲಾಗಿದ್ದು, ಟೆಂಡರ್ ಸಲ್ಲಿಸುವ ದಿನಾಂಕ ಹಾಗೂ ಇತರೆ ವಿವರಗಳನ್ನು ಕೆ.ಪಿ.ಪಿ ಪೋರ್ಟಲ್ **www.kppp.karnataka.gov.in** ನಲ್ಲಿ ಪಡೆಯಬಹುದು.

ಸಹಿ/–ಕಾರ್ಯಪಾಲಕ ಇಂಜಿನಿಯರ್,
ಕಾವೇರಿ ನೀರಾವರಿ ನಿಗಮ(ನಿ), ನಂ.2, ವಿ.ಸಿ.ವಿಭಾಗ, ಮದ್ದೂರು

ವಾಸಾಸಂಇ/ಹಿಸನಿ–ಮಂ/ಕೆಎಸ್‌ಎಂಸಿ&ಎ/864/2025–26

ತುಮಕೂರು ಮಹಾನಗರಪಾಲಿಕೆ, ತುಮಕೂರು

ವೆಬ್‌ಸೈಟ್ : www.tumkurucity.mrc.gov.in
ಇಮೇಲ್: ka.tumkuru.cc@gmail.com,
ಕಚೇರಿದೂರವಾಣಿ : 2272200, ಸಹಾಯವಾಣಿ : 9449872599

ಸಂಖ್ಯೆ:ತುಮಪಾ/ಆಶಾ/ಸಿಆರ್–80/2025–26 ದಿನಾಂಕ:04–03–2026

ಟೆಂಡರ್ ಪ್ರಕಟಣೆ
(ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿನ ಪಾರದರ್ಶಕತೆಯ ಆದ್ಯಾದೇಶ 1999–2000 2000ರಂತೆ ಈ ಕೆಳಕಂಡ ಕಾಮಗಾರಿಗೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್‌ನ ಇ-ಪ್ರಕ್ಯೂರ್‌ಮೆಂಟ್ ಮುಖಾಂತರ ಈ ಕೆಳಕಂಡ ಸಹಿ ಮಾಡಿರುವವರು ಟೆಂಡರ್ ಆಹ್ವಾನಿಸಿದ್ದು, ಸದರಿ ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛಿಸುವವರು **kppp.gov.in**ನಲ್ಲಿ ಮಾಹಿತಿಯನ್ನು ಪಡೆಯಬಹುದಾಗಿದೆ. ಹೆಚ್ಚಿನ ವಿವರಗಳಿಗೆ ಪಾಲಿಕೆಯ ಆರೋಗ್ಯ ಶಾಖೆಯಿಂದ ಮಾಹಿತಿಯನ್ನು ಪಡೆಯಬಹುದಾಗಿದೆ.

ಕ್ರ ಸಂ	ಕಾಮಗಾರಿಯ ಹೆಸರು	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)
1.	ತುಮಕೂರು ಮಹಾನಗರಪಾಲಿಕೆಯಲ್ಲಿ ಪ್ರತಿನಿತ್ಯ ಸ್ವಚ್ಛತಾ ಕಾರ್ಯ ನಿರ್ವಹಿಸುತ್ತಿರುವ 429 ಸಂಖ್ಯೆಯ ಪೌರ ಕಾರ್ಮಿಕರಿಗೆ ಬೆಳಗಿನ ಉಪಹಾರ ಒದಗಿಸುವ ಕಾಮಗಾರಿ,	59.02
2.	ತುಮಕೂರು ಮಹಾನಗರಪಾಲಿಕೆಯಲ್ಲಿ ಹೊರ ಮೂಲದ ಆಧಾರದ ಮೇಲೆ ಸ್ವಚ್ಛತಾ ಕಾರ್ಯ ನಿರ್ವಹಿಸುತ್ತಿರುವ 511 ಸಂಖ್ಯೆಯ ಕಾರ್ಮಿಕರಿಗೆ (ಡ್ರೈವರ್ಸ್, ಹೆಲ್ಪರ್ಸ್, ಲೋಡರ್ಸ್) ಬೆಳಗಿನ ಉಪಹಾರ ಒದಗಿಸುವ ಕಾಮಗಾರಿ.	71.80

ಅಲ್ಪಾವಧಿ ಟೆಂಡರ್ ಷೆಡ್ಯೂಲ್ ದಿನಾಂಕಗಳು ಈ ಕೆಳಕಂಡಂತಿದೆ

1. ಇ–ಪೋರ್ಟಲ್‌ನಲ್ಲಿ ಟೆಂಡರ್ ದಾಖಲೆಗಳು ಚಾಲ್ತಿಗೆ ಬರುವ ದಿನಾಂಕ: **05.03.2026** ರಿಂದ ದಿನಾಂಕ:**11.03.2026**ರ ವರೆಗೆ
2. ಪ್ರೀ ಬಿಡ್ ಮೀಟಿಂಗ್ ದಿನಾಂಕ:**09.03.2026**ರಂದು ಬೆಳಗ್ಗೆ **11.30** ಗಂಟೆಗೆ
3. ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ: **11.03.2026**ರಂದು ಸಾಯಂಕಾಲ **4.00** ಗಂಟೆವರೆಗೆ
4. ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **16.03.2026 ಬೆಳಗ್ಗೆ 11.00 ಗಂಟೆ**

ಸಹಿ/– ಕಾರ್ಯಪಾಲಕ ಅಭಿಯಂತರರು
ತುಮಕೂರು ಮಹಾನಗರಪಾಲಿಕೆ
ತುಮಕೂರು.

DIPR/TUM/RO-292/25-26/Oysters

ಜಿಲ್ಲಾ ಪಂಚಾಯತ್, ಚಿಕ್ಕಬಳ್ಳಾಪುರ

ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಚಿಕ್ಕಬಳ್ಳಾಪುರ

ಕೆ.ಪಿ.ಪಿ ಇ–ಪ್ರಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: 17/2025–26 ದಿನಾಂಕ: 27.02.2026

ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ– IV ರ ನಿಬಂಧನೆಗೊಳಪಟ್ಟಂತೆ ಟೆಂಡರ್‌ಗಳಿಗಾಗಿ ಅರ್ಜಿ ಆಹ್ವಾನಿಸಲಾಗಿದೆ.

ಕರ್ನಾಟಕ ರಾಜ್ಯದ ರಾಜ್ಯಪಾಲಕ ಪರವಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕತೆ ಅಧಿನಿಯಮ 2000ರ ಪ್ರಕಾರ ಐಟಂವಾರು ಕೆ.ಪಿ.ಪಿ ಇ–ಪ್ರಕ್ಯೂರ್‌ಮೆಂಟ್ ದ್ವಿ–ಲಕೋಟೆ ಪದ್ಧತಿಯಲ್ಲಿ (Double Cover System) ಚಿಕ್ಕಬಳ್ಳಾಪುರ ವಿಭಾಗ ವ್ಯಾಪ್ತಿಯ 2025–26 ನೇ ಸಾಲಿನ CMIDP ಲೆಕ್ಕಶೀರ್ಷಿಯಡಿ ಕೆಳಗೆ ನಮೂದಿಸಿರುವ ಕಾಮಗಾರಿಗಳಿಗೆ ಸೂಕ್ತ ದರ್ಜೆಯಲ್ಲಿ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿಸಿರುವ ಅಧಿಕೃತ ಗುತ್ತಿಗೆದಾರರಿಂದ ಟೆಂಡರ್‌ನ್ನು ಆಹ್ವಾನಿಸಲಾಗಿದ್ದು ಇ–ಪ್ರಕ್ಯೂರ್‌ಮೆಂಟ್ ದಾಖಲೆಗಳಿಗಾಗಿ ಇಲಾಖಾ ವೆಬ್‌ಸೈಟ್ **https://eproc.karnataka.gov.in** ಮೂಲಕ ಅರ್ಜಿಯನ್ನು ಸಲ್ಲಿಸಲು ಕೋರಲಾಗಿದೆ. **(1)** E-procurement ಮುಖಾಂತರ ಅರ್ಜಿ ಸಲ್ಲಿಸುವ ಹಾಗೂ ಷೆಡ್ಯೂಲ್–ಬಿ ಗಳನ್ನು ವೆಬ್ ಸೈಟ್‌ನಲ್ಲಿ ಭರ್ತಿ ಮಾಡಿ ಸಲ್ಲಿಸುವ ಕೊನೆಯ **ದಿನಾಂಕ: 23.03.2026** ರ **16.30** ರವರೆಗೆ **(2)** ತಾಂತ್ರಿಕ ಬಿಡ್‌ನ್ನು ತೆರೆಯುವ **ದಿನಾಂಕ: 24.03.2026** ರಂದು **16.35** ನಂತರ **(3)** ಆರ್ಥಿಕ ಬಿಡ್‌ನ್ನು ತೆರೆಯುವ **ದಿನಾಂಕ: 26.03.2026** ರಂದು ಬೆಳಿಗ್ಗೆ **11.30** ನಂತರ (ಸಾಧ್ಯವಾದಲ್ಲಿ) **(4)** ಅರ್ಜಿ ಶುಲ್ಕ (ಹಿಂದಿರುಗಿಸಲಾಗುವುದಿಲ್ಲ): e- Procurement ನಿಯಮಾನುಸಾರ

ಕ್ರ. ಸಂ	ಕಾಮಗಾರಿಯ ಹೆಸರು	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಇ.ಎಂ.ಡಿ (ರೂ. ಗಳಲ್ಲಿ)	ಕಾಲಮಿತಿ ಮಳೆಗಾಲ ಸೇರಿ
1	Improvements to road from Dibburahalli-Shidlaghatta main road to Tatahalli village Shidlaghatta taluk. Chikkaballapur district (VR 261) **(RDPR/2025-26/RD/WORK_INDENT25318)**	200.00	300000.00	9 ತಿಂಗಳು
2	Improvements to road from fromT. Gollahalli-KY Road Via Tuluvanur chainage 0.00 Km to 3.40 Km Chintamani Taluk Chikkaballapur District. **(RDPR/2025-26/RD/WORK_INDENT25150)**	200.00	300000.00	9 ತಿಂಗಳು
3	Improvements to road from Pendlivarahalli cross to Kambarahalli Doddagummanahalli road to the border. Shidlaghatta taluk. Chikkaballapur District. **(RDPR/2025-26/RD/WORK_INDENT25320)**	140.00	210000.00	6 ತಿಂಗಳು
4	Improvements to road from From Muduganakunte Cross via Jakkenahalli to Kadaburu village in Gowribidanur Taluk Chikkaballapur District **(RDPR/2025-26/RD/WORK_INDENT25322)**	200.00	300000.00	9 ತಿಂಗಳು
5	Improvements to road from Kadabur village to Saragondlu village in Gowribidanur Taluk Chikkaballapur District **(RDPR/2025-26/RD/WORK_INDENT25323)**	120.00	180000.00	6 ತಿಂಗಳು
6	Improvements to road from NH 234 road via Bhaktarahalli village to Colonyin Gowribidanur Taluk Chikkaballapur District **(RDPR/2025-26/RD/WORK_INDENT25324)**	150.00	225000.00	6 ತಿಂಗಳು
7	Improvements to road from Huduguru village to Virupasandra Lakshmipur road via fishermens houses in Gowribidanur Taluk Chikkaballapur District **(RDPR/2025-26/RD/WORK_INDENT25326)**	120.00	180000.00	6 ತಿಂಗಳು
	Total	**1130.00**		

ಸಹಿ/– ಕಾರ್ಯಪಾಲಕ ಅಭಿಯಂತರರು, ಪಂ.ರಾ.ಇಂ. ವಿಭಾಗ, ಚಿಕ್ಕಬಳ್ಳಾಪುರ

ವಾಸಾಸಂಇ/ಚಿಕ್ಕಬಳ್ಳಾಪುರ/ಆರ್.ಓ.ಸಂಖ್ಯೆ:470/ಕೆಎಸ್‌ಎಂಸಿಎ/2025–26

ಡಿಜಿಟೈಡ್ ಸಲ್ಯೂಷನ್ಸ್ ಲಿಮಿಟೆಡ್

digitide

CIN: L62099KA2024PLC184626
ನೋಂದಾಯಿತ ಮತ್ತು ಕಾರ್ಪೋರೇಟ್ ಕಚೇರಿ: ಹೊಸ ಮುನಿಸಿಪಲ್ ನಂ. 1, ಶ್ರೀ ಸುಬ್ರಮಣ್ಯ ಪ್ಲಾಜಾ (ಎಸ್‌ಎಸ್ ಪ್ಲಾಜಾ), 29ನೇ ಮುಖ್ಯರಸ್ತೆ, ಬಿಟಿಎಂ ಲೇಔಟ್, 1ನೇ ಹಂತ, ವರ್ತುಲ ರಸ್ತೆ, ಬೆಂಗಳೂರು–560068, ಕರ್ನಾಟಕ. ದೂ.: +91 80 6105 6000
ವೆಬ್‌ಸೈಟ್: www.digitide.com; ಇ–ಮೇಲ್: corporatesecretarial@digitide.com

ಅಂಚೆ ಮತಪತ್ರ ನೋಟಿಸು

ಸದಸ್ಯರಿಗೆ ಈ ಮೂಲಕ ತಿಳಿಸುವುದೇನೆಂದರೆ, ಕಂಪನಿಗಳ ಕಾಯ್ದೆ, 2013ರ ತಿದ್ದುಪಡಿಯಂತೆ ("ಕಾಯ್ದೆ") ಸೆಕ್ಷನ್ 108 ಮತ್ತು 110ರ ನಿಬಂಧನೆಗಳು ಮತ್ತು ಇತರ ಅನ್ವಯವಾಗುವ ನಿಬಂಧನೆಗಳ ಪ್ರಕಾರ, ಕಂಪನಿಗಳ (ನಿರ್ವಹಣೆ ಮತ್ತು ಆಡಳಿತ) ನಿಯಮಗಳು, 2014ರ ತಿದ್ದುಪಡಿಯಂತೆ ("ನಿರ್ವಹಣಾ ನಿಯಮಗಳು"), ಕಾರ್ಪೋರೇಟ್ ವ್ಯವಹಾರಗಳ ಸಚಿವಾಲಯದಿಂದ ಹೊರಡಿಸಲಾದ ಸಾಮಾನ್ಯ ಸುತ್ತೋಲೆ ಸಂಖ್ಯೆಗಳಾದ 14/2020 ದಿನಾಂಕ ಏಪ್ರಿಲ್ 8, 2020, 17/2020, ದಿನಾಂಕ ಏಪ್ರಿಲ್ 13, 2020ರ ಜೊತೆಗೆ ಅನ್ವಯಿಸುವ ಇತರೆ ಸುತ್ತೋಲೆಗಳು ಮತ್ತು ಇತ್ತೀಚಿನ ಸುತ್ತೋಲೆ 03/2025 ದಿನಾಂಕ ಸೆಪ್ಟೆಂಬರ್ 22, 2025ನ್ನು ಓದಿಕೊಂಡಂತೆ (ಒಟ್ಟಾರೆಯಾಗಿ "ಎಂಸಿಎ ಸುತ್ತೋಲೆಗಳು" ಎಂದು ಕರೆಯಲಾಗುತ್ತದೆ), ಇನ್ಸ್ಟಿಟ್ಯೂಟ್ ಆಫ್ ಕಂಪನಿ ಸೆಕ್ರೆಟರೀಸ್ ಆಫ್ ಇಂಡಿಯಾ ಹೊರಡಿಸಿದ ಸಾಮಾನ್ಯ ಸಭೆಗಳ ಸೆಕ್ರೆಟೇರಿಯಲ್ ಸ್ಟ್ಯಾಂಡರ್ಡ್ ("ಎಸ್‌ಎಸ್–2"), ಸೆಬಿಯ ನಿಯಮ 44 (ಪಟ್ಟಿಮಾಡುವ ಬಾಧ್ಯತೆಗಳು ಮತ್ತು ಬಹಿರಂಗಪಡಿಸುವಿಕೆಯ ಅಗತ್ಯತೆಗಳು) ನಿಯಮಗಳು, 2015ರ ತಿದ್ದುಪಡಿ ಮಾಡಿದಂತೆ ಮತ್ತು ಯಾವುದೇ ಇತರೆ ಅನ್ವಯವಾಗುವ ಕಾನೂನು, ನಿಯಮಗಳು ಮತ್ತು ನಿಬಂಧನೆಗಳು (ಸದ್ಯಕ್ಕೆ ಜಾರಿಯಲ್ಲಿರುವ ಯಾವುದೇ ಶಾಸನಬದ್ಧ ಮಾರ್ಪಾಡು(ಗಳು) ಅಥವಾ ಅದರ ಮರು–ಶಾಸನ(ಗಳು) ಸೇರಿದಂತೆ), ರಿಮೋಟ್ ಇ–ಮತದಾನ ("ಇ–ಮತದಾನ") ಪ್ರಕ್ರಿಯೆಯ ಮೂಲಕ ಈ ಕೆಳಗಿನ ವಿಶೇಷ ನಿರ್ಣಯಕ್ಕಾಗಿ ಡಿಜಿಟೈಡ್ ಸಲ್ಯೂಷನ್ಸ್ ಲಿಮಿಟೆಡ್ ("ಕಂಪನಿ") ಸದಸ್ಯರ ಅನುಮೋದನೆಯನ್ನು ಕೋರಲಾಗಿದೆ:

ಕ್ರ. ಸಂ.	ವಿಶೇಷ ನಿರ್ಣಯದ ವಿವರಣೆ
1	ಡಿಜಿಟೈಡ್ ಸಲ್ಯೂಷನ್ಸ್ ಲಿಮಿಟೆಡ್ – ಉದ್ಯೋಗಿ ಸ್ಟಾಕ್ ಆಯ್ಕೆ ಯೋಜನೆ 2026ಅನ್ನು ಪರಿಗಣಿಸಲು ಮತ್ತು ಅನುಮೋದಿಸಲು.
2	'ಡಿಜಿಟೈಡ್ ಸಲ್ಯೂಷನ್ಸ್ ಲಿಮಿಟೆಡ್ – ಉದ್ಯೋಗಿ ಸ್ಟಾಕ್ ಆಯ್ಕೆ ಯೋಜನೆ 2026' ಅಡಿಯಲ್ಲಿ ಕಂಪನಿಯ ಭವಿಷ್ಯದ ಅಂಗಸಂಸ್ಥೆ ಕಂಪನಿ(ಗಳು) ಸೇರಿದಂತೆ ಅಂಗಸಂಸ್ಥೆಯ ಅರ್ಹ ಉದ್ಯೋಗಿಗಳಿಗೆ ಉದ್ಯೋಗಿ ಸ್ಟಾಕ್ ಆಯ್ಕೆಗಳನ್ನು ನೀಡಲು ಅನುಮೋದಿಸಲು.
3	'ಡಿಜಿಟೈಡ್ ಸಲ್ಯೂಷನ್ಸ್ ಲಿಮಿಟೆಡ್ – ಉದ್ಯೋಗಿ ಸ್ಟಾಕ್ ಆಯ್ಕೆ ಯೋಜನೆ 2026' ಅನುಷ್ಠಾನಕ್ಕಾಗಿ ಟ್ರಸ್ಟ್ ಮಾರ್ಗದ ಮೂಲಕ ಷೇರುಗಳ ಸೆಕೆಂಡರಿ ಸ್ವಾಧೀನವನ್ನು ಪರಿಗಣಿಸಲು ಮತ್ತು ಅನುಮೋದಿಸಲು.
4	'ಡಿಜಿಟೈಡ್ ಸಲ್ಯೂಷನ್ಸ್ ಲಿಮಿಟೆಡ್ – ಉದ್ಯೋಗಿ ಸ್ಟಾಕ್ ಆಯ್ಕೆ ಯೋಜನೆ 2026' ಅನುಷ್ಠಾನಕ್ಕಾಗಿ ಟ್ರಸ್ಟ್‌ನಿಂದ ತನ್ನದೇ ಆದ ಷೇರುಗಳನ್ನು ಖರೀದಿಸಲು ಕಂಪನಿಯಿಂದ ಹಣದ ಪ್ರಾವಿಷನ್ ಮಾಡುವುದನ್ನು ಪರಿಗಣಿಸಲು ಮತ್ತು ಅನುಮೋದಿಸಲು.

ಎಂಸಿಎ ಸುತ್ತೋಲೆಗಳ ಅನುಸಾರವಾಗಿ, ತಮ್ಮ ಇ–ಮೇಲ್ ವಿಳಾಸಗಳನ್ನು ಶುಕ್ರವಾರ, ಮಾರ್ಚ್ 6, 2026ರವರೆಗೆ ("ಕಟ್ ಆಫ್ ದಿನಾಂಕ") ಕಂಪನಿ / ಡೆಪಾಸಿಟರಿ ಪಾರ್ಟಿಸಿಪೆಂಟ್ಸ್‌ರವರೊಂದಿಗೆ ನೋಂದಾಯಿಸಿಕೊಂಡಿರುವ ಸದಸ್ಯರಿಗೆ ಕಂಪನಿಯು ವಿವರಣಾತ್ಮಕ ಹೇಳಿಕೆಯೊಂದಿಗೆ ಅಂಚೆ ಮತಪತ್ರ ಸೂಚನೆಯ ವಿದ್ಯುನ್ಮಾನ ಪ್ರತಿಗಳನ್ನು ವಿದ್ಯುನ್ಮಾನ ವಿಧಾನದ ಮೂಲಕ ಸೋಮವಾರ, ಮಾರ್ಚ್ 9, 2026ರಂದು ರವಾನಿಸುವ ಕಾರ್ಯವನ್ನು ಪೂರ್ಣಗೊಳಿಸಿದೆ.

ಈ ಸೂಚನೆಯು ಕಂಪನಿಯ ವೆಬ್‌ಸೈಟ್: **www.digitide.com**, ಬಿಎಸ್‌ಇ ಲಿಮಿಟೆಡ್ ('ಬಿಎಸ್‌ಇ'): **www.bseindia.com** ಮತ್ತು ನ್ಯಾಷನಲ್ ಸ್ಟಾಕ್ ಎಕ್ಸ್‌ಚೇಂಜ್ ಆಫ್ ಇಂಡಿಯಾ ಲಿಮಿಟೆಡ್ ('ಎನ್‌ಎಸ್‌ಇ'): **www.nseindia.com** ವೆಬ್‌ಸೈಟ್‌ನ ಸಂಬಂಧಿತ ವಿಭಾಗಗಳಲ್ಲಿ ಮತ್ತು ಸಿಡಿಎಸ್‌ಎಲ್ ವೆಬ್‌ಸೈಟ್: **www.evotingindia.com** ನಲ್ಲಿಯೂ ಲಭ್ಯವಿದೆ.

ಎಂಸಿಎ ಸುತ್ತೋಲೆಗಳ ನಿಬಂಧನೆಗಳ ಪ್ರಕಾರ, ಸದಸ್ಯರು ಇ–ಮತದಾನ ಪ್ರಕ್ರಿಯೆಯ ಮೂಲಕ ಮಾತ್ರ ಮತ ಚಲಾಯಿಸಬಹುದು. ಸದಸ್ಯರ ಮತದಾನದ ಹಕ್ಕುಗಳನ್ನು ಕಟ್ ಆಫ್ ದಿನಾಂಕದಂದು ಅವರು ಹೊಂದಿರುವ ಕಂಪನಿಯ ಈಕ್ವಿಟಿ ಷೇರುಗಳ ಆಧಾರದ ಮೇಲೆ ಲೆಕ್ಕಹಾಕಲಾಗುತ್ತದೆ. ಕಟ್ ಆಫ್ ದಿನಾಂಕದಂದು ಸದಸ್ಯರಲ್ಲದ ಯಾವುದೇ ವ್ಯಕ್ತಿಯು ಈ ಸೂಚನೆಯನ್ನು ಮಾಹಿತಿ ಉದ್ದೇಶಗಳಿಗಾಗಿ ಮಾತ್ರ ಪರಿಗಣಿಸಬೇಕು.

ಕಂಪನಿಯು ತನ್ನ ಎಲ್ಲಾ ಸದಸ್ಯರಿಗೆ ಇ–ಮತದಾನ ಸೌಲಭ್ಯವನ್ನು ಒದಗಿಸುವ ಉದ್ದೇಶಕ್ಕಾಗಿ ಸೆಂಟ್ರಲ್ ಡಿಪಾಸಿಟರಿ ಸರ್ವೀಸಸ್ (ಇಂಡಿಯಾ) ಲಿಮಿಟೆಡ್ ('ಸಿಡಿಎಸ್‌ಎಲ್') ನ ಸೇವೆಗಳನ್ನು ತೊಡಗಿಸಿಕೊಂಡಿದೆ. ಇ–ಮತದಾನ ಸೌಲಭ್ಯವು ಈ ಕೆಳಗೆ ತಿಳಿಸಿರುವ ಅವಧಿಯಲ್ಲಿ ಲಭ್ಯವಿರುತ್ತದೆ:

ಇ–ಮತದಾನದ ಅವಧಿಯ ಪ್ರಾರಂಭ	ಬೆಳಿಗ್ಗೆ 9:00 ಗಂಟೆ (ಭಾರತೀಯ ಕಾಲಮಾನ) ಶುಕ್ರವಾರ, ಮಾರ್ಚ್ 13, 2026
ಇ–ಮತದಾನದ ಅವಧಿಯ ಮುಕ್ತಾಯ	ಸಂಜೆ 5:00 ಗಂಟೆ (ಭಾರತೀಯ ಕಾಲಮಾನ) ಶನಿವಾರ, ಏಪ್ರಿಲ್ 11, 2026
ಮತದಾನದ ಅರ್ಹತೆಗೆ ಕಟ್–ಆಫ್ ದಿನಾಂಕ	ಶುಕ್ರವಾರ, ಮಾರ್ಚ್ 6, 2026

ಶನಿವಾರ, ಏಪ್ರಿಲ್ 11, 2026ರ ಸಂಜೆ 5:00 ಗಂಟೆಯ ನಂತರ ಸಿಡಿಎಸ್‌ಎಲ್ ಇ–ಮತದಾನ ಸೌಲಭ್ಯವನ್ನು ನಿಷ್ಕ್ರಿಯಗೊಳಿಸುತ್ತದೆ.
ತಮ್ಮ ಇ–ಮೇಲ್ ವಿಳಾಸವನ್ನು ನವೀಕರಿಸದ ಸದಸ್ಯರು, ವಿದ್ಯುನ್ಮಾನ ರೂಪದಲ್ಲಿ ಹೊಂದಿರುವ ಷೇರುಗಳಿಗೆ ಸಂಬಂಧಿಸಿದಂತೆ ಡೆಪಾಸಿಟರಿಗಳ ಮೂಲಕ ಡೆಪಾಸಿಟರಿ ಪಾರ್ಟಿಸಿಪೆಂಟ್‌ಗಳೊಂದಿಗೆ ನೋಂದಾಯಿಸಿಕೊಳ್ಳುವಂತೆ ಕೋರಲಾಗಿದೆ. ಷೇರುದಾರರು ವಿದ್ಯುನ್ಮಾನವಾಗಿ ತಮ್ಮ ಮತ ಚಲಾಯಿಸಲು ಅಂಚೆ ಮತಪತ್ರ ಸೂಚನೆಯಲ್ಲಿನ "ಮತದಾನ ಸೂಚನೆಗಳು" ವಿಭಾಗದ ಅಡಿಯಲ್ಲಿ ಟಿಪ್ಪಣಿಗಳಲ್ಲಿನ ಸೂಚನೆಗಳನ್ನು ಓದಲು ಕೋರಲಾಗಿದೆ.

ರಿಮೋಟ್ ಇ–ಮತದಾನ ಪ್ರಕ್ರಿಯೆಯನ್ನು ನ್ಯಾಯಯುತ ಮತ್ತು ಪಾರದರ್ಶಕ ರೀತಿಯಲ್ಲಿ ನಡೆಸಲು, ಮಂಡಳಿಯು ಮೆ॥ ಡಿಪಿವಿ & ಅಸೋಸಿಯೇಟ್ಸ್, ಪ್ರಾಕ್ಟೀಸಿಂಗ್ ಕಂಪನಿ ಸೆಕ್ರೆಟೀಸ್ ಪರಿಶೀಲಕರಾಗಿ ನೇಮಿಸಿದೆ.

ಇ–ಮತದಾನದ ಪರಿಶೀಲನೆ ಪೂರ್ಣಗೊಂಡ ನಂತರ ಪರಿಶೀಲಕರು ತಮ್ಮ ವರದಿಯನ್ನು ಅಧ್ಯಕ್ಷರಿಗೆ ಅಥವಾ ಅಧ್ಯಕ್ಷರು ನಿಯೋಜಿಸಿದ ಯಾವುದೇ ಇತರ ವ್ಯಕ್ತಿಗೆ ಸಲ್ಲಿಸುತ್ತಾರೆ ಮತ್ತು ಇ–ಮತದಾನ ಮುಗಿದ ಎರಡು ಕೆಲಸದ ದಿನಗಳೊಳಗೆ ಫಲಿತಾಂಶಗಳನ್ನು ಪ್ರಕಟಿಸಲಾಗುತ್ತದೆ ಮತ್ತು ಕಂಪನಿಯ ವೆಬ್‌ಸೈಟ್‌ನಲ್ಲಿ ಅಂದರೆ **www.digitide.com** ಮತ್ತು ಸಿಡಿಎಸ್‌ಎಲ್ ವೆಬ್‌ಸೈಟ್‌ನಲ್ಲಿ ಅಂದರೆ **www.evotingindia.com** ನಲ್ಲಿ ಪ್ರದರ್ಶಿಸಲಾಗುತ್ತದೆ ಮತ್ತು ಸ್ಟಾಕ್ ಎಕ್ಸ್‌ಚೇಂಜ್‌ಗಳು, ಡೆಪಾಸಿಟರಿಗಳಿಗೆ ತಿಳಿಸಲಾಗುತ್ತದೆ.

ಇ–ಮತದಾನಕ್ಕೆ ಸಂಬಂಧಿಸಿದ ಯಾವುದೇ ಪ್ರಶ್ನೆಗಳು ಅಥವಾ ಕುಂದುಕೊರತೆಗಳಿಗಾಗಿ, ಷೇರುದಾರರು ಈ ಕೆಳಗಿನವರನ್ನು ಸಂಪರ್ಕಿಸಲು ಕೋರಲಾಗಿದೆ:

1. ಶ್ರೀ ರಾಕೇಶ್ ದಳ್ವಿ, ಸೀನಿಯರ್ ಮ್ಯಾನೇಜರ್, ಸೆಂಟ್ರಲ್ ಡಿಪಾಸಿಟರಿ ಸರ್ವೀಸಸ್ (ಇಂಡಿಯಾ) ಲಿಮಿಟೆಡ್ (ಸಿಡಿಎಸ್‌ಎಲ್), ಎ ವಿಂಗ್, 25ನೇ ಮಹಡಿ, ಮ್ಯಾರಥಾನ್ ಫ್ಯೂಚುರೆಕ್ಸ್, ಮಫತ್ಲಾಲ್ ಮಿಲ್ ಕಾಂಪೌಂಡ್ಸ್, ಎನ್ ಎಂ ಜೋಶಿ ಮಾರ್ಗ, ಲೋವರ್ ಪರೇಲ್ (ಪೂರ್ವ), ಮುಂಬೈ–400013 ಅಥವಾ **helpdesk.evoting@cdslindia.com** ಗೆ ಇಮೇಲ್ ಕಳುಹಿಸಿ ಅಥವಾ ಟೋಲ್ ಫ್ರೀ ಸಂಖ್ಯೆ 1800 21 09911 ಗೆ ಕರೆ ಮಾಡಿ.
2. ಶ್ರೀ ಎಸ್ ಗಿರಿಧರ್, ಇಂಟಿಗ್ರೇಟೆಡ್ ರಿಜಿಸ್ಟ್ರಿ ಮ್ಯಾನೇಜ್ಮೆಂಟ್ ಸರ್ವೀಸಸ್ ಪ್ರೈವೇಟ್ ಲಿಮಿಟೆಡ್, 2ನೇ ಮಹಡಿ, ಕೆನ್ಸೆಸ್ ಟವರ್ಸ್, ನಂ. 1 ರಾಮಕೃಷ್ಣ ಸ್ಟ್ರೀಟ್, ನಾರ್ತ್ ಉಸ್ಮಾನ್ ರಸ್ತೆ, ಟಿ ನಗರ, ಚೆನ್ನೈ–600 017 ಅಥವಾ ಕಂಪನಿ ಹೆಸರು ಮತ್ತು ಫೋಲಿಯೊ ಸಂಖ್ಯೆ / ಡಿಪಿ ಐಡಿ ಕ್ಲೈಂಟ್ ಐಡಿಯನ್ನು ನಮೂದಿಸಿ **irg@integratedindia.in** ಗೆ ಇಮೇಲ್ ಕಳುಹಿಸಬಹುದು ಅಥವಾ ದೂರವಾಣಿ ಸಂಖ್ಯೆ 080 23460815/816/817/818 ಕ್ಕೆ ಕರೆಮಾಡಬಹುದು.

ಡಿಜಿಟೈಡ್ ಸೊಲ್ಯೂಷನ್ಸ್ ಲಿಮಿಟೆಡ್ ಪರವಾಗಿ
ಸಹಿ/–
ದಿನಾಂಕ : 09.03.2026 ನೀರಜ್ ಮನ್‌ಚಂದಾ
ಸ್ಥಳ : ಬೆಂಗಳೂರು ಕಂಪನಿ ಕಾರ್ಯದರ್ಶಿ ಮತ್ತು ಕಂಪ್ಲೈನ್ಸ್ ಅಧಿಕಾರಿ

ವಾಣಿಜ್ಯ ಸಿಲಿಂಡರ್ ಏಕಾಏಕಿ ಸರಬರಾಜು ಸ್ಥಗಿತಕ್ಕೆ ಖಂಡನೆ
ಇಂದಿನಿಂದ ಹೋಟೆಲ್‌ಗಳು ಬಂದ್

ಬೆಂಗಳೂರು: ತೈಲ ಕಂಪನಿಗಳು ಏಕಾಏಕಿ ವಾಣಿಜ್ಯ ಬಳಕೆಯ ಗ್ಯಾಸ್ ಸಿಲಿಂಡರ್ ಸರಬರಾಜನ್ನು ಸ್ಥಗಿತಗೊಳಿಸಿರುವ ಹಿನ್ನೆಲೆಯಲ್ಲಿ, ಮಾ.10 ರಿಂದ ನಗರದ ಹೋಟೆಲ್‌ಗಳನ್ನು ಬಂದ್ ಮಾಡಲು ಬೆಂಗಳೂರು ಹೋಟೆಲುಗಳ ಸಂಘ ನಿರ್ಧರಿಸಿದೆ.

ಈ ಬಗ್ಗೆ ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಘದ ಗೌರವಾಧ್ಯಕ್ಷ ಪಿ.ಸಿ. ರಾವ್, ವಾಣಿಜ್ಯ ಸಿಲಿಂಡರ್‌ಗಳು ಸರಿಯಾದ ಸಮಯಕ್ಕೆ ಸಿಗುತ್ತಿಲ್ಲ. ಅಲ್ಲದೇ, ಗ್ಯಾಸ್ ಸಿಲಿಂಡರ್ ಸರಬರಾಜನ್ನೂ ನಿಲ್ಲಿಸಿದ್ದಾರೆ. ಹೋಟೆಲ್ ಉದ್ಯಮ ಅಗತ್ಯ ಸೇವೆಯ ಅಡಿಯಲ್ಲಿ ಬರುವುದರಿಂದ ಇದನ್ನೇ ಅವಲಂಬಿಸಿರುವ ಜನಸಾಮಾನ್ಯರು, ಹಿರಿಯ ನಾಗರೀಕರು, ವಿದ್ಯಾರ್ಥಿಗಳು, ವೈದ್ಯಕೀಯ ಹಾಗೂ ಇನ್ನಿತರ ಸೇವೆಯಲ್ಲಿರುವ ಹೆಚ್ಚಿನ ಜನರಿಗೆ ತಮ್ಮ ದಿನನಿತ್ಯದ ತಿಂಡಿ-ತಿನಿಸುಗಳಿಗೆ ತೊಂದರೆಯಾಗಲಿದೆ ಎಂದು ತಿಳಿಸಿದ್ದಾರೆ.

ಗ್ಯಾಸ್ ಸರಬರಾಜು ಮತ್ತೆ ಸಾಮಾನ್ಯ ಸ್ಥಿತಿಗೆ ಬರುವವರೆಗೆ ನಮ್ಮ ಹೋಟೆಲ್ ಉದ್ಯಮವೂ ಸಂಕಷ್ಟವನ್ನು ಎದುರಿಸಬೇಕಾಗುತ್ತದೆ. ತೈಲ ಕಂಪನಿಗಳು 70 ದಿನಗಳವರೆಗೆ ಗ್ಯಾಸ್ ಸರಬರಾಜಿನಲ್ಲಿ ಯಾವುದೇ ಅಡಚಣೆ ಉಂಟಾಗುವುದಿಲ್ಲವೆಂದು ತಿಳಿಸಿದ್ದರು. ಹೀಗಿದ್ದರೂ ಏಕಾಏಕಿ ಸರಬರಾಜು ನಿಲ್ಲಿಸಿರುವುದು ಹೋಟೇಲು ಉದ್ಯಮಕ್ಕೆ ದೊಡ್ಡ ಹೊಡೆತವಾಗಿದೆ. ಆದ್ದರಿಂದ ಸಂಬಂಧಪಟ್ಟ ಕೇಂದ್ರ ಸಚಿವರುಗಳು ಈ ವಿಚಾರದಲ್ಲಿ ತಕ್ಷಣವೇ ಸೂಕ್ತ ಕ್ರಮ ಕೈಗೊಂಡು ವಾಣಿಜ್ಯ ಗ್ಯಾಸ್ ಸರಬರಾಜನ್ನು ಪುನರಾರಂಭ ಮಾಡಿ ಹೊಟೇಲು ಉದ್ಯಮಕ್ಕೆ ಸಹಕಾರ ನೀಡಬೇಕೆಂದು ಮನವಿ ಮಾಡಿದ್ದಾರೆ.

ಪ್ರತಿದಿನವೂ ಸಾವಿರಾರು ಜನಸಾಮಾನ್ಯರು, ಹಿರಿಯ ನಾಗರಿಕರು, ವಿದ್ಯಾರ್ಥಿಗಳು ಹಾಗೂ ವೈದ್ಯಕೀಯ ಸೇರಿದಂತೆ ವಿವಿಧ ವೃತ್ತಿಪರ ಸೇವೆಗಳಲ್ಲಿರುವ ಮಂದಿ ಆಹಾರಕ್ಕಾಗಿ ಹೋಟೆಲ್‌ಗಳನ್ನೇ ಅವಲಂಬಿಸಿದ್ದಾರೆ. ಹೀಗಿರುವಾಗ ಹೋಟೆಲ್‌ಗಳನ್ನು ಬಂದ್ ಮಾಡುವುದರಿಂದ ಸಾವಿರಾರು ಉದ್ಯೋಗಿಗಳಿಗೆ ಮತ್ತು ಗ್ರಾಹಕರಿಗೆ ಅನಾನುಕೂಲತೆಯನ್ನು ಉಂಟಾಗಲಿದೆ. ಆದರಿಂದ ಕೇಂದ್ರ ಸರ್ಕಾರ ಹಾಗೂ ಸಂಬಂಧಪಟ್ಟ ಸಚಿವರು ಈ ವಿಚಾರದಲ್ಲಿ ತಕ್ಷಣವೇ ಮಧ್ಯಪ್ರವೇಶಿಸಿ, ವಾಣಿಜ್ಯ ಗ್ಯಾಸ್ ಪೂರೈಕೆಯನ್ನು ಪುನರಾರಂಭಿಸುವ ಮೂಲಕ ಹೋಟೆಲ್ ಉದ್ಯಮಕ್ಕೆ ಸಹಕಾರ ನೀಡಬೇಕು ಎಂದು ಕರ್ನಾಟಕ ರಾಜ್ಯ ಹೋಟೆಲುಗಳ ಸಂಘದ ಉಪಾಧ್ಯಕ್ಷ ಮಧುಕರ್ ಎಂ ಶೆಟ್ಟಿ ಮನವಿ ಮಾಡಿದ್ದಾರೆ.

ರಾಷ್ಟ್ರೋತ್ಥಾನ ಆಸ್ಪತ್ರೆಯಲ್ಲಿ ಮಹಿಳಾ ದಿನಾಚರಣೆ

ಬೆಂಗಳೂರು: ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯ ಅಂಗವಾಗಿ ರಾಜರಾಜೇಶ್ವರಿ ನಗರದ ರಾಷ್ಟ್ರೋತ್ಥಾನ ಆಸ್ಪತ್ರೆಯಲ್ಲಿ ನಡೆದ ಮಹಿಳಾ ದಿನಾಚರಣೆಯಲ್ಲಿ ಸಂಗೀತ ಕಲಾವಿದೆ ಡಾ. ಸಂಗೀತಾ ಕಟ್ಟಿ ಅವರನ್ನು ಗೌರವಿಸಲಾಯಿತು.



ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಲೀಲಾ ರಾಮಚಂದ್ರ ಮತ್ತು ಸವಿತಾ ಸುಂದರೇಶ್ ಉಪಸ್ಥಿತರಿದ್ದರು. ಕಾರ್ಯಕ್ರಮದ ಅಂಗವಾಗಿ ಸಿಬ್ಬಂದಿಯಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆ ಯಿತು. ಅರ್ಪಣಾ ಸೇವಾ ಸಮಿತಿಯ ವತಿಯಿಂದ ಆಸ್ಪತ್ರೆಯ ಮಹಿಳಾ ಸಿಬ್ಬಂದಿಯನ್ನು ಗೌರವಿಸಲಾಯಿತು. ಇದೇ ಸಂದರ್ಭದಲ್ಲಿ ರಾಜೇಶ್ವರಿ ಅವರು ಮಹಿಳೆಯರ ಆರ್ಥಿಕ ಸ್ವಾತಂತ್ರ್ಯದ ಕುರಿತು ಮಾರ್ಗದರ್ಶನ ನೀಡಿದರು.

8 ರೂ.ಗೆ ಆರೋಗ್ಯ ಪ್ಯಾಕೇಜ್: ರಾಷ್ಟ್ರೋತ್ಥಾನ ಆಸ್ಪತ್ರೆಯಲ್ಲಿ ಮಾ.8ರಂದು ಮಹಿಳಾ ದಿನದ ವಿಶೇಷವಾಗಿ ಮಹಿಳೆಯರ ಆರೋಗ್ಯ ಜಾಗೃತಿಗಾಗಿ ರೂ. 8ಕ್ಕೆ ಮಹಿಳಾ ಆರೋಗ್ಯ ಪ್ಯಾಕೇಜ್ ವಿಶೇಷ ಯೋಜನೆ ನೀಡಲಾಗಿತ್ತು. ಇದರಿಂದ 200ಕ್ಕೂ ಹೆಚ್ಚು ಮಹಿಳೆಯರು ಪ್ರಯೋಜನ ಪಡೆದರು. ಈ ಕಾರ್ಯಕ್ರಮದಲ್ಲಿ ಉಚಿತ ಎಚ್‌ಪಿವಿ ತಪಾಸಣೆ ಆರಂಭಿಸಲಾಗಿದ್ದು, ಗರ್ಭಕಂಠ ಕ್ಯಾನ್ಸರ್ ಬಗ್ಗೆ ಜಾಗೃತಿ ಮೂಡಿಸಲಾಯಿತು.

ದಿನಾಚರಣೆ



ಡಾ.ರಾಜ್ ಕುಮಾರ್ ಗಾಜಿನ ಮನೆ ಅವರಣದಲ್ಲಿ ಜಿಬಿಎ-ಪಾಲಿಕೆ ಅಧಿಕಾರಿ ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘ ಏರ್ಪಡಿಸಿದ್ದ ವಿಶ್ವ ಮಹಿಳಾ ದಿನಾಚರಣೆ ಕಾರ್ಯಕ್ರಮಕ್ಕೆ ಮುಖ್ಯ ಆಯುಕ್ತ ಮಹೇಶ್ವರ ರಾವ್ ಚಾಲನೆ ನೀಡಿದ ಬಳಿಕ ಚಿತ್ರನಟಿಯರಾದ ಜಯಪ್ರದಾ, ಮಹಾಲಕ್ಷ್ಮಿ ಸೇರಿ ಹಲವರನ್ನು ಸನ್ಮಾನಿಸಲಾಯಿತು.

ಕಿರುಸುದ್ದಿ

ಗುಜರಿ ಅಂಗಡಿಯಲ್ಲಿ ಬೆಂಕಿ: ಅಪಾರ ನಷ್ಟ



ಬೆಂಗಳೂರು: ಸೋಮವಾರ ಕಾಟನ್ ಪೇಟೆ ಪೊಲೀಸ್ ಠಾಣೆ ವ್ಯಾಪ್ತಿಯ ಗುಜರಿ ಅಂಗಡಿಯೊಂದರಲ್ಲಿ ಏಕಾಏಕಿ ಬೆಂಕಿ ಕಾಣಿಸಿಕೊಂಡು ಹೊತ್ತಿ ಉರಿದಿದೆ. ಜಾಲಿಮೊಹಲ್ಲಾದ ಗುಜರಿ ಅಂಗಡಿಯೊಂದರಲ್ಲಿ ಮಧ್ಯಾಹ್ನ 1 ಗಂಟೆ ಸುಮಾರಿನಲ್ಲಿ ಬೆಂಕಿ ಕಾಣಿಸಿಕೊಂಡ ದಟ್ಟ ಹೊಗೆ ಆವರಿಸಿದೆ. ಅಕ್ಕಪಕ್ಕದ ಅಂಗಡಿಯವರು ಗಾಬರಿಯಾಗಿ ತಕ್ಷಣ ಅಗ್ನಿಶಾಮಕ ದಳಕ್ಕೆ ವಿಷಯ ತಿಳಿಸಿದ್ದಾರೆ. ಸುದ್ದಿ ತಿಳಿದು ನಾಲ್ಕು ಅಗ್ನಿಶಾಮಕ ವಾಹನಗಳೊಂದಿಗೆ ಸಿಬ್ಬಂದಿ ಆಗಮಿಸಿ ಬೆಂಕಿಯನ್ನು ನಂದಿಸಿ ಹೆಚ್ಚಿನ ಅನಾಹುತ ತಪ್ಪಿಸಿದ್ದಾರೆ. ಅದೃಷ್ಟವಶಾತ್ ಯಾವುದೇ ಪ್ರಾಣಾಪಾಯ ಸಂಭವಿಸಿಲ್ಲ. ಸ್ಥಳಕ್ಕೆ ಕಾಟನ್‌ಪೇಟೆ ಠಾಣೆ ಪೊಲೀಸರು ಆಗಮಿಸಿ ಪರಿಶೀಲನೆ ನಡೆಸಿ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದಾರೆ.

ಮಹಿಳೆಯರಿಗೆ ಮೊಬೈಲ್ ರಿಪೇರಿ ತರಬೇತಿ

ಬೆಂಗಳೂರು: ಅಬಲಾಶ್ರಮದಲ್ಲಿ ಮಹಿಳೆಯರಿಗಾಗಿ ಉಚಿತ ಮೊಬೈಲ್ ರಿಪೇರಿ ತರಬೇತಿ ಹಾಗೂ ವೃದ್ಧರ ಆರೈಕೆ ತರಬೇತಿ ಯೋಜನೆ-2026ರ ಏಪ್ರಿಲ್ ತಿಂಗಳಿಂದ ಆರಂಭವಾಗಲಿದೆ. ಮೊಬೈಲ್ ರಿಪೇರಿ ಉಚಿತ ತರಬೇತಿಯು ಏ.6ರಿಂದ ಪ್ರಾರಂಭವಾಗಲಿದೆ. ಈ ತರಬೇತಿಯು ಎರಡು ತಿಂಗಳ ಅವಧಿಯದ್ದಾಗಿದೆ. ಸ್ವ-ಉದ್ಯೋಗ ಪ್ರಾರಂಭಿಸಲು ಆಸಕ್ತರಿರುವ 18ರಿಂದ 45 ವರ್ಷ ವಯಸ್ಸಿನ ಮಹಿಳೆಯರು ಈ ತರಬೇತಿ ಪಡೆಯುವುದಕ್ಕೆ ಅರ್ಹರಿದ್ದಾರೆ. ಅಗತ್ಯ ಇರುವ ಮಹಿಳೆಯರಿಗೆ ಉಚಿತ ಊಟ ಮತ್ತು ವಸತಿ ಸೌಲಭ್ಯ ಒದಗಿಸಲಾಗುತ್ತದೆ. ಹಿರಿಯ ಆರೈಕೆ ಮತ್ತು ಸಹಾಯಕಿ ತರಬೇತಿಯು ಮೂರು ತಿಂಗಳ ಅವಧಿಯದ್ದಾಗಿದೆ. ಎಸ್ ಎಸ್‌ಎಲ್‌ಸಿ ಉತ್ತೀರ್ಣ ಅಥವಾ ಅನುತ್ತೀರ್ಣರಾದವರು ಅರ್ಜಿ ಸಲ್ಲಿಸಲು ಅರ್ಹರಾಗಿದ್ದಾರೆ. ಗ್ರಾಮೀಣ ಮತ್ತು ಆರ್ಥಿಕವಾಗಿ ಹಿಂದುಳಿದ ಮಹಿಳೆಯರಿಗೆ ವಿಶೇಷ ಅವಕಾಶವಿದೆ. ಸೇವಾ ಭಾವನೆ, ಕಾಳಜಿ ಮತು ಸಮಾಜಪರ ಜವಾಬ್ದಾರಿಯ ಮನೋಭಾವ ಹೊಂದಿರುವ ಮಹಿಳೆಯರು ಈ ತರಬೇತಿಗೆ ಅರ್ಜಿ ಸಲ್ಲಿಸಬಹುದಾಗಿದೆ. ತರಬೇತಿಯಲ್ಲಿ ಹಿರಿಯರ ದೈನಂದಿನ ವೈಯಕ್ತಿಕ ಆರೈಕೆ, ಔಷಧಿ ನೀಡುವ ಸಮಯ ಪಾಲನೆ ಮತ್ತು ಆರೋಗ್ಯ ಮೇಲ್ವಿಚಾರಣೆ, ರಕ್ತದ ಒತ್ತಡ ಹಾಗೂ ಸಕ್ಕರೆ ಮಟ್ಟ ಪರಿಶೀಲನೆ, ತುರ್ತು ಸಂದರ್ಭಗಳಲ್ಲಿ ಪ್ರಾಥಮಿಕ ಸಹಾಯ, ಮಾನಸಿಕ ಹಾಗೂ ಭಾವನಾತ್ಮಕ ಬೆಂಬಲ ಇತ್ಯಾದಿಗಳನ್ನು ಕಲಿಸಲಾಗುವುದು. ತರಬೇತಿಯು ಥಿಯರಿ ಮತ್ತು ಪ್ರಾಯೋಗಿಕವಾಗಿರುತ್ತದೆ. ಆಸಕ್ತ ಮಹಿಳೆಯರು ತಮ್ಮ ಹೆಸರುಗಳನ್ನು ಮುಂಚಿತವಾಗಿ ನೋಂದಾಯಿಸಿಕೊಳ್ಳಬಹುದು. ಸೀಟುಗಳು ಸೀಮಿತವಾಗಿವೆ. ಹೆಚ್ಚಿನ ಮಾಹಿತಿಗಾಗಿ 9449106410 ಅಥವಾ 8792821752 ಈ ಮೊಬೈಲ್ ಸಂಖ್ಯೆ ಅಥವಾ ಅಬಲಾಶ್ರಮ, ಡಿ.ವಿ.ಜಿ ರಸ್ತೆ, ಬಸವನಗುಡಿ, ಬೆಂಗಳೂರು - 04 ಈ ವಿಳಾಸವನ್ನು ಸಂಪರ್ಕಿಸಬಹುದಾಗಿದೆ.

ಐದು ನಗರ ಪಾಲಿಕೆಗಳ ವಾರ್ಡ್‌ವಾರು ಮತಪಟ್ಟಿ ಪ್ರಕಟ | ಕರಡುಪಟ್ಟಿಯಲ್ಲಿ 88,92,528 ಮತದಾರರು
ಪರಿಷ್ಕೃತ ಮತದಾರರ ಪಟ್ಟಿ ಬಿಡುಗಡೆ

ಬೆಂಗಳೂರು: ಜಿಬಿಎ ವ್ಯಾಪ್ತಿಯ ಐದು ನಗರ ಪಾಲಿಕೆಗಳ ವಾರ್ಡ್‌ವಾರು ಪರಿಷ್ಕೃತ ಕರಡು ಮತದಾರರ ಪಟ್ಟಿಯಲ್ಲಿ 88,92,528 ಮತದಾರರಿದ್ದಾರೆ ಎಂದು ಜಿಲ್ಲಾ ಚುನಾವಣಾಧಿಕಾರಿ ಹಾಗೂ ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ತಿಳಿಸಿದರು.

ಜಿಬಿಎ ವ್ಯಾಪ್ತಿಯಲ್ಲಿ ಚುನಾವಣೆಗೆ ಸಂಬಂಧಿಸಿದಂತೆ ಸೋಮವಾರ ಪರಿಷ್ಕೃತ ಕರಡು ಮತದಾರರ ಪಟ್ಟಿಯನ್ನು ಬಿಡುಗಡೆ ಮಾಡಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಜ.19ರಂದು ಕರಡು ಮತದಾರರ ಪಟ್ಟಿಯನ್ನು ಬಿಡುಗಡೆಗೊಳಿಸಲಾಗಿತ್ತು. ಅದರಲ್ಲಿದ್ದ ಲೋಪದೋಷ ಸರಿಪಡಿಸಿ, ಮಾರ್ಪಾಡು ಮಾಡಿ ಪ್ರಸ್ತುತ ಪರಿಷ್ಕೃತ ಮತದಾರರ ಪಟ್ಟಿಯನ್ನು ಬಿಡುಗಡೆ ಮಾಡಲಾಗುತ್ತಿದೆ ಎಂದು ಹೇಳಿದರು.

ಜಿಬಿಎ ವ್ಯಾಪ್ತಿಯಲ್ಲಿ ಬೆಂಗಳೂರು ಕೇಂದ್ರ, ಬೆಂಗಳೂರು ಉತ್ತರ, ಬೆಂಗಳೂರು ದಕ್ಷಿಣ, ಬೆಂಗಳೂರು ಪೂರ್ವ ಮತ್ತು ಬೆಂಗಳೂರು ಪಶ್ಚಿಮ ನಗರ ಪಾಲಿಕೆಗಳು ಸೇರಿದಂತೆ ಒಟ್ಟು 5ನಗರ ಪಾಲಿಕೆಗಳ ವ್ಯಾಪ್ತಿಯಲ್ಲಿ 369 ವಾರ್ಡಗಳು ರಚನೆಯಾಗಿದೆ. ಜಿಬಿಎ ನಗರ ಪಾಲಿಕೆಗಳ ಚುನಾವಣೆಗೆ ಸಂಬಂಧಿಸಿದಂತೆ ಪರಿಷ್ಕೃತ ಕರಡು ಮತದಾರರ ಪಟ್ಟಿಯಲ್ಲಿ 45,69,752 ಪುರುಷರು, 43,21,143 ಮಹಿಳೆಯರು ಹಾಗೂ 1,635 ಇತರೆ ಮತದಾರರು ಸೇರಿದಂತೆ, ಒಟ್ಟು 88,92,528 ಮತದಾರರು ಇದ್ದು, 8,024 ಮತಪಟ್ಟೆಗಳು ಬರಲಿವೆ ಎಂದು ವಿವರಿಸಿದರು.

ಜಿಬಿಎ ವ್ಯಾಪ್ತಿಯಲ್ಲಿ ಒಟು 369 ವಾರ್ಡ್‌ಗಳ ಪೈಕಿ ಬೆಂಗಳೂರು ದಕ್ಷಿಣ ನಗರಪಾಲಿಕೆಯ ವಾರ್ಡ್ ಸಂಖ್ಯೆ 51-ಸುಬ್ರಮಣ್ಯ ಪುರ ಅತಿ ಹೆಚ್ಚು 54,026 ಮತದಾರರನ್ನು ಹೊಂದಿರುತ್ತದೆ. ಬೆಂಗಳೂರು ಪೂರ್ವ ನಗರಪಾಲಿಕೆಯ ವಾರ್ಡ್ ಸಂಖ್ಯೆ 16-ಕೊತ್ತೂರು ಅತಿ ಕಡಿಮೆ 10,940 ಮತದಾರರನ್ನು



ಹೊಂದಿರುತ್ತದೆ. ಮತದಾರರ ಪಟ್ಟಿ ಸಿದ್ದಪಡಿಸುವಿಕೆಯ ಕಾರ್ಯಕ್ರಮದ ವೇಳಾ ಪಟ್ಟಿಯಂತೆ ಮಾ.10 ರಿಂದ 16 ರವರೆಗೆ ಹಕ್ಕುಗಳು ಮತ್ತು ಆಕ್ಷೇಪಣೆಗಳು ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ. ಒಂದು ವೇಳೆ ಪರಿಷ್ಕೃತ ಕರಡು ಮತದಾರರ ಪಟ್ಟಿಯಲ್ಲಿ ಹೆಸರು ಇಲ್ಲವಾಗಿದ್ದಲ್ಲಿ ಅಥವಾ ಮತ್ತೊಂದು ವಾರ್ಡ್ ವ್ಯಾಪ್ತಿಯಲ್ಲಿ ಹೆಸರು ಪ್ರಕಟವಾಗಿದ್ದಲ್ಲಿ ಹಕ್ಕುಗಳು ಮತ್ತು ಆಕ್ಷೇಪಣೆಗಳನ್ನು ಸಲ್ಲಿಸಬಹುದಾಗಿದೆ ಎಂದರು.

ಪರಿಷ್ಕೃತ ಕರಡು ಮತದಾರರ ಪಟ್ಟಿಯನ್ನು ಪ್ರಚುರಪಡಿಸಿರುವ ಕುರಿತು ಸಾರ್ವಜನಿಕರು, ಮತದಾರರಿಗೆ ಮಾಧ್ಯಮದ (ಮುದ್ರಣ ಮತ್ತು ದೃಶ್ಯ) ಮುಖೇನ ಮಾಹಿತಿಯನ್ನು ನೀಡಲು ಮತ್ತು ಒಟ್ಟಾರೆ ದೋಷರಹಿತ ಅಂತಿಮ ಮತದಾರರ ಪಟ್ಟಿಯನ್ನು ಸಿದ್ದಪಡಿಸಿ ಏ.6 ರಂದು ಅಂತಿಮ ಮತದಾರರ ಪಟ್ಟಿಯನ್ನು ಪ್ರಕಟಿಸಲಾಗುವುದು ಎಂದರು.

ವೆಬ್‌ಸೈಟ್‌ನಲ್ಲಿ ಮತದಾರರ ಪಟ್ಟಿ

ಮತದಾರರು ವಾರ್ಡವಾರು ಮತದಾರರ ಪಟ್ಟಿಯಲ್ಲಿ ತಮ್ಮ ಹೆಸರನ್ನು ಆನ್‌ಲೈನ್‌ನಲ್ಲಿ ಎಪಿಕ್ ಸಂಖ್ಯೆ ಅಥವಾ ಅವರ ಹೆಸರಿನ ಮೂಲಕ ಹುಡುಕಲು ವ್ಯವಸ್ಥೆಯನ್ನು ಕಲ್ಪಿಸುವ ನಿಟ್ಟಿನಲ್ಲಿ ವಾರ್ಡ್‌ವಾರು ಪರಿಷ್ಕೃತ ಕರಡು ಮತದಾರರ ಪಟ್ಟಿಯನ್ನು ಜಿಬಿಎಸ ಅಧಿಕೃತ ಜಾಲತಾಣ https:// gba. karnataka.gov.in/home ರಲ್ಲಿ ಪಿ.ಡಿ.ಎಫ್. ಆವೃತ್ತಿಯನ್ನು ಹಾಕಲಾಗುವುದು. ಸಾರ್ವಜನಿಕರರು ತಮ್ಮ ಹೆಸರು ಮತದಾರರ ಪಟ್ಟಿಯಲ್ಲಿ ಸೇರ್ಪಡೆಯಾದ ಬಗ್ಗೆ ಪರಿಶೀಲಿಸಿಕೊಂಡು ಖಚಿತಪಡಿಸಿಕೊಳ್ಳಬಹುದಾಗಿದೆ ಎಂದು ಜಿಲ್ಲಾ ಚುನಾವಣಾಧಿಕಾರಿ ಮಹೇಶ್ವರ್ ರಾವ್ ಹೇಳಿದರು.

ಬೂತ್ ಮಟ್ಟದ ಏಜೆಂಟ್ ನೇಮಕ

ನೋಂದಾಯಿತ ಮತ್ತು ಮಾನ್ಯತೆ ಪಡೆದ ರಾಜಕೀಯ ಪಕ್ಷಗಳು ಪ್ರತಿ ವಾರ್ಡಿನ ಪ್ರತಿ ಮತಗಟ್ಟೆಗೆ ಒಬ್ಬರಂತೆ ಬೂತ್ ಲೆವಲ್ ಏಜೆಂಟ್ ನೇಮಕಾತಿ ಮಾಡಿ, ಮತಗಟ್ಟೆ ಅಧಿಕಾರಿಗಳಿಗೆ ಎಲ್ಲಾ ಅರ್ಹ ಮತದಾರರ ನೋಂದಣಿ ಕಾರ್ಯದಲ್ಲಿ ಸಹಕಾರ ನೀಡಬೇಕೆಂದು ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ತಿಳಿಸಿದರು.

ಪಾಲಿಕೆವಾರು ಮತದಾರರ ಸಹಾಯವಾಣಿ

ಮತದಾರರ ಪಟ್ಟಿಗಳ ಪರಿಷ್ಕರಣೆಯ ವೇಳಾಪಟ್ಟಿಯ ಕುರಿತು ವ್ಯಾಪಕ ಪ್ರಚಾರಕ್ಕೆ ಕ್ರಮ ಕೈಗೊಳ್ಳಲಾಗಿದ್ದು, ಕರಡು ಮತದಾರರ ಪಟ್ಟಿಯನ್ನು ರಾಜಕೀಯ ಪಕ್ಷಗಳಿಗೆ ವಿತರಿಸಲಾಗುತ್ತಿದೆ. ಮತದಾರರ ಅನುಕೂಲಕ್ಕಾಗಿ ಬೆಂಗಳೂರು ಕೇಂದ್ರ 080-22975803, ಬೆಂಗಳೂರು ಉತ್ತರ 080-22975936, ಬೆಂಗಳೂರು ದಕ್ಷಿಣ : 9480685704, ಬೆಂಗಳೂರು ಪೂರ್ವ 9480685706, ಬೆಂಗಳೂರು ಪಶ್ಚಿಮ : 9480685703 ಸಂಪರ್ಕಿಸಬಹುದಾಗಿದೆ ಎಂದು ಜಿಲ್ಲಾ ಚುನಾವಣಾಧಿಕಾರಿ ಮಹೇಶ್ವರ್ ರಾವ್ ತಿಳಿಸಿದರು.

ಬೆಸ್ಕಾಂ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದ ಸಭೆ
ಬೆಸ್ಕಾಂ ಜತೆ ಎಲ್ಲರೂ ಕೈಜೋಡಿಸಿ

ಬೆಂಗಳೂರು: ನಗರದಲ್ಲಿ ಪಿಎಮ್ ಸೂರ್ಯ ಘರ್ ಯೋಜನೆ ಅನುಷ್ಠಾನಕ್ಕೆ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘ ಹಾಗೂ ವಸತಿ ಸಮುಚ್ಚಯಗಳ ಸಂಘದ ಪದಾಧಿಕಾರಿಗಳು, ಬೆಸ್ಕಾಂ ಜತೆ ಕೈಜೋಡಿಸಿ ಯೋಜನೆ ಯಶಸ್ವಿಗೊಳಿಸಬೇಕು ಎಂದು ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ ಡಾ.ಎನ್.ಶಿವಶಂಕರ ಮನವಿ ಮಾಡಿದರು.

ಪಿಎಮ್ ಸೂರ್ಯ ಘರ್ ಯೋಜನೆ ಅನುಷ್ಠಾನ ಕುರಿತು ಶನಿವಾರ ಬೆಸ್ಕಾಂ ನಿಗಮ ಕಚೇರಿಯಲ್ಲಿ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದ ಪದಾಧಿಕಾರಿಗಳು ಹಾಗೂ ಅಪಾರ್ಟ್‌ಮೆಂಟ್ ನಿವಾಸಿಗಳ ಜತೆ ಚರ್ಚೆ ನಡೆಸಿದ ಅವರು, ಯೋಜನೆ ಅನುಷ್ಠಾನಕ್ಕೆ ಬೆಸ್ಕಾಂ ಅಧಿಕಾರಿಗಳ ಜತೆ ಸಹಕರಿಸಬೇಕು. ಬೆಸ್ಕಾಂ ಕ್ಷೇತಾಧಿಕಾರಿಗಳು ಕೂಡ ಮುಂದಿನ ದಿನಗಳಲ್ಲಿ ಅಪಾರ್ಟ್‌ಮೆಂಟ್ ಸಂಘದ ಪದಾಧಿಕಾರಿಗಳ ಜತೆ ನಿರಂತರ ಸಮರ್ಪಕ ಸಾಧಿಸಿ ಯೋಜನೆ ಅನುಷ್ಠಾನಕ್ಕೆ ಅವರ ಮನವಲಿಸಬೇಕು. ಪಿಎಮ್ ಸೂರ್ಯ ಘರ್ ಯೋಜನೆಗೆ ಸಂಬಂಧಿಸಿದ ಮಾಹಿತಿಯನ್ನು ಹಂಚಿಕೊಂಡು ಅರಿವು ಮೂಡಿಸಬೇಕು ಎಂದು ಸೂಚನೆ ನೀಡಿದರು. ಗ್ರಾಹಕರು ಮೇಲ್ಛಾವಣಿ ಸೌರ ಘಟಕವನ್ನು ಅಳವಡಿಸಿಕೊಳ್ಳಲು ಅಗತ್ಯವಾದ ಸಹಾಯವನ್ನು ನೀಡಲು ಬೆಸ್ಕಾಂ ಸದಾ ಬದ್ಧವಾಗಿದೆ ಎಂದು ಅಭಿಪ್ರಾಯಪಟ್ಟರು. ಪಿಎಮ್ ಸೂರ್ಯ ಘರ್ ಯೋಜನೆಯಲ್ಲಿ ಬೆಸ್ಕಾಂ ವ್ಯಾಪ್ತಿಯಲ್ಲಿ ಈಗಾಗಲೇ ಒಟ್ಟು 4.87 ಮೆಗಾವಾಟ್ ಸಾಮರ್ಥ್ಯದ ಮೇಲ್ಛಾವಣಿ ಸೌರ ವಿದ್ಯುತ್ ಘಟಕಗಳು ಅಳವಡಿಕೆಯಾಗಿದ್ದು, ಇದುವರೆಗೆ 137 ಅರ್ಜಿಗಳು ಬಂದಿವೆ ಎಂದು ತಿಳಿಸಲಾಯಿತು. ಇದರಿಂದ ನವೀಕರಿಸಬಹುದಾದ ಇಂಧನ ಬಳಕೆಗೆ ಗ್ರಾಹಕರಲ್ಲಿ ಆಸಕ್ತಿ ಹೆಚ್ಚುತ್ತಿರುವುದು ಸ್ಪಷ್ಟವಾಗುತ್ತಿದೆ ಎಂದರು.

ಮಹಿಳೆ ನಮ್ಮ ಬದುಕಿನ ಬೆನ್ನೆಲುಬು

ಬೆಂಗಳೂರು: ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯ ಅಂಗವಾಗಿ ಪಿಎಂಜೆ ಜ್ಯುವೆಲರ್ಸ್ ಆಯೋಜಿಸಿದ್ದ ವಿಶ್ವದ ಅತಿದೊಡ್ಡ ಆಭರಣ ಪ್ರದರ್ಶನ ಪ್ರದರ್ಶನಕ್ಕೆ ನಟ, ನಿರ್ದೇಶಕ ರಿಷಭ್ ಶೆಟ್ಟಿ ಅವರು ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ರಿಷಬ್ ಶೆಟ್ಟಿ ಮಾತನಾಡಿ, ಮಹಿಳೆಯರು ನಮ್ಮ ಬದುಕಿನ ಬೆನ್ನೆಲುಬು. ಅವರಿಗೆ ಈ ವಿಶೇಷ ದಿನದಂದು ನನ್ನ ಶುಭಾಶಯ, ಇಂತಹ ಅದ್ಭುತ ಆಭರಣ ಪ್ರದರ್ಶನಕ್ಕೆ ನಾನು ಸಾಕ್ಷಿಯಾಗುತ್ತಿರುವುದಕ್ಕೆ ತುಂಬಾ ಸಂತೋಷವಾಗಿದೆ ಎಂದರು. ಮೈಸೂರು ರಾಜಮನೆತನದ ಕಾಮಾಕ್ಷಿದೇವಿ ಹಾಗೂ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಸೌಮ್ಯ ರೆಡ್ಡಿ ಇದ್ದರು.



ಸ್ವಚ್ಛ ಬೆಂಗಳೂರು ರಾಯಭಾರಿಗಳ ನಿಯೋಜನೆಗೆ ಚಾಲನೆ
ಮರುಬಳಕೆಯಿಂದ ತ್ಯಾಜ್ಯ ಸಮಸ್ಯೆ ಪರಿಹಾರ

ಬೆಂಗಳೂರು: ಸ್ವಚ್ಛ ಸರ್ವೇಕ್ಷಣಾ ಅಭಿಯಾನದಲ್ಲಿ ಬೆಂಗಳೂರಿಗೆ ಉನ್ನತ ಶ್ರೇಣಿ ಬರಲು ಶ್ರಮವಹಿಸಿ ಕಾರ್ಯನಿರ್ವಹಿಸಬೇಕೆಂದು ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ತಿಳಿಸಿದರು.

ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಬೆಂಗಳೂರು ಘನತ್ಯಾಜ್ಯ ನಿರ್ವಹಣಾ ನಿಯಮಿತದ ವತಿಯಿಂದ ಸೋಮವಾರ ಸರ್.ಪುಟ್ಟಣ್ಣ ಚೆಟ್ಟಿ ಪುರಭವನನಲ್ಲಿ ಹಮ್ಮಿಕೊಳ್ಳಲಾದ ಸ್ವಚ್ಛ ಬೆಂಗಳೂರು 2026ಕ್ಕೆ ರಾಯಭಾರಿಗಳ ನಿಯೋಜನೆ ಕಾರ್ಯಕ್ರಮದಲ್ಲಿಮಾತನಾಡಿದಅವರು,ನಗರದಲ್ಲಿ ಉತ್ಪತ್ತಿಯಾಗುವ ಒಟ್ಟು ತ್ಯಾಜ್ಯದ ಶೇ. 45-50 ರಷ್ಟು ಭಾಗವನ್ನು ಈಗಾಗಲೇ ಮರುಬಳಕೆ ಮಾಡಲಾಗುತ್ತಿದೆ. ತ್ಯಾಜ್ಯವನ್ನು ವಿವಿಧ ರೀತಿಯಲ್ಲಿ ಮರುಬಳಕೆ ಮಾಡುವ ಮೂಲಕ ತ್ಯಾಜ್ಯ ಸಮಸ್ಯೆಗೆ ಪರಿಹಾರಕಂಡುಕೊಳ್ಳಬೇಕು.ಈಸಂಬಂಧಮುಂದಿನ 3-4 ವರ್ಷಗಳಲ್ಲಿತ್ಯಾಜ್ಯ ನಿರ್ವಹಣೆಯಲ್ಲಿ ಪರಿಣಾಮಕಾರಿ ಮಾರ್ಪಾಡುಗಳನ್ನು ತರಲಾಗು ವುದು ಎಂದು ತಿಳಿಸಿದರು.



ಹಸಿತ್ಯಾಜ್ಯವನ್ನು ಮೂಲದಲ್ಲಿಯೇ ಗೊಬ್ಬರ ವಾಗಿಸುವುದು, ಪ್ಲಾಸ್ಟಿಕ್ ಅನ್ನು ವಿದ್ಯುತ್ ಘಟಕಗಳಿಗೆ ಕಳುಹಿಸುವುದು, ಕಡಿಮೆ ಮೌಲ್ಯದ ಪ್ಲಾಸ್ಟಿಕ್ ಅನ್ನು ಸಿಮೆಂಟ್ ಕಾರ್ಖಾನೆಗಳಿಗೆ ಕಳುಹಿಸುವ ಮೂಲಕ ಇ.ಪಿ.ಆರ್ ಕ್ರೆಡಿಟ್ ಪಡೆಯಲಾಗುತ್ತಿದೆ. ಇದೇ ಮಾದರಿಯಲ್ಲಿ ವಿವಿಧ ಕಾರ್ಯಗಳಿಗೆ ತ್ಯಾಜ್ಯವನ್ನು ಪರಿಣಾಮಕಾರಿಯಾಗಿ ಮರುಬಳಕೆ ಮಾಡುವ ಮೂಲಕ ಲ್ಯಾಂಡ್ ಫಿಲೆಗೆ ಕಳುಹಿಸುವ ಪ್ರಮಾಣವನ್ನು ಕ್ರಮೇಣ ಕಡಿಮೆ ಮಾಡಲು ಸೂಕ್ತ ಕ್ರಮವಹಿಸಲಾಗುವುದೆಂದು ಹೇಳಿದರು.

ಲ್ಯಾಂಡ್ ಫಿಲೆಗೆ ಹೋಗುವ ಕಾಂಪ್ಯಾಕ್ಟರ ಸಂಖ್ಯೆ ಇಳಿಕೆ: ಲ್ಯಾಂಡ್ ಫಿಲ್‌ಗೆ ಹೋಗುವ ಕಾಂಪ್ಯಾಕ್ಟರ್‌ಗಳ ಸಂಖ್ಯೆ 400 ರಿಂದ 260ಕ್ಕೆ ಇಳಿಕೆಯಾಗಿದೆ. ರಾಜಾಜಿನಗರದಲ್ಲಿ ಶೇ.95 ರಷ್ಟು ಕಸ ವಿಂಗಡಣೆ ಆಗುತ್ತಿದೆ. ಚಾಮರಾಜಪೇಟೆಯ ಟ್ರಾನ್ಸಫರ್ ಸ್ಟೇಷನ್‌ನಲ್ಲಿ ಪರಿಣಾಮಕಾರಿಯಾಗಿ ಕಾರ್ಯ ನಡೆಯುತ್ತಿದ್ದು, ನಗರದಲ್ಲಿ ಕಡಿಮೆ ಪ್ರಮಾಣದಲ್ಲಿ ಕಸ ವಿಂಗಡಣೆ ಆಗುತ್ತಿರುವ ಪ್ರದೇಶಗಳಲ್ಲಿ ವಿವಿಧ ಕಾರ್ಯಕ್ರಮಗಳನ್ನು ರೂಪಿಸಿ ನಾಗರಿಕರಲ್ಲಿ ಅರಿವು ಮೂಡಿಸುವ ಕೆಲಸ ಮಾಡಬೇ ಕೆಂದು ಸೂಚಿಸಿದರು.

ಸ್ವಚ್ಛ ಸರ್ವೇಕ್ಷಣಾ-2025-26ಕ್ಕೆ ರಾಯಭಾರಿಗಳ ನೇಮಕ: ಸ್ವಚ್ಛ ಸರ್ವೇಕ್ಷಣಾ 2025-26ರ ರಾಯಭಾರಿಗಳಾಗಿ ಪದ್ಮಶ್ರೀ ಪುರಸ್ಕೃತ ಡಾ. ಮಂಜಮ್ಮ ಜೋಗತಿ, ನಟ ಅನಿರುದ್ಧ್, ಇಂಡಿಯಾ ರೈಸಿಂಗ್ ಟ್ರಸ್ಟ್ ಮುಖ್ಯಸ್ಥ ಅರುಣ್ ಪೈ, ಸಮಾಜ ಸೇವಕ ಕೆ.ಎಂ. ನಾಗರಾಜ್, ಲೆಟ್ಸ್ ಬಿ ದಿ ಚೇಂಜ್ ಸಂಸ್ಥೆಯ ಮುಖ್ಯಸ್ಥ ಅನಿರುದ್ಧ್ ದತ್ ಹಾಗೂ ಸಾಮಾಜಿಕ ಕಾರ್ಯಕರ್ತ ಅಭಿಲಾಶ್ ನಾಯರ್‌ನ್ನು ರಾಯಭಾರಿಗಳಾಗಿ ನೇಮಿಸಲಾಗಿದೆ ಎಂದರು.

ಅಗ್ನಿಪಥ್‌ಗೆ ಸಿಇಇ ಆನ್‌ಲೈನ್ ನೋಂದಣಿಗೆ ಆಹ್ವಾನ

ಬೆಂಗಳೂರು: ಭಾರತೀಯ ಸೇನೆಯು 2027ರ ನೇಮಕಾತಿ ವರ್ಷಕ್ಕಾಗಿ ಅಗ್ನಿಪಥ್ ಯೋಜನೆಯಲ್ಲಿ ಸಾಮಾನ್ಯ ಪ್ರವೇಶ ಪರೀಕ್ಷೆಗೆ (ಸಿಇಇ) ಆನ್‌ಲೈನ್ ನೋಂದಣಿಯನ್ನು ಅಧಿಕೃತವಾಗಿ ಘೋಷಿಸಿದೆ. ಕರ್ನಾಟಕದ ಎಲ್ಲಾ ಜಿಲ್ಲೆಗಳ ಪುರುಷ ಮತ್ತು ಮಹಿಳಾ ಅಭ್ಯರ್ಥಿಗಳು ಈ ನೇಮಕಾತಿ ಪ್ರಕ್ರಿಯೆಯಲ್ಲಿ ಭಾಗವಹಿಸಲು ಅರ್ಹರಾಗಿದ್ದಾರೆ. ನೋಂದಣಿಯು ಏಪ್ರಿಲ್ 1ರವರೆಗೆ ನಡೆಯಲಿದೆ. ಅಗ್ನಿವೀರ್ ಜನರಲ್ ಡ್ಯೂಟಿ, ಅಗ್ನಿವೀರ್ ಟೆಕ್ನಿಕಲ್, ಅಗ್ನಿವೀರ್ ಆಫೀಸ್ ಅಸಿಸ್ಟೆಂಟ್, ಸ್ಟೋರ್ ಕೀಪರ್ ಟೆಕ್ನಿಕಲ್, ಅಗ್ನಿವೀರ್ ಟ್ರೇಡ್ಸ್‌ಮನ್ (10ನೇ ಮತ್ತು 8ನೇ ತೇರ್ಗಡೆ), ಅಗ್ನಿವೀರ್ ಜನರಲ್ ಡ್ಯೂಟಿ (ಮಹಿಳಾ ಮಿಲಿಟರಿ ಪೊಲೀಸ್), ನರ್ಸಿಂಗ್ ಅಸಿಸ್ಟೆಂಟ್ ಮತ್ತು ನರ್ಸಿಂಗ್ ಅಸಿಸ್ಟೆಂಟ್ ವೆಟರಿನರಿ, ಸಿಪಾಯಿ ಫಾರ್ಮಾ ವಿಭಾಗಗಳು ಲಭ್ಯವಿವೆ. ಆಸಕ್ತ ಅಭ್ಯರ್ಥಿಗಳು ಭಾರತೀಯ ಸೇನೆಯ ಅಧಿಕೃತ ವೆಬ್‌ಸೈಟ್ www.joinindianarmy.nic.inನಲ್ಲಿ ನೋಂದಾಯಿಸಿಕೊಳ್ಳಬಹುದು. ವಯೋಮಿತಿ, ಶೈಕ್ಷಣಿಕ ಅರ್ಹತೆ ಮತ್ತು ಇತರ ಮಾನದಂಡ ಬಗ್ಗೆ ವಿವರವಾದ ಮಾಹಿತಿ ವೆಬ್‌ಸೈಟ್‌ನಲ್ಲಿ ಲಭ್ಯವಿದೆ. ನೋಂದಣಿ ಪ್ರಕ್ರಿಯೆಯಲ್ಲಿ ತೊಂದರೆಗಳಿದ್ದಲ್ಲಿ, ಅಭ್ಯರ್ಥಿಗಳು ನೇಮಕಾತಿ ಕಚೇರಿ ಬೆಂಗಳೂರು: 080-29516517, 7996672666, ಪ್ರಾದೇಶಿಕ ನೇಮಕಾತಿ ಕಚೇರಿ ಮಂಗಳೂರು: 082-42951276, 7411497644, ಪ್ರಾದೇಶಿಕ ನೇಮಕಾತಿ ಕಚೇರಿ ಬೆಳಗಾವಿ: 0831-2950001, 7411048362 ಕಚೇರಿಗಳನ್ನು ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ನೀರು ಪಂಪಿಂಗ್ ಸ್ಟೇಷನ್ ನಿರ್ಮಾಣ ಕಾಮಗಾರಿಗೆ ಚಾಲನೆ
ಕೆರೆ ನೀರು ಸಂರಕ್ಷಣೆಗೆ ಐತಿಹಾಸಿಕ ಹೆಜ್ಜೆ

ಬೆಂಗಳೂರು: ಜಲಮಂಡಳಿಯಿಂದ ನಿರ್ಮಿಸ ಲಾಗುತ್ತಿರುವ ಎಂಟು ಎಂಎಲ್‌ಡಿ ಸಾಮರ್ಥ್ಯದ ಒಳಚರಂಡಿ ನೀರು ಪಂಪಿಂಗ್ ಸ್ಟೇಷನ್ ಕಾಮಗಾರಿ ಸೋಂಪುರ ಕೆರೆಯ ಸಂರಕ್ಷಣೆಯಲ್ಲಿ ಐತಿಹಾಸಿಕ ಹೆಜ್ಜೆಯಾಗಿದೆ ಎಂದು ಕರ್ನಾಟಕ ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್.ಪಾಟೀಲ್ ತಿಳಿಸಿದರು.

ಸೋಂಪುರ ಕೆರೆಯ ಉಳಿವು ಮತ್ತು ಅಂತರ್ಜಲ ಸಂರಕ್ಷಣೆಯ ನಿಟ್ಟಿನಲ್ಲಿ ಜಲಮಂಡಳಿಯ ವತಿಯಿಂದ 8 ಎಂಎಲ್‌ಡಿ ಸಾಮರ್ಥ್ಯದ ಮಧ್ಯಂತರ ಒಳಚರಂಡಿ ನೀರು ಪಂಪಿಂಗ್ ಸ್ಟೇಷನ್ ನಿರ್ಮಾಣ ಕಾಮಗಾರಿಗೆ ಚಾಲನೆ ನೀಡಿ ಬಳಿಕ ಮಾತನಾಡಿ, ಸಾರ್ವಜನಿಕರ ಹಿತದೃಷ್ಟಿಯಿಂದ ಹಾಗೂ ಪರಿಸರ ಸಂರಕ್ಷಣೆಯ ನಿಟ್ಟಿನಲ್ಲಿ ಈ ಯೋಜನೆಯನ್ನು ಇಲಾಖೆಗಳ ಸಮನ್ವಯದಿಂದ ತ್ವರಿತವಾಗಿ ಕೈಗೆತ್ತಿಕೊಳ್ಳಲಾಗಿದೆ ಎಂದರು.

ಸಾರ್ವಜನಿಕರ ಒಳಿತಿಗಾಗಿ ಸರ್ಕಾರಿ ಇಲಾಖೆಗಳು ಒಟ್ಟಾಗಿ ಕೆಲಸ ಮಾಡಿದರೆ ಏನನ್ನು ಸಾಧಿಸಬಹುದು ಎಂಬುದಕ್ಕೆ ಈ ಯೋಜನೆ ಒಂದು ಅತ್ಯುತ್ತಮ ಉದಾಹರಣೆಯಾಗಿದೆ. ಈ ಯೋಜನೆಯಿಂದ ಕಲುಷಿತ ನೀರನ್ನು ತಡೆದು ಸಂಸ್ಕರಣಾ ಘಟಕಕ್ಕೆ ಪಂಪ್ ಮಾಡುವ ಮೂಲಕ, ತ್ಯಾಜ್ಯ ನೀರು ಸೋಂಪುರ ಕೆರೆಗೆ ಸೇರುವುದನ್ನು ಸಂಪೂರ್ಣವಾಗಿ ತಪ್ಪಿಸಲಾಗುತ್ತದೆಂದು ತಿಳಿಸಿದರು.

ಅತ್ಯಾಧುನಿಕ ಒಳಚರಂಡಿ ನಿರ್ವಹಣೆಯಿಂದಾಗಿ ಲಿಂಗಧೀರನಹಳ್ಳಿ ಮತ್ತು ಸೋಂಪುರ ಪ್ರದೇಶಗಳಲ್ಲಿ ಜಲಜನ್ಯ



ರೋಗಗಳ ಹರಡುವಿಕೆ ಗಣನೀಯವಾಗಿ ಕಡಿಮೆಯಾಗಲಿದೆ ಎಂದು ಹೇಳಿದರು. ಬೆಂಗಳೂರು ಜಲಮಂಡಳಿ ಅಧ್ಯಕ್ಷ ಡಾ.ರಾಮ್ ಪ್ರಸಾತ್ ಮನೋಹರ್ ಮಾತನಾಡಿ, ಪರಿಸರ ಸಂರಕ್ಷಣೆ ಮತ್ತು ಆಡಳಿತಾತ್ಮಕ ಹೊಣೆಗಾರಿಕೆಯನ್ನು ಖಚಿತಪಡಿಸಿಕೊಳ್ಳುವ ನಿಟ್ಟಿನಲ್ಲಿ ಲೋಕಾಯುಕ್ತರ ನಿರ್ದೇಶನದಂತೆ ಈ ಕಾಮಗಾರಿಗೆ ಚಾಲನೆ ದೊರೆತಿದೆ. ಲೋಕಾಯುಕ್ತರ ಪರಿಸರ ಕಾಳಜಿ ಮೆಚ್ಚುವಂಥದ್ದು, ಅವರ ಮುತುವರ್ಜಿಯಿಂದ ಯೋಜನೆಗೆ ವೇಗ ಸಿಗಲಿದೆ. ಇಂತಹ ಮಹತ್ವದ ಯೋಜನೆಗೆ ಲೋಕಾಯುಕ್ತರಿಂದ ಸಿಕ್ಕ ಸಹಕಾರಕ್ಕೆ ನಾನು ಆಭಾರಿಯಾಗಿದ್ದೇನೆ. ಕೆರೆಯ ಉಳಿವು ಮತ್ತು ಅಂತರ್ಜಲ ಸಂರಕ್ಷಣೆಯ ನಿಟ್ಟಿನಲ್ಲಿ ಜಲಮಂಡಳಿಯ ಸ್ಪಂದನೆಗೆ ಲೋಕಾಯುಕ್ತರು ಪ್ರಶಂಸಿದ್ದಕ್ಕಾಗಿ ಜಲಮಂಡಳಿ ಆಭಾರಿಯಾಗಿದೆ ಎಂದು ಕೃತಜ್ಞತೆಯನ್ನು ಸಲ್ಲಿಸಿದರು. ಕಾರ್ಯಕ್ರಮದಲ್ಲಿ ಮಂಡಳಿಯ ಮುಖ್ಯ ಅಭಿಯಂತರ ರಾಜೀವ್, ಉಪ ಮುಖ್ಯ ಅಭಿಯಂತರ ಸುಧೀರ್ ಉಪಸ್ಥಿತರಿದ್ದರು.

ಆಯುರ್ವೇದಾಮೃತಂ ಆರೋಗ್ಯ ಕೇಂದ್ರದಲ್ಲಿ ಮಹಿಳಾ ದಿನಚಾರಣೆ
ಆರಂಭದಲ್ಲೇ ರೋಗಪತ್ತೆಯಿಂದ ಚಿಕಿತ್ಸೆ ಸುಲಭ

ಬೆಂಗಳೂರು: ಯಾವುದೇ ಆರೋಗ್ಯ ಸಮಸ್ಯೆಯನ್ನು ಸೂಕ್ತ ಪರೀಕ್ಷೆಗಳ ಮೂಲಕ ಆರಂಭದಲ್ಲೇ ಪತ್ತೆಹಚ್ಚಿ ಚಿಕಿತ್ಸೆ ಪಡೆಯುವುದು ಒಳ್ಳೆಯದು ಎಂದು ಆಯುರ್ವೇದಾಮೃತಂ ಆರೋಗ್ಯ ಕೇಂದ್ರದ ವೈದ್ಯಕೀಯ ನಿರ್ದೇಶಕಿ ಡಾ.ಟಿ.ಕೆ.ಗಿರಿಜಾ ಕುಮಾರಿ ಹೇಳಿದರು.

ನಗರದ ಆಯುರ್ವೇದಾಮೃತಂ ಆರೋಗ್ಯ ಕೇಂದ್ರದಲ್ಲಿ ಆಯೋಜಿಸಲಾಗಿದ್ದ ಅಂತರರಾಷ್ಟ್ರೀಯ ಮಹಿಳಾ ದಿನಚಾರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಮನೆಯಲ್ಲೇ ಇರುವ ಮತ್ತು ವೃತ್ತಿಯಲ್ಲಿರುವ ಮಹಿಳೆಯರು ಮತ್ತು ಹಿರಿಯ ವಯಸ್ಸಿನವರು ಹೀಗೆ ಎಲ್ಲ ವರ್ಗದ ಮಹಿಳೆಯರೂ ಈಗ ತಮ್ಮ ಆರೋಗ್ಯದ ಬಗ್ಗೆ ಹೆಚ್ಚು ಕಾಳಜಿ ವಹಿಸಬೇಕು. ಯಾವುದೇ ಆರೋಗ್ಯ ಸಮಸ್ಯೆಯನ್ನು ಸೂಕ್ತ ಪರೀಕ್ಷೆಗಳ ಮೂಲಕ ಆರಂಭದಲ್ಲೇ ಪತ್ತೆ ಹಚ್ಚಿ ಚಿಕಿತ್ಸೆ ಪಡೆಯುವುದು ಒಳ್ಳೆಯದು ಎಂದು ಕಿವಿ ಮಾತು ಹೇಳಿದರು.

ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿದ ಹತ್ತು ಮಹಿಳೆಯರು ಮತ್ತು ನಗರದ ಸ್ವಚ್ಛತೆಗೆ ಕೊಡುಗೆ ನೀಡುತ್ತಿರುವ 15 ಮಂದಿ ಪೌರಕಾರ್ಮಿಕ ಮಹಿಳೆಯರನ್ನು ಸನ್ಮಾನಿಸಲಾಯಿತು. ಮಹಿಳೆಯರ ಆರಂಭದ ಬದುಕಿನ ಆರೋಗ್ಯಕ್ಕಾಗಿ ರೂಪಿಸಲಾಗಿರುವ ಮಾತುರಾಮೃತಂ ಕಾರ್ಯಕ್ರಮದಡಿ ಉಚಿತ ಆರೋಗ್ಯ ತಪಾಸಣೆ ಮತ್ತು ಸಲಹೆಗಳನ್ನು ನೀಡಲಾಯಿತು. ನಾಡಿ ಪರೀಕ್ಷೆ, ಬಿಎಂಡಿ, ಮಧುಮೇಹ ಪರೀಕ್ಷೆಗಳನ್ನು ಉಚಿತವಾಗಿ ನಡೆಸಿದ್ದಲ್ಲದೇ ಎರಡು ವಾರಗಳಿಗಾಗುವಷ್ಟು ಅಗತ್ಯ ಆಯುರ್ವೇದ ಔಷಧಗಳನ್ನು ಉಚಿತವಾಗಿ ಒದಗಿಸಲಾಯಿತು.



ಆಯುರ್ವೇದಾಮೃತಂ ಕೇಂದ್ರದ ಸ್ಥಾಪಕ ಡಾ.ಗಂಗಾಧರನ್ ಮಾತನಾಡಿ, ನಮ್ಮ ಪರಿಸರವನ್ನು ಸ್ವಚ್ಛವಾಗಿಡುವ ಪೌರಕಾರ್ಮಿಕರು ಅಭಿನಂದಾರ್ಹರು. ಯಾವುದೇ ಚಪ್ಪಾಳೆಗೂ ಕಾಯದೇ ತಮ್ಮ ಕಾಯಕವನ್ನು ಮಾಡುತ್ತಿರುವವರನ್ನು ಬಾಯ್ಮಾತಿನಲ್ಲೇ ಶ್ಲಾಘಿಸದೇ ಕಾರ್ಯರೂಪದಲ್ಲಿಯೂ ತೋರಿಸಬೇಕೆಂಬ ಉದ್ದೇಶದಿಂದ ಸತ್ಕರಿಸಲಾಗುತ್ತಿದೆ ಎಂದರು.

ಇಂದು ನಗರದಲ್ಲಿ...

- ಬೆಂಗಳೂರು ಮಹಾನಗರ ಮಹಿಳಾ ಮೋರ್ಚಾ ವತಿಯಿಂದ ವಿಶ್ವ ಮಹಿಳಾ ದಿನಾಚರಣೆ, ಬೆಳಗ್ಗೆ 10.30, ಸ್ಥಳ: ಮಲ್ಲೇಶ್ವರದ ಹವ್ಯಕ ಭವನ
- ಕೃಷಿ ತಂತ್ರಜ್ಞರ ಸಂಸ್ಥೆಯ ವತಿಯಿಂದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ, ಬೆಳಗ್ಗೆ 10.30, ಸ್ಥಳ: ಡಾ.ಎಚ್.ಆರ್. ಅರಕೇರಿ ಸಭಾಂಗಣ, ಕೃಷಿ ತಂತ್ರಜ್ಞರ ಸಂಸ್ಥೆ.
- ಭೀಮ ಗಾಯನ ಸಂಗೀತ ಕಾರ್ಯಕ್ರಮ, ಸಮಯ: ಬೆಳಗ್ಗೆ 10,ಸ್ಥಳ: ಜ್ಞಾನಜ್ಯೋತಿ ಸಭಾಂಗಣ
- ವಿದ್ವತ್ ಚತುರ್ವೇದಿ ವೇದವ್ಯಾಸಚಾರ್ಯ ಅವರಿಂದ ರಾಮಾಯಣ ರಹಸ್ಯಗಳ ಕುರಿತಾಗಿ ಉಪನ್ಯಾಸ, ಸ್ಥಳ: ರಾಗೀಗುಡ್ಡ ಪ್ರಸನ್ನ ಆಂಜನೇಯ ಸ್ವಾಮಿ ದೇವಸ್ಥಾನ, ಸಂಜೆ 6.30



ಭಾರತ ತಂಡಕ್ಕೆ ಕೋಟ್ಯಂತರ ಅಭಿಮಾನಿಗಳ ಬಹುಪರಾಕ್

ದಿಲ್ಲಿಯಿಂದ ಗಲ್ಲಿಯವರೆಗೆ ಪಸರಿಸಿದ್ದ ಸಂಭ್ರಮ

ಸಂಭ್ರಮದಲ್ಲಿ ತೇಲಿದ ದಿಗ್ವಿಜಯಿ ಭಾರತ

ಅಹಮದಾಬಾದ್: ತೀರಾ ಕ್ರಿಕೆಟ್ ಅನ್ನು ಮೈಮೇಲೆ ಆವರಿಸಿಕೊಂಡವರಂತೆ ವರ್ತಿಸುವ ಭಾರತದಲ್ಲಿ ಸೋಮವಾರ ಪೂರ್ತಿ ಜಯದ ಹೋಳಿ. ಭಾನುವಾರ ರಾತ್ರಿಯೇ ಭಾರತದ ಯುವ ತಂಡ, ಸತತ ಎರಡನೇ ಬಾರಿಗೆ ಟಿ20 ವಿಶ್ವಕಪ್ ಅನ್ನು ಮುಡಿಗೇರಿಸಿಕೊಂಡಾಗ ಎದ್ದ ಹರ್ಷದ ಹೋಳಿ, ಇಡೀ ದಿನ ಮುಂದುವರಿಯಿತು ಎಂದರೆ ತಪ್ಪಾಗಲಾರದು. ಚುಟುಕು ಕ್ರಿಕೆಟ್‌ನ ಇತಿಹಾಸದಲ್ಲೇ ಕಂಡು ಕೇಳರಿಯದ ದಾಖಲೆಗಳನ್ನು ಮಾಡಿದೆ ಸೂರ್ಯಕುಮಾರ್ ನೇತೃತ್ವದ ಭಾರತ ತಂಡ. ಸ್ಫೋಟಕ ಸಂಜು, ಆಕ್ರಮಣಕಾರಿ ಬೂಮ್ರಾ, ನೋವಲ್ಲೂ ಸಿಡಿದ ಕಿಶನ್ ಹಾಗೂ ವಿಶ್ವಕಪ್‌ನಲ್ಲೇ ಇದೇ ಮೊದಲ ಬಾರಿಗೆ ತನ್ನ ಹೊಡಿಬಡಿ ಆಟ ಪ್ರದರ್ಶಿಸಿದ ಅಭಿಷೇಕ್ ಭಾರತದ ಮುಡಿಗೆ ಜಯದ ಕಿರೀಟ ತೊಡಿಸಿದರು.

ಫೈನಲ್ ಪಂದ್ಯದ ಆರಂಭದಿಂದ ಕೊನೆವರೆಗೂ ಸಾಂಘಿಕ ಪ್ರದರ್ಶನ ನೀಡಿದ ತಂಡ, ಅತಿಥೇಯ ದೇಶಕ್ಕೆ ಮೊದಲ ಟ್ರೋಫಿ, ಸತತ ಎರಡನೇ ಬಾರಿಗೆ ಕಪ್‌ನಂಥ ದಾಖಲೆಗಳನ್ನೂ ಮಾಡಿದೆ. ಅಷ್ಟೇ ಅಲ್ಲ, ತಾವೇಕೆ ಟಿ20ಯಲ್ಲಿ ನಂಬರ್ ಒನ್ ಆಗಿದ್ದೇವೆ ಎಂಬುದನ್ನು ಜಗತ್ತಿನ ಮುಂದೆ ಸಾಬೀತುಪಡಿಸಿದರು. 2024ರಲ್ಲಿ ವಿಂಡೀಸ್‌ನಲ್ಲಿ ನಡೆದಿದ್ದ ಕೂಟದಲ್ಲಿ ಗೆದ್ದಿದ್ದ ಭಾರತ ವಿಶ್ವಕಪ್‌ಗೂ ಮುನ್ನ ತವರಲ್ಲಿ ವಿಶ್ವಕಪ್ ಗೆಲ್ಲುವ ಸವಾಲಿಗೆ ಸೈ ಎಂದಿತ್ತು. ದೊಡ್ಡ ಸ್ಕೋರ್ ಬಾರಿಸಿದ ತಂಡವಾಗಿ, ಬೌಲಿಂಗ್‌ನಲ್ಲಿ ಅಬ್ಬರಿಸಿದ ಪಡೆಯಾಗಿ ಹಾಗೂ ಕ್ಯಾಚ್‌ಗಳ ಮೂಲಕ ಶಾಕ್ ನೀಡಿದ ಭದ್ರ ತಂಡವಾಗಿ ಭಾರತ ಮಾಡಿ ತೋರಿಸಿದೆ. ಇದೀಗ 2028ರಲ್ಲಿ ನಡೆಯುವ ಒಲಿಂಪಿಕ್ಸ್ ಕೂಟದ ಚಾಂಪಿಯನ್ ಪಟ್ಟದ ಮೇಲೆ ಕಣ್ಣು ಹಾಕಿದೆ.

ಸಂಭ್ರಮದಲ್ಲಿ ತೇಲಾಡಿದ ದೇಶ: ಭಾನುವಾರದ ಗೆಲುವಿನ ಮೊಳಗು ವಿಶ್ವಾದ್ಯಂತ ಸುದ್ದಿಯಾದ ನಂತರ ಎಲ್ಲೆಡೆ ಭಾರತದ್ದೇ ಸದ್ದಾಯಿತು. ರಾಷ್ಟ್ರಪತಿಯಿಂದ, ಜನಸಾಮಾನ್ಯನವರೆಗೆ ಎಲ್ಲರೂ ಜಯದಲ್ಲಿ ಮುಳುಗೆದ್ದರು. ದೇಶದ ಪ್ರತಿಯೊಂದು ನಗರದ ಪ್ರತಿಯೊಂದು ನಗರಗಳಲ್ಲಿ ಹಬ್ಬದ ವಾತಾವರಣವೇ ಸೃಷ್ಟಿಯಾಗಿತ್ತು. ಒಂದು ಕ್ಷಣಕ್ಕೆ ಬೇರೊಂದು ಜಗತ್ತನ್ನೇ ಮರೆತಿದ್ದ ಜನರು ಕೈಯಲ್ಲಿ ತಿರಂಗಾ ಹಿಡಿದು, ಬಾಯಿಯಲ್ಲಿ ಜಯಘೋಷ ಮೊಳಗಿಸುತ್ತಾ ಸಂಭ್ರಮದಿಂದ ಗೆಲುವು ಆನಂದಿಸಿದರು. ಕ್ರಿಕೆಟಿಗರು, ರಾಜಕಾರಣಿಗಳು, ಮಾಧ್ಯಮದವರು, ಸಾಹಿತಿಗಳು, ಬೇರೆ ಕ್ರೀಡೆಯ ಕ್ರೀಡಾಪಟುಗಳು, ಹಾಲಿ-ಮಾಜಿ ಕ್ರಿಕೆಟಿಗರು ಮತ್ತು ಕೋಟ್ಯಂತರ ಅಭಿಮಾನಿಗಳು ಭಾರತ ತಂಡಕ್ಕೆ ಬಹುಪರಾಕ್ ಎಂದರು. ಗೆಲುವಿನೊಂದಿಗೆ ದೊಡ್ಡ ದೊಡ್ಡ ಇತಿಹಾಸಗಳನ್ನೇ ಸೃಷ್ಟಿಸಿರುವ ಭಾರತವು ಮುಂದಿನ ಸವಾಲುಗಳನ್ನು ಎದುರು ನೋಡಲಿದೆ.


ಸೋಲು ದಿಕ್ಕರಿಸಿ ಪುಟಿದೆದ್ದ ಭಾರತ: 2024ರಲ್ಲಿ ಯಾವುದೇ ಪಂದ್ಯದಲ್ಲೂ ಸೋಲದೆ ವಿಶ್ವಕಪ್ ಗೆದ್ದಿದ್ದ ಭಾರತ ಈ ಬಾರಿಯ ಕೂಟದಲ್ಲೂ ಅದೇ ಲಯ ಮುಂದುವರಿಸಿತು. ಪಾಕಿಸ್ತಾನ, ಯುಎಸ್‌ಎ, ನಮೀಬಿಯಾ, ನೆದರ್ಲೆಂಡ್ಸ್ ತಂಡಗಳ ಮೇಲೆ ಯಾವುದೇ ಆತಂಕಗಳಿಲ್ಲದೆ ಗೆದ್ದಿತು. ಭಾರತ ಮತ್ತೊಮ್ಮೆ ಸೋಲಿಲ್ಲದ ಸರ್ದಾರ ಅನ್ನಿಸಿಕೊಳ್ಳಲಿದೆ ಅನ್ನುಷ್ಟರಲ್ಲಿ, ಸೂಪರ್-8ರ ಮೊದಲನೇ ಪಂದ್ಯದಲ್ಲಿ ದ.ಆಫ್ರಿಕಾ ವಿರುದ್ಧ ಹೀನಾಯ ಸೋಲು ಕಂಡಿತು. ಭಾರತ ಸೋತಿದ್ದೇ ತಡ, ಟಿವಿಯಲ್ಲಿ ಭಾರತವನ್ನು ಟೀಕಿಸುವತ್ತ ಜನರು ಸಾಗಿದ್ದರು. ಇದೆಲ್ಲವನ್ನೂ ದಾಟಿದ ಭಾರತ ಚಾಂಪಿಯನ್ ಆಗೇ ತೋರಿಸಿದೆ. ಸೋಲು ದಿಕ್ಕರಿಸಿ ಪುಟಿದೆದ್ದ ಶ್ರೇಷ್ಠ ಭಾರತ ಎನಿಸಿಕೊಂಡಿದೆ.

ಒಲಿಂಪಿಕ್ಸ್ ಮುಂದಿನ ತಯಾರಿ: ಸೂರ್ಯ

ಪಂದ್ಯಾವಳಿಯುದ್ದಕ್ಕೂ ಹತ್ತಾರು ಸವಾಲುಗಳನ್ನು ಎದುರಿಸಿ ಕಪ್ ಗೆದ್ದ ನಾಯಕರಲ್ಲಿ ಒಬ್ಬ ಅನ್ನಿಸಿಕೊಂಡಿರುವ ಸೂರ್ಯಕುಮಾರ್ ಯಾದವ್ ಗೆದ್ದ ನಂತರ ಟ್ರೋಫಿಯೊಂದಿಗೆ ಬಂದು 2028 ರಲ್ಲಿ ನಡೆಯಲಿರುವ ಲಾಸ್ ಏಂಜಲೀಸ್ ಒಲಿಂಪಿಕ್ಸ್ ಗೆಲುವೇ ನಮ್ಮ ಮುಂದಿನ ಗುರಿ ಎಂದು ಘೋಷಿಸಿಬಿಟ್ಟರು. ಇದೇ ಮೊದಲ ಬಾರಿಗೆ ಒಲಿಂಪಿಕ್ಸ್‌ನಲ್ಲಿ ಕ್ರಿಕೆಟ್ ಕೂಡ ಸೇರಿಸಲಾಗಿದ್ದು, ಭಾರತದ ಅರ್ಹತೆ ಖಚಿತವಾದಂತಿದೆ. ಈ ಮಧ್ಯೆ, ಸೂರ್ಯ ಈ ಬಗ್ಗೆ ಮಾತನಾಡುತ್ತಾ, ನಮ್ಮ ಮುಖ್ಯ ಗುರಿ ಸಾಧಿಸಿದ್ದೇವೆ. ಈಗ ಮುಂದಿನದು ಒಲಿಂಪಿಕ್ಸ್ ಎಂದರು.

ಕೋಚ್ ಗಂಭೀರ್ ಮಡಿಲಿಗೆ ಟ್ರೋಫಿ

ಇದೇ ನ್ಯೂಜಿಲೆಂಡ್ ತಂಡ ಭಾರತದಲ್ಲಿ ಟೆಸ್ಟ್ ಪಂದ್ಯವನ್ನಾಡಿದ್ದಾಗ, ವೈಟ್ ವಾಷ್ ಎದುರಿಸಿದ್ದ ಭಾರತ ಭಾರೀ ಟೀಕೆ ಎದುರಿಸಿತ್ತು. ಅದರಲ್ಲೂ ಪ್ರಧಾನ ಕೋಚ್ ಗೌತಂ ಗಂಭೀರ್ ಎಲ್ಲಿಲ್ಲದ ಟೀಕೆ ಟಿಪ್ಪಣಿಗಳನ್ನೆದುರಿಸಿದ್ದರು. ಆದರೆ ಯಾವುದಕ್ಕೂ ಹೆಚ್ಚಿನ ಉತ್ತರ ನೀಡದ ಅವರು ಫಲಿತಾಂಶದ ಮೇಲೆ ಗಮನ ಹರಿಸಿದರು. ಇದರೊಂದಿಗೆ ತಮ್ಮ ಕೋಚ್ ಅವಧಿಯಲ್ಲಿ ಎರಡನೇ ಐಸಿಸಿ ಟ್ರೋಫಿ ಮತ್ತು ಮೊದಲ ವಿಶ್ವಕಪ್ ಟ್ರೋಫಿ ಗೆದ್ದುಕೊಂಡಿದೆ.





ಮೊದಲನೇ ಬಾರಿಗೆ ಒಂದು ತಂಡ ಸತತ ಎರಡು ಬಾರಿಗೆ ವಿಶ್ವಕಪ್ ಗೆದ್ದಿದೆ. ಇದು ಪರಿಶ್ರಮದ ಪ್ರತಿಫಲ ಮತ್ತು ಅರ್ಹತೆಗೆ ತಕ್ಕ ಬಹುಮಾನ. ನಮ್ಮ ತಂಡಕ್ಕೆ ನನ್ನ ಅಭಿನಂದನೆಗಳು.
■ ಸಚಿನ್ ತೆಂಡೂಲ್ಕರ್, ಮಾಜಿ ಕ್ರಿಕೆಟಿಗ



ಅಹಮದಾಬಾದ್‌ನಲ್ಲಿ ಇತಿಹಾಸ ಸೃಷ್ಟಿಯಾಗಿದೆ. ಗೆದ್ದ ತಂಡಕ್ಕೂ, ಗೆಲುವಿಗೆ ಕಾರಣರಾದ ಸ್ಟಾಫ್‌ಗೂ ಕೋಟ್ಯಾಂತರ ಅಭಿಮಾನಿಗಳಿಗೂ ಅಭಿನಂದನೆಗಳು. ಕೋಚ್ ಗಂಭೀರ್, ನಮಗೆ ಸ್ಮೈಲ್ ಹೊಂದುತ್ತದೆ. ಅದು ಹಾಗೇ ಇರಲಿ. ಎಲ್ಲರ ಪ್ರದರ್ಶನ ಉತ್ತಮವಾಗಿತ್ತು.
■ ಮಹೇಂದ್ರ ಸಿಂಗ್ ಧೋನಿ, ಮಾಜಿ ನಾಯಕ



ವಿಶ್ವಕಪ್ ಪಂದ್ಯಾವಳಿಯಲ್ಲಿ ಗೆದ್ದು ಇತಿಹಾಸ ನಿರ್ಮಿಸಿದ ಭಾರತ ತಂಡಕ್ಕೆ ಅಭಿನಂದನೆಗಳು. ಸತತ ಟ್ರೋಫಿ ಗೆದ್ದಿರುವುದು ಮತ್ತು ಮೂರನೇ ಟ್ರೋಫಿ ಗೆದ್ದ ಮೊದಲ ತಂಡ ಎನಿಸಿರುವುದು ನಮ್ಮ ದೇಶದ ಘನತೆ ತೋರಿಸುತ್ತದೆ. ಇದು ಕ್ರಿಕೆಟ್ ಅಭಿಮಾನಿಗಳಿಗೆ ಕ್ರಿಕೆಟ್ ಆಚರಿಸುವಂತೆ ಮಾಡುತ್ತದೆ.
■ ದ್ರೌಪದಿ ಮುರ್ಮು, ರಾಷ್ಟ್ರಪತಿ



ಇದೊಂದು ಅದ್ಭುತ ಗೆಲುವು. ಪಂದ್ಯಾವಳಿಯುದ್ದಕ್ಕೂ ನಮ್ಮ ತಂಡ ಆಡಿರುವ ಆಟ ಶ್ಲಾಘನೀಯ. ಒತ್ತಡದ ಸಮಯದಲ್ಲಿ ನಮ್ಮ ಹುಡುಗರು ಪರಾಕ್ರಮ ತೋರಿಸಿದ್ದಾರೆ. ಕಷ್ಟದ ಸಮಯದಲ್ಲಿ ಹೋರಾಡಿ ಗೆದ್ದಿರುವುದಕ್ಕೆ ಕಪ್ ಸಾಕ್ಷಿ, ಎಲ್ಲರಿಗೂ ಅಭಿನಂದನೆಗಳು.
■ ವಿರಾಟ್ ಕೊಹ್ಲಿ, ಕ್ರಿಕೆಟಿಗ



ವಿಶ್ವ ಚಾಂಪಿಯನ್ ಭಾರತ ತಂಡಕ್ಕೆ ಬಹುಪರಾಕ್. ಟೂರ್ನಿಯುದ್ದಕ್ಕೂ ನಮ್ಮ ಯುವಕರು ಆಡಿರುವ ಆಟಕ್ಕೆ ತಕ್ಕಂತೆ ಫಲಿತಾಂಶ ಮೂಡಿ ಬಂದಿದೆ. ವಿಶ್ವ ಗೆದ್ದ ತಂಡವು ಭಾರತದ ಘನತೆ ಎತ್ತರಕ್ಕೆ ತೆಗೆದುಕೊಂಡು ಹೋಗಿದೆ. ಎಲ್ಲರಿಗೂ ಅಭಿನಂದನೆಗಳು.
■ ಅಮಿತ್ ಶಾ, ಕೇಂದ್ರ ಗೃಹ ಮಂತ್ರಿ



ನಮ್ಮ ತಂಡ ಮರಳಿ ಚಾಂಪಿಯನ್ ಆಗಿದೆ. ಸಂಜು, ಬೂಮ್ರಾ ಸೇರಿದಂತೆ ತಂಡದ ಪ್ರತಿಯೊಬ್ಬರ ಆಟಗಾರರೂ ಕೂಟದಲ್ಲಿ ಅತ್ಯುತ್ತಮ ಆಟವಾಡಿದ್ದಾರೆ. ಈ ಗೆಲುವಿನ ಮೂಲಕ ದೇಶವನ್ನು ಮತ್ತೊಮ್ಮೆ ಸಂಭ್ರಮಿಸುವಂತೆ ಮಾಡಿರುವ ತಂಡಕ್ಕೆ ಅಭಿನಂದನೆಗಳು.
■ ರಾಹುಲ್ ಗಾಂಧಿ, ವಿಪಕ್ಷ ನಾಯಕ



ಎರಡು ಬಾರಿ ಸತತ ಚಾಂಪಿಯನ್ ಆಗಿದ್ದೇವೆ, ಸಂಜು ಸ್ಯಾಮ್ಸನ್, ಹಾರ್ದಿಕ್ ಪಾಂಡ್ಯ, ಇಶಾನ್ ಕಿಶನ್, ಬೂಮ್ರಾ ಅವರ ಆಟ ಮೆಚ್ಚುವಂತದ್ದು. ಪ್ರತಿಯೊಬ್ಬರ ಶ್ರಮವೂ ತಂಡದ ಗೆಲುವಿನಲ್ಲಿ ಮಿಂಚಿದೆ. ಆಟಗಾರರಿಗೆ, ಕೋಚ್ ಗೌತಂ ಗಂಭೀರ್ ಅವರಿಗೆ, ಕೋಚಿಂಗ್ ಸ್ಟಾಫ್ ಸೇರಿದಂತೆ ಎಲ್ಲರಿಗೂ ಅಭಿನಂದನೆ.
■ ಯುವರಾಜ್ ಸಿಂಗ್, ಮಾಜಿ ಕ್ರಿಕೆಟಿಗ

ಆಟಗಾರರೇ ನನ್ನನ್ನು ಗೆಲ್ಲಿಸಿದ್ದಾರೆ: ಗಂಭೀರ್

ಈ ಗೆಲುವು ದ್ರಾವಿಡ್, ಲಕ್ಷಣ್‌ಗೆ ಅರ್ಪಣೆ. ಇದು ಕೋಟ್ಯಂತರ ಕ್ರಿಕೆಟ್ ಅಭಿಮಾನಿಗಳ ಆಶಯವಾಗಿತ್ತು ಎಂದು ಪ್ರಧಾನ ತರಬೇತುದಾರ ಗೌತಂ ಗಂಭೀರ್ ತಿಳಿಸಿದ್ದಾರೆ. ಕೋಚ್ ಆಗಿ ಮೊದಲ ಗೆಲುವು ಸಾಧಿಸಿದ ನಂತರ ಮಾಧ್ಯಮದೊಂದಿಗೆ ಮಾತನಾಡಿರುವ ಅವರು, ಇದು ಆಟಗಾರರ ಗೆಲುವಾಗಿದೆ. ಆಟಗಾರರು ನನ್ನನ್ನು ಗೆಲ್ಲಿಸಿದ್ದಾರೆ. ನನಗೆ ಯಾವಾಗಲೂ ಆಟಗಾರರು ಒಬ್ಬ ಉತ್ತಮ ಕೋಚ್ ಆಗಿದ್ದೀರಿ ಒಬ್ಬ ಉತ್ತಮ ನಾಯಕರಾಗಿದ್ದೀರಿ ಎಂದು ಬೆನ್ನಿನ ಹಿಂದೆ ನಿಂತಿದ್ದಾರೆ. ಗೆಲುವಿನ ಎಲ್ಲಾ ಶ್ರೇಯ ನಮ್ಮ ಆಟಗಾರರಿಗೆ ಹೋಗಲಿ, ಪ್ರತಿಯೊಬ್ಬರೂ ತುಂಬಾ ಪರಿಶ್ರಮ ಪಟ್ಟಿದ್ದಾರೆ. ನಾವು ಸಾಮಾನ್ಯವಾಗಿ ಸರಣಿಗಳಲ್ಲಿ ಆಡುತ್ತಿರಬೇಕಾದರೆ, ಅಲ್ಲಿನ ವೈಭವದ ಗೆಲುವಿಗೆ ಜನರು, ಐಸಿಸಿ ಕೂಟವೇ ಬೇರೆ, ಸಾಮಾನ್ಯ ಪಂದ್ಯಗಳೇ ಬೇರೆ ಅನ್ನುತ್ತಿದ್ದರು. ಆ ಹೇಳಿಕೆಯನ್ನು ನಾವು ಈಗ ಸುಳ್ಳಾಗಿಸಿದ್ದೇವೆ ಎಂದರು.

ಹೊಸ ತಂಡ ಕಟ್ಟಿ ಬೀಗಿದ ಭಾರತ

2024ರ ವಿಶ್ವಕಪ್ ಗೆದ್ದ ತಕ್ಷಣವೇ ಮೂವರು ಪ್ರಮುಖ ಆಟಗಾರರು ನಿವೃತ್ತರಾಗಿದ್ದರು. ತಂಡಕ್ಕೆ ಹೊಸ ನಾಯಕ ಸೂರ್ಯಕುಮಾರ್ ಯಾದವ್, ತಂಡಕ್ಕೆ ಹೊಸ ಕೋಚ್ ಗೌತಂ ಗಂಭೀರ್ ಜತೆಗೆ ತಂಡದಲ್ಲಿ ಐಪಿಎಲ್‌ನಲ್ಲಿ ಮಿಂಚಿದ ಅಭಿಷೇಕ್ ಶರ್ಮ ಅಂತಹ ಆಟಗಾರರೊಂದಿಗೆ ಬಲಿಷ್ಠ ಪಡೆಯನ್ನು ಕಟ್ಟಬೇಕಿತ್ತು. ಅಲ್ಲಿಂದ ಹೊಸ ತಂಡದೊಂದಿಗೆ ಮೈದಾನಕ್ಕಿಳಿದ ಭಾರತ ಗೆದ್ದು ತೋರಿಸಿದೆ.



ಭಾರತ ಮಹಿಳಾ ತಂಡ ಶುಭಾರಂಭ

ಹೈದರಾಬಾದ್: ಎಫ್‌ಐಎಚ್ ಹಾಕಿ ವಿಶ್ವಕಪ್ ಅರ್ಹತಾ ಸುತ್ತಿನ ಮೊದಲ ಪಂದ್ಯದಲ್ಲಿ ಭಾರತ ಮಹಿಳೆಯರ ತಂಡ ಮಹತ್ವದ ಹೆಜ್ಜೆ ಇಟ್ಟಿದ್ದು, ಹೈದರಾಬಾದಿನಲ್ಲಿ ನಡೆದ ಮೊದಲ ಪಂದ್ಯದಲ್ಲಿ ಗೆಲುವು ಸಾಧಿಸಿದೆ. ಈ ಮೂಲಕ ಆತಿಥ್ಯ ತಂಡ ಕೂಟದಲ್ಲಿ ಶುಭಾರಂಭ ಮಾಡಿತು.

ಸೋಮವಾರದ ಪಂದ್ಯದಲ್ಲಿ ಭಾರತೀಯರು ತಮ್ಮ ಅತ್ಯುತ್ತಮ ಪ್ರದರ್ಶನ ನೀಡಿದರು. ಉರುಗ್ವೆ ತಂಡದ ವಿರುದ್ಧ ಆಡಿದ ಭಾರತ 4-0ರಿಂದ ಭರ್ಜರಿ ಗೆಲುವು ದಾಖಲಿಸಿದೆ. ಪಂದ್ಯದ ಮೊದಲ ಸುತ್ತಿನಿಂದಲೂ ಹಿಡಿತ ಸಾಧಿಸಿ ಮೆರೆದ ಭಾರತ 59ನೇ ಸೆಕೆಂಡಿನಲ್ಲೇ ಗೋಲು ಬಾರಿಸುವ ಅವಕಾಶವಿದ್ದರೂ ಭಾರತ ಸ್ವಲ್ಪದರಲ್ಲೇ ಕಳೆದುಕೊಂಡಿತು. ಅಲ್ಲಿಂದ ಉಭಯ ತಂಡಗಳು ಸಮಾನ ಪ್ರದರ್ಶನ ನೀಡಿದವು. ಮೊದಲ ಕ್ವಾರ್ಟರ್‌ನಲ್ಲಿ ಗೋಲು ದಾಖಲಾಗಲಿಲ್ಲ. ಎರಡನೇ ಕ್ವಾರ್ಟರ್‌ನ 21ನೇ ನಿಮಿಷದಲ್ಲಿ ಪಿಸಿ ಪಡೆದ ಭಾರತ ಮೊದಲ ಗೋಲು ಗಳಿಸಿ ಮುನ್ನಡೆ ಸಾಧಿಸಿತು. ನಂತರ ಮೂರನೇ ಕ್ವಾರ್ಟರ್‌ನ 40ನೇ ನಿಮಿಷದಲ್ಲಿ ಇಶಿಕಾ ಗೋಲಿನೊಂದಿಗೆ ಅಂತರ ಹಿಗ್ಗಿಸಿದರು. 58ನೇ ನಿಮಿಷದಲ್ಲಿ ರುತುಜಾ ಗೋಲು ಗಳಿಸಿ ಗೆಲುವು ಖಚಿತ ಪಡಿಸಿದರು.



» ಎಫ್‌ಐಎಚ್ ವಿಶ್ವಕಪ್ ಅರ್ಹತಾ ಸುತ್ತು
» ಆರಂಭಿಕ ಪಂದ್ಯದಲ್ಲಿ ಉರುಗ್ವೆ ವಿರುದ್ಧ ಜಯ

ಆಲ್ ಇಂಗ್ಲೆಂಡ್ ಬ್ಯಾಡ್ಮಿಂಟನ್ ಓಪನ್: ಸೇನ್‌ಗೆ ರಜತ



ಹೊಸದಿಲ್ಲಿ: ತಮ್ಮ ವೃತ್ತಿಜೀವನದಲ್ಲಿ ಪಡೆದ ಅತ್ಯುತ್ತಮ ಫಲಿತಾಂಶವೊಂದರಲ್ಲಿ ಭಾರತದ ಶಟ್ಲರ್ ಲಕ್ಷ್ಯ ಸೇನ್, ಇಲ್ಲಿ ಮುಕ್ತಾಯಗೊಂಡಿರುವ ಆಲ್ ಇಂಗ್ಲೆಂಡ್ ಓಪನ್ ಪಂದ್ಯಾವಳಿಯಲ್ಲಿ ಅರ್ಹ ಬಂಗಾರ ತಪ್ಪಿಸಿಕೊಂಡು ಬೆಳ್ಳಿ ಗೆದ್ದರು.

ಕೂಟದಲ್ಲಿ ಅಸಾಮಾನ್ಯ ಮತ್ತು ಅತ್ಯುತ್ತಮ ಪ್ರದರ್ಶನ ನೀಡಿದ ಅವರು, ಬೆಳ್ಳಿ ಪದಕ ಗೆದ್ದು ಬೀಗಿದರು. ಸತತ ಪ್ರದರ್ಶನ, ಪಟ್ಟ ಶ್ರಮ ಹಾಗೂ ಉತ್ಸಾಹದೊಂದಿಗೆ ಅತ್ಯುತ್ತಮ ಪ್ರದರ್ಶನ ನೀಡಿ ಫೈನಲ್‌ಗೇರಿದ್ದ ಅವರು, ಭಾನುವಾರದ ಪಂದ್ಯದಲ್ಲಿ ತೈವಾನ್‌ನ ಲಿನ್ ಚುನ್ ಇ ಅವರನ್ನು ಎದುರಿಸಿದ್ದರು. 57 ನಿಮಿಷ ನಡೆದ ಈ ಪಂದ್ಯದಲ್ಲಿ ಸೇನ್ ಎರಡೇ ಸೆಟ್‌ನಲ್ಲಿ ಸೋತರೂ ಹೋರಾಟ ನಡೆಸಿದರು. ಮೊದಲನೇ ಸೆಟ್‌ನಲ್ಲಿ ಸೇನ್ 15 ಅಂಕ ಗಳಿಸುವಷ್ಟರಲ್ಲಿ ಎದುರಾಳಿ 21 ಅಂಕ ಗಳಿಸಿದ್ದರು. ಎರಡನೇ ಸೆಟ್‌ನಲ್ಲಿ ಸೇನ್ ಕಂಬ್ಯಾಕ್ ಮಾಡಿದರೂ 20 ಅಂಕ ಮಾತ್ರ ಗಳಿಸಿದರು. ಎದುರಾಳಿ 22 ಅಂಕಗಳೊಂದಿಗೆ ಪದಕ ಗೆದ್ದು ಬೀಗಿದರು.


ಸೇಫ್ ಹೌಸ್‌ಗೆ ಇರಾನಿ ಆಟಗಾರ್ತಿಯರು

ಬ್ರಿಸ್ಬೇನ್: ಇರಾನಿ ಬೆಂಬಲಿಗರು ತಮ್ಮ ದೇಶದ ಮಹಿಳಾ ಫುಟ್‌ಬಾಲ್ ತಂಡದ ಮೇಲೆ ಮುಗಿಬಿದ್ದು ಆಕ್ರೋಶ ಹೊರಹಾಕಿದ ಹೈಡ್ರಾಮಾ ನಂತರ ಇರಾನಿನ ಐದು ಆಟಗಾರ್ತಿಯರನ್ನು ಅಲ್ಲಿನ ಸರ್ಕಾರ ಸುರಕ್ಷಿತ ಸ್ಥಳಕ್ಕೆ ಸ್ಥಳಾಂತರಿಸಿದ್ದು, ಕೆಲವು ದಿನಗಳ ಮಟ್ಟಿಗೆ ಆಶ್ರಯ ನೀಡುವುದಾಗಿ ಹೇಳಿದೆ.

ಆಸ್ಟ್ರೇಲಿಯಾದಲ್ಲಿ ಮಹಿಳೆಯರ ಫುಟ್‌ಬಾಲ್ ಏಷ್ಯಾಕಪ್ ನಡೆಯುತ್ತಿದೆ. ಈ ಮಧ್ಯೆ, ಇರಾನ್ ಪಂದ್ಯಾವಳಿಯಿಂದ ಲೀಗ್ ಹಂತದಲ್ಲೇ ಹೊರಬಿದ್ದಿದೆ. ಮೊದಲ ಪಂದ್ಯದಲ್ಲಿ ದ.ಕೋರಿಯಾ ವಿರುದ್ಧ ಆಡಿದ್ದ ಇರಾನ್ ರಾಷ್ಟ್ರಗೀತೆ ಸಮಯದಲ್ಲಿ ಗೊಂದಲ ಸೃಷ್ಟಿ ಮಾಡಿತ್ತು. ಇರಾನಿನ ಹೆಣ್ಣು ಮಕ್ಕಳಿಗೆ ಸ್ವಾತಂತ್ರ್ಯದ ನೀಡವ ಬಗ್ಗೆ ಕಳಕಳಿ ವ್ಯಕ್ತಪಡಿಸಿ ಕೆಲವು ಆಟಗಾರ್ತಿಯರು ರಾಷ್ಟ್ರಗೀತೆ ಹಾಡದೆ ಪ್ರತಿಭಟಿಸಿದ್ದರು. ಈ ವಿಚಾರದ ಬಗ್ಗೆ ಹತಾಶೆ ಹೊರಹಾಕಿದ ಇರಾನಿ ಬೆಂಬಲಿಗರು, ಏಷ್ಯಾಕಪ್‌ನಿಂದ ಹೊರಬಿದ್ದಿರುವ ತಂಡದ ಬಸ್ಸನ್ನು ಹಿಂಬಾಲಿಸಿ ಪ್ರತಿಷ್ಠಿತ ಆಟಗಾರ್ತಿಯರ ವಿರುದ್ಧ ಹತಾಶೆ ಹೊರ ಹಾಕಲೆತ್ನಿಸಿದ್ದಾರೆ. ಹೋಟೆಲಿಗೆ ಮುತ್ತಿಗೆ ಹಾಕಲು ಯತ್ನಿಸಿದ್ದಾರೆ. ಪರಿಸ್ಥಿತಿ ತೀರಾ ಕೈಮೀರಿ ಹೋದ ನಂತರ ಅಲ್ಲಿನ ಪೊಲೀಸರು ನಿಯಂತ್ರಣಕ್ಕೆ ಬಂದಿದ್ದಾರೆ. ಆಟಗಾರ್ತಿಯರ ವಿನಂತಿಯ ಮೇರೆಗೆ ಅಲ್ಲಿನ ಸರ್ಕಾರ ಕೆಲವು ದಿನಗಳ ಮಟ್ಟಿಗೆ ಆಶ್ರಯ ನೀಡುವುದಾಗಿ ಒಪ್ಪಿಕೊಂಡಿದೆ. ಪ್ರತಿಷ್ಠಿತ ಆಟಗಾರ್ತಿಯರನ್ನು ರಾಷ್ಟ್ರಗೀತೆ ಹಾಡಲು ಒತ್ತಾಯ ಮಾಡಲಾಗಿತ್ತು ಎಂದು ತಿಳಿದುಬಂದಿದೆ. ಹೀಗಾಗಿ ಆ ಆಟಗಾರ್ತಿಯರು ಇಂತಹ ಸೂಕ್ಷ್ಮ ಸಮಯದಲ್ಲಿ ಇರಾನಿಗೆ ಹೋಗುವುದು ಸೂಕ್ತವಲ್ಲ ಎಂಬುದಾಗಿ ಕೋಚ್ ತಿಳಿಸಿದ್ದಾರೆ. ಹೀಗಾಗಿ ಅಲ್ಲಿನ ಸರ್ಕಾರ ಅವರಿಗೆ ಆಶ್ರಯ ನೀಡಿದೆ. ಘಟನೆ ಬಗ್ಗೆ ಇರಾನ್ ಕೂಡ ಪ್ರತಿಕ್ರಿಯೆ ನೀಡಿದ್ದು, ಕಠಿಣ ಕ್ರಮ ತೆಗೆದುಕೊಳ್ಳುತ್ತೇವೆ ಎಂದಿದೆ.

ಪ ದ ಬಂ ಧ

» ರಾಜಾ ಸಂಗಮೇಶ ಹಿರೇಮಠ



5919

5918 ಉತ್ತರ

ಎಡದಿಂದ ಬಲಕ್ಕೆ:
1.ಆಕಾಂಕ್ಷಿಸು 3.ರಾಜನ್ಯಕ
5.ತರುಣ 6.ಮಾಧುರಿ
8.ಅಚ್ಚರಿ 10.ಜೋಕೆ
12.ಮಾನ 14.ಗಮನ
15.ಅಧೋಗತಿ
16.ವಜ್ರಕೀಟ
ಮೇಲಿನಿಂದ ಕೆಳಕ್ಕೆ
: 1.ಆಶಾಸುಂದರಿ
2.ಸುರಕ್ಷಿತ
3.ರಾಮಾಯಣ
4.ಕನಕಗಿರಿ 7.ಮಾಲಿಕೆ
8.ಅರ್ಜುನ 9.ಅಗಜೆ
11.ಜೋಗತಿ 12.ಮಾನವ
13.ಕಿರೀಟ

ಎಡದಿಂದ ಬಲಕ್ಕೆ
1.ಮೈದಾನದಿಂದ ಕೂಡಿದ ಪ್ರದೇಶ (5)
3.ಅತಿಯಾದ ಆಸೆಯ ಕಡೆಯಲ್ಲಿ ಶಕ್ತಿಯಿದೆ (3)
4.ಸೂರ್ಯನ ಬೆಳಗಿನ ಅವಧಿ ತಿರುಗಿದೆ (3)
5.ಮಾತು ಎಂಬರ್ಥದ ಶಾರದೆ (2)
6.ದೇಹದ ಸಮಾನಪದ (2)
7.ಪಾತ್ರನಾದವನು-ಅರ್ಹವ್ಯಕ್ತಿ (3)
8.ಆರು ಕಾಲುಗಳುಳ್ಳ ಕೀಟವಿಲ್ಲಿ ತಿರುಗಿದೆ (3)
10.ತುಂಬ ಕ್ಲಿಷ್ಟತೆಯಿಂದ ಕೂಡಿದ್ದು (3)
12.ವಿದಾಯದ ನಂತರದ ಗಳಿಕೆ (3)
13.ಬರೆಯುತ್ತಿರುವ ಅಕ್ಷರ (2)
14.ವಿಷ್ಣುವಿನ ಆರನೆಯ ಅವತಾರ (2)
15.ಶಿವನ ಉಗ್ರನೃತ್ಯವಿಲ್ಲಿ ತಿರುಗಿದೆ (3)
16.ಅನುಮಾನಿಸು-ಶಂಕೆಪಡು (3)
17.ಔಷಧಿಯುಕ್ತವಾದ ನಾರುಬೇರು (5)
ಮೇಲಿನಿಂದ ಕೆಳಕ್ಕೆ
1. ಶಕ್ತಿಶಾಲಿಯೀತ (4)
2.ಮೃದುತ್ವದಿಂದ ಕೂಡಿದ ಮಾತು (4)
7.ಮನಸ್ಸಿನಿಂದ ಹುಟ್ಟಿದವನು-ಮನ್ಮಥ (3)
9.ಹೇಳಬೇಕಾದ ಮುಖ್ಯ ಉದ್ದೇಶ (3)
11.ಸೌಂದರ್ಯವತಿ-ಮನೋಹರಿ (4)
12.ನೀರು-ಆಹಾರದಿಂದ ಹರಡುವ ಕರುಳಿನ ರೋಗ (4)



ಏಪ್ರಿಲ್ 30ಕ್ಕೆ ಕೆಡಿ

2026ರಲ್ಲಿ ಸಿನಿರಸಿಕರಲ್ಲಿ ಸಾಕಷ್ಟು ಕುತೂಹಲ ಹಾಗೂ ನಿರೀಕ್ಷೆಗಳನ್ನು ಹುಟ್ಟುಹಾಕಿರುವ ಬಿಗ್ ಬಜೆಟ್, ಬಿಗ್ ಸ್ಟಾರ್ ಕಾಸ್ಟ್ ಹೊಂದಿರುವ ಮೂರು ಚಿತ್ರಗಳು ಎಂದರೆ ಅದು ಟಾಕ್ಸಿಕ್, ಫಾದರ್ ಹಾಗೂ ಧ್ರುವ ಸರ್ಜಾ ನಟನೆಯ ಕೆಡಿ. ಜೋಗಿ ಪ್ರೇಮ್ ಅವರ ನಿರ್ದೇಶನ ಹಾಗೂ ಆಕ್ಷನ್ ಪ್ರಿನ್ಸ್ ದ್ರುವ ಸರ್ಜಾ ಅವರ ಅಭಿನಯದ ಪ್ಯಾನ್ ಇಂಡಿಯಾ ಚಿತ್ರ ಇದಾಗಿದ್ದು, ಈ ಚಿತ್ರವನ್ನು ದಕ್ಷಿಣ ಭಾರತದ ಹೆಸರಾಂತ ನಿರ್ಮಾಣ ಸಂಸ್ಥೆ ಕೆ.ವಿ.ಎನ್. ಪ್ರೊಡಕ್ಷನ್ಸ್ ನೂರಾರು ಕೋಟಿ ರೂ. ಬಜೆಟ್‌ನಲ್ಲಿ ನಿರ್ಮಿಸಿದೆ, ಈಗಾಗಲೇ ತನ್ನ ಮೇಕಿಂಗ್ ಹಾಗೂ ಹಾಡುಗಳ ಮೂಲಕವೇ ದೊಡ್ಡ ಮಟ್ಟದ ಸದ್ದು ಮಾಡುತ್ತಿರುವ ಕೆಡಿ ಚಿತ್ರವು ಏಪ್ರಿಲ್ 30ರಂದು ದೇಶಾದ್ಯಂತ ಅದ್ದೂರಿಯಾಗಿ ತೆರೆಕಾಣಲಿದೆ,

ಈಗಾಗಲೇ ಕೆಡಿ ಚಿತ್ರದ ಶಿವ ಶಿವ ಹಾಡಿನ ಲಿರಿಕಲ್ ವಿಡಿಯೋ ಅತಿ ಹೆಚ್ಚು ವೀಕ್ಷಣೆಯಾಗಿದೆ, ಈ ಹಾಡಿಗೆ ನಿರ್ದೇಶಕ ಪ್ರೇಮ್ ಹಾಗೂ ಕೈಲಾಶ್‌ಖೇರ್ ದನಿಯಾಗಿದ್ದು, ಉಳಿದಂತೆ ತೆಲುಗು, ತಮಿಳು, ಮಲಯಾಳಂ ಭಾಷೆಗಳಲ್ಲಿ ಅಲ್ಲಿನ ಗಾಯಕರುಗಳೇ ಹಾಡಿದ್ದಾರೆ. ಇತ್ತೀಚಿನ ದಿನಗಳಲ್ಲಿ ಅತಿಹೆಚ್ಚು ಜನಪ್ರಿಯವಾದ ಹಾಡು ಇದಾಗಿದೆ.

ಇದರ ಜತೆಗೆ ಚಿತ್ರದ ಮತ್ತೊಂದು ಹಾಡು ಕೂಡ ದೊಡ್ಡಮಟ್ಟದಲ್ಲಿ ವೈರಲ್ ಆಗಿದೆ, ಆಕಾಶ ಭೂಮಿ ಸುತ್ತಿ, ಏಳೇಳ ಬೆಟ್ಟ ಹತ್ತಿ ಎಂಬ ಅದ್ಭುತ ಸಾಹಿತ್ಯ ಒಳಗೊಂಡಿರುವ ಈ ಹಾಡು ಕೇಳಲು ತುಂಬಾ ಸೊಗಸಾಗಿದೆ, ಈ ಹಾಡಿಗೂ ಸಹ ನಿರ್ದೇಶಕ ಪ್ರೇಮ್ ಅವರೇ ದನಿಯಾಗಿದ್ದು, ಮಂಜುನಾಥ್ ಬಿ.ಎಸ್. ಅವರು ಸಾಹಿತ್ಯ ರಚಿಸಿದ್ದಾರೆ, ಭೂಷಣ್ ಅವರ ಕೊರಿಯಾಗ್ರಫಿಯಿರುವ ಈ ಹಾಡಲ್ಲಿ ಧ್ರುವ ಸರ್ಜಾ ಸಖತ್ ಸ್ಟೆಪ್ಸ್ ಹಾಕಿದ್ದಾರೆ. ಇಂದು ಅಂದರೆ ಮಾರ್ಚ್ 10ರ ಮಂಗಳವಾರ ಸಂಜೆ 5 ಗಂಟೆ 5 ನಿಮಿಷಕ್ಕೆ ಸರಿಯಾಗಿ ಈ ಚಿತ್ರದ ಮತ್ತೊಂದು ಹಾಡಿನ ಬಗ್ಗೆ ಮಾಹಿತಿ ಹೊರಬೀಳಲಿದೆ. ಒಟ್ಟು ಕೆಡಿ ಚಿತ್ರದಲ್ಲಿ 6 ಸುಂದರ ಹಾಡುಗಳಿದ್ದು, ಅರ್ಜುನ್ ಜನ್ಯ ಅವರು ಸಂಗೀತ ಸಂಯೋಜನೆ ಮಾಡಿದ್ದಾರೆ. ಜೋಗಿ ಪ್ರೇಮ್ ನಿರ್ದೇಶನದ ಚಿತ್ರಗಳಲ್ಲಿ ಹಾಡುಗಳೇ ಹೈಲೈಟ್ ಆಗಿರುತ್ತವೆ, ಅದೇರೀತಿ ಕೆಡಿ ಚಿತ್ರದಲ್ಲೂ ಸಹ ಸಂಗೀತಕ್ಕೆ ಹೆಚ್ಚಿನ ಪ್ರಾಮುಖ್ಯತೆ ನೀಡಲಾಗಿದ್ದು, ಅರ್ಜುನ್ ಜನ್ಯ ಇಡೀ ಚಿತ್ರದ ಮ್ಯೂಸಿಕ್‌ನಲ್ಲಿ ಮ್ಯಾಜಿಕನ್ನೇ ಮಾಡಿದ್ದಾರೆ, ಶಿವ ಶಿವ ಹಾಡಲ್ಲಿ ಶಿವನ ವೈಭವೀಕರಣವನ್ನು ಗ್ರಾಫಿಕ್ ಮೂಲಕ ಅದ್ಭುತವಾಗಿ ಕಟ್ಟಿಕೊಡಲಾಗಿದೆ. ಭಜರಂಗಿ ಮೋಹನ್ ಈ ಹಾಡಿಗೆ ಕೊರಿಯೋಗ್ರಫಿ ಮಾಡಿದ್ದಾರೆ. ಇನ್ನು ಆಕಾಶ ಭೂಮಿ ಹಾಡಲ್ಲಿ ಸಹೋದರ ಬಾಂಧವ್ಯದ ಕುರಿತಂತೆ ಹೇಳುತ್ತ ಅಣ್ತಮ್ಮ ಜೋಡೆತ್ತು ಕಣೋ ಎಂಬ ಪದ ಬಳಸಲಾಗಿದೆ. ಈಗಾಗಲೇ ಈ ಹಾಡು ರಿಲೀಸಾದ ಕೆಲವೇ ಘಂಟೆಗಳಲ್ಲಿ 2 ಲಕ್ಷಕ್ಕೂ ಹೆಚ್ಚು ವೀಕ್ಷಣೆಯಾಗುವ ಮೂಲಕ ವೈರಲ್ ಆಗಿದೆ, ಇನ್ನು ಈ ಚಿತ್ರದಲ್ಲಿ ದ್ರುವ ಸರ್ಜಾ ಅವರ ಜತೆ ನಾಯಕಿಯಾಗಿ ನಟಿ ರೀಶ್ಮಾ ನಾಣಯ್ಯ ನಟಿಸಿದ್ದಾರೆ, ಅಂದಹಾಗೆ, 1970-75ರ ಸಮಯದಲ್ಲಿ ನಡೆದ ನೈಜಘಟನೆ ಆಧಾರಿತ ಗ್ಯಾಂಗ್‌ಸ್ಟರ್ ಕಥೆ ಈ ಚಿತ್ರಲ್ಲಿದೆ, ಚಿತ್ರೀಕರಣಕ್ಕಾಯೇ 20 ಎಕರೆಯಷ್ಟು ವಿಶಾಲವಾದ ಜಾಗದಲ್ಲಿ ಬಹು ಕೋಟಿ ವೆಚ್ಚದಲ್ಲಿ ಅದ್ದೂರಿ ಸೆಟ್‌ಹಾಕಿ ಚಿತ್ರೀಕರಿಸಲಾಗಿದೆ. ಚಿತ್ರದ ಆರು ಕಲರ್‌ಫುಲ್ ಹಾಡುಗಳಿಗೆ ಆರು ಜನ ಕೊರಿಯಾಗ್ರಾಫರ್‌ಗಳು ಕೆಲಸ ಮಾಡಿದ್ದಾರೆ.

ಇನ್ನು ಕೆಡಿ ಚಿತ್ರಕ್ಕೆ ವಿಕ್ರಾಂತ್ ರೋಣ ಖ್ಯಾತಿಯ ವಿಲಿಯಂ ಡೇವಿಡ್ ಅವರ ಕ್ಯಾಮೆರಾ ವರ್ಕ್ ಇದೆ. ಕ್ರೇಜಿಸ್ಟಾರ್ ರವಿಚಂದ್ರನ್, ಸಂಜಯ್ ದತ್ ಅಲ್ಲದೆ ಶಿಲ್ಪಾ ಶೆಟ್ಟಿ, ನೋರಾ ಫತೇಹಿ ಸೇರಿದಂತೆ ಬಾಲಿವುಡ್‌ನ ಅನೇಕ ಕಲಾವಿದರು ಈ ಚಿತ್ರದಲ್ಲಿ ನಟಿಸಿದ್ದಾರೆ. ಜೊತೆಗೆ ಕ್ರೇಜಿಸ್ಟಾರ್ ರವಿಚಂದ್ರನ್, ನಟ ರಮೇಶ್ ಅರವಿಂದ್ ಹೀಗೆ ಹೆಸರಾಂತ ಕಲಾವಿದರ ದಂಡೇ ಈ ಚಿತ್ರದಲ್ಲಿದೆ.

ನಮ್ಮ ಹಳ್ಳಿಗಾಡಿನ ಪ್ರದೇಶಗಳ ಬಹುತೇಕ ಮನೆಗಳಲ್ಲಿ ಹೆಣ್ಣು ಮಕ್ಕಳನ್ನು ಶಾಲೆಗೆ ಕಳಿಸೋದಿಲ್ಲ, ಅವರನ್ನು ಏಕೆ ಶಾಲೆಗೆ ಕಳಿಸುತ್ತಿಲ್ಲ, ಮಹಿಳೆಯರಿಗೆ ಶಿಕ್ಷಣ ಎಷ್ಟು ಮುಖ್ಯ ಎಂದು, ಅಲ್ಲಿನ ಜನರಲ್ಲಿ ಶಿಕ್ಷಣದ ಬಗ್ಗೆ ಜಾಗೃತಿ ಮೂಡಿಸುವಂಥ ಚಿತ್ರ ಇದಾಗಿದೆ, ಇದು ಸೋಷಿಯಲ್ ಕಾಸ್ ಬಗ್ಗೆ ಹೇಳುವ, ನೈಜಘಟನೆ ಆಧಾರಿತ ಚಿತ್ರವಾಗಿದ್ದು, ಇದರಲ್ಲಿರುವ ಭಾವನಾತ್ಮಕ ಸನ್ನಿವೇಶಗಳು ಜನರ ಮನಸ್ಸಿಗೆ ಹತ್ತಿರವಾಗಲಿದೆ. ಜೊತೆಗೆ ಸಮಾಜಕ್ಕೆ ಉತ್ತಮ ಸಂದೇಶ ನೀಡುವ ಕಥಾಹಂದರ ಇದರಲ್ಲಿದೆ,

ಏ. 3ರಂದು ಗೀತಪ್ರಿಯ ಅಭಿನಯದ ಅಪರಿಚಿತೆ



ಈ ಮೊದಲು ಸೂಲಗಿತ್ತಿಯೊಬ್ಬಳ ಸುತ್ತ ನಡೆಯುವ ಕಥಾಹಂದರ ಇಟ್ಟುಕೊಂಡು 'ತಾಯವ್ವ' ಎಂಬ ಚಿತ್ರದಲ್ಲಿ ನಾಯಕಿಯಾಗಿ ನಟಿಸುವುದರೊಂದಿಗೆ ಆ ಚಿತ್ರವನ್ನು ನಿರ್ಮಿಸಿದ್ದ ನಟಿ ಗೀತಪ್ರಿಯ ಸುರೇಶ್‌ಕುಮಾರ್ ಅವರು ಇದೀಗ ಮತ್ತೊಂದು ಚಲನಚಿತ್ರದಲ್ಲಿ ಅಭಿನಯಿಸಿದ್ದಾರೆ. ಆ ಚಿತ್ರದ ಹೆಸರು 'ಅಪರಿಚಿತೆ'. ವಿಶ್ವನಾಥ್ ಅವರ ಕಥೆ, ಚಿತ್ರಕಥೆ ಹಾಗೂ ನಿರ್ದೇಶನದಲ್ಲಿ ಮೂಡಿಬಂದಿರುವ ಈ ಚಿತ್ರವೀಗ ತನ್ನೆಲ್ಲ ಕೆಲಸ ಬಿಡುಗಡೆಯ ಹಂತದಲ್ಲಿದ್ದು, ಏಪ್ರಿಲ್ 3ರಂದು ರಾಜ್ಯಾದ್ಯಂತ ಅದ್ದೂರಿಯಾಗಿ ತೆರೆಕಾಣಲಿದೆ, ವಿಶೇಷವಾಗಿ ಈ ಚಿತ್ರದಲ್ಲಿ ಹಿರಿಯನಟ ಶ್ರೀನಾಥ್ ಹಾಗೂ ಅವರ ಪುತ್ರ ರೋಹಿತ್ ಇಬ್ಬರೂ ಒಟ್ಟಿಗೇ ಕಾಣಿಸಿಕೊಂಡಿದ್ದಾರೆ.





ಈ ಚಿತ್ರದ ಕುರಿತಂತೆ ನಾಯಕಿ ಗೀತಪ್ರಿಯ ಮಾತನಾಡುತ್ತ ಈ ಹಿಂದೆ ನಾನು ತಾಯವ್ವ ಎಂಬ ಚಿತ್ರದಲ್ಲಿ ಸೂಲಗಿತ್ತಿಯಾಗಿ ಕಾಣಿಸಿಕೊಂಡಿದ್ದೆ. ಈಗ ಅಪರಿಚಿತೆ ಎಂಬ ಚಿತ್ರದಲ್ಲಿ ಶಿಕ್ಷಕಿಯಾಗಿ ಅಭಿನಯಿಸಿದ್ದೇನೆ. ನನ್ನ ಪತಿ ಸುರೇಶ್‌ಕುಮಾರ್ ಅವರೇ ಈ ಚಿತ್ರವನ್ನು ನಿರ್ಮಾಣ ಮಾಡಿದ್ದಾರೆ. ಅಪರಿಚಿತೆ ಚಿತ್ರದಲ್ಲಿ ನಾನು ಒಬ್ಬ ಜವಾಬ್ದಾರಿಯುತ ಶಿಕ್ಷಕಿಯ ಪಾತ್ರದಲ್ಲಿ ಕಾಣಿಸಿಕೊಂಡಿದ್ದೇನೆ. ನಮ್ಮ ಹಳ್ಳಿಗಾಡಿನ ಪ್ರದೇಶಗಳಲ್ಲಿ ಹೆಣ್ಣು ಮಕ್ಕಳನ್ನು ಶಾಲೆಗೆ ಕಳಿಸೋದಿಲ್ಲ, ಅವರನ್ನು ಏಕೆ ಶಾಲೆಗೆ ಕಳಿಸುತ್ತಿಲ್ಲ ಎಂದು ಅಲ್ಲಿನ ಜನರಲ್ಲಿ ಶಿಕ್ಷಣದ ಬಗ್ಗೆ ಜಾಗೃತಿ ಮೂಡಿಸುವಂಥ ಚಿತ್ರವಿದು, ನಿರ್ದೇಶಕ ವಿಶ್ವನಾಥ್ ಅವರು ಬಂದು ನನಗೆ ಈ ಕಥೆ ಹೇಳಿದರು. ಸಮಾಜಕ್ಕೆ ಏನಾದರೂ ಉತ್ತಮ ಸಂದೇಶ ನೀಡುವ ಕಥೆ ಇದ್ದರೆ ಮಾತ್ರ ನಟನೆ ಮಾಡುವುದಾಗಿ ಹೇಳಿದ್ದೆ. ಇದು ಅಂತಹುದೇ ಒಂದು ಕಥೆಯಿರೋ ಚಿತ್ರ. ಈ ಚಿತ್ರಕ್ಕೆ ರಾಮನಗರದಲ್ಲಿ ಬಹುತೇಕ ಚಿತ್ರೀಕರಣ ನಡೆಸಿದ್ದೇವೆ, ಇದೊಂದು ಸೋಷಿಯಲ್ ಕಾಸ್ ಬಗ್ಗೆ ಹೇಳುವ, ನೈಜಘಟನೆ ಆಧಾರಿತ ಚಿತ್ರವಾಗಿದ್ದು, ಇದರಲ್ಲಿರುವ ಭಾವನಾತ್ಮಕ ಸನ್ನಿವೇಶಗಳು ಜನರ ಮನಸ್ಸಿಗೆ ಹತ್ತಿರವಾಗಲಿದೆ. ಜೊತೆಗೆ ಸಮಾಜಕ್ಕೆ ಉತ್ತಮ ಸಂದೇಶ ನೀಡುವ ಕಥಾಹಂದರ ಇದರಲ್ಲಿದೆ, ಸಾಮಾಜಿಕ ಸಂದೇಶ ಇರುವಂತಹ ಸಿನಿಮಾಗಳಲ್ಲಿ ನಟಿಸಬೇಕೆಂಬುದೇ ನನ್ನ ಆಶಯ, ಇದೂ ಕೂಡಾ ಸಾಮಾಜಿಕ ಸಂದೇಶ ಸಾರುವ ಚಿತ್ರವಾಗಿದೆ ಎಂದು ನಟಿ ಗೀತಪ್ರಿಯ ಸುರೇಶ್ ಕುಮಾರ್ ಅವರು ಹೇಳಿದ್ದಾರೆ.

ಅಪರಿಚಿತೆ ಚಿತ್ರದ ನಿರ್ದೇಶಕ ವಿಶ್ವನಾಥ್ ಮಾತನಾಡುತ್ತ, 'ಇದೊಂದು ನೈಜ ಘಟನೆ ಆಧಾರಿತ ಸಿನಿಮಾ. ಈಗಾಗಲೇ ಚಿತ್ರದ ಚಿತ್ರೀಕರಣ ಹಾಗೂ ಪೋಸ್ಟ್ ಪ್ರೊಡಕ್ಷನ್ ಕೆಲಸಗಳು ಮುಗಿದಿದ್ದು, ಚಿತ್ರವೀಗ ಬಿಡುಗಡೆಗೆ ಸಿದ್ದವಾಗಿದೆ. ಗೀತಪ್ರಿಯ, ಸಿಂಧೂ ಲೋಕನಾಥ್, ಆರ್. ಜೆ. ನಿಖಿತಾ, ಹಿರಿಯ ನಟ ಶ್ರೀನಾಥ್ ಹಾಗೂ ಶ್ರೀನಾಥ್ ಅವರ ಮಗ ರೋಹಿತ್ ಕೂಡ ಪ್ರಮುಖ ಪಾತ್ರದಲ್ಲಿ ನಟಿಸಿದ್ದಾರೆ ಎಂದು ಹೇಳಿದರು.

ಹಿರಿಯ ನಟ ಶ್ರೀನಾಥ್ ಮಾತನಾಡುತ್ತಾ, 'ಒಂದೊಳ್ಳೆ ಮೆಸೇಜ್ ಇರುವ ಚಿತ್ರದಲ್ಲಿ ನಟಿಸಿರುವ ಖುಷಿ ನನಗಿದೆ. ನಾನು ಹಾಗೂ ನನ್ನ ಮಗ ರೋಹಿತ್ ಇಬ್ಬರು ಈ ಚಿತ್ರದಲ್ಲಿ ನಟಿಸಿರುವುದು ಮತ್ತೊಂದು ವಿಶೇಷ ಎಂದರು. ಮೂವತ್ತೈದು ವರ್ಷಗಳ ನಂತರ ನಾನು ಸಿನಿಮಾದಲ್ಲಿ ಬಣ್ಣ ಹಚ್ಚಿದ್ದೇನೆ. ಅದರಲ್ಲೂ ನಮ್ಮ ತಂದೆಯ ಜೊತೆಗೆ ನಟಿಸಿರುವುದಕ್ಕೆ ಬಹಳ ಖುಷಿಯಾಗಿದೆ ಎಂದು ರೋಹಿತ್ ಶ್ರೀನಾಥ್ ತಿಳಿಸಿದರು. ಗೀತಪ್ರಿಯ ಅವರ ಪತಿ ಸುರೇಶ್‌ಕುಮಾರ್ ಅವರು ಅಮರ್ ಫಿಲಂಸ್ ಲಾಂಛನದಲ್ಲಿ ನಿರ್ಮಾಣವಾಗಿರುವ ಈ ಚಿತ್ರದ ಪ್ರಮುಖ ತಾರಾಬಳಗದಲ್ಲಿ ಗೀತಪ್ರಿಯ, ಹಿರಿಯ ನಟ ಶ್ರೀನಾಥ್, ರೋಹಿತ್ (ಶ್ರೀನಾಥ್ ಅವರ ಪುತ್ರ), ಸಿಂಧೂ ಲೋಕನಾಥ್, ಆರ್.ಜೆ. ನಿಖಿತಾ ಮುಂತಾದವರಿದ್ದಾರೆ. ಈ ಚಿತ್ರವನ್ನು ಎಂ.ಪಿ. ಫಿಲಂಸ್ ಮೂಲಕ ಕೆ. ಮುನೀಂದ್ರ ಅವರು ಬಿಡುಗಡೆ ಮಾಡುತ್ತಿದ್ದಾರೆ.

ನೈಜ ಘಟನೆ ಆಧಾರಿತ ಬಾಸ್ ಫಸ್ಟ್‌ಲುಕ್ ಟೀಸರ್



ಮಡಮಕ್ಕಿ, ನಂಜುಂಡಿ ಕಲ್ಯಾಣ, ನಟ್ವರ್‌ಲಾಲ್ ಖ್ಯಾತಿಯ ನಟ, ನಿರ್ಮಾಪಕ ತನುಷ್ ಶಿವಣ್ಣ ನಾಯಕನಾಗಿ ಅಭಿನಯಿಸಿರುವ ಮತ್ತೊಂದು ಚಿತ್ರ ಬಾಸ್. 2024-25ರಲ್ಲಿ ನಡೆದ ನೈಜ ಘಟನೆಯನ್ನಾಧರಿಸಿ ನಿರ್ಮಾಣವಾದ ಈ ಚಿತ್ರವೀಗ ಬಿಡುಗಡೆಗೆ ಸಿದ್ದವಾಗಿದೆ. ಇತ್ತೀಚಿಗೆ ಈ ಚಿತ್ರದ ಫಸ್ಟ್‌ಲುಕ್ ಟೀಸರ್ ಬಿಡುಗಡೆ ಕಾರ್ಯಕ್ರಮ ನಡೆಯಿತು. ಈ ಚಿತ್ರಕ್ಕೆ ವಿ. ಲವ ಆಕ್ಷನ್ ಕಟ್ ಹೇಳಿದ್ದಾರೆ. ಚಿತ್ರದ ನಾಯಕಿಯರಾಗಿ ಪಾಯಲ್ ಚಂಗಪ್ಪ ಹಾಗೂ ಮೊನಿಕಾಗೌಡ ನಟಿಸಿದ್ದಾರೆ. ಬಾಸ್ ಚಿತ್ರದ ಬಗ್ಗೆ ಮಾಹಿತಿ ನೀಡುವ ನಿರ್ದೇಶಕ ವಿ.ಲವ, 'ಇದೊಂದು 2024-25ರ ಕಾಲಘಟ್ಟದಲ್ಲಿ ನಡೆದ ನೈಜ ಘಟನೆಗಳ ಪ್ರೇರಣೆಯಿಂದ ತಯಾರಾದ ಚಿತ್ರ. ವೃತ್ತಿಯಲ್ಲಿ ವಕೀಲನಾದ ನಾನು ಆದಷ್ಟು ಸಮಾಜದಲ್ಲಿ ನಡೆಯುವ ಘಟನೆಗಳನ್ನೇ ಇಟ್ಟುಕೊಂಡು ಸಿನಿಮಾ ಮಾಡುತ್ತಾ ಬಂದಿದ್ದೇನೆ. ಇದರಲ್ಲಿ ಒಬ್ಬ ಸಿನಿಮಾ ಸೆಲೆಬ್ರಿಟಿಯ ಲೈಫ್‌ನಲ್ಲಿ ನಡೆಯುವ ಕ್ರೈಂ ಕಥೆಯನ್ನು ಹೇಳುತ್ತಿದ್ದೇನೆ, ಬಾಸ್ ಪಾತ್ರದಲ್ಲಿ ತನುಶ್ ಅಭಿನಯಿಸಿದ್ದಾರೆ. ಇದನ್ನು ನಿರ್ದಿಷ್ಟವಾಗಿ ದರ್ಶನ ಅವರ ಕೇಸ್ ಎಂದು ಹೇಳಲು ಸಾದ್ಯವಿಲ್ಲ. ಸದ್ಯದಲ್ಲೇ ಟ್ರೈಲರ್ ಬಿಡುಗಡೆ ಮಾಡಲಿದ್ದೇವೆ, ಆಗ ನಿಮಗೆಲ್ಲಾ ಗೊತ್ತಾಗುತ್ತದೆ, ಮುಂದಿನ ತಿಂಗಳು ಚಿತ್ರವನ್ನು ರಿಲೀಸ್ ಮಾಡುವ ಯೋಜನೆಯಿದೆ ಎಂದರು.





ಚಿತ್ರದ ನಾಯಕ ತನುಷ್ ಮಾತನಾಡಿ ನಾನಿಲ್ಲಿ ಒಬ್ಬ ಸೆಲೆಬ್ರಿಟಿಯ ಪಾತ್ರ ಮಾಡಿದ್ದೇನೆ. ಅವರ ಜೀವನದಲ್ಲಿ ಏನೇನೆಲ್ಲಾ ನಡೆದುಹೋಗುತ್ತೆ ಎಂಬುದನ್ನು ಚಿತ್ರದಲ್ಲಿ ತೋರಿಸಲಾಗಿದೆ. ಬಾಸ್ ಅಂತ ಹೆಸರಿಟ್ಟ ಕೂಡಲೇ ಇದು ದರ್ಶನ್ ಅವರ ಕಥೆಯೇ ಎಂದು ಹೇಳಲಾಗಲ್ಲ. ಹೋಲಿಕೆ ಇರಬಹುದಷ್ಟೇ, ಇದೊಂದು ಮರ್ಡರ್ ಮಿಸ್ಟ್ರಿ ಕಥೆ. ಕ್ರೈಂ, ಥ್ರಿಲ್ಲರ್‌ಗೆ ಏನೆಲ್ಲಾ ಬೇಕೋ ಅದೆಲ್ಲವನ್ನು ಇಟ್ಟುಕೊಂಡು ಈ ಸಿನಿಮಾ ಮಾಡಿದ್ದೇವೆ, ಯಾರಿಗೂ ಹರ್ಟ್ ಮಾಡಬೇಕು ಎಂದು ಈ ಚಿತ್ರವನ್ನು ಮಾಡಿಲ್ಲ, ಚಿತ್ರಕಥೆ ಪ್ರತಿ ಕ್ಷಣವೂ ಪ್ರೇಕ್ಷಕರಲ್ಲಿ ಕ್ಯೂರಿಯಾಲಿಟಿ ಮೂಡಿಸುತ್ತಾ ಸಾಗುತ್ತದೆ' ಎಂದು ಮಾಹಿತಿ ನೀಡಿದರು. ಸಿರಿ ಪ್ರೊಡಕ್ಷನ್ಸ್ ಬ್ಯಾನರ್ ಅಡಿಯಲ್ಲಿ ನಿರ್ಮಾಣವಾದ ಈ ಚಿತ್ರಕ್ಕೆ 'ಸತ್ಯಮೇವ ಜಯತೇ' ಎಂಬ ಅಡಿಬರಹವಿದೆ, ಈ ಚಿತ್ರಕ್ಕೆ ವಿ.ಲವ ಅವರು ಕಥೆ ಚಿತ್ರಕಥೆ ಬರೆದು ನಿರ್ದೇಶನ ಮಾಡಿದ್ದಾರೆ. ಶರತ್ ಅವರ ಛಾಯಾಗ್ರಹಣವಿರುವ ಈ ಚಿತ್ರದ ಪ್ರಮುಖ ತಾರಾಗಣದಲ್ಲಿ ಡಾಕ್ಟರ್ ವಿಜಯಶ್ರೀ, ಸುಜನೀಷ್ ಶೆಟ್ಟಿ, ವಿರೇನ್ ಕೇಶವ, ಮಹೇಶ್, ಭೀಷ್ಮ ರಾಮಯ್ಯ ಹಾಗೂ ಇತರರು ಅಭಿನಯಿಸಿದ್ದಾರೆ.

ಎಂಜಿಆರ್ ಕೊಟ್ಟ ವಾಚನ್ನೇ ಶಿವಣ್ಣಗೆ ತೊಡಿಸಿದ್ದ ವಿಷ್ಣು



ಸಾಹಸಸಿಂಹ ಡಾ.ವಿಷ್ಣುವರ್ಧನ್ ಅಭಿನಯದ ಕೋಟಿಗೊಬ್ಬ ಚಿತ್ರ ಬಿಡುಗಡೆಯಾಗಿ 25 ವರ್ಷಗಳಾಗಿದೆ. ಈ ಸಂದರ್ಭದಲ್ಲಿ ಆ ಚಿತ್ರದ ನಿರ್ಮಾಪಕ ಸೂರಪ್ಪಬಾಬು ಅವರು ಒಂದು ಅವಿಸ್ಮರಣೀಯ ಸಮಾರಂಭವನ್ನು ಆಯೋಜಿಸಿದ್ದರು. ಈ ವೇದಿಕೆಯಲ್ಲಿ ನಿವೃತ್ತ ಲೋಕಾಯುಕ್ತ ನ್ಯಾಯಮೂರ್ತಿ ಸಂತೋಷ್ ಹೆಗ್ಡೆ, ನಿರ್ದೇಶಕ ನಾಗಣ್ಣ, ಹಿರಿಯನಟ ದೇವರಾಜ್, ಉಪೇಂದ್ರ, ಪ್ರಿಯಾಂಕಾ ಉಪೇಂದ್ರ, ಗೋಲ್ಡನ್‌ಸ್ಟಾರ್ ಗಣೇಶ್, ಸಾಹಿತಿ ಕೆ.ಕಲ್ಯಾಣ್ ಹಾಗೂ ಇತರರು ಉಪಸ್ಥಿತರಿದ್ದರು. ಅತಿಥಿಗಳನ್ನು ಸ್ವಾಗತಿಸಿದ ನಿರ್ಮಾಪಕ ಸೂರಪ್ಪಬಾಬು ತಮ್ಮ ಹಾಗೂ ವಿಷ್ಣುವರ್ಧನ್ ಅವರ ಜತೆಗಿನ ಸಂಬಂಧ ಹೇಗಿತ್ತು, ಅವರು ತನ್ನನ್ನು ಎಷ್ಟು ಇಷ್ಟಪಡುತ್ತಿದ್ದರು ಎಂಬ ಬಗ್ಗೆ ವಿವರಿಸಿದರು. ನ್ಯಾಯಮೂರ್ತಿ ಸಂತೋಷ್ ಹೆಗ್ಡೆ ಮಾತನಾಡುತ್ತ ಸಾಮಾನ್ಯವಾಗಿ ನಾನು ಸಿನಿಮಾ ಸಮಾರಂಭಗಳಿಗೆ ಹೋಗುವುದಿಲ್ಲ, 25 ವರ್ಷಗಳ ನಂತರವೂ ಅವರನ್ನು ನೀವೆಲ್ಲ ನೆನಪಿಸಿಕೊಳ್ಳುತ್ತಿರುವುದು ವಿಶೇಷ ಎನಿಸಿತು, ಅದಕ್ಕಾಗೇ ನಾನಿಲ್ಲಿಗೆ ಬಂದೆ. ವಿಷ್ಣುವರ್ಧನ್ ಅವರ ಬಗ್ಗೆ ನಾನು ಪುಸ್ತಕಗಳಲ್ಲಿ ಓದಿ ತಿಳಿದುಕೊಂಡಿದ್ದೇನೆ. ಅವರು ಇಡೀ ಕುಟುಂಬ ಕೂತು ನೋಡುವಂಥ ಚಿತ್ರಗಳನ್ನಷ್ಟೇ ಮಾಡುತ್ತಿದ್ದರು ಎಂದು ಅವರ ಗುಣಗಾನ ಮಾಡಿದರು.

ನಟ ದೇವರಾಜ್ ಮಾತನಾಡಿ ವಿಷ್ಣು ಅವರು ನಾನು ಯಾವಾಗ ಮನೆಗೆ ಹೋದರೂ ಒಬ್ಬ ತಮ್ಮನ ಥರ ಆತ್ಮೀಯತೆಯಿಂದ ಬರಮಾಡಿಕೊಂಡು, ಅವರ ಮನೆಯ ತೂಗುಯ್ಯಾಲೆಯಲ್ಲಿ ಕೂರಿಸಿಕೊಂಡು ಮಾತಾಡುತ್ತಿದ್ದರು, ಅಲ್ಲಿ ಭಾರತಿ ಅವರು ಬಂದು ಕೈತುತ್ತು ನೀಡುತ್ತಿದ್ದರು. ಅವರ ಶಿಸ್ತು ಸಂಯಮಗಳನ್ನೇ ನನ್ನ ಜೀವನದಲ್ಲಿ ಅಳವಡಿಸಿಕೊಂಡಿದ್ದೇನೆ. ಮುಂಬೈನಲ್ಲಿ ಈ ಚಿತ್ರದ ಶೂಟಿಂಗ್‌ಗಾಗಿ 30 ದಿನಗಳವರೆಗೆ ಅವರ ಜತೆ ಕಳೆದದ್ದು ಮರೆಯಲಾಗದ ಅನುಭವ.

ಸೂರಪ್ಪ ಚಿತ್ರದಲ್ಲಿ ನಾನು ಅಭಿನಯಿಸಬೇಕಿತ್ತು, ಚಿತ್ರದಲ್ಲಿ ಅವರ ವಿಗ್ರಹ ಒಡೆದುಹಾಕುವ ಸನ್ನಿವೇಶವಿದ್ದರಿಂದ ಅಂಥ ಪಾತ್ರ ಮಾಡಲು ಒಪ್ಪಿಕೊಳ್ಳಲಿಲ್ಲ. ಆದರೆ ಈ ಚಿತ್ರಕ್ಕೆ ಕರೆ ಬಂದಾಗ ಬ್ಯುಸಿ ಇದ್ದರೂ ತಕ್ಷಣ ಒಪ್ಪಿದೆ ಎಂದು ಹಳೆಯ ದಿನಗಳನ್ನು ಮೆಲುಕು ಹಾಕಿದರು.

ನಂತರ ಉಪೇಂದ್ರ ಮಾತನಾಡಿ ವಿಷ್ಣು ಅವರ ಬಗ್ಗೆ ಹೇಳೊದು ತುಂಬಾನೇ ಇದೆ. ಅವರನ್ನು ಮಾತಾಡಿಸಬೇಕೆಂದೇ ನಾನು ಅವರ ಮನೆಗೆ ಹೋಗ್ತಿದ್ದೆ. ಆಧ್ಯಾತ್ಮ, ದೇವರ ಬಗ್ಗೆ ತುಂಬಾ ಹೇಳ್ತಿದ್ದರು. ಅಂಥ ಮಹಾನ್ ವ್ಯಕ್ತಿಯ ಮಾತು ಕೇಳೋದೇ ಪುಣ್ಯ. ಅವರಿಂದ ನಾನು ಸ್ಫೂರ್ತಿ ಪಡೆಯುತ್ತಿದ್ದೆ. ನಿಮ್ಮ ಸಿನಿಮಾಗಳು ಬೇರೆಯದೇ ಪ್ರೇಕ್ಷಕರನ್ನು ಹುಟ್ಟುಹಾಕ್ತಿವೆ ಎಂದವರು ನನ್ನ ಸಿನಿಮಾಗಳನ್ನು ಮೆಚ್ಚಿಕೊಳ್ಳುತ್ತಿದ್ದರು. ನನ್ನನ್ನು ತರ್ಲೆನನ್ಮಗ ಚಿತ್ರದ ಮೂಲಕ ನಿರ್ದೇಶಕನನ್ನಾಗಿ ಪರಿಚಯಿಸಿದ್ದೇ ಸೂರಪ್ಪಬಾಬು ಅವರು ಎಂದು ಹೇಳಿದರು. ಪ್ರಿಯಾಂಕಾ ಉಪೇಂದ್ರ ಮಾತನಾಡುತ್ತ ನಾನು ತಮಿಳು ಚಿತ್ರದ ಶೂಟಿಂಗ್‌ನಲ್ಲಿದ್ದಾಗ ಈ ಸಿನಿಮಾದಲ್ಲಿ ನಟಿಸಲು ಆಫರ್ ಬಂತು. ಅಂಥಾ ಕಲಾವಿದರ ಜತೆ ಹೇಗೆ ನಟಿಸೋದು ಅಂತ ತುಂಬಾ ಭಯವಾಯ್ತು. ಆಗ ಉಪೇಂದ್ರ ಅವರೇ ಅಂಥಾ ಹೃದಯವಂತ ವ್ಯಕ್ತಿಯ ಜತೆ ನಟಿಸುವ ಅವಕಾಶ ಬಂದಿರೋದೇ ನಿನ್ನ ಪುಣ್ಯ. ಫಸ್ಟ್ ಒಪ್ಕೋ ಎಂದರು. ನಾನೀ ಚಿತ್ರದಲ್ಲಿ ನಟಿಸಲು ಮೂಲಕಾರಣ ಉಪೇಂದ್ರ. ವಿಷ್ಣು ಸರ್ ಅವರಿಂದ ನಾನು ತುಂಬಾ ಕಲಿತಿದ್ದೇನೆ ಎಂದರು.

ಕೋಟಿಗೊಬ್ಬನ ಬೆಳ್ಳಿಹಬ್ಬದ ಸಂಭ್ರಮ

ನಂತರ ಗಣೇಶ್ ಮಾತನಾಡಿ ನಾನು ವಿಷ್ಣು ಅವರ ದೊಡ್ಡ ಅಭಿಮಾನಿ. ಅವರಂತೇ ನನ್ನ ಕೈಗೂ ಕಡಗ ಹಾಕ್ಕೊಂಡಿದ್ದೇನೆ. ಅವರ ಸಿನಿಮಾಗಳನ್ನು ಬ್ಲಾಕ್‌ಟಿಕೆಟ್ ತಗೊಂಡು ನೋಡ್ತಿದ್ದೆ. ನೀನು ಯಾವಾಗಲೂ ಸಂತೋಷವಾಗಿರುವಂತೆ ಇರಬೇಡ, ಸಂತೋಷವಾಗಿಯೇ ಇರು ಅಂತಿದ್ದರು ಎಂದರು. ನಂತರ ಗುರುದತ್ ಮಾತನಾಡಿ ಶಿವಣ್ಣ ಹಾಗು ವಿಷ್ಣು ಸಾರ್ ಒಂದು ಚಿತ್ರದಲ್ಲಿ ಅಭಿನಯಿಸಬೇಕಿತ್ತು. ಸ್ಕ್ರಿಪ್ಟ್ ಲೇಟಾಗಿದ್ದರಿಂದ ಆಗಲಿಲ್ಲ. ಶಿವಣ್ಣನ ಮೇಲೆ ಅವರು ತುಂಬಾ ಅಭಿಮಾನ ಇಟ್ಕೊಂಡಿದ್ದರು. ಒಮ್ಮೆ ಅಶೋಕಾ ಹೋಟೆಲಿನಲ್ಲಿ ಅವರ ಚಿತ್ರದ ಸಮಾರಂಭವಿತ್ತು. ಆಗ ನನ್ನನ್ನು ಕರೆದು ಶಿವಣ್ಣನನ್ನು ಕರೆಸು, ನಾನು ಅವರಜತೆ ಮಾತಾಡಬೇಕು ಅಂದರು. ಶಿವಣ್ಣ ಬಂದಾಗ ಆತ್ಮೀಯತೆಯಿಂದ ಬರಮಾಡಿಕೊಂಡು ನಂತರ ತಮ್ಮ ಕೈಲಿದ್ದ, ಎಂಜಿಆರ್ ಸರ್, ಅವರಿಗೆ ಗಿಫ್ಟ್ ಕೊಟ್ಟಿದ್ದ ವಾಚನ್ನೇ ಶಿವಣ್ಣಗೆ ಹಾಕಿ, ನೀನು ಕರ್ನಾಟಕವೇ ಇಷ್ಟಪಡುವಂಥ ದೊಡ್ಡ ಕಲಾವಿದ ಆಗ್ತೀಯ, ಅದನ್ನು ನಾನೂ ನೋಡುತ್ತೇನೆ ಎಂದಿದ್ದರು ಎಂದು ಆ ಘಟನೆಯನ್ನು ನೆನಪಿಸಿಕೊಂಡರು. ಸಾಹಿತಿ ಕೆ.ಕಲ್ಯಾಣ್, ನಿರ್ದೇಶಕ ನಾಗಣ್ಣ ವಿಷ್ಣು ಜತೆಗಿನ ಒಡನಾಟದ ದಿನಗಳನ್ನು ಹಂಚಿಕೊಂಡರು.

ಮಹಿಳಾ ದಿನದ ವಿಶೇಷವಾಗಿ ಮುಳ್ಳಿನ ಗುಲಾಬಿ ಪೋಸ್ಟರ್

ಒಂದು ಹೆಣ್ಣು ತನ್ನ ಕಾಲೇಜ್ ಲೈಫಲ್ಲಿ ಏನೇನೆಲ್ಲ ಕಿರುಕುಳ ಅನುಭವಿಸುತ್ತಾಳೆ, ಅಲ್ಲದೆ ಚಿಕ್ಕ ವಯಸಿನಲ್ಲೇ ಮದುವೆಯಾಗಿ ಗಂಡನ ಮನೆಗೆ ಹೋದಾಗ ಆ ಮನೆಯಲ್ಲಿ ಅತ್ತೆ, ಮಾವ ನಾದಿನಿ ಹೀಗೆ ಹಲವರ ಕಡೆಯಿಂದ ಏನೇನೆಲ್ಲ ಕಿರುಕುಳ, ತೊಂದರೆ, ಕಷ್ಟ ಕಾರ್ಪಣ್ಯಗಳನ್ನು ಅನುಭವಿಸುತ್ತಾಳೆ, ಕೊನೆಗೆ ಅದನ್ನೆಲ್ಲ ಎದುರಿಸಿ ಗೆದ್ದು ತೋರಿಸುವ ಮೂಲಕ ಹೇಗೆ ಸಮಾಜದಲ್ಲಿ ಬೆಳೆದು ನಿಲ್ಲುತ್ತಾಳೆ ಎಂಬುದನ್ನು ಮುಳ್ಳಿನ ಗುಲಾಬಿ ಚಿತ್ರದ ಮೂಲಕ ನಿರ್ದೇಶಕರು ಹೇಳಲು ಪ್ರಯತ್ನಿಸಿದ್ದಾರೆ.

ಹಿರಿಯನಟ ಅನಂತನಾಗ್, ಆರತಿ ಪ್ರಮುಖ ಪಾತ್ರಗಳಲ್ಲಿ ಅಭಿನಯಿಸಿದ್ದ ಮುಳ್ಳಿನ ಗುಲಾಬಿ ಚಿತ್ರವು 1982ರಲ್ಲಿ ತೆರೆಗೆ ಬಂದು ಯಶಸ್ವೀ ಪ್ರದರ್ಶನ ಕಂಡಿತ್ತು. ಸುಮಾರು 44 ವರ್ಷಗಳ ನಂತರ ಮತ್ತೊಮ್ಮೆ ಅದೇ ಹೆಸರಿನಲ್ಲಿ ಮಹಿಳಾ ಪ್ರಧಾನ ಕಥಾಹಂದರ ಒಳಗೊಂಡ ಚಿತ್ರವೊಂದು ಸೆಟ್ಟೇರಲು ಸಿದ್ದವಾಗಿದೆ.

ಒಂದು ಹೆಣ್ಣು ತನ್ನ ಕಾಲೇಜ್ ಲೈಫಲ್ಲಿ ಏನೇನೆಲ್ಲ ಕಿರುಕುಳ ಅನುಭವಿಸುತ್ತಾಳೆ, ಅಲ್ಲದೆ ಚಿಕ್ಕ ವಯಸಿನಲ್ಲೇ ಮದುವೆಯಾಗಿ ಗಂಡನ ಮನೆಗೆ ಹೋದಾಗ ಆ ಮನೆಯಲ್ಲಿ ಅತ್ತೆ, ಮಾವ ನಾದಿನಿ ಹೀಗೆ ಹಲವರ ಕಡೆಯಿಂದ ಏನೇನೆಲ್ಲ ಕಿರುಕುಳ, ತೊಂದರೆ, ಕಷ್ಟ ಕಾರ್ಪಣ್ಯಗಳನ್ನು ಅನುಭವಿಸುತ್ತಾಳೆ, ಕೊನೆಗೆ ಅದನ್ನೆಲ್ಲ ಎದುರಿಸಿ ಗೆದ್ದು ತೋರಿಸುವ ಮೂಲಕ ಹೇಗೆ ಸಮಾಜದಲ್ಲಿ ಬೆಳೆದು ನಿಲ್ಲುತ್ತಾಳೆ ಎಂಬುದನ್ನು ಮುಳ್ಳಿನ ಗುಲಾಬಿ ಚಿತ್ರದ ಮೂಲಕ ನಿರ್ದೇಶಕರು ಹೇಳಲು ಪ್ರಯತ್ನಿಸಿದ್ದಾರೆ.

ಲೇಖಕಿ ಆಶಾ ಗುರುಲಿಂಗಯ್ಯ ಅವರು ರಚಿಸಿರುವ ಕಾದಂಬರಿಯನ್ನಾಧರಿಸಿ ತಯಾರಾಗುತ್ತಿರುವ 'ಮುಳ್ಳಿನ ಗುಲಾಬಿ' ಚಿತ್ರಕ್ಕೆ ಸ್ಟೈಲ್ ಶಿವು ಅವರು ಚಿತ್ರಕಥೆ, ಸಂಭಾಷಣೆಗಳನ್ನು ಬರೆದು ನಿರ್ದೇಶನ ಮಾಡುತ್ತಿದ್ದಾರೆ. ಈ ಹಿಂದೆ ನಿಸರ್ಗ ಎಂಬ ಚಿತ್ರವನ್ನು ನಿರ್ದೇಶಿಸಿದ್ದ ಸ್ಟೈಲ್ ಶಿವು ಅವರ ನಿರ್ದೇಶನ ಸಾರಥ್ಯದಲ್ಲಿ ಮೂಡಿಬರುತ್ತಿರುವ ಎರಡನೇ ಚಿತ್ರವಿದು. ಭಾನುವಾರ ನಡೆದ ಮಹಿಳಾ ದಿನಾಚರಣೆಯ ಅಂಗವಾಗಿ, ಮಹಿಳಾ ಪ್ರಧಾನ ಕಥಾಹಂದರ ಒಳಗೊಂಡ ಈ ಚಿತ್ರದ ನೂತನ ಪೋಸ್ಟರ್ ಬಿಡುಗಡೆ ಕಾರ್ಯಕ್ರಮ ಬೆಂಗಳೂರಿನ ನಯನ ಸಭಾಂಗಣದಲ್ಲಿ ನೆರವೇರಿತು.

ಈ ವೇದಿಕೆಯಲ್ಲಿ ಬೆಂಗಳೂರು ಸಹಾಯಕ ಪೊಲೀಸ್ ಕಮೀಷನರ್ ಡಾ.ಪ್ರಿಯದರ್ಶಿನಿ ಈಶ್ವರ್ ಸಾಣಿಕೊಪ್ಪ ಅವರು ಮುಳ್ಳಿನ ಗುಲಾಬಿ ಚಿತ್ರದ ಪೋಸ್ಟರನ್ನು ಬಿಡುಗಡೆ ಮಾಡಿ ಚಿತ್ರತಂಡಕ್ಕೆ ಶುಭ ಹಾರೈಸಿದರು. ಈ ಸಂದರ್ಭದಲ್ಲಿ ಹಿರಿಯ ನಟ ಮೈಸೂರು ರಮಾನಂದ್ ಅವರು ಕೂಡ ಹಾಜರಿದ್ದರು.

ಭೂಮಿಕಾ ಸಿನಿ ಪ್ರೊಡಕ್ಷನ್ಸ್ ಲಾಂಛನದಲ್ಲಿ ಬಿ.ಕೆ. ಶಿವಕುಮಾರ್ ಅವರು ನಿರ್ಮಿಸುತ್ತಿರುವ ಈ ಚಿತ್ರದಲ್ಲಿ ಕಥಾಲೇಖಕಿ ಆಶಾ ಗುರುಲಿಂಗಯ್ಯ ಅವರೇ ಸಮಾಜದಲ್ಲಿ ನೊಂದ ಹೆಣ್ಣುಮಕ್ಕಳ ಪ್ರತಿನಿಧಿಯಾದ, ನಾಯಕಿಯ ಪಾತ್ರವನ್ನು ನಿರ್ವಹಿಸಲಿದ್ದಾರೆ. ರವಿ ಸುವರ್ಣ ಅವರ ಛಾಯಾಗ್ರಹಣ, ವಿನು ಮನಸು ಅವರ ಸಂಗೀತ ಸಂಯೋಜನೆ, ಮನ್ವರ್ಷಿ ಹಾಗೂ ವೇಣು ಅವರ ಸಾಹಿತ್ಯ ಮುಳ್ಳಿನ ಗುಲಾಬಿ ಚಿತ್ರಕ್ಕಿದೆ. ಈ ಚಿತ್ರದ ಉಳಿದ ತಾರಾಗಣ ಹಾಗೂ ತಾಂತ್ರಿಕ ವರ್ಗದ ಆಯ್ಕೆ ಪ್ರಕ್ರಿಯೆ ನಡೆಯುತ್ತಿದ್ದು, ಸಧ್ಯದಲ್ಲೇ ಚಿತ್ರದ ಚಿತ್ರೀಕರಣ ಪ್ರಾರಂಭವಾಲಿದೆ.



Hosadigantha Kannada Daily Printed & Published by P.S.Prakash on behalf of Jnanabharathi Prakashana Limited. Printed at M N S Printers No.345/4, Bhattarahalli, Virgo Nagar Post Old Madras Road, K R Puram, Bangalore 560 049 and Published at No. 1/1, 1Floor, 6th cross, 8th Main, Malleshwara, Bengaluru 03 Ph: (080) 23560302, 340 , Editor: P.S.Prakash, Group Editor: Vinayak S. Bhat, Posted at PSO Bengaluru, Bengaluru 26



ಅಕ್ಕಪಡೆಗೆ ಚಾಲನೆ ಮೈಸೂರು ನಗರದಲ್ಲಿ ಮಹಿಳೆಯರು ಮತ್ತು ಮಕ್ಕಳ ಸುರಕ್ಷತೆ ದೃಷ್ಟಿಯಿಂದ ಜಾರಿಗೆ ತರಲಾಗುತ್ತಿರುವ ಅಕ್ಕ ಪಡೆ ಯೋಜನೆಗೆ ಎಸ್ಪಿ ಸೀಮಾ ಲಾಟ್ಕರ್ ಚಾಲನೆ ನೀಡಿದರು.

ಗರಿಷ್ಠ 32° ಕನಿಷ್ಠ 19°

ಹೊಸ ದಿಗಂತ

ಮಂಗಳವಾರ 10 ಮಾರ್ಚ್ 2026

ಮೈಸೂರು

ಮಹಿಳೆಯೆಂದರೆ ಶಕ್ತಿ, ಧೈರ್ಯ | ೨ ಮಂಡ್ಯ ನಗರಸಭೆ ಉಳಿತಾಯ ಬಜೆಟ್ ಮಂಡನೆ | ೩ ಖಾಲಿ ಕೊಡದೊಂದಿಗೆ ಪ್ರತಿಭಟನೆ | ೪

ಕಿರುಸುದ್ದಿ

ನಾರಾಯಣಸ್ವಾಮಿ ದೇಗುಲ ಜೀರ್ಣೋದ್ಧಾರ

ಮೈಸೂರು: ಜಿಲ್ಲೆಯ ನಂಜನಗೂಡು ತಾಲೂಕಿನ ಕಸುವಿನಹಳ್ಳಿ ಗ್ರಾಮದಲ್ಲಿ ಇತಿಹಾಸ ಪ್ರಸಿದ್ಧ ಪುರಾತನ ಶ್ರೀ ನಾರಾಯಣಸ್ವಾಮಿ ದೇವಾಲಯದ ಜೀರ್ಣೋದ್ಧಾರ ಕಾರ್ಯಕ್ರಮವು ಅದ್ದೂರಿಯಾಗಿ ಜರುಗಿತು. ಗ್ರಾಮದಲ್ಲಿ ಇತಿಹಾಸ ಪ್ರಸಿದ್ಧ ಪುರಾತನ ಶ್ರೀ ನಾರಾಯಣಸ್ವಾಮಿ ದೇವಾಲಯದ ಜೀರ್ಣೋದ್ಧಾರ ಕಾರ್ಯಕ್ರಮವು ಶ್ರೀ ನಾರಾಯಣಸ್ವಾಮಿ ಭಕ್ತ ಮಂಡಳಿ, ಗ್ರಾಮಸ್ಥರು, ಅಕ್ಕಪಕ್ಕದ ಗ್ರಾಮಸ್ಥರು ಹಾಗೂ ಸಹಸ್ರಾರು ಭಕ್ತರ ಸಮ್ಮುಖದಲ್ಲಿ ಅದ್ದೂರಿಯಾಗಿ ನಡೆಯಿತು. ಈ ಸಂದರ್ಭದಲ್ಲಿ ನೂತನ ವಿಮಾನ ಗೋಪುರದ ಕುಂಭಾಭಿಷೇಕ, ಕಳಸಾರೋಹಣ, ಉತ್ಸವಗಳು ಹಾಗೂ ಧಾರ್ಮಿಕ ಕೈಂಕರ್ಯಗಳು ಶ್ರದ್ಧಾ ಭಕ್ತಿಯಿಂದ ನಡೆಯಿತು. ಜೀರ್ಣೋದ್ಧಾರದ ಪ್ರಯುಕ್ತ ದೇವಾಲಯಕ್ಕೆ ಆಗಮಿಸಿದ ಭಕ್ತರಿಗೆಲ್ಲರಿಗೂ ಅಚ್ಚುಕಟ್ಟಾದ ಪ್ರಸಾದ ವ್ಯವಸ್ಥೆಯನ್ನು ಏರ್ಪಡಿಸಲಾಗಿತ್ತು.

ಮಾಂಗಲ್ಯ ಸರ ಕದ್ದ ಮಹಿಳೆಯರು

ಮೈಸೂರು: ಗಮನ ಬೇರೆಡೆ ಸೆಳೆದು ವೃದ್ದೆಯ 40 ಗ್ರಾಂ ಮಾಂಗಲ್ಯ ಸರ ಲಪಟಾಯಿಸಿದ ಘಟನೆ ಎನ್.ಆರ್ .ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ. ನೀಲಮ್ಮ(60) ಮಾಂಗಲ್ಯ ಸರ ಕಳೆದುಕೊಂಡವರು. ಬೆಳ್ಳೂರು ಕ್ರಾಸ್‌ನಿಂದ ಮೈಸೂರಿಗೆ ಬರುವ ಬಸ್ ನಲ್ಲಿ ನೀಲಮ್ಮ ಪ್ರಯಾಣಿಸುತ್ತಿದ್ದ ವೇಳೆ ಇಬ್ಬರು ಅಪರಿಚಿತ ಹೆಂಗಸರು ಮಗು ಸಮೇತ ಶ್ರೀರಂಗಪಟ್ಟಣದಲ್ಲಿ ಹತ್ತಿದ್ದಾರೆ. ಮಗು ವಾಂತಿ ಮಾಡುತ್ತೆ ಕಿಟಕಿ ಪಕ್ಕ ಸ್ಥಳ ನೀಡುವಂತೆ ನೀಲಮ್ಮರನ್ನ ಕೇಳಿದ್ದಾರೆ. ಇದಕ್ಕೆ ನೀಲಮ್ಮ ಒಪ್ಪಿಲ್ಲ. ಕೊಲಂಬಿಯಾ ಆಸ್ಪತ್ರೆ ಬಳಿ ಬಸ್ ಬಂದಾಗ ಮಹಿಳೆಯರು ಇಳಿಯಲು ಮುಂದಾಗಿ ತಮ್ಮ ಲಗೇಜ್‌ನ್ನು ತೆಗೆಯುವಾಗ ನೀಲಮ್ಮ ಮೇಲೆ ಚಿಲ್ಲರೆ ಹಣ ಬೀಳಿಸಿದ್ದಾರೆ. ಹಣ ತೆಗೆದುಕೊಡಲು ನೀಲಮ್ಮ ಬಾಗಿದಾಗ ಕೊರಳಿನಲ್ಲಿದ್ದ ಚಿನ್ನದ ಮಾಂಗಲ್ಯ ಸರ ಕಟ್ ಮಾಡಿಕೊಂಡಿದ್ದಾರೆ. ಎಲ್ ಐಸಿ ಸ್ಟಾಪ್ ಬಂದಾಗ ಹೆಂಗಸರು ಬಸ್ ಇಳಿದುಹೋಗಿದ್ದಾರೆ.ಮನೆಗೆ ಬಂದು ನೋಡಿದಾಗ ಚಿನ್ನದ ಮಾಂಗಲ್ಯ ಸರ ಕಳುವಾಗಿರುವುದು ಬೆಳಕಿಗೆ ಬಂದಿದೆ.ಚಿಲ್ಲರೆ ಕಾಸು ಮೈಮೇಲೆ ಬಿದ್ದಾಗ ಮಂಕು ಕವಿದಂತಾಯ್ತು ಎಂದು ದೂರಿನಲ್ಲಿ ತಿಳಿಸಿರುವ ನೀಲಮ್ಮ ರವರು ಅಪರಿಚಿತ ಹೆಂಗಸರ ವಿರುದ್ದ ಎನ್. ಆರ್.ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದಾರೆ.

ಸರಣಿ ಕಳ್ಳತನ ಮಾಡಿದ್ದ ಆರೋಪಿ ಬಂಧನ



ನಂಜನಗೂಡು: ನಗರದಲ್ಲಿ ಕಳೆದ ವರ್ಷ ಡಿಸೆಂಬರ್ ತಿಂಗಳಿನಲ್ಲಿ ಸರಣಿ ಕಳ್ಳತನ ಮಾಡಿದ್ದ ಆರೋಪಿ ಚಾಮರಾಜನಗರ ತಾಲೂಕಿನ ಗಾಳಿಪುರ ಗ್ರಾಮದ ಸಯ್ಯದ್ ರಿಯಾಜ್ ಎಂಬ ಆರೋಪಿಯನ್ನು ನಗರ ಪೊಲೀಸ್ ಠಾಣೆಯ ಪೊಲೀಸರು ಬಂಧಿಸಿ, ಕಳ್ಳತನ ಮಾಡಿದ್ದ ಚಿನ್ನ ಹಾಗೂ ನಗದನ್ನು ವಶಕ್ಕೆ ಪಡೆದಿದ್ದಾರೆ. ಆರೋಪಿ ಸಯ್ಯದ್ ರಿಯಾಜ್ ಡಿಸೆಂಬರ್ ತಿಂಗಳಿನಲ್ಲಿ ನಗರದ ಶ್ರೀಕಂಠಪುರಿ ಬಡಾವಣೆಯಲ್ಲಿ 5 ಅಂಗಡಿಗಳ ಬೀಗ ಮುರಿದು ಸರಣಿ ಕಳ್ಳತನ ನಡೆಸಿದ್ದ, ಮಾರ್ಚ್ 1 ರಂದು ನಗರದ ಬಸ್ ನಿಲ್ದಾಣದ ಪಕ್ಕದ ಹಾಸನ್ ಅಯ್ಯಂಗಾರ್ ಬೇಕರಿಯ ಬೀಗ ಮುರಿದು ಕಳ್ಳತನ ಮಾಡಿದ್ದ, ಆರೋಪಿಯಿಂದ 9,700 ನಗದು, 26 ಗ್ರಾಮ್ ಚಿನ್ನಾಭರಣ, 2ಬ್ಯಾಟರಿ ಹಾಗೂ ಕಳ್ಳತನಕ್ಕೆ ಬಳಸಿದ್ದ ಬೈಕನ್ನು ವಶಕ್ಕೆ ಪಡೆದು ನ್ಯಾಯಂಗ ಬಂಧನಕ್ಕೆ ಒಪ್ಪಿಸಲಾಗಿದೆ ಎಂದು ಡಿವೈಎಸ್ ಪಿ ರಘು ತಿಳಿಸಿದ್ದಾರೆ. ಆರೋಪಿಯ ಬಂಧನಕ್ಕಾಗಿ ಸಿಪಿಐ ರವೀಂದ್ರ ನೇತೃತ್ವದಲ್ಲಿ ಎಎಸ್ ಐ ಗಳಾದ ಶಿವ,ಸತೀಶ್, ಸಿ ಹೆಚ್ ಸಿ ಅಬ್ದುಲ್ ಲತೀಫ್,ಅಶೋಕ,ಭಾಸ್ಕರ್, ಶ್ರೀನಿವಾಸ್, ಶಿವಕುಮಾರ್, ಮಹೇಶ್, ತಿಮ್ಮಯ್ಯ, ಚೇತನ್, ಕೃಷ್ಣ ಸೇರಿದಂತೆ 14 ಮಂದಿತ ತಂಡ ರಚಿಸಲಾಗಿತ್ತು.

ಪ್ರಾಧಿಕಾರದಿಂದ ₹220 ಕೋಟಿ ಉಳಿತಾಯ ಬಜೆಟ್ ಮಂಡನೆ

₹ 579 ಕೋಟಿ ಖರ್ಚು

ಮೈಸೂರು: ಮೈಸೂರು ಅಭಿವೃದ್ಧಿ ಪ್ರಾಧಿಕಾರದಿಂದ 2026-27 ನೇ ಸಾಲಿನ ಬಜೆಟ್‌ನ್ನು ಸೋಮವಾರ ಮಂಡಿಸಲಾಯಿತು.

ಪ್ರಾಧಿಕಾರದ ಸಭಾಂಗಣದಲ್ಲಿ ಅಧ್ಯಕ್ಷರಾದ ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತ ರೆಡ್ಡಿ ಅವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಪ್ರಾಧಿಕಾರದ ಆಯುಕ್ತ ರಕ್ಷಿತ್ ಕೆ.ಆರ್. ಬಜೆಟ್ ಮಂಡಿಸಿದರು. ಆರಂಭಿಕ ಶಿಲ್ಕು 277 ಕೋಟಿ, 522 ಕೋಟಿ ರೂ ಆದಾಯ ಸೇರಿ ಒಟ್ಟು ಪ್ರಸಕ್ತ ಆರ್ಥಿಕ ವರ್ಷದ ಸಾಲಿನಲ್ಲಿ ಎಲ್ಲಾ ಮೂಲಗಳಿಂದ ಒಟ್ಟು ಅಂದಾಜು ಆದಾಯ 799.90 ಕೋಟಿರೂಗಳನ್ನು ನಿರೀಕ್ಷಿಸಲಾಗಿದೆ. 579 ಕೋಟಿ ರೂಗಳನ್ನು ಖರ್ಚು ಮಾಡಿ, 220 ಕೋಟಿ ರೂ.ಗಳನ್ನು ಉಳಿತಾಯ ಮಾಡುವ ಬಜೆಟ್‌ನ್ನು ಮಂಡಿಸಿದರು.

ಕೆಟಿಸಿಪಿ ಕಾಯ್ದೆಯಲ್ಲಿ ಸ್ವೀಕರಿಸುವ ಶುಲ್ಕ, ಮೇಲ್ವಿಚಾರಣಾ ಶುಲ್ಕ, ಪರಿಶೀಲನಾ ಶುಲ್ಕ, ನಿಧಿ 4 ರಲ್ಲಿ ಯೋಜನೆ ಮತ್ತು ಮೂಲಕ ಸೌಕರ್ಯ ಅಭಿವೃದ್ಧಿಯಿಂದ ಸ್ವೀಕರಿಸುವ ಶುಲ್ಕದಲ್ಲಿ ಶೇ 25, ಕೊಳಚೆ ಪ್ರದೇಶ ಸುಧಾರಣಾ ಸೆಸ್‌ನಿಂದ ಉಳಿಸಿಕೊಂಡ ಶೇ 5 ಸೇವಾ ಶುಲ್ಕ, ನೀರು ಸರಬರಾಜುನಿಂದ ಉಳಿಸಿಕೊಂಡ ಶೇ 5 ಸೇವಾ ಶುಲ್ಕ, ರಿಂಗ್ ರಸ್ತೆಯ ಸರ್‌ಚಾರ್ಜ್‌ನಿಂದ ಉಳಿಸಿಕೊಂಡ ಶೇ.5 ಸೇವಾ ಶುಲ್ಕ, ಠೇವಣಿ ಬಡ್ಡಿಗಳಿಂದ 515.6 ಕೋಟಿ ರೂ ನಿರೀಕ್ಷಿಸಲಾಗಿದೆ. ಕೆರೆ ಪುನರುಜ್ಜೀವನ ಶುಲ್ಕದಿಂದ 6602.91 ಲಕ್ಷರೂಗಳನ್ನು ಅಂದಾಜಿಸಲಾಗಿದೆ. ನೀರು ಯೋಜನೆಗಳ ಅನುಷ್ಠಾನ, ವರ್ತುಲ ರಸ್ತೆ ರಚನೆ, ಕೊಳಗೇರಿ ಸುಧಾರಣಾ ಕಾರ್ಯ ಹಾಗೂ ಸಾಮೂಹಿಕ ಕ್ಷಿಪ್ರ ಸಾರಿಗೆ ವ್ಯವಸ್ಥೆಯನ್ನು ಸ್ಥಾಪಿಸಲು ಸರ್ ಚಾರ್ಜ್‌ನ್ನು ವಿಧಿಸಿ, ಅವುಗಳಿಂದ ಅಚಿದಾಜು ಮೊತ್ತ 1739.19 ಲಕ್ಷ ಪ್ರಾರಂಭಿಕ ಶಿಲ್ಕು ರೂ 8142.60 ಲಕ್ಷರೂ ಸೇರಿ ಒಟ್ಟು 9881.79 ಲಕ್ಷರೂ.ಗಳನ್ನು ಅಂದಾಜಿಸಲಾಗಿದೆ.



ಅಂದಾಜು ವೆಚ್ಚಗಳು

ಪ್ರಾಧಿಕಾರದ ಬಡಾವಣೆಗಳಲ್ಲಿ ಅಭಿವೃದ್ಧಿ ಕಾಮಗಾರಿಗಳಿಗೆ 579.18 ಕೋಟಿ ರೂ ಪ್ರಸ್ತಾಪಿಸಲಾಗಿದೆ. ಸಾಮಾನ್ಯ ಆಡಳಿತ, ಮಹಾಯೋಜನೆ, ಭೂಸ್ವಾಧೀನ, ನಗರ ಯೋಜನಾ ಯೋಜನೆಗಳು ಮತ್ತು ಇತರೆ ಮೂಲ ಸೌಕರ್ಯ ಅಭಿವೃದ್ಧಿಗೆಂದು 7495.10 ಲಕ್ಷರೂಗಳನ್ನು ವೆಚ್ಚ ಮಾಡಲು ಅಂದಾಜಿಸಲಾಗಿದೆ. ಅನುಮೋದಿತ ಯೋಜನೆಗಳಲ್ಲಿ ಉದ್ಯಾನವನಗಳು, ಬಯಲು ಸ್ಥಳಗಳು ಮತ್ತು ರಸ್ತೆಗಳನ್ನು ಸ್ವಾಧೀನಪಡಿಸಿಕೊಳ್ಳಲು 1050 ಲಕ್ಷ ರೂ. ವೆಚ್ಚ ಮಾಡಲು ಉದ್ದೇಶಿಸಲಾಗಿದೆ ಎಂದು ಹೇಳಿದರು. ಪ್ರಾಧಿಕಾರದ ಯೋಜನೆಗಳು ಮತ್ತು ನೀರು ಸರಬರಾಜು, ಯುಜಿಡಿ, ಜಂಕ್ಷನ್‌ಗಳ ಸುಧಾರಣೆ, ಬೀದಿ ದೀಪಗಳನ್ನು ಒದಗಿಸುವುದು, ಸ್ಥಳೀಯ ಪ್ರಾಧಿಕಾರಗಳು ಪ್ರಸ್ತಾಪಿಸಿದ ಕಾರ್ಯಗಳು, ಕಮಾನುಗಳ ನಿರ್ಮಾಣ ಸೇರಿದಂತೆ ಮೂಲ ಸೌಕರ್ಯ ಅಭಿವೃದ್ಧಿಗಾಗಿ 71 ಕೋಟಿ 22 ಲಕ್ಷರೂ.ಗಳನ್ನು ವೆಚ್ಚ ಮಾಡಲು ನಿರ್ಧರಿಸಲಾಗಿದೆ.

ಪ್ರಾಧಿಕಾರವು ಅಭಿವೃದ್ಧಿಪಡಿಸಿದ ವಿನ್ಯಾಸಗಳಲ್ಲಿ ನಿವೇಶನಗಳ ಹಂಚಿಕೆ, ವಾಣಿಜ್ಯ ಬಿಡಿ ಮತ್ತು ಮೂಲೆ ನಿವೇಶನಗಳ ಹರಾಜಿನಿಂದ, ಖಾಸಗಿ ಬಡಾವಣೆಗಳಲ್ಲಿ ಮತ್ತು ಪ್ರಾಧಿಕಾರ ರಚಿಸಿದ ಬಡಾವಣೆಗಳಲ್ಲಿ ಲಭ್ಯವಾಗುವ ನಾಗರಿಕ ಸೌಲಭ್ಯ ನಿವೇಶನಗಳ ಹಂಚಿಕೆ ಮತ್ತು ನವೀಕರಣ, ವಾಣಿಜ್ಯ ಸಂಕೀರ್ಣಗಳು, ಭೂಮಿ ಮತ್ತು ಕಟ್ಟಡದಿಂದ ಸ್ವೀಕೃತವಾಗುವ ಬಾಡಿಗೆ, ಗುತ್ತಿಗೆಯಿಂದ ಒಟ್ಟು 40,775.67 ಲಕ್ಷರೂ.ಗಳನ್ನು ಅಂದಾಜಿಸಲಾಗಿದೆ ಎಂದು ತಿಳಿಸಿದರು.

ಅಸ್ತಿತ್ವದಲ್ಲಿರುವ ಕೆರೆಗಳ ಪುನರುಜ್ಜೀವನ, ನೀರಿನ ಟ್ಯಾಂಕ್‌ಗಳ ರಚನೆ, ಕಲ್ಯಾಣಿಗಳು, ಬಾವಿಗಳ ಪುನರುಜ್ಜೀವನ, ಯಾವುದೇ ಜಲ ಮೂಲಗಳ ಲಭ್ಯವಿಲ್ಲದ ಕಡೆ ಸಂಭಾವ್ಯ ಜಲ ಮೂಲಗಳಿಗೆ ಸಂಪರ್ಕ ಕಲ್ಪಿಸಲು ನೈಸರ್ಗಿಕ ನಾಲೆಗಳನ್ನು ಮಾಡುವುದು ಮತ್ತು ಅಚಿತರ್ಜಲ ಮರು ಪೂರಣಕ್ಕಾಗಿ 6421.26 ಲಕ್ಷರೂ.ಗಳನ್ನು ಖರ್ಚು ಮಾಡಲು ಉದ್ದೇಶಿಸಲಾಗಿದೆ.

ನೀರು ಸರಬರಾಜು ಯೋಜನೆಗಳ ಅನುಷ್ಠಾನ, ಕಾರ್ಯಾಚರಣೆ ಮತ್ತು ನಿರ್ವಹಣೆಗೆ ಆಯಾ ಸ್ಥಳೀಯ ಸಂಸ್ಥೆಗಳಿಗೆ ವರ್ಗಾವಣೆ, ಪ್ರಾಧಿಕಾರದಿಂದ ವರ್ತುಲ ರಸ್ತೆಗಳ ರಚನೆ ಮತ್ತು ಅಭಿವೃದ್ಧಿಗಾಗಿ ಬಳಸಿಕೊಳ್ಳಲು, ಕೊಳಚೆ ಪ್ರದೇಶಗಳ ಸುಧಾರಣೆ ಮತ್ತು ಉನ್ನತೀಕರಣಕ್ಕಾಗಿ ಕೊಳಚೆ ಪ್ರದೇಶಾಭಿವೃದ್ಧಿ ಮಂಡಳಿಗೆ 7046.75 ಲಕ್ಷರೂಗಳನ್ನು ವರ್ಗಾವಣೆ ಮಾಡಲು ಉದ್ದೇಶಿಸಲಾಗಿದೆ. ಭೂ ಮಾಲೀಕ ರೊಂದಿಗೆ ಜಂಟಿಯಾಗಿ ಹೊಸ ವಿನ್ಯಾಸ ಅಭಿವೃದ್ಧಿ ಯೋಜನೆಗಳ ಕಾರ್ಯಗತಗೊಳಿಸಲು ತೀರ್ಮಾನಿಸಲಾಗಿದೆ ಎಂದು ತಿಳಿಸಿದರು.

ಕೆಆರ್‌ಎಸ್ ನಿರ್ಮಾಣಕ್ಕೆ ಕೆಂಪನಂಜಮ್ಮಣ್ಣಿ ಕೊಡುಗೆ

ಮೈಸೂರು: ರಾಜಮಾತೆಕೆಂಪನಂಜಮ್ಮಣಿಯವರು ಆರ್ಥಿಕ ಸಹಾಯ ಮಾಡುವ ಮೂಲಕ ಕೆ.ಆರ್.ಜಲಾಶಯ ನಿರ್ಮಾಣ ಪೂರ್ಣಗೊಳಿಸಿ, ಇಡೀ ಮೈಸೂರು ಭಾಗಕ್ಕೆ ತಮ್ಮ ಅಮೂಲ್ಯವಾದ ಕೊಡುಗೆಯನ್ನು ನೀಡಿದ್ದಾರೆ ಎಂದು ಬಿಜೆಪಿ ಸಹ ಪ್ರಭಾರಿಗಳಾದ ಈ.ಸಿ.ನಿಂಗರಾಜೇಗೌಡ ತಿಳಿಸಿದರು.

ವೀರ ಸಾವರ್ಕರ್ ಯುವ ಬಳಗದ ವತಿಯಿಂದ ನಗರದ ದಿವಾನ್ಸ್ ರಸ್ತೆಯಲ್ಲಿರುವ ಖಾಸಗಿ ಹೋಟೆಲ್‌ನಲ್ಲಿ ಸೋಮವಾರ ನಡೆದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಭಾರತ್ ಮಾತೆ ಹಾಗೂ ಕೆಂಪನಂಜಮ್ಮಣ್ಣಿ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಮಾತನಾಡಿದ ಅವರು, ಮೈಸೂರು ನಗರಕ್ಕೆ ರಾಜಮಾತೆ ಕೊಡುಗೆ ಅಪಾರ ,ಕೆ.ಆರ್. ಎಸ್. ಅಣೆಕಟ್ಟು ಕಟ್ಟುವಾಗ ಹಣಕಾಸಿನ ಕೊರತೆಯಾದಾಗ ತಮ್ಮ ಮೈ ಮೇಲಿದ್ದ ಒಡವೆ ಮಾರಿ ಅಣೆಕಟ್ಟು ಪೂರ್ಣಗೊಳ್ಳಲು ಸಹಾಯ ಮಾಡಿದ ನಮ್ಮ ಹೆಮ್ಮೆಯ ಮಹಾರಾಣಿ ಕೆಂಪ ನಂಜಮ್ಮಣ್ಣಿಯವರ ಸ್ಮರಣೆ ಮಾಡುವುದು ನಮ್ಮೆಲ್ಲರ ಆದ್ಯ ಕರ್ತವ್ಯ ಎಂದು ತಿಳಿಸಿದರು.

» ಮಹಿಳಾ ದಿನಾಚರಣೆ

» ರಾಜಮಾತೆ ಕೆಂಪನಂಜಮಣಿ ಸ್ಮರಿಸಿದ ವೀರ ಸಾವರ್ಕರ್ ಯುವ ಬಳಗ

ಮೈಸೂರು ನಗರದ ವಿಸ್ತರಣೆ ಹಾಗೂ ಪೈಪ್ ಗಳಮೂಲಕ ನೀರು ಸರಬರಾಜು ಮತ್ತು ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಗೆ ಶಂಕುಸ್ಥಾಪನೆ ಇವರ ಕಾರ್ಯಕ್ಕೆ ಸಾಕ್ಷಿಯಾಗಿದೆ. ಅವರು ಕಟ್ಟಾ ಹಿಂದೂ ಧರ್ಮದ ಅನುಯಾಯಿಯಾಗಿದ್ದರು, ಇಂತಹ ಮಹಾನ್ ಸಾಧಕೀಯರು ಇಂದಿನ ಮಹಿಳೆಯರಿಗೆಸ್ಫೂರ್ತಿದಾಯಕರು ಎಂದು ಹೇಳಿದರು. ಬಳಿಕ ಸನ್ಮಾನ ಸ್ವೀಕರಿಸಿದರು.

ಇದೇ ಸಂದರ್ಭದಲ್ಲಿ ಬಿಜೆಪಿ ಮುಖಂಡರಾದ ಪರಮೇಶ್ ಗೌಡ, ಮುಖಂಡರಾದ ಬಾಲಣ್ಣ ಹಾಜರಿದ್ದರು.



ತಿ.ನರಸೀಪುರದ ಸಿಲ್ಕ್ ಫ್ಯಾಕ್ಟರಿ ಮುಚ್ಚುವುದಿಲ್ಲ

ಮೈಸೂರು: ಜಿಲ್ಲೆಯ ತಿ.ನರಸೀಪುರದಲ್ಲಿರುವ ಸಿಲ್ಕ್ ಫ್ಯಾಕ್ಟರಿಯನ್ನು ಮುಚ್ಚುವುದಿಲ್ಲ ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರು ಮೈಸೂರಿನ ರಾಜಮಾತೆ ಪ್ರಮೋದಾದೇವಿ ಒಡೆಯರ್ ಅವರಿಗೆ ಭರವಸೆ ನೀಡಿದ್ದಾರೆ. ಟಿ.ನರಸೀಪುರದ ಸಿಲ್ಕ್ ಫ್ಯಾಕ್ಟರಿ ಜಾಗದಲ್ಲಿ ಕ್ರೀಡಾಂಗಣ ನಿರ್ಮಾಣ ಮಾಡಲು ತೀರ್ಮಾನಿಸಿರುವ ವಿಚಾರವಾಗಿ ಪ್ರಮೋದಾದೇವಿ ಒಡೆಯರ್ ಅವರು ಸಚಿವ ಎಚ್ .ಸಿ.ಮಹದೇವಪ್ಪ ಭೇಟಿ ಮಾಡಿದ್ದಾರೆ. ಈ ವೇಳೆ ಟಿ.ನರಸೀಪುರದ ಕೆಎಸ್‌ಐಸಿ ಕಾರ್ಖಾನೆ ಮುಚ್ಚುವುದಿಲ್ಲವೆಂದು ಸಚಿವ ಮಹದೇವಪ್ಪ ಭರವಸೆ ನೀಡಿದ್ದಾರೆ.

» ರಾಜ ಮಾತೆ ಪ್ರಮೋದಾದೇವಿ ಅವರಿಗೆ ಭರವಸೆ ನೀಡಿದ ಸಚಿವ ಮಹದೇವಪ್ಪ

ಸಚಿವರ ಸಕಾರಾತ್ಮಕ ಸ್ಪಂದನೆಗೆ ರಾಜಮಾತೆ ಪ್ರಮೋದಾದೇವಿ ಒಡೆಯರ್ ಕೃತಜ್ಞತೆ ಸಲ್ಲಿಸಿದ್ದು, ಈ ಬಗ್ಗೆ ಮಾಧ್ಯಮ ಪ್ರಕಟಣೆ ಹೊರಡಿಸಿದ್ದಾರೆ. ಮೈಸೂರು ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರ್ ಸ್ಥಾಪಿಸಿದ ಮೈಸೂರು ಸಿಲ್ಕ್ ಇಂದು ವಿಶ್ವಪ್ರಸಿದ್ಧ. ಮೈಸೂರು ಸಿಲ್ಕ್ ಸೀರೆ ಮತ್ತು ಪಂಚೆಗೆ ಜಿಯೋಗ್ರಾಫಿಕಲ್ ಇಂಡಿಕೇಷನ್ ಟ್ಯಾಗ್ ಅದರ ವಿಶಿಷ್ಟತೆ ಹಾಗೂ ಗುಣಮಟ್ಟಕ್ಕೆ ಮುದ್ರೆ. ಭಾರತದ ಸಮೃದ್ಧ ವಸ್ತ್ರ ಪರಂಪರೆಯ ಪ್ರತೀಕವಾಗಿ ಮೈಸೂರು ಸಿಲ್ಕ್ ಗುರುತಿಸಿಕೊಂಡಿದೆ. ಪರಂಪರೆ, ಕೈಚಳಕ, ವೈಶಿಷ್ಟ್ಯ ಹಾಗೂ ಐತಿಹಾಸಿಕ ಮಹತ್ವದಿಂದ ಮೈಸೂರು ಸಿಲ್ಕ್ ಪೀಳಿಗೆಯಿಂದ ಪೀಳಿಗೆಗೆ ಸಾಗುತ್ತಿರುವ ಅಮೂಲ್ಯ ಪರಂಪರೆ. ಜಾಗತಿಕ ಫ್ಯಾಷನ್ ಕ್ಷೇತ್ರದಲ್ಲಿ ಪರಂಪರೆಯ ಹಾಗೂ ಪರಿಸರ ಸ್ನೇಹಿ ವಸ್ತ್ರಗಳಿಗೆ ಹೆಚ್ಚುತ್ತಿರುವ ಬೇಡಿಕೆಯಲ್ಲಿ ಮೈಸೂರು ಸಿಲ್ಕ್ ಪ್ರಮುಖ ಸ್ಥಾನ ಪಡೆದಿದೆ.

ತಿ.ನರಸೀಪುರ ಪ್ರದೇಶದ ಹವಾಮಾನ, ಭೌಗೋಳಿಕ ಪರಿಸ್ಥಿತಿ ಹಾಗೂ ನೀರಿನ ಲಭ್ಯತೆ ರೇಷ್ಮೆ ಬೆಳೆಗೆ ಅತ್ಯಂತ ಸೂಕ್ತ. ಪರಿಸ್ಥಿತಿಯಲ್ಲಿ ಯಾವುದೇ ಬದಲಾವಣೆ ನಡೆದರೆ ರೇಷ್ಮೆಯ ಗುಣಮಟ್ಟಕ್ಕೆ ಧಕ್ಕೆಯಾಗುವ ಸಾಧ್ಯತೆ ಇದೆ. ಟಿ.ನರಸೀಪುರದಲ್ಲಿರುವ ಕೆಎಸ್ ಐಸಿ ಕಾರ್ಖಾನೆ ಭವಿಷ್ಯದ ಬಗ್ಗೆ ಮೈಸೂರು ಮತ್ತು ಬೆಂಗಳೂರು ಜನರಿಂದ ಆತಂಕ ವ್ಯಕ್ತವಾಗಿದೆ. ಈ ವೇಳೆ ಮೈಸೂರು ಸಿಲ್ಕ್ ಸ್ಥಾಪನೆಗೆ ಕಾರಣವಾದ ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರಿಗೂ ಗೌರವ ಸಮರ್ಪಣೆ ಎಂದು ತಿಳಿಸಿದ್ದಾರೆ.

ಒಳ್ಳೆಯ ಕೆಲಸದಿಂದ ಬದುಕು ಸಾರ್ಥಕ

ಸಾಲಿಗ್ರಾಮ: ಮನುಷ್ಯನಾಗಿ ಹುಟ್ಟಿದ ಮೇಲೆ ಒಳ್ಳೆಯ ಮನಸ್ಸಿನಿಂದ ಒಳ್ಳೆಯ ಕೆಲಸ ಮಾಡುವ ಮೂಲಕ ಜೀವನವನ್ನು ಪಾವನ ಮಾಡಿಕೊಳ್ಳಬೇಕೆಂದು ಎಂದು ಶಾಸಕ ಡಿ. ರವಿಶಂಕರ್ ಹೇಳಿದರು.

ಚುಂಚನಕಟ್ಟೆ ಸಮೀಪದ ಹೊಸೂರು ಗ್ರಾಮದಲ್ಲಿನ ಮಸೀದಿ ಆವರಣದಲ್ಲಿ ಡಿ. ರವಿಶಂಕರ್ ಅಭಿಮಾನಿಗಳ ಬಳಗ ವತಿಯಿಂದ ಪವಿತ್ರ ರಂಜಾನ್ ಹಬ್ಬದ ಹಿನ್ನಲೆಯಲ್ಲಿ ಮುಸ್ಲಿಮರಿಗೆ ಡ್ರೈ ಫ್ರೂಟ್ ಕಿಟ್ ಬಾಕ್ಸ್ ವಿತರಿಸಿ ಮಾತನಾಡಿದ ಅವರು, ಸರ್ವ ಧರ್ಮಗಳ ಹಾಗೂ ಎಲ್ಲಾ ಜಾತಿಗಳನ್ನು ಹೊಂದಿರುವ ನಮ್ಮ ದೇಶದಲ್ಲಿ ಎಲ್ಲಾರನ್ನು ಗೌರವಿಸಿದರೆ ಮಾತ್ರ ಈ ಮಾನವನ ಬದುಕಿಗೆ ಪರಿಪೂರ್ಣ ಅರ್ಥ ಬರಲಿದ್ದು, ಆ ನಿಟ್ಟಿನಲ್ಲಿ ನಾವು ಕೂಡ ತಾಲೂಕಿನಲ್ಲಿ ಯಾವುದೇ ಜಾತಿ, ಧರ್ಮದ ವೈಷಮ್ಯಗಳಿಗೆ ಆಸ್ಪದ ನೀಡದೆ ಎಲ್ಲರನ್ನು ಸಮನಾಗಿ ಕರೆದುಕೊಂಡು ಹೋಗುವಂತ ಕೆಲಸ ಮಾಡುವುದರ ಜತೆಗೆ ತಾಲೂಕಿನ ಸಮಗ್ರ ಅಭಿವೃದ್ಧಿಯೊಂದಿಗೆ ಎಲ್ಲಾ ಸಮುದಾಯದ ಜನತೆಯ ಹಿತ ಕಾಯಲು ಕಂಕಣ ಬದ್ದನಾಗಿ ಕೆಲಸ ಮಾಡುತ್ತಿರುವೆ ಎಂದು ಹೇಳಿದರು.

ತಾಪಂ ಮಾಜಿ ಅಧ್ಯಕ್ಷ ಹಾಡ್ಯ ಮಹದೇವಸ್ವಾಮಿ, ಕಾಂಗ್ರೆಸ್ ಮುಖಂಡರಾದ ಡೈರಿ ಮಾಧು, ರಮೇಶ್,ಸೈಯದ್ ಸಲೀಮ್,ರವಿ, ಮಸೀದಿ ಗುರುಗಳಾದ ಆಸಿಫ್ ಖಾನ್, ಇಬ್ರಾಹಿಂ, ಶರೀಫ್, ರಿಯಾಜ್, ರಸುಲ್, ಚಾನ್ಪರಿಫ್, ಅಮಾನುಲ್ಲಾ, ಮುಶ್ರದ್ ಪಾಷಾ ಯಾಕುಬ್, ಶರೀಫ್ ಸೇರಿದಂತೆ ಮತ್ತು ಇತರರು ಹಾಜರಿದ್ದರು.

ವಿದ್ಯಾರ್ಥಿನಿಯರು ಸ್ವಾವಲಂಬಿಗಳಾಗಿ

ಮೈಸೂರು: ವಿದ್ಯಾರ್ಥಿಗಳು ಚನ್ನಾಗಿಓದಿಕೊಂಡು ಸ್ಪರ್ಧಾತ್ಮಕ ಪರೀಕ್ಷೆಗಳನ್ನು ತೆಗದುಕೊಂಡು ಸರ್ಕಾರದ ವಿವಿದ ಹುದ್ದೆಗಳನ್ನು ಪಡೆದು, ಆರ್ಥಿಕವಾಗಿ ಸ್ವಾವಲಂಬಿಗಳಾಗಬೇಕು ಎಂದು ಮುಖ್ಯಮಂತ್ರಿಗಳ ಜಂಟಿ ಕಾರ್ಯದರ್ಶಿ ಎಂ.ರಾಮಯ್ಯ ತಿಳಿಸಿದರು. ಮೈಸೂರಿನ ವಿಜಯನಗರದ 1ನೇ ಹಂತದಲ್ಲಿರುವ ಶ್ರೀ ಸಿದ್ದರಾಮಯ್ಯ ಬಾಲಕಿಯರ ವಿದ್ಯಾರ್ಥಿನಿಲಯದಲ್ಲಿ ವಿಶ್ವ ಮಹಿಳಾ ದಿನಾಚರಣೆ ಅಂಗವಾಗಿ ನಡೆದ ಸಮಾರಂಭದಲ್ಲಿ ವಿದ್ಯಾರ್ಥಿನಿಯರಿಗೆ ಶುಭಾಶಯ ತಿಳಿಸಿ ಮಾತನಾಡಿದ ಅವರು, ಮುಖ್ಯಮಂತ್ರಿ ಸಿದ್ದರಾಮಯ್ಯನವರ ನೇತೃತ್ವದ ಕಾಂಗ್ರೆಸ್ ಸರ್ಕಾರ ಮಹಿಳಾ ಸಬಲೀಕರಣಕ್ಕೆ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದು, ವಿದ್ಯಾಥಿನಿಯರಿಗೆ ಉಚಿತ ಹಾಸ್ಟಲ್‌ಗಳು, ಸ್ಕಾಲರ್‌ಶಿಪ್‌ಗಳು, ಉಚಿತ ಶಿಕ್ಷಣ,ಗ್ಯಾರಂಟಿ ಯೋಜನೆಗಳಾದ ಗೃಹಲಕ್ಷ್ಮಿ, ಶಕ್ತಿಯೋಜನೆ ನೀಡಿದೆ ಎಂದು ಹೇಳಿದರು. ಇಂದು ಮಹಿಳೆಯರು ಎಲ್ಲಾ ಕ್ಷೇತ್ರಗಳಲ್ಲಿಯೂ ತಮ್ಮದೆ ಆದ ಹೆಸರನ್ನು ಮಾಡಿದ್ದಾರೆ. ಉಕ್ಕಿನ ಮಹಿಳೆ ಮಾಜಿ ಪ್ರಧಾನಿಯಾದ ಇಂದಿರಾಗಾಂಧಿಯಿಂದ ಹಿಡಿದು ಇಂದಿನ ರಾಷ್ಟ್ರಪತಿ ದ್ರೌಪತಿ ಮುರ್ಮುರವರೆಗೂ ರಾಜಕೀಯವಾಗಿಯೂ ಮುಂದಿದ್ದಾರೆ. ಕೇಂದ್ರ ಮತ್ತುರಾಜ್ಯ ಸರ್ಕಾರದ ವಿವಿಧ ಉನ್ನತ ಹುದ್ದೆಗಳಲ್ಲಿ ಮಹಿಳೆಯರು ಮಂಚೂಣಿಯಲ್ಲಿದ್ದಾರೆ. ಹೆಣ್ಣು ತ್ಯಾಗಮಯಿಯಾಗಿ ನಿಶ್ವಾರ್ಥಜೀವನ ನಡೆಸುತ್ತಿದ್ದಾಳೆ. ಎಂದರು.

ಮಹಿಳಾ ದಿನಾಚರಣೆಯಲ್ಲಿ ನಾಟಕ ಪ್ರದರ್ಶನ

ಮೈಸೂರು: ಅಕಾಡೆಮಿ ಆಫ್ ಫೈನ್ ಆರ್ಟ್ಸ್, ಶ್ರೀರಂಗಪಟ್ಟಣ ಹಾಗೂ ಆಯಾಮ ಅಕಾಡೆಮಿ ಆಫ್ ಫೈನ್ ಆರ್ಟ್ಸ್ ಮೈಸೂರು ಇವರ ಸಂಯುಕ್ತ ಆಶ್ರಯದಲ್ಲಿ ವಿಶ್ವ ಮಹಿಳಾ ದಿನಾಚರಣೆ ಕಾರ್ಯಕ್ರಮವು ಮೈಸೂರಿನ ಬೋಗಾದಿ 2ನೇ ಹಂತದಲ್ಲಿರುವ ಆಯಾಮ ಅಕಾಡೆಮಿ ಕಲಾಕುಟೀರದಲ್ಲಿ ಭಾವಪೂರ್ಣವಾಗಿ ನೆರವೇರಿತು.

ಕಾರ್ಯಕ್ರಮದ ಅಂಗವಾಗಿ ''ಸ್ತ್ರೀ ಎಂದರೆ ಅಷ್ಟೇ ಸಾಕೇ'' ಎಂಬ ಅರ್ಥಪೂರ್ಣ ಸಂದೇಶವನ್ನು ಒಳಗೊಂಡ 'ದೀಪಧಾರಿಣಿ' ಏಕವ್ಯಕ್ತಿ ನಾಟಕವನ್ನು ಶ್ರೀವಿದ್ಯಾ ಕಾಮತ್ ಅವರು ಮನೋಜ್ಞವಾಗಿ ಪ್ರದರ್ಶಿಸಿದರು. ಸುಧಾ ಆಡುಕಳ ಅವರ ರಚನೆಗೆ ಡಾ. ಶ್ರೀಪಾದ ಭಟ್ ಅವರು ನಿರ್ದೇಶನ ನೀಡಿದ ಈ ನಾಟಕವು, ಮಹಿಳೆಯರ ಬದುಕಿನ ಹೋರಾಟ, ನೋವು, ತ್ಯಾಗ ಮತ್ತು ಆತ್ಮಬಲವನ್ನು ಮನಮುಟ್ಟುವ ರೀತಿಯಲ್ಲಿ ಚಿತ್ರಿಸಿತು.

ನಾಟಕ ಪ್ರದರ್ಶನಕ್ಕೂ ಮುನ್ನ ನಡೆದ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಉಪನ್ಯಾಸಕಿ ಹಾಗೂ ರಂಗಕರ್ಮಿ ಡಾ. ದಿನಮಣಿ ಬಿ.ಎಸ್ ಅವರು ಸ್ತ್ರೀ ಸಂವೇದನೆಗಳನ್ನು ಪ್ರತಿಬಿಂಬಿಸುವ ಕವನವನ್ನು ವಾಚಿಸಿದರು. ಮುಖ್ಯ ಅತಿಥಿಯಾಗಿ ಮಾತನಾಡಿದ ಪದವಿ ಪೂರ್ವ ಶಿಕ್ಷಣ ಇಲಾಖೆಯ ಚಾಮರಾಜನಗರ ಜಿಲ್ಲೆಯ ಉಪನಿರ್ದೇಶಕಿ ಎಚ್.ಎನ್. ಪುಟ್ಟಗೌರಮ್ಮ, ಇಂದಿನ ಸಮಾಜದಲ್ಲಿ ಪೋಷಕರ ಆಲೋಚನೆ ಮತ್ತು ಮಕ್ಕಳ ಆಸಕ್ತಿಗಳಲ್ಲಿ ವ್ಯತ್ಯಾಸ ಕಂಡುಬರುತ್ತಿದೆ. ಮಕ್ಕಳ ಆಸಕ್ತಿಯನ್ನು ಗುರುತಿಸಿ ಸಂಗೀತ, ನೃತ್ಯ, ನಾಟಕ, ಕಾವ್ಯ ಹಾಗೂ ಕ್ರೀಡೆಗಳಂತಹ ಕಲಾ ಕ್ಷೇತ್ರಗಳಿಗೆ ಪೋಷಕರು ಪ್ರೋತ್ಸಾಹ ನೀಡಬೇಕು. ಈ ಕಲೆಗಳು ಜೀವನದ ಸಂಕಷ್ಟ ಸಮಯದಲ್ಲಿ ನಮ್ಮನ್ನು ಮಾನಸಿಕವಾಗಿ ಬಲಪಡಿಸುವ ಆಶ್ರಯವಾಗುತ್ತವೆ ಎಂದು ಹೇಳಿದರು. ಆಯಾಮ ಅಕಾಡೆಮಿ ನಿರ್ದೇಶಕಿ ಡಾ. ಶಾಂಭವಿ ಸ್ವಾಮಿ ಎಸ್.ವಿ., ಅಧ್ಯಕ್ಷ ಸ.ವೆ.ರ ಸ್ವಾಮಿ, ಪ್ರೊ. ಕ್ಯಾತನಳ್ಳಿ ರಾಮಣ್ಣ ಉಪಸ್ಥಿತರಿದ್ದರು.



ಸಂಶೋಧನಾ ವಿಧಾನ ಕುರಿತು ಕಾರ್ಯಾಗಾರ

ಮೈಸೂರು: ಇಲ್ಲಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವ ವಿದ್ಯಾನಿಲಯ ಡಾ. ಬಾಬು ಜಗಜೀವನರಾಮ್ ಸಂಶೋಧನಾ ಸಂಸ್ಥೆ ಸಮಾಜ ಕಲ್ಯಾಣ ಇಲಾಖೆ ಇವರ ಸಹಯೋಗದೊಂದಿಗೆ ಮಾರ್ಚ್ 11 ರಿಂದ 13 ರ ವರೆಗೆ ಕಾವೇರಿ ಸಭಾಂಗಣದಲ್ಲಿ ಸಂಶೋಧನಾ ವಿಧಾನಗಳ ಕುರಿತು ಕಾರ್ಯಗಾರವನ್ನು ಹಮ್ಮಿಕೊಳ್ಳಲಾಗಿದೆ.

ಅಂದು ಬೆಳಗ್ಗೆ 10 ಗಂಟೆಗೆ ಮೈಸೂರು ಮಹಾನಗರ ಪಾಲಿಕೆ ಆಯುಕ್ತ ಶೇಖ್ ತನ್ವೀರ್ ಅಸಿಪ್ ಕಾರ್ಯಕ್ರಮದ ಉದ್ಘಾಟನಾಯನ್ನು ಮಾಡಲಿದ್ದಾರೆ. ಕರ್ನಾಟಕ ರಾಜ್ಯ ಮುಕ್ತ ವಿಶ್ವ ವಿದ್ಯಾನಿಲಯದ ಕುಲಪತಿ ಪ್ರೊ. ಶರಣಪ್ಪ ವಿ ಹಲಸೆ ಅಧ್ಯಕ್ಷತೆ ವಹಿಸಲಿದ್ದಾರೆ. ಮೈಸೂರು ವಿಶ್ವವಿದ್ಯಾನಿಲಯದ ವಿಜ್ಞಾನ ಅಧ್ಯಯನ ವಿಭಾಗ ಹಿರಿಯ ಪ್ರಾಧ್ಯಾಪಕ ಪ್ರೊ. ಡಿ.ಎಸ್. ಗುರು ಪ್ರಧಾನ ಭಾಷಣ ಮಾಡಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಡಾ. ಬಾಬು ಜಗಜೀವನರಾಮ್ ಸಂಶೋಧನಾ ಸಂಸ್ಥೆಯ ನಿರ್ದೇಶಕ ರಾಜೇಶ್, ಜಿ. ಗೌಡ ಭಾಗವಹಿಸಲಿದ್ದಾರೆ. ಕಾರ್ಯಕ್ರಮದಲ್ಲಿ ಕರ್ನಾಟಕ ರಾಜ್ಯ ಮುಕ್ತ ವಿಶ್ವ ವಿದ್ಯಾನಿಲಯದ ಡೀನ್(ಶೈಕ್ಷಣಿಕ) ಆದ ಪ್ರೊ. ಎಂ. ರಾಮನಾಥಮ್ ನಾಯ್ದು , ಕರ್ನಾಟಕ ರಾಜ್ಯ ಮುಕ್ತ ವಿಶ್ವ ವಿದ್ಯಾನಿಲಯದ ಕುಲಸಚಿವ (ಪರೀಕ್ಷಾಂಗ) ಡಾ. ಸಿ.ಎಸ್. ಆನಂದ್ ಕುಮಾರ್ ಉಪಸ್ಥಿತರಿರಲಿದ್ದಾರೆ.

ರೈಲ್ವೆ ಉದ್ಯೋಗಿಗಳ ಮಕ್ಕಳಿಗೆ ಸುರಕ್ಷಿತ, ಭದ್ರ, ಬೆಂಬಲಕಾರಿ ವಾತಾವರಣ

ರೈಲ್ವೆ ಕಚೇರಿಯಲ್ಲಿ ಡೇ ಕೇರ್ ಆರಂಭ

ಮೈಸೂರು: ನೈರುತ್ಯ ರೈಲ್ವೆಯ ಮೈಸೂರು ವಿಭಾಗವು ಮೈಸೂರು ವಿಭಾಗೀಯ ಕಚೇರಿ ಆವರಣದಲ್ಲಿ ರೈಲ್ವೆ ಉದ್ಯೋಗಿಗಳ ಮಕ್ಕಳಿಗಾಗಿ ಡೇ ಕೇರ್, ಕ್ರೆಚ್ ಕೇಂದ್ರವನ್ನು ಆರಂಭಿಸಿದೆ. ಈ ಸೌಲಭ್ಯವು ಮುಖ್ಯವಾಗಿ ಮೈಸೂರು ಮುಖ್ಯಾಲಯ ಪ್ರದೇಶದಲ್ಲಿ ಕಾರ್ಯನಿರ್ವಹಿಸುವ ರೈಲ್ವೆ ಉದ್ಯೋಗಿಗಳ ಮಕ್ಕಳಿಗೆ ಸುರಕ್ಷಿತ, ಭದ್ರ ಹಾಗೂ ಬೆಂಬಲಕಾರಿ ವಾತಾವರಣವನ್ನು ಒದಗಿಸುವ ಉದ್ದೇಶ ಹೊಂದಿದೆ.

ಈ ಕೇಂದ್ರವನ್ನು ಗುಂಟೂರು ವಿಭಾಗದ ಡಿಆರ್ ಎಂ ಹಾಗೂ ನೈರುತ್ಯ ರೈಲ್ವೆ ಮಹಿಳಾ ಕಲ್ಯಾಣ ಸಂಘದ ಅಧ್ಯಕ್ಷ ಸುಧೇಷ್ಣಾ ಸೇನ್, ಅವರು ಆನ್‌ಲೈನ್ ಮೂಲಕ ಉದ್ಘಾಟಿಸಿದರು. ಮೈಸೂರು ವಿಭಾಗದ ವಿಭಾಗೀಯ ರೈಲ್ವೆ ವ್ಯವಸ್ಥಾಪಕ ಮುದಿತ್ ಮಿತ್ತಲ್ ಅವರು ಸ್ಥಳದಲ್ಲೇ ರಿಬ್ಬನ್ ಕತ್ತರಿಸುವ ಮೂಲಕ ಕ್ರೆಚ್ ಕೇಂದ್ರವನ್ನು ಉದ್ಘಾಟಿಸಿದರು. ಮೈಸೂರು ವಿಭಾಗದಲ್ಲಿ ಒಟ್ಟು 580 ಮಹಿಳಾ ಉದ್ಯೋಗಿಗಳು ಕಾರ್ಯನಿರ್ವಹಿಸುತ್ತಿದ್ದು, ಅವರಲ್ಲಿ 87 ಮಹಿಳಾ ಉದ್ಯೋಗಿಗಳು ವಿಭಾಗೀಯ ಕಛೇರಿಯಲ್ಲಿ ಕೆಲಸ ಮಾಡುತ್ತಿದ್ದಾರೆ. ಈ ಕ್ರೆಚ್ ಕೇಂದ್ರದ ಸ್ಥಾಪನೆಯ ಉದ್ದೇಶವು ಈ ಮಹಿಳಾ ಉದ್ಯೋಗಿಗಳಿಗೆ ಕೆಲಸದ ಸಮಯದಲ್ಲಿ ತಮ್ಮ ಮಕ್ಕಳಿಗಾಗಿ ಸುರಕ್ಷಿತ ಹಾಗೂ ಆರೈಕೆಪೂರ್ಣ ವಾತಾವರಣವನ್ನು ಒದಗಿಸುವುದಾಗಿದೆ. ಮಾತನಾಡಿದ ಹಿರಿಯ ವಿಭಾಗೀಯ ಕಾರ್ಯಾಚರಣ ವ್ಯವಸ್ಥಾಪಕಿ ಹರಿತಾ ಎಸ್, ಅಂತಾರಾಷ್ಟ್ರೀಯ ಮಹಿಳಾ ದಿನದ ಮಹತ್ವವನ್ನು ವಿವರಿಸಿ, ಇಂತಹ ಕಲ್ಯಾಣ ಕಾರ್ಯಕ್ರಮಗಳು ಮಹಿಳಾ ಉದ್ಯೋಗಿಗಳು ತಮ್ಮ ವೃತ್ತಿ ಮತ್ತು ಕುಟುಂಬದ ಜವಾಬ್ದಾರಿಗಳನ್ನು ಸಮತೋಲನದಿಂದ ನಿರ್ವಹಿಸಲು ಸಹಾಯಕವಾಗುತ್ತವೆ ಎಂದು ತಿಳಿಸಿದರು.ಈ ಕ್ರೆಚ್ ಕೇಂದ್ರವನ್ನು ಮಕ್ಕಳ ಅಭಿವೃದ್ಧಿಯ ಅಗತ್ಯಗಳು ಹಾಗೂ ತಾಯಂದಿರ ಅಗತ್ಯಗಳನ್ನು ಗಮನದಲ್ಲಿಟ್ಟುಕೊಂಡು ಅತ್ಯಂತ ಆಲೋಚಿತ ರೀತಿಯಲ್ಲಿ ವಿನ್ಯಾಸಗೊಳಿಸಲಾಗಿದೆ ಎಂದು ತಿಳಿಸಿದರು.



> **ಮಕ್ಕಳಿಗೆ ಸುರಕ್ಷಿತ ಮತ್ತು ಸಂತೋಷಕರ ವಾತಾವರಣ ಒದಗಿಸುವ ಮೂಲಕ, ಪ್ರಸೂತಿ ರಜೆಯ ನಂತರ ಕೆಲಸಕ್ಕೆ ಮರಳುವ ಮಹಿಳಾ ಉದ್ಯೋಗಿಗಳು ಯಾವುದೇ ಆತಂಕವಿಲ್ಲದೆ, ಮನಶ್ಶಾಂತಿಯೊಂದಿಗೆ ತಮ್ಮ ಕರ್ತವ್ಯಗಳನ್ನು ನಿರ್ವಹಿಸಲು ಇದು ಸಹಕಾರಿಯಾಗಲಿದೆ.**
> ■ ಹರಿತಾ ಎಸ್, ಹಿರಿಯ ವಿಭಾಗೀಯ ಕಾರ್ಯಾಚರಣ ವ್ಯವಸ್ಥಾಪಕಿ

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ ಹೇಳಿಕೆ


29 ಲಕ್ಷ ರೂ.ಮೌಲ್ಯದ ವಸ್ತುಗಳು ವಶ

ಮೈಸೂರು: ಜಿಲ್ಲಾ ಪೊಲೀಸರು 1 ಡಕಾಯಿತಿ,2 ಸುಲಿಗೆ,7 ಮನೆ ಕಳ್ಳತನ,5 ವಾಹನ ಕಳ್ಳತನ,8 ಸಾಮಾನ್ಯ ಕಳ್ಳತನ,1 ಜಾನುವಾರು ಪ್ರಕರಣಗಳನ್ನು ಹಚ್ಚಿ, ಒಟ್ಟು ರೂ. 29,97,788 ಮೌಲ್ಯದ ಮಾಲುಗಳನ್ನು ವಶಪಡಿಸಿಕೊಂಡಿದ್ದಾರೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ ತಿಳಿಸಿದರು.

ಸೋಮವಾರ ತಮ್ಮ ಕಚೇರಿಯಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಒಟ್ಟು 9 ಪ್ರಕರಣಗಳಲ್ಲಿ 10,46,800 ರೂ ಮೌಲ್ಯದ 279 ಗ್ರಾಂ ಚಿನ್ನದ ಒಡವೆಗಳು ಮತ್ತು 1 ಪ್ರಕರಣದಲ್ಲಿ 30 ಗ್ರಾಂ ಬೆಳ್ಳಿಯ ಕಾಲು ಚೈನು ಹಾಗೂ ಒಟ್ಟು 5 ಪ್ರಕರಣಗಳಲ್ಲಿ 3,76,989 ರೂ. ನಗದನ್ನು ವಶಪಡಿಸಿಕೊಳ್ಳಲಾಗಿದೆ. ಒಟ್ಟು 6 ಪ್ರಕರಣಗಳಲ್ಲಿ ಕಾರು-3, ವ್ಯಾನ್ -1, ಮೋಟಾರ್ ಬೈಕ್ -4 ಒಟ್ಟು 8 ವಾಹನಗಳನ್ನು ವಶಪಡಿಸಿಕೊಂಡಿದ್ದು, ಇವುಗಳ ಒಟ್ಟು ಅಂದಾಜು ಮೌಲ್ಯ 14,33,000 ರೂಗಳು.

ಹಾರ್ಡ್ ವೇರ್ ಮತ್ತು ಎಲೆಕ್ಟಿಕ್ ವಸ್ತುಗಳ; ಒಟ್ಟು 3 ಪ್ರಕರಣಗಳಲ್ಲಿ ಮೋಟಾರ್, ಮೊಬೈಲ್ ಹಾಗೂ ವೈರ್ ವಸ್ತುಗಳನ್ನು ವಶಪಡಿಸಿಕೊಂಡಿದ್ದು ಇವುಗಳ ಒಟ್ಟು ಮೌಲ್ಯ 82,999 ರೂಗಳು. 1 ಪ್ರಕರಣಗಳಲ್ಲಿ 2 ಹಸುಗಳು ಗಳನ್ನು ವಶಪಡಿಸಿಕೊಂಡಿದ್ದು, ಅಂದಾಜು ಮೌಲ್ಯ 58,000 ರೂಗಳಾಗಿದೆ ಎಂದು ಮಾಹಿತಿ ನೀಡಿದರು.

2026 ನೇ ಸಾಲಿನ ಜನವರಿ ಮಾಹೆಯಿಂದ ಮಾರ್ಚ್ ಮಾಹೆ ವರೆಗೆ ಎನ್.ಡಿ.ಪಿ.ಎಸ್ ಕಾಯ್ದೆ ಅಡಿ ಒಟ್ಟು 55 ಪ್ರಕರಣಗಳನ್ನು ದಾಖಲಿಸಿ, 1 ಕೆ.ಜಿ. 860ಗ್ರಾಂ ಗಾಂಜಾ ಮತ್ತು ಎಂ.ಡಿ.ಎಂ.ಎ .010 ಎಂ.ಎಲ್ ಅನ್ನು ವಶಪಡಿಸಿಕೊಳ್ಳಲಾಗಿದ್ದು, 56 ಜನರ ವಿರುದ್ದ ಕ್ರಮ ಕೈಗೊಳ್ಳಲಾಗಿದೆ. ಸುದ್ದಿಗೋಷ್ಠಿಯಲ್ಲಿ ಎಎಸ್ಪಿಗಳಾದ ನಾಗೇಶ್ ಎಲ್ ಇದ್ದರು.



14 ಪ್ರಕರಣ ದಾಖಲು

ಜನವರಿ ತಿಂಗಳಿಂದ ಮಾರ್ಚ್ ವರೆಗೆ ಲಾಟರಿ ಕಾಯ್ದೆ ಅಡಿ ಒಟ್ಟು 14 ಪ್ರಕರಣಗಳನ್ನು ದಾಖಲಿಸಿ, 2,26,707 ರೂ ಮೊತ್ತದ ಲಾಟರಿ ಟಿಕೇಟ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.

ಕಿರುಸುದ್ದಿ

ಅನಿರ್ದಿಷ್ಟಾವಧಿ ಧರಣಿ ಸತ್ಯಾಗ್ರಹ

ಕೊಳ್ಳೇಗಾಲ: ತಾಲೂಕಿನ ಗುಂಡಾಲ್ ಜಲಾಶಯದ ಹಳೆ ಸ್ಥಿರ ಅಚ್ಚುಕಟ್ಟು ವ್ಯಾಪ್ತಿಯ ರೈತರ ಹಿತರಕ್ಷಣಾ ಸಂಘದ ವತಿಯಿಂದ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಅನಿರ್ದಿಷ್ಟಾವಧಿ ಧರಣಿ ಸತ್ಯಾಗ್ರಹ ನಡೆಸಲಾಯಿತು. ಪಟ್ಟಣದ ಉಪವಿಭಾಗಾಧಿಕಾರಿ ಕಚೇರಿ ಮುಂಭಾಗದಲ್ಲಿ ರೈತರು ಪ್ರತಿಭಟನೆ ನಡೆಸಿ ಸರ್ಕಾರದ ಗಮನ ಸೆಳೆಯಲು ಪ್ರಯತ್ನಿಸಿದರು. ಈ ಸಂದರ್ಭದಲ್ಲಿ ಮಾತನಾಡಿದ ಸಂಘದ ಅಧ್ಯಕ್ಷ ದಶರಥ ಅವರು, ಗುಂಡಾಲ್ ಜಲಾಶಯದ ಹಳೆ ಅಚ್ಚುಕಟ್ಟು ವ್ಯಾಪ್ತಿಯ ರೈತರು ಹಲವು ವರ್ಷಗಳಿಂದ ವಿವಿಧ ಸಮಸ್ಯೆಗಳನ್ನು ಎದುರಿಸುತ್ತಿದ್ದು, ಸರ್ಕಾರ ತಕ್ಷಣವೇ ರೈತರ ಬೇಡಿಕೆಗಳನ್ನು ಈಡೇರಿಸಬೇಕು ಎಂದು ಆಗ್ರಹಿಸಿದರು. ರೈತರ ಹಿತಾಸಕ್ತಿಯನ್ನು ಕಾಪಾಡುವ ನಿಟ್ಟಿನಲ್ಲಿ ಸಂಬಂಧಿಸಿದ ಅಧಿಕಾರಿಗಳು ಮತ್ತು ಸರ್ಕಾರ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಅವರು ಒತ್ತಾಯಿಸಿದರು. ಪ್ರತಿಭಟನೆಯಲ್ಲಿ ಸಂಘದ ಕಾರ್ಯದರ್ಶಿ ರಾಮಕೃಷ್ಣ, ಲಕ್ಕರಸನಪಾಳ್ಯ ಮಹೇಶ್, ಶಿವರಾಜು, ನಟರಾಜು, ಮಾದೇಶ್, ಸಿದ್ದಯ್ಯನಪುರ ರಾಜು, ಮಧುವನಹಳ್ಳಿ ಬಸವರಾಜು, ಸರಗೂರು ವೀರಭದ್ರಸ್ವಾಮಿ, ವಾಸು ಸೇರಿದಂತೆ ಹಲವರು ಭಾಗವಹಿಸಿದ್ದರು.

ವಿದ್ಯುತ್ ವ್ಯತ್ಯಯ ಇಂದು

ಕೊಳ್ಳೇಗಾಲ: ಉಪವಿಭಾಗ ದೊಡ್ಡಿಂದುವಾಡಿ ಶಾಖಾ ವ್ಯಾಪ್ತಿಯಲ್ಲಿನ ಗ್ರಾಹಕರಿಗೆ ಗುಣಮಟ್ಟದ ವಿದ್ಯುತ್ ನೀಡಲು 11 ಕೆ.ವಿ ಕಾಮಗೆರೆ ಐ.ಪಿ ವಿದ್ಯುತ್ ಮಾರ್ಗದ ತುರ್ತು ನಿರ್ವಹಣೆಯನ್ನು ಇದೇ ತಿಂಗಳ 10ರ ಮಂಗಳವಾರದಂದು ಹಮ್ಮಿಕೊಂಡಿರುವುದರಿಂದ ಆ ವ್ಯಾಪ್ತಿಯಲ್ಲಿ ವಿದ್ಯುತ ವ್ಯತ್ಯಯವಾಗಲಿದ್ದು ಸಾರ್ವಜನಿಕರು ಸಹಕರಿಸುವಂತೆ ಸೆಸ್ಕ್ ಎಇಇ ರಾಜು. ಎಂ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಈ ಫೀಡರ್ ಗಳಿಗೆ ಒಳಪಡುವ ದೊಡ್ಡಿಂದುವಾಡಿ ಗ್ರಾ.ಪಂ, ಸಿಂಗನಲ್ಲೂರು ಗ್ರಾ.ಪಂ, ಕೊಂಗರಹಳ್ಳಿ ಗ್ರಾ.ಪಂ ವ್ಯಾಪ್ತಿಗೆ ಒಳಪಡುವ ಗ್ರಾಮಗಳಿಗೆ ಸದರಿ ದಿನದಂದು ಬೆಳಿಗ್ಗೆ 10 ರಿಂದ ಸಂಜೆ 6 ಗಂಟೆಯವರೆಗೆ ವಿದ್ಯುತ್ ಸರಬರಾಜು ಇರುವುದಿಲ್ಲವೆಂದು ತಿಳಿಸುತ್ತಾ ಸಾರ್ವಜನಿಕರು ಎಂದಿನಂತೆ ನಿಗಮದ ಜೊತೆ ಸಹಕರಿಸಬೇಕೆಂದು ಅವರು ಕೋರಿದ್ದಾರೆ.

ಮಾ.15ಕ್ಕೆ ಹಿಮವದ್ ಗೋಪಾಲಸ್ವಾಮಿ ಬ್ರಹ್ಮರಥೋತ್ಸವ

ಚಾಮರಾಜನಗರ: ಗುಂಡ್ಲುಪೇಟೆ ತಾಲೂಕಿನ ಹಿಮವದ್ ಗೋಪಾಲಸ್ವಾಮಿ ಬೆಟ್ಟದಲ್ಲಿ ಮಾರ್ಚ್ 15ರಂದು ದಿವ್ಯ ಬ್ರಹ್ಮ ರಥೋತ್ಸವ ಹಾಗೂ ಜಾತ್ರೆ ನಡೆಯಲಿದ್ದು, ರಸ್ತೆ ಸಾರಿಗೆ ಸಂಸ್ಥೆಯ ಬಸ್ ಗಳನ್ನು ಹೊರತುಪಡಿಸಿ ಉಳಿದ ದ್ವಿಚಕ್ರ, ನಾಲ್ಕು ಚಕ್ರ, ಮಿನಿ ವಾಹನ ಮತ್ತು ಇತರೆ ವಾಹನಗಳಲ್ಲಿ ಬರುವ ಭಕ್ತಾಧಿಗಳು ಅರಣ್ಯ ಇಲಾಖೆಯ ಚೆಕ್‌ಪೋಸ್ಟ್ ಮೈದಾನದಲ್ಲಿ ವಾಹನಗಳನ್ನು ನಿಲುಗಡೆ ಮಾಡಿ, ಕೆಎಸ್‌ಆರ್‌ಟಿಸಿ ವಾಹನಗಳಲ್ಲಿ ನಿಗದಿಪಡಿಸಿರುವ ದರ ಪಾವತಿಸಿ ದೇವರ ದರ್ಶನಕ್ಕೆ ಹೋಗಿ ಬರುವ ವ್ಯವಸ್ಥೆ ಮಾಡಲಾಗಿದೆ. ಭಕ್ತಾಧಿಗಳು ಮತ್ತು ಸಾರ್ವಜನಿಕರು ಸಹಕರಿಸಬೇಕೆಂದು ತಹಶೀಲ್ದಾರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವ್ಯಕ್ತಿ ನಾಪತ್ತೆ: ಸುಳಿವಿಗೆ ಸಹಕರಿಸಲು ಮನವಿ

ಚಾಮರಾಜನಗರ: ತಾಲೂಕಿನ ಕಾಗಲವಾಡಿ ಗ್ರಾಮದ ರವಿಕುಮಾರ ಎಂಬುವವರು ಕಾಣೆಯಾಗಿದ್ದು, ಇವರ ಸುಳಿವಿಗೆ ಸಹಕರಿಸುವಂತೆ ಕೋರಲಾಗಿದೆ. 52 ವರ್ಷದ ರವಿಕುಮಾರ 5.2 ಅಡಿ ಎತ್ತರ, ಕೋಲು ಮುಖ, ಗೋಧಿ ಮೈಬಣ್ಣ, ಸಾಧಾರಣ ಮೈಕಟ್ಟು ಹೊಂದಿದ್ದು, ಎಡ ಕೆನ್ನೆಯ ಮೇಲೆ ಹಳೆ ಗಾಯದ ಗುರುತು ಇರುತ್ತದೆ. ಕಾಣೆಯಾದಾಗ ಬಿಳಿ ಬಣ್ಣದ ತುಂಬು ತೋಳಿನ ಶರ್ಟ್, ಕಪ್ಪು ಬಣ್ಣದ ಪ್ಯಾಂಟ್ ಧರಿಸಿದ್ದರು. ಇವರ ಸುಳಿವು ದೊರೆತಲ್ಲಿ ಜಿಲ್ಲಾ ಪೊಲೀಸ್ ಅಧೀಕ್ಷಕರು ದೂ.ಸಂ 08226-222243, ಚಾಮರಾಜನಗರ ಪೂರ್ವ ಪೊಲೀಸ್ ಠಾಣೆ ದೂ.ಸಂ 08226-222058, ಪೊಲೀಸ್ ಇನ್ ಸ್ಪೆಕ್ಟರ್ ಮೊ.ಸಂ 9480804648, ಜಿಲ್ಲಾ ಪೊಲೀಸ್ ಕಂಟ್ರೋಲ್ ರೂಂ. 08226-222383 ಸಂಪರ್ಕಿಸುವಂತೆ ಪ್ರಕಟಣೆ ತಿಳಿಸಿದೆ.

ನಾಳೆ ಕುಂದುಕೊರತೆ ಸಭೆ

ಚಾಮರಾಜನಗರ: ಜಿಲ್ಲಾ ಮಟ್ಟದ ವಿಕಲಚೇತನರ ಕುಂದು ಕೊರತೆ ಸಭೆಯನ್ನು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಮಾರ್ಚ್ 11 ರಂದು ಬೆಳಿಗ್ಗೆ 10.30 ಗಂಟೆಗೆ ನಗರದ ಜಿಲ್ಲಾಡಳಿತ ಭವನದಲ್ಲಿರುವ ಹಳೆ ಕೆಡಿಪಿ ಸಭಾಂಗಣದಲ್ಲಿ ಏರ್ಪಡಿಸಲಾಗಿದೆ. ವಿಕಲಚೇತನರು ಈ ಸಭೆಯ ಸದುಪಯೋಗ ಪಡೆದುಕೊಳ್ಳಬೇಕು. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಅಂಗವಿಕಲರ ಮತ್ತು ಹಿರಿಯ ನಾಗರಿಕರ ಕಲ್ಯಾಣಾಧಿಕಾರಿಗಳ ಕಚೇರಿ ದೂ. ಸಂ 08226-223688, 224688 ಸಂಪರ್ಕಿಸುವಂತೆ ಜಿಲ್ಲಾ ಅಂಗವಿಕಲರ ಮತ್ತು ಹಿರಿಯ ನಾಗರಿಕರ ಕಲ್ಯಾಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಕೊಳ್ಳೇಗಾಲ ತಾಲೂಕಿನ ಗುಂಡಾಲ್ ಜಲಾಶಯದ ಹಳೆ ಸ್ಥಿರ ಅಚ್ಚುಕಟ್ಟು ವ್ಯಾಪ್ತಿಯ ರೈತರ ಹಿತರಕ್ಷಣಾ ಸಂಘದ ವತಿಯಿಂದ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಅನಿರ್ದಿಷ್ಟಾವಧಿ ಧರಣಿ ಸತ್ಯಾಗ್ರಹ ನಡೆಸಲಾಯಿತು.

ಬಜ್ ಇಂಡಿಯಾದಿಂದ ಮಹಿಳಾ ದಿನಾಚರಣೆ

ಕೊಳ್ಳೇಗಾಲ: ಪಟ್ಟಣದ ಉಮಾಶಂಕರ ಕಲ್ಯಾಣ ಮಂಟಪದಲ್ಲಿ ಸೋಮವಾರ ಬಜ್ ಇಂಡಿಯಾ ಟ್ರಸ್ಟ್ ವತಿಯಿಂದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮವನ್ನು ಆಯೋಜಿಸಲಾಯಿತು. ಕಾರ್ಯಕ್ರಮವನ್ನು ಬಜ್ ಇಂಡಿಯಾ ಟ್ರಸ್ಟ್ ಯೋಜನಾ ವ್ಯವಸ್ಥಾಪಕ ವೆಂಕಟೇಶ್ ಜಿ.ಎಸ್ ಉದ್ಘಾಟಿಸಿ ಮಾತನಾಡಿ, ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಒಂದು ದಿನಕ್ಕೆ ಮಾತ್ರ ಸೀಮಿತವಾಗಿಲ್ಲ, ಪ್ರತಿದಿನವೂ ಮಹಿಳೆಯರ ದಿನವಾಗಬೇಕು ಎಂದು ಹೇಳಿದರು. ಬಜ್ ಇಂಡಿಯಾ ಟ್ರಸ್ಟ್ 2012ರಲ್ಲಿ ಸ್ಥಾಪನೆಯಾಗಿ ರಾಜ್ಯದ 15 ಜಿಲ್ಲೆಗಳ 18 ಸಾವಿರಕ್ಕೂ ಹೆಚ್ಚು ಹಳ್ಳಿಗಳಲ್ಲಿ ಮಹಿಳೆಯರ ಸಬಲೀಕರಣಕ್ಕಾಗಿ ವಿವಿಧ ಯೋಜನೆಗಳನ್ನು ಜಾರಿಗೆ ತರುತ್ತಿದೆ ಎಂದು ತಿಳಿಸಿದರು.

ನಿವೃತ್ತ ತಹಸೀಲ್ದಾರ್ ಮಹದೇವಯ್ಯ ಮಾತನಾಡಿ, ಬಜ್ ಇಂಡಿಯಾ ಟ್ರಸ್ಟ್ ಮಹಿಳೆಯರನ್ನು ಸ್ವಾವಲಂಬಿ ಬದುಕಿನತ್ತ ಕೊಂಡೊಯ್ಯುವಲ್ಲಿ ಮಹತ್ವದ ಪಾತ್ರವಹಿಸಿದೆ ಎಂದು ಹೇಳಿದರು.

ಮೈಸೂರಿನ ಇಂಡಿಯನ್ ಕೋ-ಆಪರೇಟಿವ್ ಕ್ರೆಡಿಟ್ ಸೊಸೈಟಿ ಸೀನಿಯರ್ ಬ್ಯಾಂಕ್ ಮ್ಯಾನೇಜರ್ ಸ್ವಾತಿ ಎ.ವಿ, ಪ್ರಗತಿಪರ ರೈತ ಮಹಿಳೆ ಎನ್. ಪುಟ್ಟತಾಯಮ್ಮ ಸೇರಿದಂತೆ ಹಲವರು ಮಹಿಳೆಯರ ಸಬಲೀಕರಣದ ಕುರಿತು ಅಭಿಪ್ರಾಯಗಳನ್ನು ಹಂಚಿಕೊಂಡರು.

ಈ ಸಂದರ್ಭದಲ್ಲಿ ಚಾಮರಾಜನಗರ ಬಜ್ ಇಂಡಿಯಾ ಟ್ರಸ್ಟ್ ಮ್ಯಾನೇಜರ್ ಮಮತಾ ಹಾಗೂ ಇತರರು ಉಪಸ್ಥಿತರಿದ್ದರು.



ಕೊಳ್ಳೇಗಾಲ ಪಟ್ಟಣದ ಉಮಾಶಂಕರ ಕಲ್ಯಾಣ ಮಂಟಪದಲ್ಲಿ ಸೋಮವಾರ ಏರ್ಪಡಿಸಿದ್ದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಬಜ್ ಇಂಡಿಯಾ ಟ್ರಸ್ಟ್ ಯೋಜನಾ ವ್ಯವಸ್ಥಾಪಕ ವೆಂಕಟೇಶ್ ಜಿ.ಎಸ್. ಮಾತನಾಡಿದರು.

ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಕಾಡಾ ಅಧ್ಯಕ್ಷರ ಹೇಳಿಕೆ

ಮಹಿಳೆಯೆಂದರೆ ಶಕ್ತಿ, ಧೈರ್ಯ

ಚಾಮರಾಜನಗರ: ತಾಯಿ, ಸಹೋದರಿ, ಮಡದಿ, ಮಗಳು ಹೀಗೆ ಕುಟುಂಬದ ಎಲ್ಲಾ ನಿರ್ವಹಣೆಯಲ್ಲಿ ನಿರ್ಣಾಯಕ ಪಾತ್ರ ವಹಿಸುವ ಮಹಿಳೆಯರ ಪಾತ್ರ ಬಹುದೊಡ್ಡದು. ಮಹಿಳೆಯೆಂದರೆ ಶಕ್ತಿ, ಧೈರ್ಯ, ಕಾಳಜಿ ಎಂದು ಕಾಡಾ ಅಧ್ಯಕ್ಷ ಪಿ. ಮರಿಸ್ವಾಮಿ ಹೇಳಿದರು.

ನಗರದ ಜೆ.ಹೆಚ್. ಪಟೇಲ್ ಸಭಾಂಗಣದಲ್ಲಿಂದು ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ ಹಾಗೂ ವಿವಿಧ ಇಲಾಖೆಗಳ ಸಹಯೋಗದೊಂದಿಗೆ ಹಮ್ಮಿಕೊಳ್ಳಲಾಗಿದ್ದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಮಹಿಳೆಯರು ಕುಟುಂಬದಲ್ಲಿ ಅತ್ಯಂತ ಪ್ರಮುಖ ಪಾತ್ರ ವಹಿಸಲಿದ್ದಾರೆ. ಪ್ರತಿ ಯಶಸ್ವಿ ಪುರುಷನ ಹಿಂದೆ ಮಹಿಳೆಯೊಬ್ಬರು ಇರುತ್ತಾರೆ ಎಂಬುದನ್ನು ಒಪ್ಪಬೇಕಿದೆ. ತಾಳ್ಮೆ, ಸಹನೆ ಪ್ರತೀಕವಾದ ಮಹಿಳೆಯರು ಎಲ್ಲ ರಂಗಗಳಲ್ಲಿಯೂ ಮುಂದಿದ್ದಾರೆ. ಇತಿಹಾಸವನ್ನು ನೋಡಿದಾಗ ಕಿತ್ತೂರು ರಾಣಿ ಚೆನ್ನಮ್ಮ, ಝಾನ್ಸಿರಾಣಿ ಲಕ್ಷ್ಮಿಬಾಯಿಯಂತಹ ವೀರ ಹೋರಾಟಗಾರರು ತಮ್ಮದೇ ಆದ ಶೌರ್ಯ ಪ್ರದರ್ಶಿಸಿದ್ದಾರೆ ಎಂದರು.

ಅಧ್ಯಕ್ಷತೆವಹಿಸಿಮಾತನಾಡಿದಜಿಲ್ಲಾಧಿಕಾರಿಶ್ರೀರೂಪ ಅವರು ದೊಡ್ಡ ಶಕ್ತಿ ಎನಿಸಿಕೊಳ್ಳುವ ಮಹಿಳೆಯರ ಹಿಂದಿನ ನೋವುಗಳನ್ನು ಅರ್ಥ ಮಾಡಿಕೊಳ್ಳಬೇಕಿದೆ. ಹಲವು ಸಂದರ್ಭಗಳಲ್ಲಿ ಹೆಣ್ಣು ಮಕ್ಕಳು ಅಪಮಾನ, ತಿರಸ್ಕಾರಕ್ಕೆ ಒಳಗಾದರು ಸಹ ಸೋತಿದ್ದೇವೆ ಎಂದು ಮೇಲ್ನೋಟಕ್ಕೆ ತೋರಿಸಿಕೊಳ್ಳುವುದಿಲ್ಲ, ನೋವನ್ನು ನುಂಗಿ ಚಡಪಡಿಸುವ ಸಣ್ಣ ವಯಸ್ಸಿನ ಹೆಣ್ಣುಮಕ್ಕಳು ಸಹ ತಮ್ಮಲ್ಲೇ ಕೊರಗುತ್ತಾರೆ. ಇಂತಹ ಹೆಣ್ಣುಮಕ್ಕಳಿಗೆ ಧೈರ್ಯ ತುಂಬುವುದಕ್ಕೆ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಸಮರ್ಪಣೆಯಾಗಲಿ ಎಂದು ಜಿಲ್ಲಾಧಿಕಾರಿಗಳು ಆಶಿಸಿದರು.



ಎಲ್ಲಾ ಕ್ಷೇತ್ರಗಳಿಗೂ ಮಹಿಳೆಯರ ಕೊಡುಗೆ

ಚೂಡಾ ಅಧ್ಯಕ್ಷ ಮಹಮ್ಮದ್ ಅಸ್ಗರ್ ಮುನ್ನ ಮಾತನಾಡಿ, ಮಹಿಳೆಯರು ಇಂದು ಅನೇಕ ಉನ್ನತ ಹಂತಕ್ಕೆ ತಲುಪಿದ್ದಾರೆ. ಕ್ರೀಡೆ, ವಿಮಾನಯಾನ, ವಿಜ್ಞಾನ ತಂತ್ರಜ್ಞಾನ ಕ್ಷೇತ್ರಗಳಲ್ಲಿಯೂ ಹೆಚ್ಚು ಅವಕಾಶಗಳನ್ನು ಪಡೆದು ತಮ್ಮ ಕೊಡುಗೆ ನೀಡಿದ್ದಾರೆ ಎಂದು ತಿಳಿಸಿದರು.

ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರ ಅಧ್ಯಕ್ಷರಾದ ಹೆಚ್.ವಿ. ಚಂದ್ರು ಅವರು ಮಾತನಾಡಿ ಮಹಿಳಾ ಸಾಧಕರನ್ನು ಸನ್ಮಾನಿಸುವುದರಿಂದ ಇತರೆ ಮಹಿಳೆಯರಿಗೂ ಪ್ರೇರಣೆಯಾಗಲಿದೆ. ರಾಜ್ಯ ಸರ್ಕಾರ ರೂಪಿಸಿರುವ ಗ್ಯಾರಂಟಿ ಯೋಜನೆಗಳು ಮಹಿಳೆಯರ ಅಭಿವೃದ್ದಿಯ ಗುರಿ ಹೊಂದಿದೆ. ಗೃಹಲಕ್ಷ್ಮಿ, ಶಕ್ತಿ ಯೋಜನೆಯಂತಹ ಕಾರ್ಯಕ್ರಮಗಳಿಂದ ಮಹಿಳೆಯರಿಗೆ ಹೆಚ್ಚು ಅನುಕೂಲ ಕಲ್ಪಿಸಿಕೊಡಲಾಗಿದೆ ಎಂದರು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮೋನಾ ರೋತ್ ಅವರು ಮಾತನಾಡಿ, ಪುರುಷ ಮಹಿಳೆ ಸರಿಸಮಾನವಾಗಿ ಎಲ್ಲ ರಂಗದಲ್ಲಿಯೂ ಇರಲು ಉತ್ತೇಜನ ಬಹಳ ಮುಖ್ಯವಾಗುತ್ತದೆ. ಔದ್ಯೋಗಿಕ, ಶೈಕ್ಷಣೆ, ಆಡಳಿತ ಹೀಗೆ ಎಲ್ಲ ಕ್ಷೇತ್ರಗಳಲ್ಲಿಯೂ ಮಹಿಳೆಗೆ ನಿರಂತರವಾಗಿ ಅವಕಾಶಗಳು ಪ್ರೋತ್ಸಾಹಕ್ಕೆ ಬೆಂಬಲವಾಗಿ ನಿಲ್ಲಬೇಕಿದೆ ಎಂದರು.

ಇದೇ ವೇಳೆ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ 8 ಮಹಿಳಾ ಸಾಧಕಿಯರನ್ನು, ಉತ್ತಮವಾಗಿ ಕಾರ್ಯನಿರ್ವಹಿಸಿರುವ ಐವರು ಅಂಗನವಾಡಿ ಕಾರ್ಯಕರ್ತೆಯರನ್ನು ಸನ್ಮಾನಿಸಿ ಗೌರವಿಸಲಾಯಿತು.

ಪರಿಶಿಷ್ಟರ ಬಡಾವಣೆಗೆ ಮೂಲಸೌಕರ್ಯ: ಶಾಸಕ



ಚಾಮರಾಜನಗರ: ಕ್ಷೇತ್ರದಲ್ಲಿ ಪರಿಶಿಷ್ಟ ಜಾತಿ ಹಾಗೂ ವರ್ಗದವರು ವಾಸಿಸುವ ಬಡಾವಣೆಗಳಲ್ಲಿ ಮೂಲ ಭೂತ ಸೌಲಭ್ಯಗಳನ್ನು ಕಲ್ಪಿಸಲು ಹೆಚ್ಚಿನ ಒತ್ತು ನೀಡಿದ್ದು, ಕ್ಷೇತ್ರದಲ್ಲಿ ಬಹುತೇಕ ಬಡಾವಣೆಗಳಿಗೆ ರಸ್ತೆ, ಚರಂಡಿ, ಕುಡಿಯುವ ನೀರು ಸೌಲಭ್ಯಗಳನ್ನು ಕಲ್ಪಿಸಲಾಗಿದೆ ಎಂದು ಎಂಎಸ್‌ಐಎಲ್ ಅಧ್ಯಕ್ಷರು ಆದ ಶಾಸಕ ಸಿ. ಪುಟ್ಟರಂಗಶೆಟ್ಟಿ ತಿಳಿಸಿದರು.

ತಾಲೂಕಿನ ಅಮಚವಾಡಿ ಗ್ರಾಮದ ನಾಯಕರ ಬೀದಿಯಲ್ಲಿ ಟಿಎಸ್‌ಪಿ ಯೋಜನೆಯಡಿಯಲ್ಲಿ 80 ಲಕ್ಷ ರೂ. ವೆಚ್ಚದಲ್ಲಿ ಸಿಮೆಂಟ್ ರಸ್ತೆ, ಚರಂಡಿ ನಿರ್ಮಾಣ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸಿ ಅವರು ಮಾತನಾಡಿದರು.

ವಿಶೇಷವಾಗಿ ಗಿರಿಜನರು ಹಾಗೂ ಸೋಲಿಗರು ವಾಸಿಸುವ ಪ್ರದೇಶಗಳಿಗೆ ವಿಶೇಷ ಯೋಜನೆಯಡಿಯಲ್ಲಿ ಮೂಲಭೂತ ಸೌಲಭ್ಯವನ್ನು ಕಲ್ಪಿಸಿಕೊಡಲಾಗಿದೆ. ಬೆಜ್ಜಲಪಾಳ್ಯ ಗ್ರಾಮಕ್ಕೆ ಇದುವರೆಗೂ ಡಾಂಬರು ರಸ್ತೆ ಇರಲಿಲ್ಲ, ರಾಷ್ಟ್ರೀಯ ಹೆದ್ದಾರಿಯಿಂದ ಗ್ರಾಮಕ್ಕೆ ಸಂಪರ್ಕ ಕಲ್ಪಿಸುವ ರಸ್ತೆಯನ್ನು ಡಾಂಬರೀಕರಣ ಗೊಳಿಸಲಾಗಿದೆ ಎಂದರು.

ಅಮಚವಾಡಿ ಗ್ರಾಮಕ್ಕೆ ಬಹಳಷ್ಟು ಯೋಜನೆಗಳನ್ನು ಜಾರಿ ಮಾಡಿ, ಅನುದಾನವನ್ನು ನೀಡಿದ್ದೇನೆ. ಅಮಚವಾಡಿ ನಾಯಕರ ಬೀದಿಗೆ 80 ಲಕ್ಷ ರೂ. ನೀಡಿದ್ದು, ನಿರ್ಮಿತ ಕೇಂದ್ರದಿಂದ ಕಾಮಗಾರಿ ನಿರ್ವಹಣೆ ಯಾಗಲಿದೆ. 850ಮೀಟರ್ ಉದ್ದದ ರಸ್ತೆ ಹಾಗೂ ಎರಡು ಬದಿಯಲ್ಲಿ ಚರಂಡಿ ನಿರ್ಮಾಣ ಹಾಗೂ ಅಗತ್ಯ ಬಿದ್ದರೆ, ಡೆಕ್ ನಿರ್ಮಾಣಕ್ಕೆ ಸೂಚನೆ ನೀಡಿದ್ದಾರೆ. ಕಾಮಗಾರಿಯು ಗುಣಮಟ್ಟದಿಂದ ಕೂಡಿರಬೇಕು. ಜೊತೆಗೆ ಗ್ರಾಮಸ್ಥರು ಸಹ ಗುಣಮಟ್ಟದ ಕಾಮಗಾರಿ ಮಾಡಿಸಿಕೊಳ್ಳಲು ಚರಂಡಿ ಒತ್ತುವರಿ ಇತರೇ ಕಡೆಗಳಲ್ಲಿ ರಸ್ತೆ ಹಾಗೂ ಚರಂಡಿ ನಿರ್ಮಾಣಕ್ಕೆ ಸಹಕಾರ ನೀಡಬೇಕು ಎಂದು ಪುಟ್ಟರಂಗಶೆಟ್ಟಿ ತಿಳಿಸಿದರು.

ಒಳ ಮೀಸಲಾತಿ ವರದಿ ಅವೈಜ್ಞಾನಿಕ

ಕೊಳ್ಳೇಗಾಲ: ನಿವೃತ್ತ ನ್ಯಾಯಮೂರ್ತಿ ನಾಗಮೋಹನ್ ದಾಸ್ ಅವರ ಒಳ ಮೀಸಲಾತಿ ವರದಿ ಅವೈಜ್ಞಾನಿಕ, ಇದನ್ನು ತಿರಸ್ಕರಿಸಿ ಎಂದು ಬಲಗೈ ಸಮುದಾಯ ಒಕ್ಕೊರಳ ನಿರ್ಣಾಯ ಕೈಗೊಳ್ಳಬೇಕು ಎಂದು ಎಸ್ಸಿ-ಎಸ್ಟಿ ನೌಕರರ ಸಂಘದ ರಾಜ್ಯಾಧ್ಯಕ್ಷ ಡಿ.ಚಂದ್ರಶೇಖರಯ್ಯ ಹೇಳಿದರು.

ಪಟ್ಟಣದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಭಾನುವಾರ ಡಾ.ಬಿ.ಆರ್. ಅಂಬೇಡ್ಕರ್ ಸ್ಮಾರಕ ಸಂಘ, ಭೀಮನಗರ ಹಾಗೂ ಮೈತ್ರಿ ಕ್ಷೇಮಾಭಿವೃದ್ಧಿ ಸಂಘ ಸಹಯೋಗದಲ್ಲಿ ನಾಗಮೋಹನ್ ದಾಸ್ ವರದಿ - ಒಳಮೀಸಲಾತಿ ಜಾರಿ ಸಾಧಕ-ಬಾಧಕಗಳು ಕುರಿತು ವಿಚಾರ ಸಂಕೀರಣ-ಸಂವಾದ ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿದರು.

ಪರಿಶಿಷ್ಟ ಜಾತಿಗಳ ವಿಂಗಡಣೆ ವೈಜ್ಞಾನಿಕವಾಗಿ ನಡೆದಿಲ್ಲ. ವರದಿಯಲ್ಲಿ ಪರಿಶಿಷ್ಟ ಜಾತಿ ಬಲಗೈ ಸಮುದಾಯವನ್ನು 4 ವಿಭಾಗಗಳಲ್ಲಿ ವಿಂಗಡಿಸಲಾಗಿದೆ. ಉದ್ದೇಶ ಪೂರ್ವಕವಾಗಿ ನಮ್ಮ ಜನ ಸಂಖ್ಯೆಯನ್ನು ಕುಗ್ಗಿಸಲಾಗಿದೆ. ಸುಮಾರು 8 ಲಕ್ಷ ಜನಸಂಖ್ಯೆಯನ್ನು ಕಡಿಮೆ ಮಾಡಲಾಗಿದೆ. ಒಳಮೀಸಲಾತಿ ಅನ್ಯಾಯ ಖಂಡಿಸಿ ಎಲ್ಲೆಡೆ ಪ್ರತಿಭಟನೆ, ವಿರೋಧ ವ್ಯಕ್ತವಾದ ಹಿನ್ನಲೆ ಒಳಮೀಸಲಾತಿ ರಹಿತ, ಹಳೇ ಮೀಸಲಾತಿ ಪ್ರಕಾರ ನೇಮಕಾತಿ ನಡೆಸಬೇಕು ಎಂಬ ಆದೇಶ ಬಂದಿದ್ದು ಗೆಜೆಟ್ ನೋಟಿಫಿಕೇಶನ್ ಕೂಡವಾಗಿದೆ.

ಈ ಬಗ್ಗೆ ಮಾ.12 ರಂದು ಈ ಬಗ್ಗೆ ಕ್ಯಾಬಿನೆಟ್ ಸಭೆ ನಡೆಯುವ ಸಭೆ ನಡೆಯಬಹುದು. ಈ ಅವೈಜ್ಞಾನಿಕ ವರದಿಯನ್ನು ತಿರಸ್ಕರಿಸುವಂತೆ ಸರ್ಕಾರಕ್ಕೆ ಬಲಗೈ ಸಮುದಾಯ ಒತ್ತಾಯ ಮಾಡಬೇಕಿದೆ ಎಂದರು.

ಸಮಾರು 2.91 ಲಕ್ಷ ಹುದ್ದೆಗಳು ಖಾಲಿಯಿದ್ದು ಅದರಲ್ಲಿ 51,432 ಹುದ್ದೆಗಳ ನೇಮಕಾತಿಯಾಗಲಿದೆ.ಈ ನೇಮಕಾತಿ ಒಳ ಮೀಸಲಾತಿ ರಹಿತ ಹಳೇ ಮೀಸಲಾತಿ ಪ್ರಕಾರವೇ ನೆಡೆಯಬೇಕು ಎಂಬುದು ನಮ್ಮ ಸಮುದಾಯ ತೀರ್ಮಾನ ಆಗ ಬೇಕೆಂದರು.

ಒಳ ಮೀಸಲಾತಿ ಮಸೂದೆಗೆ ನನ್ನ ಸಮ್ಮತಿ ಯಿಲ್ಲ ಎಂದು ಕೊಳ್ಳೇಗಾಲ ಶಾಸಕ ಎ.ಆರ್. ಕೃಷ್ಣಮೂರ್ತಿ ಕೂಗಿ ಹೇಳಿ ಹೊರ ನಡೆದರು ಅವರನ್ನು ನಾವು ಅಭಿನಂದಿಸಬೇಕಿದೆ ಎಂದು ಮಾಹಿತಿ ನೀಡಿದರು.

ಚಾಮರಾಜನಗರ ಕಾಲೇಜು ಪ್ರಾಂಶುಪಾಲ ಪಿ.ದೇವರಾಜು ಮಾತನಾಡಿದರು. ಬಳಿಕ ಸಭೆಯಲ್ಲಿ ಪಾಲ್ಗೊಂಡಿದ್ದವರು ಕೇಳಿದ ಪ್ರಶ್ನೆಗಳಿಗೆ ಉತ್ತರಿಸಲಾಯಿತು.

ಈ ಸಂದರ್ಭದಲ್ಲಿ ನಗರಸಭೆ ಮಾಜಿ ಅಧ್ಯಕ್ಷ ರೇಖಾ, ಶಿಕ್ಷಕ ಆನಂದರಾಜ್, ಡಾ.ಬಿ.ಆರ್. ಅಂಬೇಡ್ಕರ್ ಸ್ಮಾರಕ ಸಂಘದ ಅಧ್ಯಕ್ಷ ಎಸ್. ಆನಂದಮೂರ್ತಿ, ಉಪಾಧ್ಯಕ್ಷ ಕಿರಣ್, ಸಹ ಕಾರ್ಯದರ್ಶಿ ಶಶಿಧರ್, ವಕೀಲ ಮೋಹನ್ ಕುಮಾರ್, ಮುಖಂಡ ಅಣಗಳ್ಳಿ ಬಸವರಾಜು, ರಾಚಪ್ಪಾಜಿ, ಲಿಂಗರಾಜು, ಎಸ್.ಸಿದ್ದಪ್ಪಾಜಿ, ದಿಲೀಪ್, ಸಿದ್ದರಾಜು ಮಾಸ್ಟರ್ ಮತ್ತಿತರಿದ್ದರು.



ಬಜೆಟ್ ವಿರೋಧಿಸಿ ರೈತ ಸಂಘದಿಂದ ಧರಣಿ

ಚಾಮರಾಜನಗರ: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಂಡಿಸಿರುವ ಬಜೆಟ್ ರೈತ ವಿರೋಧಿಯಾಗಿದ್ದು, ಗ್ಯಾರಂಟಿ ಹೆಸರಿನಲ್ಲಿ ರೈತರಿಗೆ ದ್ರೋಹ ಮಾಡುತ್ತಿದೆ ಎಂದು ಆರೋಪಿಸಿ ನಗರದಲ್ಲಿ ಸಾಮೂಹಿಕ ನಾಯಕತ್ವದ ರೈತ ಸಂಘದಿಂದ ಪ್ರತಿಭಟನೆ ನಡೆಸಲಾಯಿತು.

ನಗರದ ಭುವನೇಶ್ವರಿ ವೃತ್ತದಲ್ಲಿ ಜಮಾಯಿಸಿದ ರೈತ ಮುಖಂಡರು ಹಾಗು ರೈತರು ಉರಿ ಬಿಸಿಲನ್ನು ಲೆಕ್ಕಿಸದೇ ಸಾಮೂಹಿಕ ನಾಯಕತ್ವದ ರೈತ ಸಂಘದ ಅಧ್ಯಕ್ಷ ಹೊನ್ನೂರು ಪ್ರಕಾಶ್ ನೇತೃತ್ವದಲ್ಲಿ ಪ್ರತಿಭಟನಾ ಧರಣಿ ನಡೆಸಿದರು. ಸರ್ಕಲ್‌ನಲ್ಲಿ ಮಾನವ ಸರಪಳಿ ನಿರ್ಮಾಣ ಮಾಡಿ ರಾಜ್ಯ ಸರ್ಕಾರ ಹಾಗೂ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ದ ಘೋ?ಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.



ರೈತ ಸಂಘದ ಹೊನ್ನೂರು ಪ್ರಕಾಶ್ ಮಾತನಾಡಿ, ಹನೂರು ತಾಲೂಕಿನ ಉಡುತೊರೆಹಳ್ಳ ಜಲಾಶಯ ಏತ ನೀರಾವರಿ ಯೋಜನೆ ಜಾರಿಗೆ 490 ಕೋಟಿ ರೂ. ನೀಡಿ. ಆ ಭಾಗದ ಜನ, ಜಾನುವಾರುಗಳಿಗೆ ಕುಡಿಯುವ ನೀರು ಕಲ್ಪಿಸುವ ಮಹತ್ವಪೂರ್ಣ ಯೋಜನೆ ಜಾರಿ ಮಾಡಿರುವುದು ಸ್ವಾಗತಾರ್ಹ. ಆದೇ ಇತರೇ ತಾಲೂಕುಗಳ ರೈತರ ಸಮಸ್ಯೆಗಳಿಗೂ ಸಹ ಸರ್ಕಾರ ಸ್ಪಂದಿಸಬೇಕಾಗಿತ್ತು. ಜಿಲ್ಲೆಯ ಶಾಸಕರು ಹಾಗೂ ಸಚಿವರು, ಸಂಸದರು ಸ್ಪಂದಿಸಬೇಕಾಗಿತ್ತು. ಆದರೆ, ಅಲ್ಲದೇ ಬಜೆಟ್‌ನಲ್ಲಿ ರೈತರಿಗೆ ಯಾವುದೇ ರೀತಿ ಪ್ರಯೋಜನವಾಗಿಲ್ಲ ಎಂದು ದೂರಿದರು.

ಕಾವೇರಿ ನ್ಯಾಯಾಧೀಕರಣ ತೀರ್ಪಿನಂತೆ ಕಾವೇರಿ ಕೊಳ್ಳದ ಪ್ರದೇಶಗಳಲ್ಲಿ 287.75 ಟಿಎಂಸಿ ನೀರು ಬಳಕೆಗೆ ಅವಕಾಶವಿದೆ. ಆದರೆ, 252 ಟಿಎಂಸಿ ನೀರು ಮಾತ್ರ ಬಳಕೆಯಾಗುತ್ತಿದ್ದು ಉಳಿದ 32 ಟಿಎಂಸಿ ನೀರು ವ್ಯರ್ಥವಾಗಿ ತಮಿಳುನಾಡಿಗೆ ಹರಿದು ಹೋಗುತ್ತಿದೆ. ಈ ನೀರು ಬಳಸಿಕೊಳ್ಳಲು ಸರ್ಕಾರ ಯೋಜನೆಗಳನ್ನು ರೂಪಿಸಬೇಕಾಗಿತ್ತು. ಕಾವೇರಿ ಜಲಾನಯನ ವ್ಯಾಪ್ತಿಯಲ್ಲಿ ಕೃಷಿಗೆ ಅವಕಾಶ ಕಲ್ಪಿಸುವ ನೀರು ಹರಿಸುವ ಯೋಜನೆಗಳನ್ನು ಕೈಗೆತ್ತಿಕೊಳ್ಳೇಬೇಕಾಗಿತ್ತು. ಚಾಮರಾಜನಗರ ಜಿಲ್ಲೆಯನ್ನು ಸಂಪೂರ್ಣವಾಗಿ ನೀರಾವರಿ ಪ್ರದೇಶವನ್ನಾಗಿ ಮಾಡಲು ಅವಕಾಶಗಳಿತ್ತು. ಇದನ್ನು ಅರಿತು ಇನ್ನು ಹೆಚ್ಚಿನ ಕೆರೆಗಳಿಗೆ ನೀರು ತುಂಬಿಸುವ ಕಾರ್ಯಕ್ರಮಗಳು ಆಗಬೇಕಾಗಿತ್ತು. ನೀರಾವರಿ ಪ್ರದೇಶವನ್ನು ವಿಸ್ತರಣೆ ಮಾಡಬೇಕಾಗುತ್ತದೆ. ರಾಜ್ಯ ಸರ್ಕಾರ ಇದ್ಯಾವುದನ್ನು ಮಾಡದೇ ರೈತರಿಗೆ ದ್ರೋಹ ಬಗೆಯುತ್ತಿದೆ ಎಂದರು.

ಲಿಂಗ ಸಮಾನತೆ ಸಂದೇಶ ಸಾರುವ ಮಹಿಳಾ ದಿನ

ಗುಂಡ್ಲುಪೇಟೆ: ಅಂತಾರಾಷ್ಟ್ರೀಯ ಮಹಿಳಾ ದಿನವನ್ನು ವಿಶ್ವದಾದ್ಯಂತ ಅನೇಕ ದೇಶಗಳಲ್ಲಿ ಮಾರ್ಚ್ 8 ರಂದು ಆಚರಿಸಲಾಗುತ್ತದೆ. ಲಿಂಗ ತಾರತಮ್ಯದಿಂದ ಮುಕ್ತವಾದ ಉತ್ತಮ ಸಮಾಜವನ್ನು ನಿರ್ಮಿಸಲು ಮತ್ತು ಲಿಂಗ ಸಮಾನತೆಯ ಸಂದೇಶವನ್ನು ನೀಡಲು ಪ್ರತಿ ವರ್ಷ ಈ ದಿನವನ್ನು ವಿಶೇಷವಾಗಿ ಆಚರಣೆ ಮಾಡುತ್ತಾರೆ ಎಂದ ಪುರಸಭೆ ಮುಖ್ಯ ಅಧಿಕಾರಿ ಸರವಣ ಎಸ್. ಹೇಳಿದರು

ಪುರಸಭೆಯ ಅವರಣದಲ್ಲಿ ಮಹಿಳಾ ದಿನಾಚರಣೆ ಪ್ರಯುಕ್ತ ಪುರಸಭೆ ಸಿಬ್ಬಂದಿ ಮತ್ತು ಪೌರಕಾರ್ಮಿಕರ ಮಹಿಳಾ ಸಿಬ್ಬಂದಿಯೊಂದಿಗೆ ಮಹಿಳಾ ದಿನಾಚರಣೆಯನ್ನು ಸರಳವಾಗಿ ಆಚರಿಸಲಾಯಿತು.ನಂತರ ಮಾತನಾಡಿದ ಅವರು



ಪ್ರಸ್ತುತ ನಾಗರಿಕ ಪ್ರಪಂಚದಲ್ಲಿ ಮಹಿಳೆಯರ ಪಾತ್ರ ಬಹುದೊಡ್ಡದಾಗಿದೆ ಪ್ರತಿಯೊಂದು ಕ್ಷೇತ್ರದಲ್ಲೂ ಅವರು ಭಾಗವಹಿಸುವ ಮುಖಾಂತರ ಅವರ ಕೊಡುಗೆಯನ್ನು ಸಹ ನೀಡುತ್ತಿದ್ದಾರೆ ಆದರಿಂದ ಮಹಿಳೆಯರು ತಾಯಿಯಾಗಿ ಮಗಳಾಗಿ ತಂಗಿಯಾಗಿ ಅಕ್ಕ ಮತ್ತು ಹೆಂಡತಿಯಾಗಿ ನಮ್ಮ ಜೀವನದಲ್ಲಿ ಬಹುದೊಡ್ಡ ಪಾಲು ಅವರ ಸೇವೆಯನ್ನು ನೀಡುತ್ತಿದ್ದಾರೆ ಆದ್ದರಿಂದ ಪ್ರತಿಯೊಬ್ಬ ಪುರುಷರು ಮಹಿಳೆಯರನ್ನು ಗೌರವಿಸಬೇಕು ಮತ್ತು ಅವರ ಹಕ್ಕುಗಳನ್ನು ಜಾರಿ ಮಾಡಿ ಅವರ ಸ್ವಾತಂತ್ರ್ಯಕ್ಕೆ ಸಹಾಯ ಮಾಡಬೇಕು ಎಂದು ತಿಳಿಸಿದರು

ಈ ಸಂದರ್ಭದಲ್ಲಿ ಮಹಿಳಾ ಪೌರಕಾರ್ಮಿಕರಾದ ಮುತ್ತಮ್ಮ, ಬಣ್ಣಮ್ಮ, ಉಷಾ, ಶಾಂತಿ ಭಾಗ್ಯ ನೀಲಾವತಿ, ಚಾಮುಂಡಿ ಸಂಗೀತ ಹಾಗೂ ಪುರಸಭೆ ಮಹಿಳಾ ಸಿಬ್ಬಂದಿಯವರಾದ ಅನುಪಮ, ಸವಿತಾ, ಸುಷ್ಮಾ ಹೇಮಾ, ತ್ರಿವೇಣಿ, ಕಮಿಟಿ ಮೊಬೈಲಜಸ್ ಗಳಾದ ನಂದಿನಿ ಚಂದನ ಉಷಾ ಹಾಗೂ ಭವಾನಿ ಎಲ್ಲರೂ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಸರ್ವಜ್ಞ ಜಯಂತಿ ಕಾರ್ಯಕ್ರಮದಲ್ಲಿ ಶಾಸಕ ದರ್ಶನ್ ಧ್ರುವನಾರಾಯಣ ಹೇಳಿಕೆ

ಸರ್ವಜ್ಞರ ಸಂದೇಶ ಇಂದಿಗೂ ಜೀವಂತ

ನಂಜನಗೂಡು: ಕವಿ ಸರ್ವಜ್ಞರು ತಮ್ಮ ತ್ರಿಪದಿಗಳ ಮೂಲಕ ನೀಡಿರುವ ಸಾಮಾಜಿಕ ಸಂದೇಶಗಳು ಇಂದಿಗೂ ಜೀವಂತವಾಗಿವೆ. ಸರ್ವಜ್ಞರ ಸಾಮಾಜಿಕ ಸಂದೇಶಗಳು ಮತ್ತು ತತ್ವ ಸಿದ್ಧಾಂತಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಂಡಲ್ಲಿ ಆದರ್ಶವಾದ ಸಮಾಜ ನಿರ್ಮಿಸಲು ಸಹಕಾರಿಯಾಗಲಿದೆ ಎಂದು ಶಾಸಕ ದರ್ಶನ್ ಧ್ರುವನಾರಾಯಣ ಹೇಳಿದರು.

ಅವರು ನಗರದ ಕುಂಬಾರ ಸಮುದಾಯ ಭವನದಲ್ಲಿ ತಾಲೂಕು ಕುಲಾಲ ಬ್ರಹ್ಮಾಂಡ ಕುಂಬಾರ ಸಂಘದ ವತಿಯಿಂದ ಏರ್ಪಡಿಸಲಾಗಿದ್ದ ಸಂತ ಕವಿ ಸರ್ವಜ್ಞರ ಅದ್ದೂರಿ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಕವಿ ಸರ್ವಜ್ಞರು ವಿಶ್ವ ಕಂಡ ಮಹಾ ಕವಿ ಎನಿಸಿದ್ದಾರೆ, ಅವರು ತಮ್ಮ ತ್ರಿಪದಿ ವಚನ ಸಾಹಿತ್ಯದ ಮೂಲಕ ಸಮಾಜದ ಅಂಕುಡೊಂಕುಗಳನ್ನು ತಿದ್ದಿ ಎಲ್ಲರೂ ಒಂದೇ ಎಂಬ ಸಾಮಾಜಿಕ ಸಂದೇಶವನ್ನು ಸಾರಿ ಸಮ



ಸಮಾಜದ ನಿರ್ಮಾಣಕ್ಕೆ ಶ್ರಮಿಸಿದ್ದಾರೆ, ಅಲ್ಲದೆ ಜೀವನದ ಸಾರವನ್ನು ಸರಳವಾಗಿ ಜನರಿಗೆ ತಿಳಿಸಿದ ಪರಿಣಾಮ ಅವರ ತ್ರಿಪದಿಗಳು ಇಂದಿಗೂ ಜೀವಂತವಾಗಿವೆ, ಅವರು ಸಾರಿರುವ ತತ್ವ ಸಿದ್ಧಾಂತಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಂಡಲ್ಲಿ ಸಮ ಸಮಾಜದ ನಿರ್ಮಾಣ ಸಾಧ್ಯ ಎಂದರು.

ಮುಖ್ಯ ಭಾಷಣಕಾರರಾಗಿದ್ದ ಸರ್ಕಾರಿ ಅಭಿಯೋಜಕ ವಕೀಲ ರಾಜಣ್ಣ ಮಾತನಾಡಿ ಕವಿ ಸರ್ವಜ್ಞರು ಸುಮಾರು ರೂ.7020 ವಚನಗಳನ್ನು ರಚಿಸಿದ್ದು, ಕನ್ನಡ ಸಾಹಿತ್ಯ ಲೋಕಕ್ಕೆ ತಮ್ಮದೇ ಆದ ಕೊಡುಗೆಯನ್ನು ನೀಡಿದ್ದಾರೆ ಅವರ ಸಾಹಿತ್ಯದಲ್ಲಿ ಸಮಾಜ ಸುಧಾರಕ ನೀಗಳು ಅಡಕವಾಗಿವೆ ಎಂದರು.

ಅಧ್ಯಕ್ಷ ಮರಿಶೆಟ್ಟಿ ಮಾತನಾಡಿ ಕುಂಬಾರ ಸಮುದಾಯ ಆರ್ಥಿಕವಾಗಿ ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಬಹಳ ಹಿಂದುಳಿದ ಸಮಾಜವಾಗಿದ್ದು ಶಾಸಕರು ಸಮುದಾಯಕ್ಕೆ ಹೆಚ್ಚಿನ ಸವಲತ್ತುಗಳನ್ನು ನೀಡಿ ರಾಜಕೀಯ ಪ್ರಾತಿನಿಧ್ಯವನ್ನು ದೊರಕಿಸಿಕೊಟ್ಟು ಸಮುದಾಯವನ್ನು ಮುನ್ನೆಲೆಗೆ ತರಲು ಮುಂದಾಗಬೇಕು ಎಂದರು.

ತರಬೇತಿ ಕಾರ್ಯಾಗಾರದಲ್ಲಿ ಕ್ಷೇತ್ರ ಸಮನ್ವಯ ಅಧಿಕಾರಿ ವೆಂಕಟೇಶ್ ಅಭಿಪ್ರಾಯ

ಶಾಲೆಯ ಅಭಿವೃದ್ಧಿಗೆ ಎಲ್ಲರ ಸಹಕಾರ ಅಗತ್ಯ

ಕೆ.ಆರ್.ನಗರ: ಶಾಲೆಯ ಸರ್ವಾಂಗೀಣ ಅಭಿವೃದ್ಧಿಗೆ ಶಾಲಾಭಿವೃದ್ಧಿ ಸಮಿತಿಯೊಂದಿಗೆ ಪೋಷಕರು ಹಾಗೂ ಸಾರ್ವಜನಿಕರು ಸಹಕರಿದರೆ ಮಕ್ಕಳಿಗೆ ಗುಣಾತ್ಮಕ ಶಿಕ್ಷಣ ನೀಡಿ ಅವರಿಗೆ ಉತ್ತಮ ಭವಿಷ್ಯವನ್ನು ರೂಪಿಸಲಾಗುತ್ತದೆ ಎಂದು ಶಿಕ್ಷಣ ಇಲಾಖೆಯ ಕ್ಷೇತ್ರ ಸಮನ್ವಯ ಅಧಿಕಾರಿ ವೆಂಕಟೇಶ್ ಅಭಿಪ್ರಾಯಪಟ್ಟರು.

ತಾಲೂಕಿನ ಬ್ಯಾಡರಹಳ್ಳಿ ಕ್ಲಸ್ಟರ್ ವ್ಯಾಪ್ತಿಯ ಕಂಚುಗಾರ ಕೊಪ್ಪಲು ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ ಕ್ಲಸ್ಟರ್ ಮಟ್ಟದ ಎಸ್.ಡಿ.ಎಂ.ಸಿ. ಸದಸ್ಯರಿಗೆ ತರಬೇತಿ ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿದರು.

ಇತ್ತೀಚಿನ ದಿನಗಳಲ್ಲಿ ಶಾಲಾ ಅಭಿವೃದ್ಧಿ ಸಮಿತಿಗಳಲ್ಲಿ ರಾಜಕೀಯ ಹೆಚ್ಚಾಗಿದ್ದು, ಶೈಕ್ಷಣಿಕ ಪ್ರಗತಿಯ ಮೇಲೆ ಪರಿಣಾಮ ಬೀರುತ್ತಿದೆ' ಎಂದು ವಿಷಾದ ವ್ಯಕ್ತಪಡಿಸಿದ ಅವರು ಶಾಲಾಭಿವೃದ್ಧಿ ಸಮಿತಿ ಅವರು ಕಲಿಕಾ ಪ್ರಗತಿಗೆ ಮುಖ್ಯ ಶಿಕ್ಷಕರ ಜೊತೆ ಸಹಕರಿಸ ಬೇಕು ಹಾಗೇಯೇ ಶಾಲಾ ಅನುದಾನವನ್ನು ಸಮನ್ವಯ ಸಭೆ ನಡೆಸಿ ಶಾಲೆಯ ಅಭಿವೃದ್ಧಿಗೆ ಮುಂದಾಗ ಬೇಕು ಎಂದು



ಮಾಹತಿ ನೀಡಿದರು. ಶಾಲಾಭಿವೃದ್ಧಿ ಸಮಿತಿ ಉತ್ತಮ ಯೋಜನೆಗಳನ್ನು ರೂಪಿಸಿ ಶಾಲೆಗಳ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸಬೇಕು. ಹಾಗೇಯೇ ಶಾಲೆಗಳಲ್ಲಿ ಅಭಿವೃದ್ಧಿಯಲ್ಲಿ ಎಸ್ ಡಿಎಂಸಿ ಪಾತ್ರ ಬಹಳ ಮಹತ್ವವಾದದು, ಹಾಗಾಗಿ ಸದಸ್ಯರು ಸೇವಾ ಮನೋಭಾವದಿಂದ ಕೆಲಸ ಮಾಡಬೇಕು' ಎಂದು ಸಲಹೆ ನೀಡಿದರು.

'ಸಮಿತಿ ಸದಸ್ಯರು ಸ್ಥಳೀಯ ದಾನಿಗಳನ್ನು ಗುರುತಿಸಿ ಅವರಿಂದ ಶಾಲಾ ಅಭಿವೃದ್ಧಿಗೆ ನೆರವು ಪಡೆಯಬೇಕು. ಮಕ್ಕಳ ಶೈಕ್ಷಣಿಕ ಪ್ರಗತಿಗೆ ಸರ್ಕಾರಿ ಜಾರಿಗೆ ತಂದಿರುವ ಯೋಜನೆಗಳ ಕುರಿತು ಪೋಷಕರಿಗೆ ಅರಿವು ಮೂಡಿಸಬೇಕು' ಎಂದು ಹೇಳಿದರು.

ಎಸ್‌ಡಿಎಂಸಿ ರಚನೆ, ಅಧಿಕಾರ ಮತ್ತು ಕರ್ತವ್ಯಗಳು, ಸರ್ಕಾರದ ಪ್ರೋತ್ಸಾಹದಾಯಕ ಕಾರ್ಯಕ್ರಮಗಳು, ಶಿಕ್ಷಣದ ಸಾರ್ವತ್ರೀಕರಣದಲ್ಲಿ ಪೂರ್ವ ಪ್ರಾಥಮಿಕ ಶಿಕ್ಷಣದ ಮಹತ್ವ, ರೂಪುರೇಷೆಗಳು, ಶಿಕ್ಷಕರ ತರಬೇತಿಗಳು, ಅನುಪಾಲನೆ, ಶಿಕ್ಷಣದ ಸಾರ್ವತ್ರೀಕರಣಕ್ಕಾಗಿ ಸರ್ಕಾರದ ಮಹತ್ವಾಕಾಂಕ್ಷೆಯ ಕಾರ್ಯಕ್ರಮಗಳು, ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾನೀತಿ, ಶಾಲಾಭಿವೃದ್ಧಿಯೋಜನೆಶಾಲೆಗಳಲ್ಲಿಸಾಮಾಜಿಕಲೆಕ್ಕ ಪರಿಶೋಧನೆ ಕುರಿತು ತರಬೇತಿ ಕಾರ್ಯಾಗಾರದಲ್ಲಿ ಸಂಪೂರ್ಣ ಮಾಹಿತಿ ನೀಡಿದರು.

ಕಿರುಸುದ್ದಿ

ರಸಪ್ರಶ್ನೆ, ರಂಗೋಲಿ, ಮಾದರಿ ಪ್ರದರ್ಶನ ಸ್ಪರ್ಧೆ

• **ಪಾಂಡವಪುರ:** ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ವಿಜ್ಞಾನ ವೇದಿಕೆಯಿಂದ ರಾಷ್ಟ್ರೀಯ ವಿಜ್ಞಾನ ದಿನಾಚರಣೆಯನ್ನು ಆಚರಿಸಲಾಯಿತು.ರಾಷ್ಟ್ರೀಯ ವಿಜ್ಞಾನ ದಿನಾಚರಣೆ ಅಂಗವಾಗಿ ರಸಪ್ರಶ್ನೆ, ರಂಗೋಲಿ, ಮಾದರಿ ಪ್ರದರ್ಶನ ಮುಂತಾದ ಸ್ಪರ್ಧೆಗಳನ್ನು ಏರ್ಪಡಿಸಲಾಗಿತ್ತು. ವಿಜೇತರಾದ ವಿದ್ಯಾರ್ಥಿಗಳಿಗೆ ಕಾರ್ಯಕ್ರಮದಲ್ಲಿ ಬಹುಮಾನ ವಿತರಿಸಲಾಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಪ್ರಾಂಶುಪಾಲ ಡಾ.ಎಚ್.ಎಸ್.ಮಧುಸೂದನ್ ವಹಿಸಿದ್ದರು. ಕಾಲೇಜಿನ ಐಕ್ಯೂಎ.ಸಿ.ಸಂಚಾಲಕ ಡಾ.ಟಿ.ಆರ್. ತ್ರಿಣೇಶ್, ಪ್ರಾಧ್ಯಾಪಕರು ಹಾಗೂ ವಿಜ್ಞಾನ ವಿಭಾಗದ ಡಾ.ಎಚ್.ಡಿ.ಕವಿತಾ, ವಿ.ಆಶಾ, ಬಿ.ಎನ್. ಮಹೇಶ್,ಶ್ರುತಿ ಇನ್ನು ಮುಂತಾದ ಪ್ರಾಧ್ಯಾಪಕರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.. ಇದೇ ವೇಳೆ ಭೂಗೋಳ ಶಾಸ್ತ್ರ ವಿಭಾಗದ ವತಿಯಿಂದ ಮಾದರಿ ಪ್ರದರ್ಶನಗಳನ್ನು ಪ್ರದರ್ಶಿಸಲಾಯಿತು. ವಿಭಾಗದ ಡಾ.ಬಿ.ಪಿ.ದೀಪು ಹಾಗೂ ಉಪನ್ಯಾಸಕ ಡಾ.ತಿರುಮಲಯ್ಯ ಹಾಜರಿದ್ದರು. ಈ ಕಾರ್ಯಕ್ರಮದ ಕೇಂದ್ರಬಿಂದುಗಳಾಗಿರುವ ಬಿಎಸ್‌ಸಿ ವಿದ್ಯಾರ್ಥಿಗಳಾದ ಸೌಂದರ್ಯ ಮತ್ತು ಮಾನಸ ನಿರೂಪಣೆಯನ್ನು ಮಾಡಿದರು ಪ್ರಕೃತಿ, ಇಂದ್ರ ಹಾಗೂ ನಿಸರ್ಗ ಉಪಸ್ಥಿತರಿರುವ ಪ್ರಾಧ್ಯಾಪಕರನ್ನು ಸ್ವಾಗತಿಸಿದರು ಬಹುಮಾನ ವಿತರಣೆಯನ್ನು ನಿರೂಪಿಸಿದ್ದ ವೈಭವ ರಾಜೇಶ್ ಹಾಗೂ ಅಂಥೋಣಿ ರಾಜ್ ವಂದನಾರ್ಪಣೆಯನ್ನು ನಿರ್ವಹಿಸಿದರು.

ಸಾರ್ವಜನಿಕರ ಗಮನಸೆಳೆದ ವಿಶೇಷ ರಾಶಿಪೂಜೆ



• **ಮಂಡ್ಯ:** ತಾಲೂಕಿನ ಕೊತ್ತತ್ತಿ ಗ್ರಾಮದಲ್ಲಿ ರಾಶಿಪೂಜೆ, ಗೋಪೂಜೆ, ಭೂಮಿ ಪೂಜೆ, ಸತ್ಸಂಗ ಕಾರ್ಯಕ್ರಮ ವಿಶೇಷ ರೀತಿಯಲ್ಲಿ ಸಜ್ಜುಗೊಳಿಸುವ ಮೂಲಕ ಸಾರ್ವಜನಿಕರ ಗಮನ ಸೆಳೆಯಿತು. ಗ್ರಾಮದ ಮುಖ್ಯ ದ್ವಾರದಿಂದಲೇ ತಳಿರು ತೋರಣಗಳಿಂದ ಸಿಂಗರಿಸಲಾಗಿತ್ತು. ಬ್ಯಾನರ್ ಬಂಟಿಂಗ್‌ಗಳು ರಾರಾಜಿಸುತ್ತಿದ್ದವು. ಗ್ರಾಮದ ಮುಖ್ಯ ವೃತ್ತದಿಂದ ಶ್ರೀಗಳನ್ನು ವೇದಿಕೆವರೆಗೆ ಪೂರ್ಣಕುಂಭ ಸ್ವಾಗತದೊಂದಿಗೆ ಎತ್ತಿನ ಗಾಡಿಯಲ್ಲಿ ಮೆರವಣಿಗೆಯಲ್ಲಿ ಕರೆತಂದಿದ್ದು ವಿಶೇಷವಾಗಿತ್ತು. ವೇದಿಕೆಯ ಪಕ್ಕದಲ್ಲಿ ಶ್ರೀ ಮಠಕ್ಕೆ ಅರ್ಪಿಸುವ ಧವಸ-ಧಾನ್ಯ, ಬೆಲ್ಲ, ತೆಂಗಿನ ಕಾಯಿ ಸೇರಿದಂತೆ ವಿವಿಧ ಧಾನ್ಯಗಳನ್ನು ರಾಶಿಯಲ್ಲಿಟ್ಟು ಅಲಂಕರಿಸಲಾಗಿತ್ತು, ಸುತ್ತಲೂ ಕೃಷಿ ಪರಿಕರಗಳು, ರೈತರು ಉಪಯೋಗಿಸುವ ಟಿಲ್ಲರ್, ಟ್ರ್ಯಾಕ್ಟರ್‌ಗಳು ಒಂದು ಬದಿಯಲ್ಲಿದ್ದರೆ, ಮತ್ತೊಂದು ಬದಿಯಲ್ಲಿ ಶೃಂಗರಿಸಿದ ಎತ್ತಿನ ಗಾಡಿಗಳನ್ನು ಸಾಲಾಗಿ ಜೋಡಿಸಿ ನಿಲ್ಲಿಸಲಾಗಿತ್ತು. ಮತ್ತೊಂದು ಬದಿಯಲ್ಲಿ ಕಟ್ಟುಮಸ್ತಾದ ರಾಸುಗಳನ್ನು ಕಟ್ಟಿಹಾಕಲಾಗಿತ್ತು. ಶ್ರೀಗಳು ಇದನ್ನು ಕಂಡು ಮೆಚ್ಚುಗೆ ವ್ಯಕ್ತಪಡಿಸಿದರು. ಮೊದಲು ಗೋಪೂಜೆ ನೆರವೇರಿಸಿದ ಶ್ರೀಗಳು, ನಂತರ ಭೂಮಿಪೂಜೆ, ಮತ್ತು ರಾಶಿಪೂಜೆ ನಡೆಸಿ ವಿಶೇಷ ಪೂಜೆ ಸಲ್ಲಿಸಿ ಸ್ವೀಕಾರ ಮಾಡಿದರು. ವೇದಿಕೆಗೆ ಆಗಮಿಸಿದ ಶ್ರೀಗಳಿಗೆ ಶ್ರೀಮಠದ ವಿದ್ಯಾರ್ಥಿಗಳ ಭಕ್ತಿ ಗೀತೆಗಳ ಸಿಂಚನ, ವೇದಘೋಷಗಳನ್ನು ಮೊಳಗಿಸಿದರು. ನಂತರ ಶ್ರೀ ಬಾಲಗಂಗಾಧರನಾಥ ಸ್ವಾಮೀಜಿಗಳ ಭಾವ ಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಸಹಸ್ರಾರು ಮಂದಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಮಾ.23ಕ್ಕೆ ಬಲಿದಾನ ದಿವಸ್ ಕಾರ್ಯಕ್ರಮ

• **ಮಂಡ್ಯ:** ಹಿಂದೂಪರ ಸಂಘಟನೆಗಳ ಒಕ್ಕೂಟ, ಮದ್ದೂರು ತಾಲೂಕು ವತಿಯಿಂದ ಮಾ. 23ರಂದು ಸಂಜೆ 4 ಗಂಟೆಗೆ ಮದ್ದೂರಿನ ಹಳೇ ಬಸ್ ನಿಲ್ದಾಣದ ಆವರಣದಲ್ಲಿ ಬಲಿದಾನ ದಿವಸ್ ಕಾರ್ಯಕ್ರಮ ನಡೆಯಲಿದೆ. ವಿಶ್ವ ಒಕ್ಕಲಿಗರ ಮಠದ ಶ್ರೀ ನಿಶ್ಚಲಾನಂದನಾಥ ಸ್ವಾಮೀಜಿ ಅವರು ಅಧ್ಯಕ್ಷತೆ ವಹಿಸುವರು. ಸ್ವರ್ಣನೃಸಿಂಹದತ್ತಸಾಯಿ ಪೀಠಿಕಾ ಸೇವಾ ಟ್ರಸ್ಟ್‌ನ ಗುರುಮಹಾರಾಜರು ಶ್ರೀ ಅರ್ಜುನ ಅವಧೂತ ಅವರು ಪ್ರಾಸ್ತಾವಿಕವಾಗಿ ಮಾತನಾಡುವರು. ವಿಜಯಪುರನಗರ ವಿಧಾನ ಸಭಾಕ್ಷೇತ್ರದ ಶಾಸಕ ಬಸವನ ಗೌಡ ಪಾಟೀಲ ಯತ್ನಾಳ್ ಮುಖ್ಯ ಭಾಷಣ ಮಾಡುವರು. ಕಾರ್ಕಳದ ವಾಗ್ಮಿ ಶ್ರೀಕಾಂತ್ ಶೆಟ್ಟಿ ಅವರು ದಿಕ್ಸೂಚಿ ಭಾಷಣ ಮಾಡುವರು. ಕಾರ್ಯಕ್ರಮಕ್ಕೂ ಮುನ್ನ ಪಟ್ಟಣದ ಟಿ.ಬಿ.ವೃತ್ತದಿಂದ ಶೋಭಯಾತ್ರೆ ಹಮ್ಮಿಕೊಳ್ಳಲಾಗಿದ್ದು, ಹೆಚ್ಚಿನ ಸಂಖ್ಯೆಯಲ್ಲಿ ಸಾರ್ವಜನಿಕರು ಭಾಗವಹಿಸುವಂತೆ ನವೀನ್ ಅವರು ಮನವಿ ಮಾಡಿದ್ದಾರೆ.



ಪಟ್ಟಣದ ಬಿ.ಇ.ಓ ಕಚೇರಿಯ ಕಾಂಪೌಂಡ್ ಗೋಡೆಯಲ್ಲಿ ಎಸ್.ಎಸ್.ಎಲ್.ಸಿ ಪರೀಕ್ಷೆ ಸಂಬಂಧ ಗೋಡೆ ಬರಹಗಾರ ತೂಬಿನಕೆರೆ ಗೋವಿಂದು ಭಿತ್ತಿ ಚಿತ್ರ ಬರೆದು ವಿದ್ಯಾರ್ಥಿಗಳಿಗೆ ಜಾಗೃತಿ ಮೂಡಿಸಿದರು.

ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳಿಗೆ ಜಾಗೃತಿ

• **ಮದ್ದೂರು:** ಪ್ರಸಕ್ತ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ವಿದ್ಯಾರ್ಥಿಗಳು ನಿರ್ಭೀತಿಯಿಂದ ಪರೀಕ್ಷೆ ಬರೆಯಲೆಂಬ ಉದ್ದೇಶದಿಂದ ಗೋಡೆ ಬರಹಗಾರ, ಜಾಗೃತಿ ಕಲಾವಿದ ತೂಬಿನಕೆರೆ ಗೋವಿಂದು ಕಾಂಪೌಂಡ್ ಗೋಡೆಗಳ ಮೇಲೆ ಭಿತ್ತಿ ಚಿತ್ರಗಳನ್ನು ಬರೆದು ಜಾಗೃತಿ ಮೂಡಿಸಿದರು.ಪಟ್ಟಣದ ಬಿ.ಇ.ಓ ಕಚೇರಿಯ ಕಾಂಪೌಂಡ್ ಗೋಡೆಗೆ ಜಾಗೃತಿ ಕಲಾವಿದ ತೂಬಿನಕೆರೆ ಗೋವಿಂದು ''ಎಸ್.ಎಸ್.ಎಲ್.ಸಿ ಪರೀಕ್ಷೆ ಸಂಭ್ರಮ'' ಪರೀಕ್ಷೆ ಭಯವಿಲ್ಲ, ಎದೆಗೆ ಬಿದ್ದ ಅಕ್ಷರ ಫಲ ಕೊಡುವುದು, ಭೂಮಿಗೆ ಬಿದ್ದ ಬೀಜ ಫಲ ಕೊಡುವುದನ್ನು ಮರೆಯುವುದಿಲ್ಲ ಭಯ ಬಿಡಿ ನಿರ್ಭಯವಾಗಿ ಪರೀಕ್ಷೆ ಬರಿ, ಶಿಕ್ಷಣವೇ ಶಕ್ತಿ ಎಂಬ ಎಂಬ ಘೋಷ ವಾಕ್ಯಗಳನ್ನು ಬರೆದು ವಿದ್ಯಾರ್ಥಿಗಳಿಗೆ ಧೈರ್ಯ ತುಂಬಿದರು.

ಮಾರ್ಚ್ 18 ರಿಂದ ಪ್ರಾರಂಭವಾಗುವ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ವಿದ್ಯಾರ್ಥಿಗಳು ಯಾವುದೇ ಆತಂಕಕ್ಕೆ ಒಳಗಾಗದೆ ಮತ್ತು ಪೋಷಕರು ಹೆಚ್ಚಿನ ಒತ್ತಡ ಹೇರದೆ ನಿರ್ಭೀತಿಯಿಂದ ಮತ್ತು ಆತ್ಮ ವಿಶ್ವಾಸದಿಂದ ಪರೀಕ್ಷೆ ಬರೆಯಲೆಂಬ ಉದ್ದೇಶದಿಂದ ಸಾರ್ವಜನಿಕರ ಸ್ಥಳಗಳಲ್ಲಿ ಇಂತಹ ಜಾಗೃತಿ ಬರಹಗಳನ್ನು ಬರೆದು ಜಾಗೃತಿ ಮೂಡಿಸುತ್ತಿರುವುದಾಗಿ ತೂಬಿನಕೆರೆ ಗೋವಿಂದು ಪತ್ರಿಕೆಗೆ ತಿಳಿಸಿದರು.

ಬಿಇಒ ಎಸ್.ಬಿ.ಧನಂಜಯ ಮಾತನಾಡಿ, ವಿದ್ಯಾರ್ಥಿಗಳು ಪರೀಕ್ಷೆಯನ್ನು ಹಬ್ಬದಂತೆ ಆಚರಿಸಬೇಕೆ ಹೊರತು ಯಾವುದೇ ಒತ್ತಡ ಆತಂಕಕ್ಕೆ ಒಳಗಾಗದೆ ಆತ್ಮವಿಶ್ವಾಸದ ದೃಢ ನಿರ್ಧಾರದೊಂದಿಗೆ ಪರೀಕ್ಷೆ ಬರೆದು ಉತ್ತೀರ್ಣರಾಗಬೇಕೆಂದು ಹೇಳಿದರು.



ಶ್ರೀರಂಗಪಟ್ಟಣದ ಪ್ರವಾಸಿ ಮಂದಿರದಲ್ಲಿ ನಡೆದ ಕಾರ್ಯಕ್ರಮದಲ್ಲಿ ಕಾರ್ಯನಿರತ ಪತ್ರಕರ್ತ ಸಂಘದ ತಾಲೂಕು ಘಟಕದ ಅಧ್ಯಕ್ಷರಾಗಿ ಜಿ.ಎನ್.ರವೀಶಗೌಡ ಅಧಿಕಾರ ಸ್ವೀಕರಿಸಿದರು.

123.62 ಕೋಟಿ ರೂ. ವೆಚ್ಚದ ಆಯವ್ಯಯ | ಚೊಚ್ಚಲ ಬಜೆಟ್ ಮಂಡಿಸಿದ ಆಡಳಿತಾಧಿಕಾರಿ ಡಾ.ಕುಮಾರ

ನಗರಸಭೆ ಉಳಿತಾಯ ಬಜೆಟ್ ಮಂಡನೆ

• **ಮಂಡ್ಯ:** ನಗರಸಭೆಯ 2025-226ನೇ ಸಾಲಿನ ಪರಿಷ್ಕೃತ ಹಾಗೂ 2026-27ನೇ ಸಾಲಿನ ಅಂದಾಜು 123.62 ಕೋಟಿ ರೂ. ವೆಚ್ಚದ ಆಯವ್ಯಯವನ್ನು ಆಡಳಿತಾಧಿಕಾರಿಯೂ ಆದ ಜಿಲ್ಲಾಧಿಕಾರಿ ಡಾ.ಕುಮಾರ ಅವರು ಸೋಮವಾರ ಮಂಡಿಸಿದರು.

ನಗರಸಭೆಯ ಧರಣಪ್ಪ ಸಭಾಂಗಣದಲ್ಲಿ ಸೋಮವಾರ ನಡೆದ ಆಯವ್ಯಯ ಮಂಡನೆ ಸಭೆಯಲ್ಲಿ 2026-27ನೇ ಸಾಲಿಗೆ ತಮ್ಮ ಚೊಚ್ಚಲ ಬಜೆಟ್ ಮಂಡಿಸಿದ ಆಡಳಿತಾಧಿಕಾರಿ ಡಾ.ಕುಮಾರ ಅವರು, ಒಟ್ಟು 123,62,52,848 ಕೋಟಿ ರೂ.ಗಳ ಬಜೆಟ್ ಮಂಡಿಸಿ, 2,51,87,848 ರೂ. ಉಳಿತಾಯ ಬಜೆಟ್ ಮಂಡಿಸಿದಾಗ ಶಾಸಕ ಪಿ.ರವಿಕುಮಾರ್‌ಗೌಡ ಸೇರಿದಂತೆ ಎಲ್ಲ ಅಧಿಕಾರಿಗಳು ಮೇಜು ಕುಟ್ಟಿ ಅಭಿನಂದಿಸಿದರು.

ಆಯವ್ಯಯದ ಸಾರಾಂಶ: ಮಂಡ್ಯ ನಗರಸಭೆಯ 2025-26ನೇ ಸಾಲಿನ ಆರಂಭಿಕ ಶಿಲ್ಕು 22,83,29,425 ರೂ. ಹಾಗೂ 2026-27ನೇ ಸಾಲಿಗೆ ನಗರಸಭೆಯ ಸ್ವಂತ ಸಂಪನ್ಮೂಲಗಳಿಂದ ನಿರೀಕ್ಷಿತ ಆದಾಯ 29.32,07,000 ರೂ., ಸರ್ಕಾರಕ್ಕೆ ಪಾವತಿಸಬೇಕಾದ ತೆರಿಗೆಗಳು ಮತ್ತು ಕರಗಳ ಬಾಬ್ತು 10,56,60,000 ರೂ. ಹಾಗೂ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಂದ ನಿರೀಕ್ಷಿತ ಅನುದಾನಗಳು 68,10,23,000 ರೂ. ಸೇರಿ ಒಟ್ಟು 123,62,52,848 ರೂ.ಗಳ ಬಜೆಟ್‌ನಲ್ಲಿ 2026-27ನೇ ಸಾಲಿಗೆ ನೌಕರರ ವೇತನ, ನಿರ್ವಹಣಾ ವೆಚ್ಚಗಳು, ಬಂಡವಾಳ ಕಾಮಗಾರಿಗಳು, ಕಲ್ಯಾಣ ಕಾರ್ಯಕ್ರಮಗಳು ಮತ್ತು ಸರ್ಕಾರಕ್ಕೆ ಪಾವತಿಸಬೇಕಾದ ಕರಗಳು ಹಾಗೂ ಶಾಸನಬದ್ಧ ತೆರಿಗೆಗಳು ಸೇರಿದಂತೆ ಒಟ್ಟಾರೆ ಖರ್ಚು ಕಳೆದು 2,51,87,848 ರೂ. ಗಳ ಉಳಿತಾಯ ಬಜೆಟ್ ಮಂಡಿಸಿದರು.

ಪ್ರಮುಖ ಆದಾಯ ನಿರೀಕ್ಷೆಗಳು: ತೆರಿಗೆ ಆದಾಯಗಳು: ಆಸ್ತಿ ತೆರಿಗೆ, ದಂಡ, ಕರಗಳ ಸಂಗ್ರಹಣ ಶುಲ್ಕದಿಂದ 2090 ಲಕ್ಷ.

ತೆರಿಗೆಯೇತರ ಆದಾಯಗಳು: ಅಭಿವೃದ್ಧಿ ಮತ್ತು ಬೆಟರ್ ಮೆಂಟ್ ಶುಲ್ಕಗಳ ಸಂಗ್ರಹಣೆಯಿಂದ 155 ಲಕ್ಷ, ಘನ ತ್ಯಾಜ್ಯ ವಸ್ತು ನಿರ್ವಹಣೆ ಶುಲ್ಕ ಸಂಗ್ರಹಣೆಯಿಂದ 200 ಲಕ್ಷ, ಮಳಿಗೆಗಳ ಠೇವಣಿ, ಬಾಡಿಗೆ ಮತ್ತು ದಂಡ ವಸೂಲಿ ಸಂಗ್ರಹಣೆಯಿಂದ



129 ಲಕ್ಷ, ಒಳಚರಂಡಿ ಸಂಪರ್ಕ ಮತ್ತು ಬಳಕೆದಾರರ ಶುಲ್ಕ ಸಂಗ್ರಹಣೆಯಿಂದ 46.50 ಲಕ್ಷ, ಉದ್ದಿಮೆ ಪರವಾನಗಿ ಶುಲ್ಕ ಮತ್ತು ಉದ್ದಿಮೆ ಪರವಾನಗಿ ಮೇಲಿನ ದಂಡ ಸಂಗ್ರಹಣೆಯಿಂದ 52 ಲಕ್ಷ, ಅನುಪಯುಕ್ತ ವಸ್ತುಗಳ ಮಾರಾಟದಿಂದ 26 ಲಕ್ಷ, ರಸ್ತೆ ಅಗೆತ ಮತ್ತು ಪುನಸ್ಥಾಪನೆ ಶುಲ್ಕ ಸಂಗ್ರಹಣೆಯಿಂದ 52 ಲಕ್ಷ, ಖಾತಾ ಬದಲಾವಣೆ ಶುಲ್ಕಗಳ ಸಂಗ್ರಹಣೆಯಿಂದ 32 ಲಕ್ಷ, ನಗರಸಭೆ ವಸತಿ ಗೃಹಗಳು ಹಾಗೂ ನಗರಸಭೆ ಹಳೇ ಕಚೇರಿ ಕಟ್ಟಡ ಬಾಡಿಗೆಯಿಂದ 25 ಲಕ್ಷ, ಕಟ್ಟಡ ಪರವಾನಗಿ ಶುಲ್ಕ ಸಂಗ್ರಹಣೆಯಿಂದ 34.15 ಲಕ್ಷ, ಇತರೆ ಪ್ರಮಾಣ ಪತ್ರಗಳು, ದಂಡ ಹಾಗೂ ಶುಲ್ಕಗಳಿಂದ 27.20 ಲಕ್ಷ, ರಾಜ್ಯ ಸರ್ಕಾರದಿಂದ ಸಂಗ್ರಹಿಸಲ್ಪಟ್ಟ ಸ್ಟ್ಯಾಂಪ್ ಶುಲ್ಕದ ಸರ್ ಚಾರ್ಜ್‌ನಿಂದ 15 ಲಕ್ಷ, ಬ್ಯಾಂಕ್ ಖಾತೆಗಳ ಮೇಲಿನ ಬಡ್ಡಿ ಸಂಗ್ರಹಣೆಯಿಂದ 35 ಲಕ್ಷ, ಜಾಹಿರಾತು ಶುಲ್ಕದಿಂದ 5 ಲಕ್ಷ, ಟ್ಯಾಕ್ಸಿ ನಿಲ್ದಾಣ, ಖಾಸಗಿ ಬಸ್ ನಿಲ್ದಾಣ, ನೆಲ ಬಾಡಿಗೆ, ಕಸಾಯಿ ಖಾನೆ ಶುಲ್ಕ ಸಂಗ್ರಹಣೆಯಿಂದ 5.75 ಲಕ್ಷ, ಸಾರ್ವಜನಿಕ ಶೌಚಾಲಯಗಳ ನಿರ್ವಹಣೆ ಶುಲ್ಕದಿಂದ 2.47 ಲಕ್ಷ.

ಇದಲ್ಲದೆ, ರಾಜ್ಯ ಸರ್ಕಾರದಿಂದ 49,19,68,000 ಹಾಗೂ ಕೇಂದ್ರ ಸರ್ಕಾರದಿಂದ 18,90,54,000 ರೂ. ನಿರೀಕ್ಷಿತ ಅನುದಾನ ಸೇರಿದೆ ಎಂದರು.

ಪ್ರಮುಖ ವೆಚ್ಚಗಳು: ನಗರಸಭೆ ವ್ಯಾಪ್ತಿಯಲ್ಲಿ ಇತರೆ ಇಲಾಖೆಗಳ ವತಿಯಿಂದ ಕಾಮಗಾರಿಗಳನ್ನು ಕೈಗೊಳ್ಳಲು ಉದ್ದೇಶಿಸಲಾಗಿದ್ದು, ಮುಖ್ಯಮಂತ್ರಿಗಳ ಮೂಲ ಸೌಕರ್ಯಗಳ ಅಭಿವೃದ್ಧಿ ಅನುದಾನದಲ್ಲಿ 50 ಕೋಟಿ ರೂ. ಮಂಡ್ಯ ವಿಧಾನಸಭಾ ಕ್ಷೇತ್ರಕ್ಕೆ ಮಂಜೂರಾಗಿದ್ದು, ಈ ಹಣದಲ್ಲಿ ನಗರಸಭೆಗೆ 10 ಕೋಟಿ ರೂ.ಗಳನ್ನು ಮಂಡ್ಯ ನಗರದ ಪ್ರಮುಖ ವೃತ್ತಗಳನ್ನು ಆಧುನಿಕ ಮಾದರಿಯಲ್ಲಿ ಅಭಿವೃದ್ಧಿಪಡಿಸಲು, ಮಂಡ್ಯ ನಗರದ ಬೀದಿ ಬದಿ ವ್ಯಾಪಾರಿಗಳಿಗೆ ಮಳಿಗೆಗಳನ್ನು ನಿರ್ಮಾಣ, ರಸ್ತೆಗಳ ಅಭಿವೃದ್ಧಿ ಹಾಗೂ ಕನ್ನಡ ಭವನ ನಿರ್ಮಾಣ ಮಾಡಲು ಉದ್ದೇಶಿಸಲಾಗಿದೆ ಎಂದು ವಿವರಿಸಿದರು.

ನಾಲ್ವಡಿ ಕೃಷ್ಣರಾಜ ಒಡೆಯರ್ ಕಲಾಮಂದಿರ ರಸ್ತೆಯಲ್ಲಿ ಫುಟ್‌ಪಾತ್ ವ್ಯಾಪಾರಿಗಳಿಗೆ 50 ಲಕ್ಷ ವೆಚ್ಚದಲ್ಲಿ ವ್ಯಾಪಾರ ಮಳಿಗೆಗಳ ನಿರ್ಮಾಣ. ವಾರ್ಡ್ ನಂ.5ರ ಅಡ್ಡ ರಸ್ತೆಗಳ ಅಭಿವೃದ್ಧಿಗೆ 50 ಲಕ್ಷ, ವಾರ್ಡ್ ನಂ. 8ರ ಅಭಿವೃದ್ಧಿಗೆ 50 ಲಕ್ಷ, ವಾರ್ಡ್ ನಂ.9, 19, 12, ಬೆಸಗರಹಳ್ಳಿ ರಾಮಣ್ಣ ವೃತ್ತದಿಂದ ಎಂಡಿಸಿವರೆಗೆ ರಸ್ತೆ ಅಭಿವೃದ್ಧಿ, ಹೊಸಹಳ್ಳಿ ವೆಂಕಟೇಶ್ವರ್ ದೇವಸ್ಥಾನದಿಂದ ಕಾವೇರಿ ನಗರಕ್ಕೆ ಹೋಗುವ ರಸ್ತೆ ಅಭಿವೃದ್ಧಿ, ವಾರ್ಡ್ ನಂ. 26, 15, 19, 25ರಲ್ಲಿ ರಸ್ತೆಗಳು ಹಾಗೂ ಉದ್ಯಾನಗಳ ಅಭಿವೃದ್ಧಿಗೆ 4.28 ಕೋಟಿ ರೂ.ಗಳು, ಷುಗರ್ ಫ್ಯಾಕ್ಟರ್ ವೃತ್ತದ ಅಭಿವೃದ್ಧಿಗೆ 145.64 ಲಕ್ಷ, ಹೊಸಹಳ್ಳಿ ವೃತ್ತದ ಅಭಿವೃದ್ಧಿಗೆ 147.75 ಲಕ್ಷ, ಹೊಳಲು ವೃತ್ತದ ಅಭಿವೃದ್ಧಿಗೆ 48 ಲಕ್ಷ, ಜಯಚಾಮರಾಜೇಂದ್ರ ಒಡೆಯರ್ ವೃತ್ತದ ಅಭಿವೃದ್ಧಿಗೆ 45 ಲಕ್ಷ ರೂ. ಮೀಸಲಿರಿಸಲಾಗಿದೆ ಎಂದು ವಿವರಿಸಿದರು.

ಸಭೆಯಲ್ಲಿ ಶಾಸಕ ಪಿ.ರವಿಕುಮಾರ್‌ಗೌಡ, ಪೌರಾಯುಕ್ತರಾದ ಯು.ಪಿ. ಪಂಪಾಶ್ರೀ, ಜಿಲ್ಲಾ ನಗರಾಭಿವೃದ್ಧಿ ಕೋಶ ಯೋಜನಾ ನಿರ್ದೇಶಕ ಟಿ.ಎನ್.ನರಸಿಂಹಮೂರ್ತಿ ಭಾಗವಹಿಸಿದ್ದರು.


ಮಾದರಿ ರಸ್ತೆಗಳ ನಿರ್ಮಾಣ

ರಾಜ್ಯ ಸರ್ಕಾರದ ನಗರ ಭೂ ಸಾರಿಗೆ ನಿರ್ದೇಶನಾಲಯದಿಂದ ಮಂಜೂರಾಗಿರುವ ಅನುದಾನ ಮತ್ತು ನಗರಸಭೆಯ ವಂತಿಕೆಯ ಮೊತ್ತ ಸೇರಿ 640.80 ಲಕ್ಷ ಅನುದಾನದಲ್ಲಿ ಬನ್ನೂರು ರಸ್ತೆಯನ್ನು ಆಧುನಿಕವಾಗಿ ಪಾದಾಚಾರಿ ರಸ್ತೆ ಹಾಗೂ ಸೈಕಲ್ ಟ್ರ್ಯಾಕ್ ನಿರ್ಮಾಣ ಮಾಡಿ ಅಭಿವೃದ್ಧಿಪಡಿಸಲು ಉದ್ದೇಶಿಸಲಾಗಿದೆ. ನಗರ ಭೂ ಸಾರಿಗೆ ನರ್ದೇಶನಾಲಯ ಮತ್ತು ಮಂಡ್ಯ ನಗರಸಭೆಯ ಸಹಭಾಗಿತ್ವದಲ್ಲಿ 4 ಕೋಟಿ ರೂ. ಗಳಲ್ಲಿ ವಿ.ವಿ. ರಸ್ತೆಯನ್ನು 'ವಾಹನ ಮುಕ್ತ ವಲಯ' ಮಾಡಿ ಸಾರ್ವಜನಿಕರಿಗೆ ಅನುಕೂಲವಾಗುವ ರೀತಿಯಲ್ಲಿ ವಿದೇಶಿ ಮಾದರಿಯಲ್ಲಿ ಅಭಿವೃದ್ಧಿಪಡಿಸಿ ವ್ಯಾಪಾರಿಗಳಿಗೆ ಅನುಕೂಲ ಮಾಡಿಕೊಡಲಾಗುವುದು.

ಹಸಿರು ಮಂಡ್ಯ

ನಗರದ ಮೈಸೂರು-ಬೆಂಗಳೂರು ಮುಖ್ಯ ರಸ್ತೆಯಲ್ಲಿ ನಗರದ ಸೌಂದರ್ಯೀಕರಣ ಹೆಚ್ಚಿಸಲು ಫುಟ್‌ಪಾತ್‌ನ ಎರಡೂ ಇಕ್ಕೆಲಗಳಲ್ಲಿ ಆಕರ್ಷಕ ಅಲಂಕಾರಿಕ ಗಿಡಗಳನ್ನು ನೆಟ್ಟು ಪೋಷಿಸಲು 30 ಲಕ್ಷ ನಿಗದಿಪಡಿಸಲಾಗಿದೆ. ಅಮೃತ್ 2.0 ಯೋಜನೆಯಡಿ ಮಹಾತ್ಮ ಗಾಂಧಿ ಉದ್ಯಾನ, ಬಿವಿಕೆ ಬಡಾವಣೆಯಲ್ಲಿರುವ ಉದ್ಯಾನ ಮತ್ತು ಹಾಲಹಳ್ಳಿ ಉದ್ಯಾನಗಳನ್ನು 108.88 ಲಕ್ಷ ರೂ.ಗಳಲ್ಲಿ ಅಭಿವೃದ್ಧಿ, ಗಾಂಧಿ ಉದ್ಯಾನದ ಪಕ್ಕದ ನಗರಸಭೆಯ ಜಾಗದಲ್ಲಿ ಮಕ್ಕಳ ಆಟದ ಮೈದಾನ, ಆಟಿಕೆಗಳನ್ನು ಅಳವಡಿಸಲು 50 ಲಕ್ಷ, ಜಿಲ್ಲಾಧಿಕಾರಿಗಳ ಕಚೇರಿ ಎದುರಿನ ಉದ್ಯಾನದಲ್ಲಿ ಮಕ್ಕಳಿಗಾಗಿ ಪುಟಾಣಿ ರೈಲು ಅಳವಡಿಸುವ ಕಾಮಗಾರಿಯನ್ನು ಕೈಗೊಳ್ಳಲು ಉದ್ದೇಶಿಸಲಾಗಿದೆ ಎಂದು ಹೇಳಿದರು.

ಜಿಲ್ಲೆಯ ಮಹನೀಯರ ಆದರ್ಶ ಪಾಲಿಸೋಣ: ಯದುವೀರ್



• **ಮಂಡ್ಯ:** ದೇಶಕ್ಕೆ ಮಾದರಿಯಾಗಿರುವ ಮಂಡ್ಯದ ಮಹನೀಯರ ಆದರ್ಶಗಳನ್ನು ಪಾಲಿಸಬೇಕು ಎಂದು ಮೈಸೂರು-ಕೊಡಗು ಸಂಸದ ಯದುವೀರ್ ಕೃಷ್ಣದತ್ತ ಒಡೆಯರ್ ತಿಳಿಸಿದರು.

ಬಿಜೆಪಿ ಮುಖಂಡ ಇಂಡುವಾಳು ಸಚ್ಚಿದಾನಂದ ನೇತೃತ್ವದಲ್ಲಿ ತಾಲೂಕಿನ ಬೇಲೂರು ಗ್ರಾಮಸ್ಥರು ಗ್ರಾಮದಲ್ಲಿ ನಿರ್ಮಿಸಿರುವ ಪಂಚರತ್ನ ಪುತ್ಥಳಿಗಳನ್ನು ಅನಾವರಣ ಮಾಡಿ ಮಾತನಾಡಿದ ಅವರು, ಐವರು ಮಹನೀಯರು ಸಾಧನೆಯ ಹಾದಿಯಲ್ಲಿ ಸಾಗಿ ಇತಿಹಾಸವನ್ನು ನಿರ್ಮಿಸಿದ್ದಾರೆ. ಅವರ ಕುರಿತು ಇಂದಿನ ಯುವಜನ ಅಧ್ಯಯನ ಮಾಡಬೇಕು. ಮತ್ತು ಅವರ ಹಾದಿಯಲ್ಲಿ ಸಾಗುವ ಪ್ರಯತ್ನ ಮಾಡಬೇಕು ಎಂದು ಸಲಹೆ ನೀಡಿದರು.

ಗ್ರಾಮಾಂತರ ಪ್ರದೇಶಗಳಲ್ಲಿ ರಸ್ತೆ, ಕುಡಿಯುವ ನೀರು ಸೇರಿದಂತೆ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸುವುದು ಕೇವಲ ಚುನಾವಣಾ ಆಧ್ಯತೆಯಾಗಬಾರದು. ಅದು ಪ್ರತಿಯೊಬ್ಬ ಜನಪ್ರತಿನಿಧಿಯ ಬದ್ಧತೆ ಮತ್ತು ಕರ್ತವ್ಯವಾಗಬೇಕು ಎಂದು ಕಿವಿಮಾತು ಹೇಳಿದರು.

ಮೈಸೂರು ಮತ್ತು ಮಂಡ್ಯ ಜಿಲ್ಲೆಗೂ ಅವಿನಾಭಾವ ಸಂಬಂಧವಿದೆ. ಮೈಸೂರು ಸಂಸ್ಥಾನದ ಮೇಲೆ ಮಂಡ್ಯದ ಜನರಿಗೆ ವಿಶೇಷವಾದ ಪ್ರೀತಿ, ಅಭಿಮಾನ ಇದೆ. ಇದನ್ನು ನಾವೆಂದಿಗೂ ಮರೆಯಲು ಸಾಧ್ಯವಿಲ್ಲ ಎಂದು ಹೇಳಿದರು.

ಮುಖಂಡರಾದ ಇಂಡುವಾಳು ಸಚ್ಚಿದಾನಂದ, ಡಾ.ಸಿದ್ದರಾಮಯ್ಯ, ಪಟೇಲ್ ಬಿ.ಕೆ. ಸತೀಶ್ ಚಂದ್ರ, ಬಿ.ಡಿ. ಪುಟ್ಟಸ್ವಾಮಿ, ಬಿ.ಸಿ. ಸತೀಶ್, ಬಿ.ಸಿ. ಮಾಯಿಗಯ್ಯ, ಯಜಮಾನ್ ಚಿಕ್ಕಶಿವಪ್ಪ, ಚಿಕ್ಕರಾಮಣ್ಣ, ಶ್ರೀನಿವಾಸ್, ಬೊಮ್ಮೇಶ್, ಸರ್ವೇಶ್, ಕುಶ, ಸಿ.ಟಿ.ಮಂಜುನಾಥ್ ಇತರರು ಸಮಾರಂಭದಲ್ಲಿ ಭಾಗವಹಿಸಿದ್ದರು.

ಕಾರ್ಯಕ್ರಮಕ್ಕೂ ಮುನ್ನ ಯಧುವೀರ್ ಕೃಷ್ಣದತ್ತ ಒಡೆಯರ್ ಅವರನ್ನು ಪೂರ್ಣಕುಂಭ ಸ್ವಾಗತದೊಂದಿಗೆ ವೇದಿಕೆಗೆ ಕರೆದೊಯ್ಯಲಾಯಿತು.

ಉತ್ತಮ ಚಿಂತನೆಯಿಂದ ಯಶಸ್ಸು ಸಾಧ್ಯ

• **ಶ್ರೀರಂಗಪಟ್ಟಣ:** ವಿದ್ಯಾರ್ಥಿಗಳು ಮನರಂಜನೆಗಳಿಂದ ದೂರ ಉಳಿದು ಉತ್ತಮ ಚಿಂತನೆಗಳತ್ತ ಮುಖ ಮಾಡಿದರೆ ಮಾತ್ರ ಯಶಸ್ವಿಯ ಉತ್ತುಂಗವನ್ನೇರಲು ಸಾಧ್ಯ, ಇದಕ್ಕೆ ಪೂರಕವಾಗಿ ಪುಸ್ತಕಗಳನ್ನು ಓದುವ ಅಭ್ಯಾಸ ಬೆಳಸಿಕೊಳ್ಳಬೇಕು ಎಂದು ಹರಳಹಳ್ಳಿ ಪುಸ್ತಕ ಮನೆಯ, ಪದ್ಮಶ್ರೀ ಪ್ರಶಸ್ತಿ ಪುರಸ್ಕೃತ ಎಂ.ಅಂಕೇಗೌಡ ತಿಳಿಸಿದರು.

ವಿ ತಾಲೂಕಿನ, ಚಿನ್ನಾಯಕನಹಳ್ಳಿ ಗ್ರಾಮದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ, ಶೇಷಾದ್ರಿಪುರಂ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಮೈಸೂರಿನ, ರಾಷ್ಟ್ರೀಯ ಸೇವಾ ಯೋಜನಾ ಘಟಕದ ವತಿಯಿಂದ ಆಯೋಜಿಸಲಾಗಿದ್ದ, ಎನ್.ಎಸ್.ಎಸ್ ವಾರ್ಷಿಕ ವಿಶೇಷ ಶಿಬಿರದ ಸಮಾರೋಪ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಆಗಮಿಸಿ ಮಾತನಾಡಿಅವರು,ವಿದ್ಯಾರ್ಥಿಗಳುತಮ್ಮಪಠ್ಯಕ್ಕಷ್ಟೇ ಸೀಮಿತವಾಗಿರದೆ, ವಿಚಾರ ಸಂಕಿರಣ. ಪುಸ್ತಕಗಳನ್ನು ಓದುವುದು ಒಳಿತು ಎಂದು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರು.ಹಿರಿಯ ಗಾಂಧಿವಾದಿ ಪ್ರೊ. ಶಿವರಾಜ್ ಮಾತನಾಡಿ, ವಿದ್ಯಾರ್ಥಿಗಳ ದೆಸೆಯಲ್ಲೇ ಮಹಾತ್ಮ ಗಾಂಧೀಜಿ ಯವರು ಸಾಮಾಜಿಕ ಚಿಂತನೆಗಳನ್ನು ಒಳಗೊಂಡಿದ್ದರು, ಅಂತೆಯೇ ತಮ್ಮ ಸ್ವಾತಂತ್ರ್ಯ ಹೋರಾಟದ ಜೊತೆಗೆ ಸಬರಮತಿ ಆಶ್ರಮ ಸ್ಥಾಪಿಸಿ, ಕಲ್ಯಾಣ ಕಾರ್ಯಕ್ರಮಗಳನ್ನು ನಡೆಸುತ್ತಿದರು,ವಿದ್ಯಾರ್ಥಿಗಳಿಗೆ ಮಹಾತ್ಮ ಗಾಂಧೀಜಿಯವರ ಚಿಂತನೆಗಳು ಪ್ರಸ್ತುತ ಅತ್ಯಂತ ಅತ್ಯಗತ್ಯ ಎಂದು ತಿಳಿಸಿದರು. ವಿದ್ಯಾರ್ಥಿಗಳಿಗೆ ಶಿಬಿರದ ಅನುಭವಗಳ ಕುರಿತಂತೆ ಪ್ರಬಂಧ ಸ್ಪರ್ಧೆಏರ್ಪಡಿಸಲಾಗಿದ್ದು, ಆಯ್ಕೆಯಾದ ನಾಲ್ಕು ವಿದ್ಯಾರ್ಥಿಗಳ ಪ್ರಬಂಧಗಳಿಗೆ ಶ್ರೀರಂಗಪಟ್ಟಣದ ಹಿರಿಯ ಗಾಂಧಿವಾದಿ ಡಾ.ಸುಜಯ ಕುಮಾರ್ ಗಾಂಧೀಜಿ ಕುರಿತ ಪುಸ್ತಕಗಳನ್ನು ನೀಡಿ ಗೌರವಿಸಿದರು.



ಜೆ.ಎಸ್.ಎಸ್ ಪದವಿ ಪೂರ್ವ ಕಾಲೇಜಿನ, ಉಪನ್ಯಾಸಕರಾದ ಧನಂಜಯ ರವರು ಮುಖ್ಯ ಅತಿಥಿಯಾಗಿ ಆಗಮಿಸಿದರು, ಕಾರ್ಯಕ್ರಮದ ಅಧ್ಯಕ್ಷತೆಯನ್ನು ಪ್ರೊ.ಕೆ.ಎನ್.ರಾಜಾರಾವ್ ,ಮಾರ್ಗದರ್ಶಕರು, ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆ, ಇವರು ವಹಿಸಿದ್ದರು. ಇದೇ ಸಂದರ್ಭದಲ್ಲಿ ರಾಷ್ಟ್ರೀಯ ಸೇವಾ ಯೋಜನಾ ಕಾರ್ಯಕ್ರಮಾಧಿಕಾರಿಯಾದ, ರಾಷ್ಟ್ರಪ್ರಶಸ್ತಿ ಪುರಸ್ಕೃತ ಡಾ. ರಾಘವೇಂದ್ರ, ಚಿಂತಕರಾದ ಕ್ಯಾತನಹಳ್ಳಿ ಚಂದ್ರಣ್ಣ, ಗ್ರಾಮದ ಮುಖಂಡರಾದ ಜಯರಾಮು, ದೇವರಾಜು, ಕರಿಯಣ್ಣ, ಜಯಕುಮಾರ ಮುಂತಾದ ಗ್ರಾಮದ ಮುಖಂಡರು, ಕಾಲೇಜಿನ ಬೋಧಕ, ಬೋಧಕೇತರ ಸಿಬ್ಬಂದಿ, ಶಿಬಿರಾರ್ಥಿಗಳು ಉಪಸ್ಥಿತರಿದ್ದರು.

ಅಭಿವೃದ್ಧಿ ಕಾಮಗಾರಿ: 14ಕ್ಕೆ ಎಚ್‌ಡಿಕೆ ಪೂಜೆ

• **ಪಾಂಡವಪುರ:** ಇದೇ ಮಾ.14ರಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರು ಮೇಲುಕೋಟೆ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ವಿಸಿ ಫಾರಂನಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗೆ ಭೂಮಿಪೂಜೆ ಹಾಗೂ ವಿಶಿಷ್ಟಚೇತನರಿಗೆ ಎಲೆಕ್ಟ್ರಿಕ್ ಸ್ಕೂಟರ್ ವಿತರಣೆ ಕಾರ್ಯಕ್ರಮಕ್ಕೆ ಆಗಮಿಸುತ್ತಿದ್ದು, ಪಕ್ಷದ ಕಾರ್ಯಕರ್ತರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಬೇಕು ಎಂದು ಮಾಜಿ ಶಾಸಕ ಸಿ.ಎಸ್.ಪುಟ್ಟರಾಜು ಮನವಿ ಮಾಡಿದರು.

ಪಟ್ಟಣದ ಟಿಎಪಿಸಿಎಂಎಸ್ ರೈತಸಭಾಂಗಣದಲ್ಲಿ ನಡೆದ ಜೆಡಿಎಸ್ ಕಾರ್ಯಕರ್ತರ ಸಭೆ ಉದ್ಘಾಟಿಸಿ ಮಾತನಾಡಿದರು. ಎಚ್.ಡಿ.ಕುಮಾರಸ್ವಾಮಿ ಅವರು ಕೇಂದ್ರ ಸಚಿವರಾದ ಬಳಿಕ ಜಿಲ್ಲೆಗೆ ಸಾಕಷ್ಟು ಅಭಿವೃದ್ಧಿ ಕಾರ್ಯಗಳನ್ನು ಮಾಡಿದ್ದಾರೆ. ಕ್ಷೇತ್ರ ವ್ಯಾಪ್ತಿಯ ವಿಸಿ ಫಾರಂನಲ್ಲಿರುವ ಕ್ರೀಡಾಂಗಣವನ್ನು ಮೇಲ್ದರ್ಜೆಗೇರಿಸಿ ಒಳ ಕ್ರೀಡಾಂಗಣವನ್ನು ಉತ್ತಮಮಟ್ಟದಲ್ಲಿ ಅಭಿವೃದ್ಧಿಪಡಿಸಲು ಸಹಕರಿಸುತ್ತಿದ್ದಾರೆ. ಜತೆಗೆ 500ಕ್ಕೂ ಹೆಚ್ಚು ವಿಕಲಚೇತನರಿಗೆ ದ್ವಿಚಕ್ರ ವಾಹನವನ್ನು ನೀಡಲಾಗುತ್ತಿದೆ. ಕಾರ್ಯಕ್ರಮಕ್ಕೆ ಕೇಂದ್ರದ ಕ್ರೀಡಾ ಸಚಿವರು ಆಗಮಿಸುತ್ತಿದ್ದು, ಮಂಡ್ಯ ಲೋಕಸಭಾ ಕ್ಷೇತ್ರ ವ್ಯಾಪ್ತಿಯ ಎಂಟು ತಾಲೂಕುಗಳಿಂದ 30ಸಾವಿರಕ್ಕೂ ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಯಕರ್ತರು ಭಾಗವಹಿಸುವ ನಿರೀಕ್ಷೆ ಇದೆ ಎಂದರು. ಮೇಲುಕೋಟೆ ವಿಧಾನಸಭಾ ಕ್ಷೇತ್ರದ ಜೆಡಿಎಸ್ ಕಾರ್ಯಕರ್ತರು ಹೆಚ್ಚಿನ ಸಂಖ್ಯೆಯಲ್ಲಿ ಈ ಕಾರ್ಯಕ್ರಮದಲ್ಲಿ ಭಾಗವಹಿಸಬೇಕು ಎಂದರು.

ಮಹಿಳಾ ದಿನಾಚರಣೆಯಲ್ಲಿ ಹಿರಿಯ ಶ್ರೇಣಿ ನ್ಯಾಯಾಧೀಶ ಸುಧೀರ್ ಹೇಳಿಕೆ

ರಾಷ್ಟ್ರ ನಿರ್ಮಾಣಕ್ಕೆ ಮಹಿಳೆಯರ ಕೊಡುಗೆ

• **ಕೃಷ್ಣರಾಜಪೇಟೆ:** ಪುರುಷರಿಗೆ ಸರಿ ಸಮಾನವಾಗಿ ಕೆಲಸ ಮಾಡುತ್ತಾ ಸುಭದ್ರ ರಾಷ್ಟ್ರದ ನಿರ್ಮಾಣಕ್ಕೆ ತಮ್ಮ ಅಮೂಲ್ಯವಾದ ಕೊಡುಗೆಯನ್ನು ನೀಡುತ್ತಿರುವ ಮಹಿಳೆಯರು ಈ ರಾಷ್ಟ್ರದ ಶಕ್ತಿಯಾಗಿದ್ದಾರೆ ಎಂದು ಕೆ.ಆರ್.ಪೇಟೆ ಜೆಎಂಎಫ್‌ಸಿ ಸಿವಿಲ್ ನ್ಯಾಯಾಲಯದ ಹಿರಿಯ ಶ್ರೇಣಿ ನ್ಯಾಯಾಧೀಶರಾದ ಸುಧೀರ್ ಹೇಳಿದರು.

ಅವರು ಕೃಷ್ಣರಾಜಪೇಟೆ ಪಟ್ಟಣದ ನ್ಯಾಯಾಲಯದ ಆವರಣದಲ್ಲಿ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ಆಯೋಜಿಸಿದ್ದ ಜಾಗೃತಿಕಾರ್ಯಕ್ರಮದಲ್ಲಿಕ್ರೀಡೆಹಾಗೂಸಾಂಸ್ಕೃತಿಕ ಸ್ಪರ್ಧೆಯಲ್ಲಿ ವಿಜೇತರಾದ ನ್ಯಾಯಾಲಯದ ಸಿಬ್ಬಂದಿಗಳು ಹಾಗೂ ವಕೀಲರಿಗೆ ಬಹುಮಾನ ವಿತರಿಸಿ, ಕೆ.ಆರ್.ಪೇಟೆ ಪಟ್ಟಣ ಪೊಲೀಸ್ ಠಾಣೆಯ ಆರಕ್ಷಕ ನಿರೀಕ್ಷಕರಾಗಿ ಕರ್ತವ್ಯ ನಿರ್ವಹಿಸಿ ವರ್ಗಾವಣೆಗೊಂಡಿರುವ ಇನ್‌ಸ್ಪೆಕ್ಟರ್ ಸುಮಾರಾಣಿ ಅವರನ್ನು ಸನ್ಮಾನಿಸಿ ಗೌರವಿಸಿ ಮಾತನಾಡಿದರು.

ನ್ಯಾಯಾಧೀಶರಾದ ಸುಧೀರ್ ಮಾತನಾಡಿ ನಾಗರೀಕ ಸಮಾಜದಲ್ಲಿ ಇಂದು ಹೆಣ್ಣು ಮಕ್ಕಳು



ಪುರುಷರಿಗೆ ಸರಿ ಸಮಾನವಾಗಿ ಕೆಲಸ ಮಾಡುತ್ತ ಸುಭದ್ರವಾದ ಸದೃಢ ರಾಷ್ಟ್ರದ ನಿರ್ಮಾಣಕ್ಕೆ ತಮ್ಮ ಅಮೂಲ್ಯವಾದ ಕೊಡುಗೆಯನ್ನು ನೀಡುತ್ತಾ ಇಡೀ ಸಮಾಜವನ್ನೇ ಮುನ್ನಡೆಸುತ್ತಿದ್ದಾರೆ. ತೊಟ್ಟಿಲನ್ನು ತೂಗುವ ಕೈ ರಾಷ್ಟ್ರವನ್ನು ಆಳಬಲ್ಲದು ಎಂಬ ಹಿರಿಯರ ನಾಣ್ನುಡಿಯನ್ನು ನಿಜ ಮಾಡಿ ತೋರಿಸಿರುವ ಮಹಿಳೆಯರು ಇಂದು ಸಮಾಜದ ಎಲ್ಲ ಸ್ತರಗಳಲ್ಲಿ ಕೆಲಸ ಮಾಡುತ್ತ ಹೆಣ್ಣು ಈ ರಾಷ್ಟ್ರದ ಶಕ್ತಿ ಎಂಬುದನ್ನು ಸಾಬೀತುಪಡಿಸಿ ತೋರಿಸಿದ್ದಾರೆ. ಮುಂದಿನ ದಿನಗಳಲ್ಲಿ ಪುರುಷರು, ಹೆಣ್ಣು ಮಕ್ಕಳನ್ನು ಮೀರಿಸಿ ನೌಕರಿ ಗಿಟ್ಟಿಸಿಕೊಳ್ಳುವುದು ಕಷ್ಟ ಸಾಧ್ಯವಾಗಲಿದೆ ಎಂದು ಹೇಳಿದರು.

ಅಪರ ಸಿವಿಲ್ ನ್ಯಾಯಾಧೀಶರಾದ ಪಾರ್ವತಿ ಮಾತನಾಡಿ ತಾಯಿಯಾಗಿ, ಮಡದಿಯಾಗಿ, ಸಹೋದರಿಯಾಗಿ, ಮಗಳಾಗಿ ತನ್ನ ಪಾಲಿನ ಕರ್ತವ್ಯವನ್ನು ಪ್ರಾಮಾಣಿಕವಾಗಿ ಮಾಡುವ ಹೆಣ್ಣು ಇಂದು ಸಮಾಜದಲ್ಲಿ ತಾನು ಹುಟ್ಟುವ ಹಕ್ಕನ್ನು ಪಡೆಯಲು ಆಂದೋಲನ ನಡೆಸಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ವಿದ್ಯಾವಂತ ಸಮುದಾಯದಿಂದಲೇ ಹೆಣ್ಣು ಮಗುವಿನ ಭ್ರೂಣ ಹತ್ಯೆಯಂತಹ ಸಮಾಜ ವಿದ್ರೋಹಿ ಈ ಕೆಲಸಗಳು ನಿರಂತರವಾಗಿ ನಡೆಯುತ್ತಿವೆ. ಪೋಷಕರು ತಮ್ಮ ಮಕ್ಕಳನ್ನು ಹೆಣ್ಣು ಗಂಡು ಎಂದು ಭೇದ ಭಾವ ಮಾಡದೆ ಇಬ್ಬರಿಗೂ ಸಮಾನವಾದ ಶಿಕ್ಷಣವನ್ನು ಕೊಡಿಸಿ ಸಾಧನೆ ಮಾಡುವಂತೆ ಬೆನ್ನು ತಟ್ಟಿ ಪ್ರೋತ್ಸಾಹಿಸಬೇಕು ಎಂದು ಮನವಿ ಮಾಡಿದರು. ಕೆ.ಆರ್.ಪೇಟೆ ಪಟ್ಟಣದ ಜೆಎಂಎಫ್ ಸಿ ಅಪರ ಸಿವಿಲ್ ನ್ಯಾಯಾಧೀಶರಾದ ದೇವರಾಜು ಅರ್ಪಿತಾ ಹಿರಿಯ ವಕೀಲರಾದ ಬಿ.ಎಲ್. ದೇವರಾಜು ಇದ್ದರು.

ಮಹಿಳಾ ನಾಗಸಾಧು ಡಾ.ಅಗರ್ಭನಾಥ ಅಘೋರಿ ಮಾತಾರಿಂದ ಚಾಲನೆ

ಮುನೇಶ್ವರಸ್ವಾಮಿ ದೇಗುಲ ಜೀರ್ಣೋದ್ಧಾರ

• **ಮದ್ದೂರು:** ತಾಲೂಕಿನ ಚನ್ನೇಗೌಡನದೊಡ್ಡಿ ಗ್ರಾಮದ ಎಚ್.ಕೆ.ವಿ ನಗರದಲ್ಲಿ ನೂತನವಾಗಿ ನಿರ್ಮಿಸಿರುವ ಶತಮಾನದ ಇತಿಹಾಸವುಳ್ಳ ಶ್ರೀ ನಾಗೇಶ್ವರ ಮುನೇಶ್ವರಸ್ವಾಮಿ ಹಾಗೂ ಅರಳಿಕಟ್ಟೆಯ ಜೀರ್ಣೋದ್ಧಾರವನ್ನು ರಾಜ್ಯದ ಪ್ರಸಿದ್ಧ ಮೊಟ್ಟ ಮೊದಲ ಮಹಿಳಾ ನಾಗಸಾದು ಡಾ.ಅಗರ್ಭನಾಥ ಅಘೋರಿ ಮಾತಾರವರು ಲೋಕಾರ್ಪಣೆಗೊಳಿಸಿದರು.

ಭಾನುವಾರ ಸಂಜೆ ದೇವಾಲಯದ ಆವರಣದಲ್ಲಿ ಹೋಮ, ಹವನ, ಅಭಿಷೇಕ, ಅಲಂಕಾರ, ಮಹಾಮಂಗಳಾರತಿ, ತೀರ್ಥಪ್ರಸಾದ ವಿನಿಯೋಗ ಇನ್ನಿತರ ವಿಧಿ ವಿಧಾನಗಳು ಅಪಾರ ಭಕ್ತಾದಿಗಳ ಸಮ್ಮುಖದಲ್ಲಿ ವಿಜೃಂಭಣೆಯಿಂದ ನೆರವೇರಿದವು.

ಸೋಮವಾರ ಬೆಳಿಗ್ಗೆ ಹೋಮ, ಹವನ, ಗಣಪತಿಪೂಜೆ, ಪುಣ್ಯಹ, ಕಳಶರಾಧನೆ, ಅಭಿಷೇಕ, ಅಲಂಕಾರ, ಮಹಮಂಗಳಾರತಿ ಇನ್ನಿತರ ಪೂಜಾ ಕೈಂಕರ್ಯಗಳು ನೆರವೇರಿದ ಬಳಿಕ ಮಹಿಳಾ ನಾಗಸಾದು ಅಘೋರಿ ಮಾತಾರವರನ್ನು ಪೂರ್ಣಕುಂಭ ಸ್ವಾಗತದೊಂದಿಗೆ



ಗ್ರಾಮಕ್ಕೆ ಬರಮಾಡಿಕೊಳ್ಳಲಾಯಿತು. ನೂತನ ದೇವಾಲಯವನ್ನು ಲೋಕಾರ್ಪಣೆಗೊಳಿಸಿ ಮಾತನಾಡಿದ ಮಹಿಳಾ ನಾಗಸಾಧು ಅಗರ್ಭನಾಥ ಅಘೋರಿ ಮಾತಾ ಪರಮಾತ್ಮನು ಪ್ರತಿಯೊಂದು ಸ್ಥಳದಲ್ಲೂ ನೆಲೆಸಿದ್ದು ದಿನನಿತ್ಯ ಭಗವಂತನನ್ನು ನೆನೆದಲ್ಲಿ ಗ್ರಾಮ ಅಭಿವೃದ್ಧಿ ಜತೆಗೆ ಇಂತಹ ಹಲವಾರು ಕ್ಷೇತ್ರಗಳು ಪ್ರಸಿದ್ಧಿ ಪಡೆಯಲು ಕಾರಣವಾಗುತ್ತದೆಂದು ಬಣ್ಣಿಸಿದರು.

ಕಳೆದ ಜನ್ಮದಲ್ಲಿ ಮಾಡಿದ ಕರ್ಮವನ್ನು ಪುನರ್ಜನ್ಮದಲ್ಲಿಪಡೆಯಲುಕಾಳಸರ್ಪಯಾಗವನ್ನು ಮಾಡಿದಾಗ ಜೀವನದಲ್ಲಿ ಸುಖ, ಸಂತೋಷ, ನೆಮ್ಮದಿ ಸಿಗುವ ಜತೆಗೆ ಪಂಚೇಂದ್ರಿಯಗಳು ಜಾಗೃತವಾಗಿ ಕಾರ್ಯ ನಿರ್ವಹಿಸಲು ಸಹಕಾರಿಯಾಗುತ್ತದೆಂದು ಹೇಳಿದರು.

ಪ್ರತಿಯೊಂದು ಸ್ಥಳದಲ್ಲಿಯೂ ನಾಗೇಶ್ವರ ಸಂಚರಿಸಲಿದ್ದು ಕೆಡುಕು ಮಾಡುವ ವ್ಯಕ್ತಿಗಳಿಗೆ ಕೆಡಕನ್ನೇ ಮಾಡುವನೇ ಹೊರತು ಒಳಿತು ಮಾಡುವ ಜನರಿಗೆ ಮತ್ತಷ್ಟು ಅಭಿವೃದ್ಧಿಯಾಗಲು ದೂರದಿಂದಲೇ ಆಶೀರ್ವದಿಸುತ್ತಾನೆಂದು ಮತ್ತು ಉತ್ತಮ ಮನಸ್ಸಿನಿಂದ ಭಗವಂತಹನನ್ನು ನೆನೆದರೆ ಖಂಡಿತ ಪ್ರತಿಫಲ ಸಿಗುತ್ತದೆಂದರು.

ಮುಂದಿನದಿನಗಳಲ್ಲಿಗ್ರಾಮವುಪುಣ್ಯಕ್ಷೇತ್ರವಾಗಿ ಹೊರಹೊಮ್ಮಲೆಂದು ಆಶೀರ್ವದಿಸಿದರಲ್ಲದೆ ಇಂತಹ ಪುರಾತನ ಪ್ರಸಿದ್ಧ ಕಟ್ಟೆಗಳನ್ನು ಪೂರ್ವಿಕರು ಅಂದಿನ ಕಾಲದಲ್ಲೆ ಕಟ್ಟಿ ಪೂಜಿಸಿ ಫಲ ಪಡೆಯುತ್ತಿದ್ದ ಉದಾಹರಣೆಗಳು ಸಾಕಷ್ಟಿದ್ದು ದುರಸ್ಥಿಯಲ್ಲಿರುವ ನಾಗರಕಟ್ಟೆಗಳನ್ನು ಜೀರ್ಣೋದ್ಧಾರ ಮಾಡುವ ಮೂಲಕ ಪ್ರತಿಯೊಬ್ಬರಿಗೂ ಯಶಸ್ಸು ದೊರಕಲು ಭಗವಂತನ ಪ್ರೇರಣೆ ಸಿಕ್ಕಿದೆ ಎಂದರು.

ಕಿರುಸುದ್ದಿ

ಭಕ್ತಾದಿಗಳಿಗೆ ಪ್ರಸಾದ ವಿನಿಯೋಗ

ಹೊಳೆನರಸೀಪುರ: ಪಟ್ಟಣದ ಪುಣ್ಯಕ್ಷೇತ್ರವಾದ ಶ್ರೀ ಲಕ್ಷ್ಮೀನರಸಿಂಹಸ್ವಾಮಿ ದೇವಾಲಯದಲ್ಲಿ ಬ್ರಹ್ಮ ರಥೋತ್ಸವದ ನಂತರದ ದಿನನಿತ್ಯದ ಪೂಜಾ ಕೈಂಕರ್ಯಗಳ ಭಾಗವಾಗಿ, ಮಾಜಿ ಸಚಿವ ಹೆಚ್.ಡಿ. ರೇವಣ್ಣ ಹಾಗೂ ಅವರ ಕುಟುಂಬದ ವತಿಯಿಂದ ಭಾನುವಾರ, ವಿಶೇಷ ಪೂಜೆ ಹಾಗೂ ರಥ ಬೀದಿ ಉತ್ಸವವು ಅತ್ಯಂತ ವಿಜೃಂಭಣೆಯಿಂದ ಜರುಗಿತು. ಸ್ವಾತಿ ನಕ್ಷತ್ರ ಹಾಗೂ ಪಂಚಮಿಯ ಪುಣ್ಯ ಘಳಿಗೆಯಲ್ಲಿ ಶ್ರೀ ಸ್ವಾಮಿಯ ಮೂಲ ಮೂರ್ತಿಗೆ ಮುಂಜಾನೆಯೇ ಪಂಚಾಮೃತ ಅಭಿಷೇಕ, ಸಹಸ್ರನಾಮಾರ್ಚನೆ, ವಿಶೇಷ ಅಲಂಕಾರ ಹಾಗೂ ಆರಾಧನೆ ಸೇವೆಗಳನ್ನು ನೆರವೇರಿಸಲಾಯಿತು. ನಂತರ ಉತ್ಸವ ಮೂರ್ತಿಯನ್ನು ಅಡ್ಡಪಲ್ಲಕ್ಕಿಯಲ್ಲಿ ಪ್ರತಿಷ್ಠಾಪಿಸಿ, ರಥ ಬೀದಿಯಲ್ಲಿ ಸಕಲ ಮಂಗಳವಾದ್ಯಗಳೊಂದಿಗೆ ವೈಭವದ ಉತ್ಸವ ನಡೆಸಲಾಯಿತು. ಶ್ರೀ ಸ್ವಾಮಿಯ ಮೂಲ ಮೂರ್ತಿಗೆ ಮಹಾಮಂಗಳಾರತಿ ನೆರವೇರಿಸಿದ ಬಳಿಕ, ಭಕ್ತಾದಿಗಳಿಗೆ ದೇವಾಲಯದ ಆವರಣದಲ್ಲಿ ಅದ್ದೂರಿ ಮಹಾಪ್ರಸಾದದ ವ್ಯವಸ್ಥೆ ಮಾಡಲಾಗಿತ್ತು. ಭಕ್ತರು ಸಾಲಿನಲ್ಲಿ ನಿಂತು ಭಕ್ತಿಯಿಂದ ಪ್ರಸಾದ ಸ್ವೀಕರಿಸಿದರು. ಈ ಧಾರ್ಮಿಕ ಕಾರ್ಯಕ್ರಮದಲ್ಲಿ ಮಾಜಿ ಸಚಿವರು ಹಾಗೂ ಹಾಲಿ ಶಾಸಕರಾದ ಎಚ್.ಡಿ.ರೇವಣ್ಣ, ವಿಧಾನ ಪರಿಷತ್ ಸದಸ್ಯರಾದ ಡಾ. ಸೂರಜ್ ರೇವಣ್ಣ ಅವರು ಪಾಲ್ಗೊಂಡು ವಿಶೇಷ ಪೂಜೆ ಸಲ್ಲಿಸಿದರು. ಇದೇ ಸಂದರ್ಭದಲ್ಲಿ ಮಾಜಿ ಪುರಸಭಾ ಅಧ್ಯಕ್ಷ ಪ್ರಸನ್ನ ಎಚ್.ಕೆ, ಮುಖಂಡರಾದ ಪುಟ್ಟ ಸೋಮಪ್ಪ, ಎಂ.ಜಗನ್ನಾಥ್, ರಾಜಮುಡಿ ಮಂಜಣ್ಣ, ಗೋವಿಂದು, ರಾಜು ಸೇರಿದಂತೆ ಸ್ಥಳೀಯ ಜನಪ್ರತಿನಿಧಿಗಳು ಮತ್ತು ಗಣ್ಯರು ಉಪಸ್ಥಿತರಿದ್ದರು.

ತೋಟಗಾರಿಕೆ ತರಬೇತಿಗೆ ಅರ್ಜಿ ಆಹ್ವಾನ

ಹಾಸನ: ತೋಟಗಾರಿಕೆ ತರಬೇತಿ ಕೇಂದ್ರ, ಸೋಮನಹಳ್ಳಿ ಕಾವಲು ಕೇಂದ್ರದಲ್ಲಿ 10 ತಿಂಗಳ ತೋಟಗಾರಿಕೆ ತರಬೇತಿಗೆ ಹಾಸನ ಜಿಲ್ಲೆಯ ರೈತರ ಮಕ್ಕಳಿಂದ ಅರ್ಜಿ ಆಹ್ವಾನಿಸಲಾಗಿದೆ.ಅಭ್ಯರ್ಥಿಯು ಕನಿಷ್ಠ ಎಸ್.ಎಸ್.ಎಲ್.ಸಿ. ಉತ್ತೀರ್ಣರಾಗಿರಬೇಕು. ತಂದೆ ತಾಯಿ ಅಥವಾ ಪೋಷಕರು ಕಡ್ಡಾಯವಾಗಿ ಜಮೀನು ಹೊಂದಿರಬೇಕು. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಅಂಗವಿಕಲ ಅಭ್ಯರ್ಥಿಗಳು ಕನಿಷ್ಠ 18 ರಿಂದ 33 ವರ್ಷದೊಳಗಿರಬೇಕು. ಮಾಜಿ ಸೈನಿಕರಿಗೆ 33 ರಿಂದ ಗರಿಷ್ಠ 65 ವರ್ಷ ಹಾಗೂ ಇತರೆ ಅಭ್ಯರ್ಥಿಗಳು 18 ರಿಂದ 30 ವರ್ಷದೊಳಗಿರಬೇಕು. ಅರ್ಜಿ ನಮೂನೆಯನ್ನು ಇಲಾಖಾ ವೆಬ್ ಸೈಟ್ https://horticulturedir.karnataka.gov.in ನಲ್ಲಿ ಅಥವಾ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು, ರಾಜ್ಯವಲಯ, ಹಾಸನ ಕಛೇರಿಯಲ್ಲಿ ಪಡೆಯಬಹುದು. ಅರ್ಜಿಯನ್ನು ಏ.15 ಸಂಜೆ 5.30 ಗಂಟೆಯೊಳಗೆ ಕಚೇರಿಗೆ ಸಲ್ಲಿಸಬೇಕು.ಹೆಚ್ಚಿನ ಮಾಹಿತಿಗಾಗಿ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರ ಕಚೇರಿ, ರಾಜ್ಯವಲಯ, ಹಾಸನ ರವರ ಕಛೇರಿ ಅಥವಾ ದೂರವಾಣಿ ಸಂಖ್ಯೆ 990103372 / 9481350318 ಅನ್ನು ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದು.

ಗುರುಗಳ ಆಶೀರ್ವಚನ ಬದುಕಲ್ಲಿ ಅಳವಡಿಸಿಕೊಳ್ಳಿ

ಅರಸೀಕೆರೆ: ''ಒಂದು ಹನಿ ಮಶಿ ದೇಶಕ್ಕೆಲ್ಲ ಖುಷಿ'' ಎಂಬ ಮಾತಿನಂತೆ, ಧರ್ಮದ ಮೂಲ ಗುರು ಎಂಬ ಸತ್ಯವನ್ನು ಜನರು ಅರ್ಥೈಸಿಕೊಂಡು ಗುರುಗಳ ಆಶೀರ್ವಚನವನ್ನು ಜೀವನದಲ್ಲಿ ಅಳವಡಿಸಿಕೊಂಡರೆ ಮನುಷ್ಯನು ಯಾವುದೇ ಸವಾಲನ್ನೂ ಗೆಲ್ಲಬಲ್ಲನು ಎಂದು ನೊಣವಿನಕೆರೆ ಕಾಡು ಸಿದ್ದೇಶ್ವರ ಮಠದ ಕರಿವೃಷಭ ಶಿವಯೋಗೀಶ್ವರ ಸ್ವಾಮೀಜಿಗಳು ಹೇಳಿದರು. ನಗರದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಶ್ರೀ ಪಂಚಪೀಠ ಧಾರ್ಮಿಕ ಕಾರ್ಯಕ್ರಮ ಆಚರಣಾ ಸಮಿತಿ ವತಿಯಿಂದ ಮಾರ್ಚ್ 10ರಂದು ಇಷ್ಟಲಿಂಗ ಮಹಾ ಶಿವಪೂಜೆ, ಧರ್ಮ ಜಾಗೃತಿ ಸಭೆ ಹಾಗೂ 'ಸಿದ್ಧಾಂತ ಶಿಖಾಮಣಿ' ಪ್ರವಚನವನ್ನು ಆಯೋಜಿಸಲಾಗಿದೆ ಎಂದು ತಿಳಿಸಿದರು. ಈ ಇಷ್ಟಲಿಂಗ ಮಹಾಪೂಜೆಯನ್ನು ಶ್ರೀಮದ್ ಕಾಶಿ ಜ್ಞಾನ ಸಿಂಹಾಸನಾಧೀಶ್ವರ ಡಾ. ಚಂದ್ರಶೇಖರ ಶಿವಾಚಾರ್ಯ ಭಗವತ್ಪಾದರು ನೆರವೇರಿಸಲಿದ್ದು, ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕು ಎಂದು ಮನವಿ ಮಾಡಿದರು. ಧರ್ಮಜಾಗೃತಿ ಸಭೆಯ ಉದ್ದೇಶ ಕುರಿತು ಮಾತನಾಡಿದ ಸ್ವಾಮೀಜಿಗಳು, ಇಂದಿನ ಸಮಾಜದಲ್ಲಿ ಮಾನವೀಯ ಮೌಲ್ಯಗಳು ಕುಸಿಯುತ್ತಿರುವ ಸಂದರ್ಭದಲ್ಲಿ ಗುರುಪರಂಪರೆ ಮತ್ತು ಇಷ್ಟಲಿಂಗ ಆರಾಧನೆಯ ಮಹತ್ವವನ್ನು ಜನರಿಗೆ ತಲುಪಿಸುವುದು ಅತ್ಯಂತ ಅಗತ್ಯವಾಗಿದೆ. ಧರ್ಮವು ಕೇವಲ ಆಚರಣೆಯಲ್ಲ, ಅದು ಜೀವನಶೈಲಿ; ಅದನ್ನು ಅರಿತು ನಡೆದುಕೊಂಡಾಗ ಮಾತ್ರ ವ್ಯಕ್ತಿಯಲ್ಲೂ, ಸಮಾಜದಲ್ಲೂ ಶಾಂತಿ ನೆಲೆಸುತ್ತದೆ ಎಂದು ಅವರು ಹೇಳಿದರು.



ಅರಸೀಕೆರೆ ನಗರದ ವಾಸವಿ ಮಹಲ್‌ನಲ್ಲಿರುವ ವಿವೇಕಾನಂದ ಯೋಗ ಕೇಂದ್ರದಲ್ಲಿ ಸೋಮವಾರ ಅಂತಾರಾಷ್ಟ್ರೀಯ ಮಹಿಳಾ ದಿನವನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು.

ಅಂ.ರಾ.ಮಹಿಳಾ ದಿನಾಚರಣೆ

ಅರಸೀಕೆರೆ: ನಗರದ ವಾಸವಿ ಮಹಲ್‌ನಲ್ಲಿರುವ ವಿವೇಕಾನಂದ ಯೋಗ ಕೇಂದ್ರದಲ್ಲಿ ಅಂತಾರಾಷ್ಟ್ರೀಯ ಮಹಿಳಾ ದಿನವನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು.

ಈ ಕಾರ್ಯಕ್ರಮದಲ್ಲಿ ಇದೇ ಕೇಂದ್ರದ ಅಭ್ಯಾಸಿ ಡಾ.ರಾಜೇಶ್ ಖನ್ನಾ ಅವರು ಮಾತನಾಡಿ, ಈ ದಿನದ ವಿಶೇಷತೆಯನ್ನು ಕುರಿತು ಮಹಿಳಾ ಶಿಬಿರಾರ್ಥಿಗಳಿಗೆ ಅಂತಾರಾಷ್ಟ್ರೀಯ ಮಹಿಳಾ ದಿನದ ಇತಿಹಾಸದ ಬಗ್ಗೆ, ಮಹಿಳೆಯರ ಶಕ್ತಿ, ಧೈರ್ಯ ಮತ್ತು ಸಾಧನೆಗಳನ್ನು ನೆನಪಿಸಿಕೊಳ್ಳುವ ದಿನವೆಂದು ತಿಳಿಸಿದರು. ಜೊತೆಗೆ ಮಹಿಳೆಯರು ಸಮಾಜದ ಅಭಿವೃದ್ಧಿಗೆ ಅಪಾರ ಕೊಡುಗೆಯನ್ನು ನೀಡುತ್ತಿದ್ದಾರೆ.

ಕುಟುಂಬವನ್ನು ಬೆಸೆದು ಇಡುತ್ತಾರೆ ಮತ್ತು ನಮ್ಮ ಜೀವನವನ್ನು ಸುಂದರಗೊಳಿಸಿರುತ್ತಾರೆ. ಮಹಿಳೆಯರ ಹಕ್ಕುಗಳು, ಸಮಾನತೆ ಮತ್ತು ಸಬಲೀಕರಣಕ್ಕಾಗಿ ನಾವು ಹೋರಾಡೋಣ ಅವರ ಸಾಧನೆಗಳನ್ನು ಗುರುತಿಸೋಣ ಅವರ ಕನಸುಗಳನ್ನು ಬೆಂಬಲಿಸೋಣ ಮಹಿಳೆಯರ ಸಾಧನೆಗೆ ಅವರ ಸಬಲೀಕರಣಕ್ಕೆ, ಮಹಿಳೆಯರ ಹಕ್ಕುಗಳನ್ನು ಜಾರಿಗೊಳಿಸುವಲ್ಲಿ ನಾವು ಕೈ ಜೋಡಿಸಬೇಕಿದೆ ಎಂಬ ಆಶಯ ನುಡಿಗಳನ್ನು ನುಡಿದರು.ಹೆಣ್ಣು ಇನ್ನೊಂದು ಜೀವಕ್ಕೆ ಉಸಿರು ನೀಡುವ ಕಣ್ಣು ಎಂಬ ಆಶಯ ನುಡಿಯನ್ನು ನುಡಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಿವೇಕಾನಂದ ಯೋಗ ಬಳಗದ ಹೇಮಂತ್ ಪ್ರಮುಖ್ ಅವರು ವಹಿಸಿದ್ದರು. ಸುಮಾ ಪ್ರಾರ್ಥನೆಯನ್ನು ಹಾಗೂ ವಾಣಿ ವಂದನಾರ್ಪಣೆಯನ್ನು ನಡೆಸಿಕೊಟ್ಟರು.



ಹಾಸನ ನಗರದಲ್ಲಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ಸಾಮಾಜಿಕ ಹೋರಾಟಗಾರ ದಿನೇಶ್ ಮಾತನಾಡಿದರು. ಸಂಘಟನೆ ಮುಖಂಡರಾದ ವಿಠಲ್, ಜಗದೀಶ್, ದೇವರಾಜ, ಡಾ.ಶ್ರೀನಿವಾಸ್ ಮೂರ್ತಿ, ಶಿವಣ್ಣ ಇದ್ದರು.

ಮಹಿಳಾ ದಿನಾಚಾರಣೆ ಕಾರ್ಯಕ್ರಮದಲ್ಲಿ ಡಿಸಿ ಲತಾಕುಮಾರಿ ಹೇಳಿಕೆ
ಎಲ್ಲೆಡೆಯೂ ಮಹಿಳೆ ಸಮಾನ

ಹಾಸನ: ಮಹಿಳೆಯರು ಕೂಡ ಪುರುಷರಂತೆ ಪ್ರತಿಯೊಂದು ಕ್ಷೇತ್ರದಲ್ಲೂ ಅವರ ಸಮನಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ, ಆದ್ದರಿಂದ ಸಮಾಜದಲ್ಲಿ ಮಹಿಳೆಯರ ಪಾತ್ರ ತುಂಬಾ ಮುಖ್ಯವಾಗಿದೆ ಎಂದು ಜಿಲ್ಲಾಧಿಕಾರಿ ಕೆ.ಎಸ್ ಲತಾ ಕುಮಾರಿ ತಿಳಿಸಿದರು.

ಹಾಸನಾಂಬ ಕಲಾಕ್ಷೇತ್ರದಲ್ಲಿ ಸೋಮವಾರ ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾಡಳಿತ, ಪೊಲೀಸ್ ಇಲಾಖೆ,ಆರೋಗ್ಯ ಕುಟುಂಬ ಕಲ್ಯಾಣ ಇಲಾಖೆ, ಶಾಲಾ ಶಿಕ್ಷಣ ಹಾಗೂ ಸಾಕ್ಷಾರತ ಇಲಾಖೆ ಸಮಾಜ ಕಲ್ಯಾಣ ಇಲಾಖೆ, ಕಾರ್ಮಿಕ ಇಲಾಖೆ, ಮತ್ತು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಹಾಸನ ಇವರ ಸಂಯುಕ್ತಾಶ್ರಯದಲ್ಲಿ,ಬೇಟಿಬಚವೋ,ಬೇಟಿಪಡವೋ ಯೋಜನೆಯಡಿಯಲ್ಲಿ, ಅಂತಾರಾಷ್ಟ್ರೀಯ ಮಹಿಳಾ ದಿನಾಚಾರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಸಂವಿಧಾನದಲ್ಲಿ ಜಾತಿ, ಧರ್ಮ, ಲಿಂಗ, ಪ್ರಾದೇಶಿಕ, ಭಾಷೆಗಳಲ್ಲಿ ಸಮಾನತೆಯನ್ನು ಕಾಣುತ್ತೇವೆ, ಸಮಾನತೆಯ ಸ್ವಾತಂತ್ರ ಸಮಾಜದಲ್ಲಿ ಎದ್ದು ಕಾಣಬೇಕು, ಆದರೆ ಅಂತಹ ಸಮಾನತೆ ಎಲ್ಲೋ ಒಂದು ಕಡೆ ಮರೆಯಾಗುತ್ತಿದೆ. ಪ್ರಸ್ತುತ ಸಮಾಜದಲ್ಲಿ ಮಹಿಳೆಯರು ದ್ವಿತೀಯ ದರ್ಜೆ ಪ್ರಜೆ, ಸಂವಿಧಾನ ಮಹಿಳೆಯರಿಗೆ ಬಲವನ್ನ ನೀಡಿದೆ ಆದರೆ ಸಮಾಜ ಆ ರೀತಿಯಲ್ಲಿ ನೋಡುತಿಲ್ಲ, ಸಂವಿಧಾನದ ತತ್ವಗಳನ್ನು ಎಲ್ಲಿವರೆಗು ಪಾಲಿಸುವುದಿಲ್ಲವೋ ಅಲ್ಲಿವರೆಗೂ ಸಮಾಜ ಮಹಿಳೆಯರಿಗೆ ಪರಿವರ್ತನೆ ಸಾಧ್ಯವಿಲ್ಲ ಎಂದರು.

ಅಂಗವಿಕಲ ಮಹಿಳೆಯರಿಗೆ, ಹಿಂದುಳಿದ ವರ್ಗ ಮಹಿಳೆಯರಿಗೆ, ಹಿರಿಯ ನಾಗರಿಕ ಮಹಿಳೆಯರಿಗೆ ಇನ್ನೂ ಕೂಡ ಸಮಾಜದಲ್ಲಿ ಭದ್ರತೆ ಇಲ್ಲ, ಇಂತಹ ಎಲ್ಲ ಮಹಿಳೆಯರಿಗೂ ಕೂಡ ಭದ್ರತೆ ಸಿಗಬೇಕೆಂದರೆ ಸಂವಿಧಾನದ ತತ್ವಗಳನ್ನು ಪಾಲಿಸುತ್ತಾ ಅದರ ಆಯಾಮಗಳನ್ನು ಅಳವಡಿಸಿಕೊಳ್ಳಬೇಕು. ಒಂದು ಹೆಣ್ಣು ಮಗು ಸಮಾಜದಲ್ಲಿ ರಾಜಕೀಯಕ್ಕೆ ಬಂದರೆ ನೂರಾರು ಜನರು ಪ್ರಶ್ನೆ ಮಾಡುತ್ತಾರೆ, ಅದೇ ರೀತಿ ಗಂಡು ಮಗು ಬಂದರೆ ಯಾರು ಕೂಡ ಪ್ರಶ್ನೆ ಮಾಡುವುದಿಲ್ಲ, ಇಂತಹ ವ್ಯವಸ್ಥೆಯಲ್ಲಿ ಮಹಿಳೆಯರಿಗೆ ನೈತಿಕತೆ ಸಮಾನವಾಗಿ ದೊರೆಯುತ್ತಿಲ್ಲವೆಂದರು.

ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಸದಸ್ಯ ಕಾರ್ಯದರ್ಶಿ ದಾಕ್ಷಾಯಿಣಿ ಬಿ.ಕೆ ಅವರು ಮಾತನಾಡಿ, ಮಹಿಳೆಯರು ನಾಲ್ಕು ಗೋಡೆಗಳ ಒಳಗೆ ಮಾತ್ರ ಸೀಮಿತವಲ್ಲ, ಸ್ವಾತಂತ್ರವಾಗಿ ಎಲ್ಲಾ ಕ್ಷೇತ್ರದಲ್ಲೂ ಕೂಡ ಕಾರ್ಯನಿರ್ವಹಿಸಬಹುದು. ಆಡು ಮುಟ್ಟದ ಸೊಪ್ಪಿಲ್ಲ ಎಂದು ಹೇಳುತ್ತಾರೋ ಹಾಗೆಯೇ ಹೆಣ್ಣು ಅಲಂಕರಿಸದ ಅಧಿಕಾರವಿಲ್ಲ ಪ್ರತಿಯೊಂದು ಕ್ಷೇತ್ರದಲ್ಲೂ ಕೂಡ ಮಹಿಳೆಯರನ್ನು ಕಾಣಬಹುದು ಎಂದರು. ಪ್ರತಿಯೊಂದು ಹೆಣ್ಣು ಮಕ್ಕಳು ಕೂಡ ಆರ್ಥಿಕವಾಗಿ ಸಬಲೀಕರಣವಾಗಬೇಕೆಂದು ಸರ್ಕಾರ ಅನೇಕ ರೀತಿಯ ಯೋಜನೆ ಜಾರಿಗೆ ತಂದಿತು, ಆದ್ದರಿಂದ ಸಮಾಜ ದಲ್ಲಿ ಪ್ರತಿಯೊಂದು ಹೆಣ್ಣುಮಗು ಆರ್ಥಿಕವಾಗಿ ಸಬಲೀಕರಣ ವಾಗಿರುವುದನ್ನು ಕಾಣಬಹುದು ಎಂದರು.ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿ ಅನುಪಮಾ, ಜಿಲ್ಲಾ ಕಾರ್ಮಿಕ ಅಧಿಕಾರಿ ಯಮುನ.ಕೆ.ಎನ್ ಹಾಗೂ ಮತ್ತಿತರರಿದ್ದರು.



> ಹೆಣ್ಣು ಮಕ್ಕಳಿಗೆ ಸಮಾನವಾಗಿ ನಿಲ್ಲುವವರು ಯಾರು ಕೂಡ ಇಲ್ಲ, ಸಮಾಜದಲ್ಲಿ ಹೆಣ್ಣು ಮಗುವನ್ನು ಶಕ್ತಿಯ ಸ್ವರೂಪ ಎಂದು ಕೂಡ ಹೇಳಬಹುದು. ಮಹಿಳೆಯರಿಗೆ ಆರ್ಥಿಕವಾದ ಸ್ವಾತಂತ್ರ, ಧಾರ್ಮಿಕವಾದ ಸ್ವಾತಂತ್ರ ಹೀಗೆ ಪ್ರತಿಯೊಂದು ಸ್ವಾತಂತ್ರವೂ ಕೂಡ ದೊರೆಯುತ್ತಿದೆ ಆದರಿಂದ ಹೆಣ್ಣು ಸಮಾಜದಲ್ಲಿ ಬದುಕಲು ಸಾಧ್ಯವಾಗುತ್ತಿದೆ.
> ■ ಶೈಲಜಾ, ಸಾಹಿತಿ

ಸಮಾನತೆಯ ಸಂದೇಶ ಸಾರಿ

ಮಹಿಳಾ ದಿನಚಾರಣೆಯನ್ನು ಮಹಿಳೆಯರು ಅಷ್ಟೇ ಆಚರಣೆ ಮಾಡಬೇಕು ಅಂತ ಇಲ್ಲ, ಪುರುಷರು ಕೂಡ ಮಹಿಳಾ ದಿನಚಾರಣೆಯನ್ನು ಆಚರಣೆ ಮಾಡುವುದರ ಮೂಲಕ ಇಬ್ಬರು ಸಮಾನ ಎಂಬ ಸಂದೇಶ ಸಾರಬೇಕು. ಪ್ರಸ್ತುತ ಸಮಾಜ ಪುರುಷ ಪ್ರಧಾನ ಸಮಾಜ, 1000 ವರ್ಷಗಳ ಹಿಂದೆ ಕೂಡ ಈ ಸಮಾಜ ಹೀಗೆ ಇದೆ ಯಾವುದೇ ರೀತಿಯಲ್ಲೂ ಬದಲಾವಣೆ ಆಗಿಲ್ಲ ಬದಲಾವಣೆ ಆಗಬೇಕು ಎಂದು ಜಿಲ್ಲಾಧಿಕಾರಿ ಕೆ.ಎಸ್ ಲತಾ ಕುಮಾರಿ ಹೇಳಿದರು.

ಖಾಲಿ ಕೊಡದೊಂದಿಗೆ ಪ್ರತಿಭಟನೆ ಎಚ್ಚರಿಕೆ



ಬೇಲೂರು: ತಾಲೂಕಿನ ಸನ್ಯಾಸಿಹಳ್ಳಿ ಗ್ರಾಮದಲ್ಲಿ ಕಳೆದ ಸುಮಾರು ನಾಲ್ಕು ತಿಂಗಳಿಂದ ಕುಡಿಯುವ ನೀರಿನ ತೀವ್ರ ಸಮಸ್ಯೆ, ಗ್ರಾಮಸ್ಥರು ದೈನಂದಿನ ಜೀವನ ನಡೆಸಲು ಪರದಾಡುವ ಪರಿಸ್ಥಿತಿ ನಿರ್ಮಾಣವಾಗಿದೆ.

ಗ್ರಾಮದಲ್ಲಿನೀರಿನಸರಬರಾಜುಇಲ್ಲದ ಕಾರಣ ನಾಗರಿಕರು ಸುಮಾರು ಎರಡು ಕಿಲೋಮೀಟರ್ ದೂರದಿಂದಕುಡಿಯುವ ನೀರನ್ನು ತಂದು ಕೊಳ್ಳಬೇ ಕಾದ ದುಸ್ಥಿತಿ ಎದುರಿಸುತ್ತಿ ದ್ದಾರೆ. ಜಿಲ್ಲಾಧಿಕಾರಿಗಳು ಜಿಲ್ಲೆಯಲ್ಲಿ ಕುಡಿಯುವ ನೀರಿನ ಕೊರತೆ ಉಂಟಾಗ ದಂತೆ ಮುನ್ನೆಚ್ಚರಿಕೆ ಕ್ರಮ ಗಳನ್ನು ಕೈಗೊಳ್ಳಲಾಗುತ್ತಿದೆ ಎಂದು ಹಲವು ಸಭೆಗಳಲ್ಲಿ ಹೇಳಿಕೆ ನೀಡುತ್ತಿರುವುದ ಲ್ಲದೆ, ತಾಲೂಕು ಮಟ್ಟದ ಅಧಿಕಾರಿಗಳ ಸಭೆಗಳನ್ನು ನಡೆಸಿ ಪಟ್ಟಣ ಹಾಗೂ ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಉಂಟಾ ಗದಂತೆ ಕ್ರಮವಹಿಸುವಂತೆ ಸೂಚನೆನೀಡಿರುವುದಾಗಿಹೇಳಲಾಗುತ್ತಿದೆ. ಜೊತೆಗೆ ಜಾನುವಾರುಗಳಿಗೆ ಆಹಾರ ಮತ್ತು ನೀರಿನ ಪೂರೈಕೆಯಲ್ಲಿ ವ್ಯತ್ಯಯ ವಾಗಬಾರದೆಂದು ಸ್ಥಳೀಯ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ.ಆದರೆ ಈ ಸೂಚನೆಗಳು ಕಾಗದದಲ್ಲೇ ಉಳಿದಂತಾಗಿದ್ದು, ಸನ್ಯಾಸಿಹಳ್ಳಿ ಗ್ರಾಮದಲ್ಲಿ ಮಾತ್ರ ಸಮಸ್ಯೆ ಇನ್ನೂ ಬಗೆಹರಿಯದಿರುವುದು ಸ್ಥಳೀಯರ ಆಕ್ರೋಶಕ್ಕೆ ಕಾರಣವಾಗಿದೆ.

ಗ್ರಾಮ ಪಂಚಾಯಿತಿ ಪಿಡಿಒ ಅವರಿಗೆ ಈ ಸಮಸ್ಯೆ ಬಗ್ಗೆ ಹಲವುಬಾರಿ ಮನವಿ ಸಲ್ಲಿಸಿದರೂ ಸಹ ಯಾವುದೇ ಕ್ರಮ ಕೈಗೊ ಳ್ಳದೆ ನಿರ್ಲಕ್ಷ್ಯ ತೋರಿಸು ತ್ತಿದ್ದಾರೆ ಎಂಬ ಆರೋಪ ಗ್ರಾಮಸ್ಥರಿಂದ ಕೇಳಿಬರು ತ್ತಿದೆ.ಹೇಳಿ ಕೇಳಿ ಬೇಲೂರಿನಲ್ಲೇ ಯಗಚಿ ಜಲಾಶಯ ಇದ್ದರೂ ಸಹ ಸನ್ಯಾಸಿಹಳ್ಳಿ ಗ್ರಾಮಕ್ಕೆ ಕುಡಿಯುವ ನೀರು ಪೂರೈಕೆ ಆಗದಿರು ವುದು ಅಚ್ಚರಿ ಮೂಡಿ ಸುವ ಸಂಗತಿಯಾಗಿದೆ. ಯಗಚಿ ಜಲಾಶಯದಿಂದ ಅಕ್ಕಪಕ್ಕದ ಜಿಲ್ಲೆಗಳಿಗೂ ಕುಡಿಯುವನೀರು ಪೂರೈಸಲಾಗುತ್ತಿರುವ ಸಂದರ್ಭದಲ್ಲಿ ಸ್ಥಳೀಯ ಗ್ರಾಮಗಳಿಗೆ ಮಾತ್ರ ನೀರು ಸಿಗದಿರುವುದು ಅಧಿಕಾರಿಗಳ ಇಚ್ಛಾಶಕ್ತಿಯ ಕೊರತೆ ಯನ್ನು ತೋರಿಸುತ್ತದೆ ಎಂದು ಗ್ರಾಮಸ್ಥರು ಆರೋಪಿಸುತ್ತಿದ್ದಾರೆ.

ರೇಣುಕಾ ಯಲ್ಲಮ್ಮ ದೇವಿ, ಜಮದಗ್ನಿ ಋಷಿ ಕಲ್ಯಾಣೋತ್ಸವ



ಬೇಲೂರು: ಪಟ್ಟಣದ ಕೋವಿಪೇಟೆ ದುರ್ಗಮ್ಮ ದೇವಸ್ಥಾನದ ಹಿಂಭಾಗದಲ್ಲಿರುವ ಶ್ರೀ ಶಕ್ತಿ ಶ್ರೀ ರೇಣುಕಾ ಯಲ್ಲಮ್ಮ ದೇವಿ ದುರ್ಗಾ ದೇವಿ ಕ್ಷೇತ್ರದಲ್ಲಿ ಹೋಳಿ ಹುಣ್ಣಿಮೆಯ ಅಂಗವಾಗಿ ಲೋಕ ಕಲ್ಯಾಣಾರ್ಥವಾಗಿ ನಡೆಯುವ 19ನೇ ವರ್ಷದ ರೇಣುಕಾ ಯಲ್ಲಮ್ಮ ದೇವಿ ಹಾಗೂ ಜಮದಗ್ನಿ ಋಷಿಯವರ ಕಲ್ಯಾಣೋತ್ಸವ ಮತ್ತು ಜಾತ್ರೆ ಮಹೋತ್ಸವವು ಭಕ್ತಿಭಾವ ಹಾಗೂ ಧಾರ್ಮಿಕ ಉತ್ಸಾಹದ ನಡುವೆ ವೈಭವದಿಂದ ನಡೆಯುತ್ತಿದೆ.

ಮಾರ್ಚ್ , 9 ಮತ್ತು 10ರಂದು ಎರಡು ದಿನಗಳ ಕಾಲ ನಡೆಯುತ್ತಿರುವ ಈ ಮಹೋತ್ಸವದಲ್ಲಿ ವಿವಿಧ ಧಾರ್ಮಿಕ ಪೂಜೆಗಳು, ಹೋಮ?ಹವನಗಳು, ಹಾಗೂ ವಿಶೇಷ ಕಾರ್ಯ ಕ್ರಮಗಳು ನಡೆಯುತ್ತಿವೆ. ಮೊದಲ ದಿನ ದೇವಿಗೆ ಚಂಡಿಕಾಹೋಮ, ದ್ವಿತಹೋಮ ಹಾಗೂ ಜಯಾದಿಹೋಮ ಸೇರಿದಂತೆ ಹಲವು ವಿಧಿವಿಧಾನಗಳನ್ನು ನೆರವೇರಿಸಲಾಯಿತು. ಬಳಿಕ ದೇವಾಲಯದ ಗಂಗೆಸ್ಥಾನವನ್ನು ಪವಿತ್ರ ಗೊಳಿಸಿ ವಿಶೇಷ ಪೂಜೆ ಸಲ್ಲಿಸಲಾಯಿತು. ನಂತರ ಶ್ರೀ ರೇಣುಕಾ ಯಲ್ಲಮ್ಮ ದೇವಿ ಹಾಗೂ ಜಮದಗ್ನಿ ಋಷಿಯವರ ದಿವ್ಯ ಕಲ್ಯಾಣೋತ್ಸವವನ್ನು ಸಂಪ್ರದಾಯಬದ್ಧವಾಗಿ ನೆರವೇರಿಸಲಾಯಿತು.

ಈ ಕ್ಷೇತ್ರವು ಧಾರ್ಮಿಕ ಮಹತ್ವವನ್ನು ಹೊಂದಿದ್ದು ಇಲ್ಲಿ ಚೌಡೇಶ್ವರಿ,ಯಲ್ಲಮ್ಮ ಸೇರಿದಂತೆ ಮೂರು ದೈವಶಕ್ತಿಗಳು ನೆಲೆಸಿವೆ ಎಂದು ಭಕ್ತರು ನಂಬಿಕೆ ಹೊಂದಿದ್ದಾರೆ. ಧರ್ಮ, ನ್ಯಾಯ ಹಾಗೂ ನೀತಿ ಮೌಲ್ಯಗಳನ್ನು ಸಾರುವ ಈ ಮೂರು ಶಕ್ತಿಗಳ ಆರಾಧನೆ ಈ ಕ್ಷೇತ್ರದ ವಿಶೇಷತೆ ಎಂದು ಹೇಳಲಾಗುತ್ತದೆ. ದೇವಿ ಹುತ್ತದ ರೂಪದಲ್ಲಿ ನೆಲೆಸಿರುವುದು ಕ್ಷೇತ್ರದ ಮತ್ತೊಂದು ವಿಶೇಷ ವಾಗಿದ್ದು, ಈ ಸ್ಥಳವನ್ನು ಭಕ್ತರು ಅಪಾರ ಭಕ್ತಿ ಯಿಂದ ಆರಾಧಿಸುತ್ತಾರೆ. ಧರ್ಮದರ್ಶಿಗಳಾದ ಉಮೇಶ್ ಸ್ವಾಮಿ ಮಾತನಾಡಿ, ಈ ಕ್ಷೇತ್ರದಲ್ಲಿ ಪ್ರತಿವರ್ಷವೂ ಲೋಕ ಕಲ್ಯಾಣ ಹಾಗೂ ಲೋಕ ರಕ್ಷಣೆಯ ಸಂಕಲ್ಪದೊಂದಿಗೆ ಜಾತ್ರೆ ಮತ್ತು ಕಲ್ಯಾಣೋತ್ಸವ ವನ್ನು ಆಚರಿಸಲಾಗುತ್ತದೆ. ಈಗಾಗಲೇ19ನೇ ವರ್ಷಕ್ಕೆ ಕಾಲಿಟ್ಟಿರುವ ಈ ಮಹೋ ತ್ಸವ ಭಕ್ತರ ಸಹಕಾರದಿಂ ದಲೇ ನಿರಂತರವಾಗಿ ನಡೆಯುತ್ತಿದೆ.

ಮಕ್ಕಳಲ್ಲಿ ಸಂಸ್ಕೃತಿ, ಸಂಸ್ಕಾರ ಮನೆ ಮಾಡಲಿ: ನಾಗರತ್ನ

ಹಾಸನ: ಭಾರತೀಯ ಸಂಸ್ಕೃತಿ, ಸಂಸ್ಕಾರ ಮಕ್ಕಳಲ್ಲಿ ಬಾಲ್ಯದಿಂದಲೇ ಮನೆ ಮಾಡಲಿ ಎಂದು ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಹಾಗೂ ಮಾಜಿ ಶಾಸಕ ಪ್ರೀತಂ ಗೌಡ ಅವರ ತಾಯಿ ನಾಗರತ್ನ ಜವರೇಗೌಡ ಆಶಿಸಿದರು.

ನಗರದ ಬೂವನಹಳ್ಳಿ ಕೂಡು ಬಳಿ ಇರುವ ಶ್ರೀ ರಂಗನಾಥ ಸ್ವಾಮಿ ಹಿರಿಯ ಪ್ರಾಥಮಿಕ. ಶಾಲೆಯ ಮಾತೃಭೋಜನ ಕಾರ್ಯಕ್ರಮವದಲ್ಲಿ ಮುಖ್ಯ ಅಥಿತಿಗಳಾಗಿ ಭಾಗವಹಿಸಿ ಅವರು ಮಾತನಾಡಿ, ಮಾತೃ ಭೋಜನ ಅಮ್ಮ ಮತ್ತು ಮಗುವಿನ ನಡುವೆ ಬಾಂಧವ್ಯ ಹೆಚ್ಚಿಸುವಂತಹ ಹಾಗೂ ಮಗುವಿನ ಜೀವನದಲ್ಲಿ ತಂದೆ ತಾಯಿಯ ಪಾತ್ರ ಎಷ್ಟು ಗಮನಾರ್ಹವಾಗಿರುತ್ತದೆಂದು ಈ ಕಾರ್ಯಕ್ರಮ ತೋರಿಸುತ್ತಿದೆ ಎಂದರು.ಪಾಶ್ಚಿಮಾತ್ಯ ಸಂಸ್ರೃತಿಗೆ ಮಾರುಹೋಗಿ ಅನ್ಯ ಸಂಸ್ರೃತಿಯನ್ನುಅನುಸರಿಸುತ್ತಿರುವ ಈ ಕಾಲದಲ್ಲಿ ನಮ್ಮ ಹಿಂದೂ ಧರ್ಮದ ಸಂಸ್ರೃತಿಯನ್ನು ಎತ್ತಿ ಹಿಡಿಯುವಂತಹ ಮಕ್ಕಳ ಸರ್ವತೋಮುಖ ಬೆಳವಣಿಗೆಯಲ್ಲಿ ಪೋಷಕರು ಹೆಚ್ಚು ಪ್ರಮುಖ ಎಂಬುದನ್ನು ಈ ಕಾರ್ಯಕ್ರಮದ ಮೂಲಕ ತಿಳಿಸುವ ಕಾರ್ಯವನ್ನು ಈ ಶಾಲೆಯ ಎಲ್ಲಾ ಶಿಕ್ಷಕರು ಪಾಠದೊಡನೆ ಈ ಕಾರ್ಯಕ್ರಮದ ಮೂಲಕ ಮನಮುಟ್ಟುವಂತೆ ತಿಳಿಯಪಡಿಸುವ ಪ್ರಯತ್ನಮಾಡಿದ್ದಾರೆ ಎಂದು ಶ್ಲಾಘಿಸಿದರು. ರಂಗಭೂಮಿ ಕಲಾವಿದೆ ಪೂಜಾ ರಘುನಂದನ್ ಮತ್ತು ರಾಷ್ಟ್ರಸೇವಾಸಮಿತಿ. ಜಿಲ್ಲಾಸಹಕಾರ್ಯವಾಹಿಕರಾದ ಮಮತ ಮಂಜುನಾಥ್, ಸಂಸ್ಥೆಯ ಕಾರ್ಯದರ್ಶಿ ಬಿ.ವಿ.ಶ್ರೀನಿವಾಸ್ ಇದ್ದರು.



ಪ್ರೊ.ಕೃಷ್ಣಪ್ಪ, ಮಗನ ವಿರುದ್ಧ ಕ್ರಮಕ್ಕೆ ಒತ್ತಾಯ

ಹಾಸನ: ಬೀದಿನಾಯಿಗೆ ಹಲ್ಲೆಮಾಡಿ ಸಾಯಿಸಿರುವ ಮತ್ತು ನಾಯಿಗೆ ಊಟ ಹಾಕಿದ ಕಾರಣಕ್ಕೆ ವೈದ್ಯರೊಬ್ಬರಿಗೆ ಧಮ್ಕಿ ಹಾಕಿ ಹಲ್ಲೆಗೆ ಮುಂದಾಗಿರುವ ಪ್ರೊ. ಕೃಷ್ಣಪ್ಪ ಹಾಗೂ ಅವರ ಪುತ್ರನ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಸಾಮಾಜಿಕ ಹೋರಾಟಗಾರರದ ದಿನೇಶ್ ಒತ್ತಾಯಿಸಿದರು. ಸೋಮವಾರ ಸುದ್ದಿಗೋಷ್ಟಿಯಲ್ಲಿ ಮಾತನಾಡಿದ ಅವರು, ನಗರದ ಕುವೆಂಪು ನಗರ ಬಡಾವಣೆಯಲ್ಲಿನ ನಿರ್ಜನ ಪ್ರದೇಶದಲ್ಲಿ ನಾವು, ನಮ್ಮ ಸ್ನೇಹಿತರಾದ ಡಾ.ಶ್ರೀನಿವಾಸ್ ಮೂರ್ತಿ ಮೊದಲಾದವರು ನಾಯಿಗಳಿಗೆ ಕಳದೆ ನಾಲ್ಕು ವರ್ಷಗಳಿಂದ ಆಹಾರ ಹಾಕಿ ಪೋಷಣೆ ಮಾಡುತ್ತ ಬಂದಿದ್ದೇವೆ. ಅಲ್ಲಿ ಯಾರಿಗೂ ತೊಂದರೆ ಕೊಡಬೇಕೆಂಬ ಉದ್ದೇಶದಿಂದ ಆಹಾರ ಹಾಕಿಲ್ಲ, ಆದರೆ ಪ್ರೊ. ಕೃಷ್ಣಪ್ಪ ಹಾಗೂ ಅವರ ಪುತ್ರ, ವೈದ್ಯರನ್ನು ತಡೆದು ಬೈಯ್ದು,ಇಲ್ಲಿ ಯಾವ ನಾಯಿಗೂ ಊಟ ಹಾಕಬೇಡಿ ಎಂದು ಧಮ್ಕಿ ಹಾಕಿದ್ದಾರೆ ಎಂದು ಆರೋಪ ಮಾಡಿದರು.

ಆದಿಚುಂಚನಗಿರಿ ಕೊಡಗು, ಹಾಸನ ಶಾಖಾ ಮಠದ ಶ್ರೀ ಶಂಭುನಾಥ ಸ್ವಾಮೀಜಿ ಮಾಹಿತಿ
12ರಿಂದ ರಂಗನಾಥಸ್ವಾಮಿ ಜಾತ್ರಾ, ಮಹೋತ್ಸವ

ಕೊಣನೂರು: ಚಿಕ್ಕಬೊಮ್ಮನಹಳ್ಳಿಯಲ್ಲಿರುವ ಆದಿಚುಂಚನಗಿರಿ ಶಾಖಾ ಮಠದ ಶ್ರೀ ರಂಗನಾಥಸ್ವಾಮಿ ಜಾತ್ರಾ ಮಹೋತ್ಸವ ಮಾ. 12ರಿಂದ 14ವರೆಗೆ ನಡೆಯಲಿದ್ದು, ಇದಕ್ಕಾಗಿ ಸಕಲ ಸಿದ್ಧತೆ ಕೈಗೊಳ್ಳಲಾಗಿದೆ ಎಂದು ಆದಿಚುಂಚನಗಿರಿ ಕೊಡಗು ಮತ್ತು ಹಾಸನ ಶಾಖಾ ಮಠದ ಶ್ರೀ ಶಂಭುನಾಥ ಸ್ವಾಮೀಜಿ ತಿಳಿಸಿದರು.

ಹೋಬಳಿಯ ಚಿಕ್ಕ ಬೊಮ್ಮನಹಳ್ಳಿ ಶ್ರೀ ರಂಗನಾಥಸ್ವಾಮಿ ಸುಕ್ಷೇತ್ರದಲ್ಲಿ ಮೇಳೆಯಮ್ಮ ದೇವತೆ ಸೇರಿದಂತೆ ಹಲವಾರು ಅಧಿದೇವತೆಗಳು ನೆಲೆಸಿದ್ದು ಐತಿಹಾಸಿಕವಾಗಿ ಅಪಾರ ಮಹತ್ವ ಗಳಿಸಿದೆ. ಈ ಸುಕ್ಷೇತ್ರವು ಆದಿಚುಂಚನಗಿರಿ ಮಠದ ಸುಪರ್ದಿಗೆ ಬಂದ ಬಳಿಕ ಜಾತ್ರಾ ವೈಭವ ಮತ್ತಷ್ಟು ಹೆಚ್ಚಿದೆ. ಇದಕ್ಕೂ ಮುನ್ನ ಸುಕ್ಷೇತ್ರದ ಧಾರ್ಮಿಕ ಪರಂಪರೆಗೆ ಅನುಗುಣವಾಗಿ ಸುತ್ತಮುತ್ತಲಿನ ಹಳ್ಳಿಗಳಲ್ಲಿ ದವಸ ಧಾನ್ಯವನ್ನು ಭಿಕ್ಷೆ ರೂಪದಲ್ಲಿ ಸಂಗ್ರಹಿಸಲಾಗುತ್ತಿತ್ತು. ಹಾಗಾಗಿ ಜಾತ್ರೆಯಲ್ಲಿ ಸುತ್ತಲಿನ ಗ್ರಾಮಗಳ ಭಕ್ತರು ಭಾಗವಹಿಸಿ ಸಹಕಾರ ನೀಡಬೇಕು ಎಂದು ಮನವಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಮನವಿ ಮಾಡಿದರು. ರಂಗನಾಥಸ್ವಾಮಿ ಸುಕ್ಷೇತ್ರದಲ್ಲಿ ಮೂಲ ರಾಮಯ್ಯ ಪರದೇಶಿ ಶ್ರೀಗಳ ಆಶೀರ್ವಾದ, ಜಗದ್ಗುರು ಡಾ.ಶ್ರೀ ನಿರ್ಮಲಾನಂದನಾಥ ಶ್ರೀಗಳ ಮಾರ್ಗದರ್ಶನದಲ್ಲಿ ಸಿದ್ಧತಾ ಕಾರ್ಯಗಳು ಆರಂಭವಾಗಿವೆ. ಮಾ.12ರಂದು ಸಂಜೆ ಗೋಧೂಳಿ ಲಗ್ನದಲ್ಲಿ ದೇವಾಲಯದ ಆವರಣದಲ್ಲಿ ಧರ್ಮಧ್ವಜ ಸ್ಥಾಪನಾ ಕಾರ್ಯಕ್ರಮ ನಡೆಯಲಿದೆ. 13ರಂದು ಬೆಳಗ್ಗೆ ಕ್ಷೇತ್ರದ ಅಧಿದೇವತೆ ಶ್ರೀ ರಂಗನಾಥಸ್ವಾಮಿಗೆ ಪುಣ್ಯಾಹ, ವಿವಿಧ ಅಭೀಷೇಕ, ಸುದರ್ಶನ ಹೋಮ, ಗಣಪತಿ ಹೋಮ, ಮಹಾಪೂಜೆ, ಷೋಡಷೋಪಚಾರಪೂಜೆ, ಮಹಾರತಿ ಸೇರಿದಂತೆ ವಿಶೇಷಪೂಜೆ ಕೈಂಕರ್ಯ ನಡೆಯಲಿದೆ. ಸಂಜೆ ಗೋಧೂಳಿ ಲಗ್ನದಲ್ಲಿ ಮಹಾ ರಥೋತ್ಸವ ಜರುಗಲಿದೆ ಎಂದರು. ರಥೋತ್ಸವದಲ್ಲಿ ಭಾಗವಹಿಸುವ ಭಕ್ತರಿಗೆ ಅನ್ನ ದಾಸೋಹ ಏರ್ಪಡಿಸಲಾಗಿದೆ. ದೇವರ ಆಶೀರ್ವಾದ ಭಕ್ತರ ಮೇಲಿರಲಿದ್ದು ಹೆಚ್ಚಿನ ಸಂಖ್ಯೆಯ ಪಾಲ್ಗೊಂಡು ದೈವಕೃಪೆಗೆ ಪಾತ್ರರಾಗಬೇಕು ಎಂದು ಶ್ರೀಗಳು ವಿನಂತಿಸಿದರು. ಮುಖಂಡರಾದ ಬೊಮ್ಮನಹಳ್ಳಿ ಕೋಡಿಗೌಡ, ತರಿಗಳಲೆ ಗ್ರಾ ಪಂ ಮಾಜಿ ಅಧ್ಯಕ್ಷ ಶ್ರೀನಾಥ್, ರಾಮನಾಥಪುರ ಗ್ರಾಪಂ ಮಾಜಿ ಉಪಾಧ್ಯಕ್ಷ ಸಿದ್ದಯ್ಯ, ಮಹೇಶ್ ಮತ್ತಿತರರು ಇದ್ದರು.

ಮುತ್ತಿನಪಲ್ಲಕ್ಕಿ ಮೆರವಣಿಗೆ

ರಥೋತ್ಸವಕ್ಕೆ ಆಗಮಿಸುವ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಅವರನ್ನು ಮುತ್ತಿನಪಲ್ಲಕ್ಕಿಯಲ್ಲಿ ದೇವಾಲಯದ ಸನ್ನಧಿಗೆ ಕರೆತಂದು ಪೂಜಾ ವಿಧಾನ ಪೂರೈಸಲಾಗುವುದು. ನಂತರ ನಡೆಯುವ ಧಾರ್ಮಿಕ ಸಭೆಯಲ್ಲಿ ನಿರ್ಮಲಾನಂದನಾಥ ಶ್ರೀಗಳು ಆಶೀರ್ವಚನ ನೀಡಲಿದ್ದಾರೆ. ಶಾಸಕ ಎ. ಮಂಜು, ಮಾಜಿ ಶಾಸಕ ಎ.ಟಿ. ರಾಮಸ್ವಾಮಿ, ವಿವಿಧ ಮಠಾಧೀಶರು ಪಾಲ್ಗೊಳ್ಳಲಿದ್ದಾರೆ. ವೇದಿಕೆ ಕಾರ್ಯಕ್ರಮದಲ್ಲಿ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಪ್ರಗತಿಪರ ಕೃಷಿಕ ಎಂ.ಸಿ. ರಂಗಸ್ವಾಮಿ, ಗುಂಡುರಾಜ್ ಅವರನ್ನು ಸನ್ಮಾನಿಸಲಾಗುವುದು ಎಂದು ತಿಳಿಸಿದರು.

ಗರಿಷ್ಠ 32° ಕನಿಷ್ಠ 21°

ಹೊಸ ದಿಗಂತ

ಮಂಗಳವಾರ
10 ಮಾರ್ಚ್ 2026

ತುಮಕೂರು

ಬ್ರಹ್ಮರಥೋತ್ಸವ



ಚಿಕ್ಕನಾಯಕನಹಳ್ಳಿ ತಾಲೂಕು ಶೆಟ್ಟಿಕೆರೆ ಗ್ರಾಮದಲ್ಲಿ ಶ್ರೀ ಕಾಲಭೈರವಸ್ವಾಮಿ ಬ್ರಹ್ಮರಥೋತ್ಸವವು ವಿಜೃಂಭಣೆಯಿಂದ ನಡೆಯಿತು.

ಪ್ಲಾಸ್ಟಿಕ್ ಬಳಕೆ ನಿಷೇಧಕ್ಕೆ ಒತ್ತು: ಕೆ.ಶೇಷಾದ್ರಿ | ೨
ಕೋಲಾರ ಅಪಘಾತಮುಕ್ತವಾಗಲಿ | ೩
ಭಾರತದ ದಾಳಿಂಬೆಗೆ ವಿಶ್ವಾದ್ಯಂತ ಬೇಡಿಕೆ | ೪

ಕಿರುಸುದ್ದಿ

ಶಾಲೆ ವಾರ್ಷಿಕೋತ್ಸವ

ಮಧುಗಿರಿ: ಪ್ರತಿಯೊಬ್ಬ ವ್ಯಕ್ತಿಯ ಜೀವನ ಉಜ್ವಲವಾಗಬೇಕೆಂದರೆ ವಿದ್ಯೆ ಬಹುಮುಖ್ಯ. ವಿದ್ಯೆ ಮಾತ್ರ ಮನುಷ್ಯನನ್ನು ಯಶಸ್ವಿ ವ್ಯಕ್ತಿಯನ್ನಾಗಿಸುತ್ತದೆ ಎಂದು ಅಕ್ಷರ ದಾಸೋಹ ಸಹಾಯಕ ನಿರ್ದೇಶಕ ಚಿತ್ತಯ್ಯ ತಿಳಿಸಿದರು. ರಂಟವಳ ನಿವೇದಿತ ಆಂಗ್ಲ ಮಾಧ್ಯಮ ಶಾಲೆ ವಾರ್ಷಿಕೋತ್ಸವ ಸಮಾರಂಭದಲ್ಲಿ ಮಾತನಾಡಿ ಈ ಶಾಲೆ ಗಡಿಭಾಗದಲ್ಲಿ ಉತ್ತಮ ಹೆಸರನ್ನು ಗಳಿಸಿ ವರ್ಷದಿಂದ ವರ್ಷಕ್ಕೆ ಮಕ್ಕಳ ಕಲಿಕೆಯಲ್ಲಿ ಯಶಸ್ವಿಯನ್ನು ಕಂಡಿದೆ. ಕೇವಲ ವಿದ್ಯಾವಂತರಾಗಿ ಅಂಕಗಳಿದರಷ್ಟೇ ಸಾಲದು ಸಂಸ್ಕಾರವನ್ನು ಕಲಿತು ಪೋಷಕರ ಶ್ರಮಕ್ಕೆ ತಕ್ಕ ಪ್ರತಿಫಲ ತರುವಂತೆ ಆಗಬೇಕು ಎಂದು ತಿಳಿಸಿದರು. ಪ್ರಧಾನ ಭಾಷಣಕಾರ ಹಿರಿಯ ಸಾಹಿತಿ ಪ್ರೊ.ಮಲನ ಮೂರ್ತಿ ಮಾತನಾಡಿ ಹಳ್ಳಿಗಳು ದೇಶದ ಬೆನ್ನೆಲುಬು ಅವು ಅಭಿವೃದ್ಧಿಯಾಗಲು ಮಕ್ಕಳಿಗೆ ಶಿಕ್ಷಣ ಅವಶ್ಯಕತೆ. ಸ್ಥಳೀಯ ಗ್ರಾಮದ ನಿವೃತ್ತ ಯೋಧ ಮಂಜುನಾಥ್ ಮಾತನಾಡಿ ಪೋಷಕರು ಮಕ್ಕಳ ವಿದ್ಯಾಭ್ಯಾಸಕ್ಕೆ ಹೆಚ್ಚು ಆಸಕ್ತಿ ವಹಿಸುತ್ತಿರುವುದು ಶ್ಲಾಘನೀಯ. ಲಭ್ಯವಿರುವ ಉತ್ತಮ ಶಾಲೆ ಆಯ್ಕೆ ಮಾಡಿ ಸ್ಥಳೀಯವಾಗಿ ತಮ್ಮ ಹಾರೈಕೆಯಲ್ಲಿ ಶಿಕ್ಷಣ ಕೊಡಿಸಿ ಎಂದರು. ಆಡಳಿತ ಮಂಡಳಿ ಅಧ್ಯಕ್ಷ ಶಿವಣ್ಣ ಗ್ರಾಮ ಪಂಚಾಯಿತಿ ನಿಕಟಪೂರ್ವ ಅಧ್ಯಕ್ಷರು, ಸದಸ್ಯರು, ರೋಟರಿ ಅಧ್ಯಕ್ಷ ಎಂ.ಶಿವಲಿಂಗಪ್ಪ, ಜಯರಾಮಯ್ಯ ಹಾಗೂ ಗ್ರಾಮಸ್ಥರು ಇದ್ದರು.

ಮಹಿಳಾ ದಿನಾಚರಣೆ

ಮಧುಗಿರಿ: ಹೆಣ್ಣು ಜೀವ ಕಾರುಣ್ಯದ ಭುವನ ಭಾಗ್ಯದ ಬೆಳಕು ಎಂದು ಸಾಹಿತಿ ಪ್ರೊ.ಮ.ಲ.ನ. ಮೂರ್ತಿ ಅಭಿಪ್ರಾಯ ಪಟ್ಟರು. ಪಟ್ಟಣದ ಸಹೃದಯ ಬಳಗ ಏರ್ಪಡಿಸಿದ್ದ ಅಂತರ ರಾಷ್ಟ್ರೀಯ ಮಹಿಳಾ ದಿನಾಚರಣೆಯಲ್ಲಿ ಮಾತನಾಡಿ, ಮಹಿಳೆಯರು ಪ್ರಸ್ತುತವಾಗಿ ಎದುರಿಸುತ್ತಿರುವ ಬಹುರೂಪಿ ಸಂಕಟ, ಸಮಸ್ಯೆ, ಸವಾಲುಗಳನ್ನು ಪರಿಹರಿಸಲು ಸುಲಭಸಾಧ್ಯವಲ್ಲ. ಅವರ.ಮೇಲಿನ ದೌರ್ಜನ್ಯ, ದಬ್ಬಾಳಿಕೆ, ಅತ್ಯಾಚಾರ, ಹಿಂಸೆ, ಶೋಷಣೆ,ಬೆಸೆದು, ಬೆಳೆದಿವೆ. ಇವುಗಳ ಪರಿಹಾರವೆಂದರೆ ಮಹಿಳೆಯರಿಗೆ ಶಿಕ್ಷಣ, ಆರೋಗ್ಯ, ಉದ್ಯೋಗ, ರಾಜಕಾರಣದಲ್ಲಿ ಸಮಾನ ಅವಕಾಶ ಕಲ್ಪಿಸುವುದು ಎಂದರಲ್ಲದೆ ಭಾರತೀಯ ಸಂಸ್ಕೃತಿಯಲ್ಲಿನ ಒಳ್ಳೆಯದೆಲ್ಲಕ್ಕೆ ಆದ್ಯತೆ ನೀಡಬೇಕು. ಬಿಡದೆ ಅನುಸರಿಸಬೇಕು ಹಾಗೂ ಜಾತೀಯತೆ , ಅಸ್ಪೃಶ್ಯತೆ, ಮತಾಂಧತೆ, ಸಣ್ಣತನ ಸಂಕುಚಿತ ಮನೋಭಾವನೆಯಿಂದ ದೂರ ಉಳಿಯಬೇಕು ಎಂದರು. ಬಳಗದ ಸದಸ್ಯರು ಸಂವಾದ ನಡೆಸಿಕೊಟ್ಟರು. ಆಸಕ್ತರು, ಸಾರ್ವಜನಿಕರು ಭಾಗವಹಿಸಿದ್ದರು. ಗ್ರಂಥಪಾಲಕ ನಾಗಭೂಷಣ. ಜಿ.ಎಸ್.ಸ್ವಾಗತಿಸಿ, ನಿರೂಪಿಸಿ ವಂದಿಸಿದರು.

ಗಡಿನಾಡಿನ ಮಕ್ಕಳ ಶೈಕ್ಷಣಿಕ ಪ್ರಗತಿಗೆ ಆದ್ಯತೆ

ಪಾವಗಡ: ಗಡಿನಾಡಿನ ಜನತೆ ತಮ್ಮ ಮಕ್ಕಳ ಶೈಕ್ಷಣಿಕ ಪ್ರಗತಿಗೆ ಆದ್ಯತೆ ನೀಡಬೇಕು, ಗ್ರಾಮೀಣ ಭಾಗದ ವಿದ್ಯಾರ್ಥಿಗಳ ಶೈಕ್ಷಣಿಕ್ಕಾಗಿಅಗತ್ಯ ಸಹಾಯ ಮತ್ತು ಸಹಕಾರ ನೀಡಲು ಸದಾ ಸಿದ್ದರಿದ್ದೇವೆ ಎಂದು ಸಮಾಜ ಸೇವಕ ಹಾಗೂ ಗುತ್ತಿಗೆದಾರ ಪರಿಟಾಲ ಸುಧಾಕರ್ ತಿಳಿಸಿದರು. ತಾಲೂಕಿನತಿರುಮಣಿಯಕರ್ನಾಟಕ ಪಬ್ಲಿಕ್ ಶಾಲೆಯಲ್ಲಿ ಸೋಮವಾರತಮ್ಮ ಮೊಮ್ಮಗಆರ್ಯನ್ ದಯಾನಂದ್‌ರವರ ಮೂರನೇ ಹುಟ್ಟುಹಬ್ಬದ ಅಂಗವಾಗಿ ವಿದ್ಯಾರ್ಥಿಗಳಿಗೆ ಅಗತ್ಯ ಶಾಲಾ ಪರಿಕರ ವಿತರಿಸಿ ಮಾತನಾಡಿದರು. ಹುಟ್ಟುಹಬ್ಬದ ಆಚರಣೆಯ ಭರದಲ್ಲಿ ದುಂದುವೆಚ್ಚ ಮಾಡದೆ ಪರಿಟಾಲ ಲಕ್ಷ್ಮಿಶ್ರಾವ್ಯ ಮತ್ತುದಯಾನಂದ್ ದಂಪತಿಗಳ ಮಗ ಹಾಗೂ ನನ್ನ ಮೊಮ್ಮಗನಾದಆರ್ಯಾನ್‌ದಯಾನಂದ್ ಹುಟ್ಟಹಬ್ಬವನ್ನುತಿರುಮಣಿ ಸರ್ಕಾರಿ ಶಾಲೆಯಲ್ಲಿ ಸರಳವಾಗಿ ಆಚರಿಸಿ ವಳ್ಳೂರು, ವೆಂಕಟಮ್ಮನಹಳ್ಳೀ, ಕ್ಯಾತಗಾನಚೆರ್ಲು, ಬಳಸಮುದ್ರ, ಇಂಟುರಾಯನಹಳ್ಳಿ, ತಿರುಮಣಿ, ಅನ್ನದಾನಪುರ, ರಾಯಚೆರ್ಲು, ಆರ್.ಅಚ್ಚಮ್ಮನಹಳ್ಳಿ ಗ್ರಾಮಗಳಲ್ಲಿರುವ ಶಾಲೆಗಳು ಮತ್ತುಅಂಗನವಾಡಿ ಮಕ್ಕಳಿಗೆ ಅಗತ್ಯ ಶಾಲಾ ಪರಿಕರದಕಿಟ್ ವಿತರಿಸಲಾಗುತ್ತಿದೆ ಎಂದರು. ಇಂದಿರಾ ಪರಿಟಾಲ ಸುಧಾಕರ್, ಸಮಾಜ ಸೇವಕ ಹಾಗೂ ಯುವ ಮುಖಂಡ ಬತ್ತಿನೇನಿ ನಾನಿ, ಗ್ರಾ.ಪಂ ಮಾಜಿ ಅಧ್ಯಕ್ಷಚನ್ನಕೇಶವ, ತಕ್ಕಿಪಾಟಿ ಬೊಮ್ಮಯ್ಯ, ಅನ್ನದಾನಪುರಜಯರಾಮ್, ಅಶೋಕ್, ಮುರಳಿ, ಪ.ವೆಂಕಟಸ್ವಾಮಿ, ಪ.ರವಿ, ಮುತ್ಯಾಲಪ್ಪ, ಮರಿಯಪ್ಪ, ಪೊಸುಲು ಮುತ್ಯಾಲಪ್ಪ, ಡಿಎಂಸಿ ಕೃಷ್ಣಪ್ಪ ಸೇರಿದಂತೆ ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಇದ್ದರು.

ಪ್ರತಿಭಟನೆ ನಡೆಸಿ, ಡಿಸಿಗೆ ಮನವಿ ಸಲ್ಲಿಸಿದ ನೂರಾರು ರೈತರು

ರೈತರ ಬೇಡಿಕೆ ಈಡೇರಿಸಲಿ

ತುಮಕೂರು: ಕೆರೆಗಳ ಗೋಡು ಮಣ್ಣನ್ನು ತಮ್ಮ ತೋಟಗಳಿಗೆ ಹಾಕಿಕೊಳ್ಳಲು ರೈತರಿಗೆ ಅನುಮತಿ ನೀಡಬೇಕು. ಕೈಗಾರಿಕೆ ಹೆಸರಿನಲ್ಲಿ ರೈತರ ಫಲವತ್ತಾದ ಭೂಮಿಯನ್ನು ವಶಪಡಿಸಿಕೊಳ್ಳುವುದನ್ನು ಕೈಬಿಡಬೇಕು ಹಾಗೂ ಇನ್ನಿತರ ಬೇಡಿಕೆಗಳನ್ನು ಒಳಗೊಂಡಂತೆ ಕರ್ನಾಟಕ ರಾಜ್ಯ ರೈತಸಂಘದ ಹಾಗೂ ಹಸಿರುಸೇನೆಯ ರಾಜ್ಯ ಸಂಚಾಲಕ ಆನಂದ ಪಟೇಲ್ ನೇತೃತ್ವದಲ್ಲಿ ನೂರಾರು ರೈತರು ಪ್ರತಿಭಟನೆ ನಡೆಸಿ, ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದರು.



ನಗರದ ಟೌನ್‌ಹಾಲ್ ವೃತ್ತದಲ್ಲಿ ಸಮಾವೇಶಗೊಂಡ ಕುಣಿಗಲ್, ಗುಬ್ಬಿ, ಕೊರಟಗೆರೆ, ಚಿಕ್ಕನಾಯಕನಹಳ್ಳಿ ಹಾಗೂ ಇನ್ನಿತರ ತಾಲೂಕುಗಳ ರೈತರು, ಸರಕಾರಗಳ ರೈತ ವಿರೋಧಿ ನೀತಿಯನ್ನು ಖಂಡಿಸಿ ಟೌನ್‌ಹಾಲ್ ವತ್ತದಿಂದ ಜಿಲ್ಲಾಧಿಕಾರಿಗಳ ಕಚೇರಿಯವರೆಗೆ ಪ್ರತಿಭಟನಾ ಮೆರವಣಿಗೆ ನಡೆಸಿ, ಜಿಲ್ಲಾಧಿಕಾರಿಗಳ ಕಚೇರಿ ಬಳಿ ಕೆಲ ಕಾಲ ಧರಣಿ ನಡೆಸಿ, ಜಿಲ್ಲಾಧಿಕಾರಿ ಶುಭ ಕಲ್ಯಾಣ್‌ಗೆ ಮನವಿ ಸಲ್ಲಿಸಿದರು.

ಜಿಲ್ಲಾಧಿಕಾರಿಗಳ ಕಚೇರಿ ಬಳಿ ಸಮಾವೇಶಗೊಂಡ ರೈತರನ್ನು ಉದ್ದೇಶಿಸಿ ಮಾತನಾಡಿದ ಕರ್ನಾಟಕ ರಾಜ್ಯ ರೈತ ಸಂಘದ ರಾಜ್ಯ ಸಂಚಾಲಕ ಆನಂದ ಪಟೇಲ್, ರಾಜ್ಯ ಸರಕಾರ ಕೈಗಾರಿಕೆಗಳ ಅಭಿವೃದ್ಧಿ ಹೆಸರಿನಲ್ಲಿ ಕೆಐಎಡಿಬಿ ಎಂಬ ಸಂಸ್ಥೆಯ ಮೂಲಕ ರೈತರ ಫಲವತ್ತಾದ ಭೂಮಿಯನ್ನು ಅತ್ಯಂತ ಕಡಿಮೆ ಬೆಲೆಗೆ ಸ್ವಾಧೀನ ಪಡಿಸಿಕೊಂಡು ಕೆಲವು ವರ್ಷಗಳ ನಂತರ ಉದ್ದಿಮೆದಾರರಿಗೆ ಮಾರಾಟ ಮಾಡುವ ಮೂಲಕ ರಿಯಲ್ ಎಸ್ಟೇಟ್ ದಂಧೆಗೆ ಕುಮ್ಮಕ್ಕು ನೀಡುತ್ತಿದೆ.

ನೀರಿನ ಮೂಲಗಳಾದ ಕೆರೆ ಕಟ್ಟೆಗಳಲ್ಲಿ ಇಂದು ಹೂಳು ತುಂಬಿದೆ. ರೈತರ ಜಮೀನಿನಲ್ಲಿದ್ದ ಮಣ್ಣು ಮಳೆಗಾಲದಲ್ಲಿ ನೀರಿನೊಂದಿಗೆ ಕೆರೆ ಸೇರುತ್ತಿದೆ. ಕೆರೆಯ ಹೂಳು ಮಣ್ಣಿನ ಮೇಲೆ ರೈತರಿಗೆ ಹಕ್ಕಿದೆ. ಆದರೆ ಸರಕಾರ ಕ್ಯೂ ಮೀಟರ್ ಲೆಕ್ಕದಲ್ಲಿ ಕೆರೆಯ ಗೋಡು ಮಣ್ಣನ್ನು ಮಾರಿಕೊಳ್ಳಲು ಹೊರಟಿದೆ. ಇಟ್ಟಿಗೆ ಪ್ಯಾಕ್ಟರಿಗಳ ಮಾಲೀಕರಿಗೆ ಕೆರೆಯ ಮಣ್ಣು ಮಾರಿ, ಸಂಪನ್ಮೂಲ ಕ್ರೂಢೀಕರಣಕ್ಕೆ ಮುಂದಾಗಿರುವುದು ನಾಚಿಕೇಗೇಡಿನ ಸಂಗತಿ.

ಸರಕಾರ ಕೂಡಲೇ ಕೆರೆಯ ಕೆನೆ ಮಣ್ಣನ್ನು ರೈತರು ತಮ್ಮ ಹೊಲ, ಗದ್ದೆಗಳಿಗೆ ಟ್ರಾಕ್ಟರ್‌ಗಳು, ಎತ್ತಿನ ಗಾಡಿಗಳಲ್ಲಿ ತೆಗೆದುಕೊಂಡು ಹೋಗಲು ಅನುಮತಿ ನೀಡಬೇಕು.ರಾಗಿ ಖರೀದಿಗಳಲ್ಲಿ ಆಗುತ್ತಿರುವ ತೊಂದರೆಯನ್ನು ಸರಿಪಡಿಸಬೇಕೆಂದು ಎಂದು ಆನಂದ ಪಟೇಲ್ ಒತ್ತಾಯಿಸಿದರು.

ಈ ಸರಕಾರ ಬಂದು ಮೂರು ವರ್ಷ ಕಳೆದರೂ ಒಂದೇ ಒಂದು ಬಗರ್‌ಹುಕ್ಕುಂ ಕಮಿಟಿ ಸಭೆ ನಡೆಸಿಲ್ಲ, ಮೂರು ತಲೆಮಾರಿನಿಂದಲೂ ಸರಕಾರಿ ಭೂಮಿ ಉಳುಮೆ ಮಾಡುತ್ತಾ ಫಾರಂ. ನಂಬರ್ 50,53 ಅರ್ಜಿ ಸಲ್ಲಿಸಿದ್ದರೂ ಇದುವರೆಗೂ ಮಂಜುರಾತಿ ನೀಡಿಲ್ಲ,ಬದಲಾಗಿ ಅರಣ್ಯ ಇಲಾಖೆಯ ಮೂಲಕ ಬಗರ್ ಹುಕ್ಕಂ ರೈತರಿಗೆ ಕಿರುಕುಳ ನೀಡಿ ಒಕ್ಕಲೆಬಿಸಲು ಹೊರಟಿದೆ.ಜಿಲ್ಲಾಡಳಿತ ಇದಕ್ಕೆ ಅವಕಾಶ ನೀಡದೆ.

ಅರ್ಹರಿಗೆ ಸಾಗುವಳಿ ಚೀಟಿ ನೀಡಿ, ತಲೆಮಾರುಗಳಿಂದ ಉಳುಮೆ ಮಾಡುತ್ತಿರುವ ಜನರಿಗೆ ನ್ಯಾಯ ಒದಗಿಸಬೇಕು. ಹಾಗೆಯೇ ಎತ್ತಿನ ಹೊಳೆ, ಭದ್ರ ಮೇಲ್ದಂಡೆ ಬೇಗ ಪೂರ್ಣಗೊಳಿಸುವುದು ಮತ್ತು ಹೇಮಾವತಿ ಯೋಜನೆಯಿಂದ ನಿಗಧಿತ 24.08 ಟಿ.ಎಂ.ಸಿ ನೀರು ತರಲು ಅಗತ್ಯ ಕ್ರಮವನ್ನು ಜಿಲ್ಲಾಡಳಿತ ಕೈಗೊಳ್ಳಬೇಕೆಂದು ಆನಂದಪಟೇಲ್ ಜಿಲ್ಲಾಧಿಕಾರಿಗಳನ್ನು ಆಗ್ರಹಿಸಿದರು.

ಮನವಿ ಸ್ವೀಕರಿಸಿ ಮಾತನಾಡಿದ ಜಿಲ್ಲಾಧಿಕಾರಿ ಶುಭ ಕಲ್ಯಾಣ್, ರೈತರ ದೂರುಗಳ ಹಿನ್ನೆಲೆಯಲ್ಲಿ ಚಿಕ್ಕನಾಯಕನಹಳ್ಳಿ, ಗುಬ್ಬಿ ಮತ್ತು ತಿಪಟೂರು ಎಪಿಎಂಸಿಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದು, ನಾವು ಭೇಟಿ ನೀಡಿದ ವೇಳೆ 50 ಕೆ.ಜಿ. 900 ಗ್ರಾಂ ಮಾತ್ರ ತೆಗೆದುಕೊಳ್ಳಲಾಗುತ್ತಿದೆ.

ನಿಮ್ಮದೂರಿನಹಿನ್ನೆಲೆಯಲ್ಲಿಮತ್ತೊಮ್ಮೆಪರಿಶೀಲನೆ ನಡೆಸುತ್ತೇನೆ. ಹಾಗೆಯೇ ಬೆಸ್ಕಾಂಗೆ ಸಂಬಂಧಿಸಿದಂತೆ ಯಾವುದೇ ದೂರುಗಳಿದ್ದರೆ ದೂ.7304975519 ಅಥವಾ 0816-2213400 ಕೆರೆ ಮಾಡಿದರೆ ತಕ್ಷಣ ಸ್ಪಂದಿಸುವ ಕೆಲಸ ಮಾಡುತ್ತೇವೆ.ನಾನು ಕೂಡ ಇದನ್ನು ಪ್ರತಿದಿನ ಮೇಲುಸ್ತುವಾರಿ ನಡೆಸುತ್ತಿದ್ದು, ರೈತರಿಗೆ ಯಾವುದೇ ತೊಂದರೆಯಾಗದ ರೀತಿ ಅಗತ್ಯ ಕ್ರಮ ವಹಿಸಲಾಗುವುದು ಎಂದರು

ಪ್ರತಿಭಟನೆಯಲ್ಲಿ ಕರ್ನಾಟಕ ರಾಜ್ಯ ರೈತ ಸಂಘ ಮತ್ತು ಹಸಿರು ಸೇನೆ ಜಿಲ್ಲಾಧ್ಯಕ್ಷರಾಧ ಧನಂಜಯ್ ಆರಾಧ್ಯ, ಸಣ್ಣರಾಮೇಗೌಡ,ಚಿರತೆ ಚಿಕ್ಕಣ್ಣ, ಪಂಡಿತಣ್ಣ, ಅನಿಲ್‌ಕುಮಾರ್ ಸೇರಿದಂತೆ ಹಲವರು ಪಾಲ್ಗೊಂಡಿದ್ದರು.

ಶ್ವೇತಪತ್ರ ಒದಗಿಸಿಲ್ಲ

ಅನ್ನ ಬೆಳೆಯುವ ರೈತನ ಬಳಿ ಭೂಮಿ ಇರಬೇಕೇ ಹೊರತು, ಉದ್ದಿಮೆದಾರರ ಬಳಿ ಅಲ್ಲ.ಸರಕಾರ ಕೆಐಎಡಿಬಿ ಮೂಲಕ ಇದುವರೆಗೂ ರೈತರಿಂದ ಕೈಗಾರಿಕೆಗಳಿಗೆ ವಶಪಡಿಸಿಕೊಳ್ಳಲಾದ ಭೂಮಿ, ಸ್ಥಾಪನೆಯಾದ ಕೈಗಾರಿಕೆಗಳು, ಕೆಲಸ ಮಾಡುತ್ತಿರುವ ಉದ್ಯೋಗಿಗಳ ವಿವರ ನೀಡಿಲ್ಲ, ಸರಕಾರ ಈ ವಿಚಾರವಾಗಿ ಮೊದಲು ಶ್ವೇತಪತ್ರ ಒದಗಿಸಬೇಕು.

ಜನಗಣತಿ ಅಂಶಗಳೇ ಅಭಿವೃದ್ಧಿಗೆ ಆಧಾರ

ತುಮಕೂರು: ಜನಗಣತಿಯ ಅಂಕಿ-ಅಂಶಗಳೇ ಅಭಿವೃದ್ಧಿಗೆ ಆಧಾರ ವಾಗಿರುವುದರಿಂದ ಗಣತಿದಾರರು ಜವಾಬ್ದಾರಿಯಿಂದ ಗಣತಿ ಕಾರ್ಯನಿರ್ವಹಿಸಬೇಕು ಎಂದು ಜಿಲ್ಲಾಧಿಕಾರಿ ಶುಭಾಕಲ್ಯಾಣ್ ತಿಳಿಸಿದ್ದಾರೆ. ತುಮಕೂರು ಮಹಾನಗರ ಪಾಲಿಕೆಯಲ್ಲಿ ಸೋಮವಾರ ಭಾರತ ಜನಗಣತಿ-2027ರ ನಿಯೋಜಿತ ಅಧಿಕಾರಿಗಳು ಹಾಗೂ ಸಿಬ್ಬಂದಿಗೆ ಆಯೋಜಿಸಿದ್ದ ತರಬೇತಿ ಕಾರ್ಯಾಗಾರದಲ್ಲಿ ಭಾಗವಹಿಸಿ ಅವರು ಮಾತನಾಡಿದರು.



1948ರ ಜನಗಣತಿ ಕಾಯ್ದೆಯ ಪ್ರಕಾರ ಜನಗಣತಿ ಕಾರ್ಯವನ್ನು ಕೈಗೊಳ್ಳಬೇಕಾಗಿದೆ ಎಂದ ಅವರು, 1972ರಲ್ಲಿ ಮೊದಲ ಗಣತಿ ನಡೆದಿದ್ದು, ಅದರ ಬಳಿಕ ಜನಸಂಖ್ಯೆಯ ನಿಖರ ಮಾಹಿತಿಯನ್ನು ಸಂಗ್ರಹಿಸುವುದು ಸರ್ಕಾರದ ಯೋಜನೆಗಳ ಜಾರಿಗೆ ಪ್ರಮುಖವಾಗಿದೆ ಎಂದು ತಿಳಿಸಿದರು.

ಪರಿಶಿಷ್ಟ ಜಾತಿ, ಪಂಗಡ, ಹಿಂದುಳಿದ ವರ್ಗಗಳು, ಅಲ್ಪಸಂಖ್ಯಾತರು ಹಾಗೂ ಅಲೆಮಾರಿ ಸಮುದಾಯಗಳಿಗೆ ವಿವಿಧ ಯೋಜನೆಗಳನ್ನು ಪರಿಣಾಮಕಾರಿಯಾಗಿ ಜಾರಿಗೆ ತರುವುದಕ್ಕಾಗಿ ಜಿಲ್ಲೆಯ ಮಟ್ಟದಲ್ಲಿ ಸಮಗ್ರ ಮಾಹಿತಿ ಅಗತ್ಯವಿದೆ. ಜನಗಣತಿ ಮೂಲಕ ಸಂಗ್ರಹವಾಗುವ ಅಂಕಿ-ಅಂಶಗಳು ಅದಕ್ಕೆ ಸಹಕಾರಿಯಾಗಲಿದೆ ಎಂದು ಹೇಳಿದರು.

ಇದಲ್ಲದೆ ಲೋಕಸಭೆ, ವಿಧಾನಸಭೆ, ಗ್ರಾಮ ಪಂಚಾಯ್ತಿ ಕ್ಷೇತ್ರಗಳ ರಚನೆಯೂ ಜನಸಂಖ್ಯೆ ಆಧಾರಿತವಾಗಿರುವುದರಿಂದ ಅಧಿಕಾರಿಗಳು ಜನಗಣತಿ ಕಾರ್ಯವನ್ನು ನಿಖರವಾಗಿ ಹಾಗೂ ಸಮರ್ಪಕವಾಗಿ ನಡೆಸಬೇಕು ಎಂದು ಜಿಲ್ಲಾಧಿಕಾರಿ ಸೂಚಿಸಿದರು.

ಸಂವಹನ, ವಿಶ್ವಾಸಾರ್ಹತೆ ಹಾಗೂ ಮಾಹಿತಿ ಸಂಗ್ರಹ ಗಣತಿಯ ಪ್ರಮುಖ ಅಂಶಗಳು, ಈ ಹಿನ್ನೆಲೆಯಲ್ಲಿ ದೇಶದ ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆ ಅಧ್ಯಯನ ಹಾಗೂ ಸಮಗ್ರ ಅಭಿವೃದ್ಧಿ ದೃಷ್ಟಿಯಿಂದ ಗಣತಿ ಕಾರ್ಯವನ್ನು ಜವಾಬ್ದಾರಿಯಿಂದ ನಿರ್ವಹಿಸಬೇಕಾಗಿದೆ.

ಈ ಕಾರ್ಯಾಗಾರ ನಾಯಕತ್ವ ವಹಿಸಿಕೊಳ್ಳಬೇಕಾದ ಕಾರ್ಯಕ್ರಮ ವಾಗಿದ್ದು, ಆರಂಭದಲ್ಲಿ ನಿರಾಸಕ್ತಿ ಹುಟ್ಟಿಸಬಹುದು. ಆದರೆ ಜವಾಬ್ದಾರಿ ಮತ್ತು ಕರ್ತವ್ಯ ಎಂಬುದನ್ನು ಮರೆಯಬಾರದು. ತಮ್ಮ ಸಂದೇಹಗಳನ್ನು ಇಲ್ಲಿಯೇ ಬಗೆಹರಿಸಿಕೊಂಡು ಹೋಗಬೇಕು ಎಂದರು. ಅಪರ ಜಿಲ್ಲಾಧಿಕಾರಿ ಡಾ.ಎನ್. ತಿಪ್ಪೇಸ್ವಾಮಿ, ಜನಗಣತಿ ಸಂಪನ್ಮೂಲ ವ್ಯಕ್ತಿಗಳಾದ ಆರ್. ಎಸ್. ಶರ್ಮಾ, ಭವ್ಯ ಇದ್ದರು.

> **ಯಾವುದೇ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲು ಜನಗಣತಿಯ ಅಂಕಿ-ಅಂಶಗಳೇ ಆಧಾರವಾಗಿರುತ್ತದೆ. ಸರ್ಕಾರ ರೂಪಿಸುವ ಯೋಜನೆಗಳು, ಕ್ಷೇತ್ರ ವಿಂಗಡಣೆ ಎಲ್ಲವೂ ಜನಸಂಖ್ಯೆ ಆಧಾರದ ಮೇಲೆಯೇ ನಿರ್ಧಾರವಾಗುತ್ತದೆ. ಈ ಕಾರ್ಯದಲ್ಲಿ ನಿಯೋಜಿತರಾದ ಅಧಿಕಾರಿ ಸಿಬ್ಬಂದಿ ಯಾವುದೇ ಪೂರ್ವಗ್ರಹವಿಲ್ಲದೆ, ಸರಿಯಾದ ಮಾಹಿತಿಯನ್ನು ಕ್ರೋಢೀಕರಿಸಬೇಕು.**
> ■ ಶುಭಾಕಲ್ಯಾಣ್, ಜಿಲ್ಲಾಧಿಕಾರಿ

ಪರಂಪರಾಗತ ಕೃಷಿ ವಿಕಾಸ ಯೋಜನೆ ಸಾವಯುವ ಪರಿವರ್ತನೆ, ಜೇನು ಕೃಷಿ ತರಬೇತಿ

ಸಾವಯವ ಕೃಷಿ ಅನುಸರಿಸಿ: ಗುಟ್ಟೆ ರಮೇಶ್

ಮಧುಗಿರಿ: ರೈತರು ಸಾವಯುವ ಕೃಷಿಯನ್ನು ಅಳವಡಿಸಿಕೊಂಡು ಆರ್ಥಿಕವಾಗಿ ಸದೃಢರಾಗಬೇಕು ಹಾಗೂ ಜೇನು ಕೃಷಿಯನ್ನು ಕೈಗೊಳ್ಳಬೇಕು ಎಂದು ತಾಲೂಕು ಕೃಷಿಕ ಸಮಾಜದ ಅಧ್ಯಕ್ಷರಾದ ಗುಟ್ಟೆ ರಮೇಶ್ ತಿಳಿಸಿದ್ದಾರೆ. ಅವರು ದೊಡ್ಡೇರಿ ಹೋಬಳಿ ಸಜ್ಜೆ ಹೊಸಹಳ್ಳಿ ಗ್ರಾಮದಲ್ಲಿ ತೋಟಗಾರಿಕೆ ಇಲಾಖೆ ವತಿಯಿಂದ ಏರ್ಪಡಿಸಿದ್ದ ಪರಂಪರಾಗತ ಕೃಷಿ ವಿಕಾಸ ಯೋಜನೆಯಲ್ಲಿ ಸಾವಯುವ ಪರಿವರ್ತನೆ ಮತ್ತು ಜೇನು ಕೃಷಿ ತರಬೇತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ತೋಟಗಾರಿಕೆ ಇಲಾಖೆಯ ಸಹಾಯಕ ನಿರ್ದೇಶಕ ಶಶಿಧರ್ ಮಾತನಾಡಿ ಸಾವಯುವ ಕೃಷಿಯನ್ನು ನಮ್ಮ ಪೂರ್ವಜರ ಕಾಲದಿಂದ ಮಾಡುತ್ತಿದ್ದು ಮಣ್ಣಿಗೆ ಕೃಷಿ ತ್ಯಾಜ್ಯ ಮತ್ತು ಕೊಟ್ಟಿಗೆ ಗೊಬ್ಬರಗಳನ್ನು ಹೆಚ್ಚಾಗಿ ಬಳಸುವುದರಿಂದ ಸೂಕ್ಷ್ಮಾಣು ಜೀವಿಗಳ ಚಟುವಟಿಕೆ ಹೆಚ್ಚಾಗಿ ಎಚ್ಚ ಹೆಚ್ಚಿನ ಆಮ್ಲಜನಕ ಸಿಗುವುದರಿಂದ ಉತ್ತಮ ಇಳುವರಿ ಪಡೆಯಬಹುದಾಗಿದೆ ಎಂದು ತಿಳಿಸಿದರು.

ಬೇವಿನಎಣ್ಣೆ, ಬೆಳ್ಳುಳ್ಳಿ ಹೆಚ್ಚಾಗಿ ಬಳಸಿಕೊಳ್ಳಬೇಕು ಅದೇ ರೀತಿಯ ಸಾವಯುವ ಗೊಬ್ಬರವನ್ನು ಹೆಚ್ಚಾಗಿಬಳಸುವುದರಿಂದರೈತರು ಆರ್ಥಿಕವಾಗಿಸದೃಢವಾಗಬಹುದು ಈ ಹಿನ್ನೆಲೆಯಲ್ಲಿ ಜೇನು ಕೃಷಿಯನ್ನು ಉಳಿಸಿಕೊಳ್ಳಬೇಕಾಗಿದೆ ಎಂದು ತಿಳಿಸಿದರು.



ಮಾಜಿ ಜಿಲ್ಲಾ ಪಂಚಾಯತ್ ಸದಸ್ಯ ಚಿನ್ನಪ್ಪ, ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಲಿಂಗರಾಜು, ತಿಮ್ಮರಾಜು, ಶ್ರೀನಿವಾಸ್, ಮಹೇಶ್, ತೋಟಗಾರಿಕೆ ಇಲಾಖೆಯ ಅಧಿಕಾರಿಗಳಾದ ಸ್ವಾಮಿ, ಶಂಕರ್‌ನಾರಾಯಣ್, ಉದಯ್‌ಕುಮಾರ್, ಬಸವರಾಜು ಮತ್ತು ಇತರರು ಹಾಜರಿದ್ದರು.

ಅಧಿಕಾರಿಗಳ ಎಡವಟ್ಟು ಚುನಾವಣೆಯಲ್ಲಿ ಗದ್ದಲ

ಕುಣಿಗಲ್: ಚುನಾವಣಾ ಅಧಿಕಾರಿಗಳ ಎಡವಟ್ಟಿನಿಂದ ಅಭ್ಯರ್ಥಿ ಯೊಬ್ಬರ ಚಿನ್ಹೆ ಬದಲಾಗಿ ತಾಲೂಕಿನ ಕೊತ್ತಗೆರೆ ಹೋಬಳಿ ಜಾಣಗೆರೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಚುನಾವಣೆಯಲ್ಲಿ ಗೊಂದಲ ಉಂಟಾದ ಘಟನೆ ಭಾನುವಾರ ನಡೆಯಿತು.



ಅಭ್ಯರ್ಥಿಯ ಪ್ರತಿರೋಧದ ನಂತರ ಮತಪತ್ರ ಮರುಮುದ್ರಣ ಮಾಡಿಸಿ ಚುನಾವಣೆ ನಡೆಸಲಾಯಿತು. ಭಾನುವಾರ ಜಾಣಗೆರೆ ಸಹಕಾರ ಸಂಘಕ್ಕೆ ಚುನಾವಣೆ ನಡೆದಿದ್ದು, ಅಭ್ಯರ್ಥಿ ರಾಜಶೇಖರ್ ರವರಿಗೆ ನೀಡಲಾಗಿದ್ದ ಟಾರ್ಚ್ ಚಿಹ್ನೆಯ ಬದಲಾಗಿ ಮತಪತ್ರದಲ್ಲಿ ಯುಪಿಎಸ್ ಬ್ಯಾಟರಿ ಚಿನ್ಹೆ ಮುದ್ರಣವಾಗಿತ್ತು, ಇದು ಗಲಾಟೆ ಗದ್ದಲಕ್ಕೆ ಕಾರಣವಾಯಿತು.

ಚುನಾವಣಾ ಅಧಿಕಾರಿ ಸುನಿಲ್ ಉದ್ದೇಶ ಪೂರ್ವಕವಾಗಿ ರಾಜಶೇಖರ್ ರವರ ಚಿನ್ಹೆ ಬದಲಾವಣೆ ಮಾಡಿರುವುದಲ್ಲದೆ ಕೆಲವು ಅಭ್ಯರ್ಥಿಗಳ ಚಿಹ್ನೆಗಳನ್ನು ಗುರುತು ಹಿಡಿಯದಂತೆ ಮತಪತ್ರದಲ್ಲಿ ಮುದ್ರಣ ಮಾಡಿಸಿದ್ದಾರೆ ಎಂದು ಮುಖಂಡರು ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದರು.

ಡಿಸಿಸಿ ಬ್ಯಾಂಕ್ ಜಿಲ್ಲಾ ನಿರ್ದೇಶಕ ಹಾಗು ಪಿ ಎಲ್ ಡಿ ಬ್ಯಾಂಕ್ ಅಧ್ಯಕ್ಷ ಡಿ ಕೃಷ್ಣಕುಮಾರ್ ಮಾತನಾಡಿ ಜಾಣಗೆರೆ ಸಹಕಾರ ಸಂಘದ ಚುನಾವಣೆಯ ಗೊಂದಲಕ್ಕೆ ಶಾಸಕ ರಾಗಲಿ ಕಾಂಗ್ರೆಸ್ ಪಕ್ಷದ ಮುಖಂಡರಾಗಲಿ ಕಾರಣವಲ್ಲ, ಚುನಾವಣಾ ಅಧಿಕಾರಿಯ ಬೇಜವಾಬ್ದಾರಿ ಹಾಗೂ ದುರಂಕಾರದ ವರ್ತನೆ ಯಿಂದ ಗೊಂದಲ ಉಂಟಾಗಿ ಕಾಂಗ್ರೆಸ್ ಮತ್ತು ಬಿಜೆಪಿ ಜೆಡಿಎಸ್ ಕಾರ್ಯಕರ್ತರು ಒಡೆದಾಡುವ ಮಟ್ಟಕ್ಕೆ ತಲುಪಿದ್ದಾರೆ, ಇಂತಹ ಚುನಾವಣಾ ಅಧಿಕಾರಿಯನ್ನ ಮುಂದಿನ ದಿನದಲ್ಲಿ ತಾಲ್ಲೂಕಿನಲ್ಲಿ ಚುನಾವಣೆ ನಡೆಸಲು ಅವಕಾಶ ನೀಡಿದರೆ ಕಾಂಗ್ರೆಸ್ ಮತ್ತು ಜೆಡಿಎಸ್ ಬಿಜೆಪಿ ಪಕ್ಷದ ಕಾರ್ಯಕರ್ತರು ಹೊಡೆದಾಡಿ ಕೊಳ್ಳುವುದರಲ್ಲಿ ಅನುಮಾನ ವಿಲ್ಲ ಎಂದರು.

12 ಗಂಟೆಗೆ ಆರಂಭವಾದ ಚುನಾವಣೆ ಸಂಜೆ ಏಳು ಗಂಟೆಯವರೆಗೂ ನಡೆಯಿತು ಅಧಿಕಾರಿಗಳು ಸ್ಥಳದಲ್ಲಿದ್ದು ಚುನಾವಣೆ ನಡೆಸಿದರು.

ಅಕ್ರಮ ಗೋ ಸಾಗಾಟ ಆರೋಪ: ವಾಹನ ವಶ

ಹುಳಿಯಾರು: ಅಕ್ರಮವಾಗಿ ಜಾನುವಾರುಗಳನ್ನು ಸಾಗಿಸುತ್ತಿದ್ದಾರೆ ಎಂಬ ಆರೋಪದ ಹಿನ್ನೆಲೆಯಲ್ಲಿ ಗೂಡ್ಸ್ ವಾಹನವನ್ನು ಬೆನ್ನಟ್ಟಿ ಹಿಡಿದು ಪೊಲೀಸರಿಗೆ ಒಪ್ಪಿಸಿ ಜಾನುವಾರುಗಳನ್ನು ರಕ್ಷಿಸಿದ ಘಟನೆ ಹುಳಿಯಾರು ಸಮೀಪದ ವಳಗೆರೆಹಳ್ಳಿ ಬಳಿ ಇಂದು ನಡೆದಿದೆ. ಹುಳಿಯಾರು ಅಮಾನಿಕೆರೆ ಸಮೀಪ ಅಶೋಕ್ ಲೈಲ್ಯಾಂಡ್ ಗೂಡ್ಸ್ ವಾಹನದಲ್ಲಿ ಜಾನುವಾರುಗಳನ್ನು ತುಂಬಿಕೊಂಡು ಬರುತ್ತಿದ್ದ ವಾಹನವನ್ನು ದಾರಿಯಲ್ಲಿ ಬರುತ್ತಿದ್ದ ಭಜರಂಗದಳದ ಕಾರ್ಯಕರ್ತರು ಅನುಮಾನಗೊಂಡು ಹಿಂಬಾಲಿಸಿ ನಿಲ್ಲಿಸಲು ಮುಂದಾದರು. ಈ ವೇಳೆ ವಾಹನ ವೇಗವಾಗಿ ತೆರಳಿದ್ದು, ವಳಗೆರೆಹಳ್ಳಿ ಬಳಿ ನಿಲ್ಲಿಸಿ ಚಾಲಕ ಸೇರಿದಂತೆ ವಾಹನದಲ್ಲಿದ್ದ ಇನ್ನಿಬ್ಬರು ಸ್ಥಳದಿಂದ ಪರಾರಿಯಾಗಿದ್ದಾರೆ ಎಂದು ತಿಳಿದು ಬಂದಿದೆ.

ವಾಹನದಲ್ಲಿ ಮೂರು ನಾಟಿ ಹಸು, ಒಂದು ಕೋಣ, ಮೂರು ಸೀಮೆ ಕರು ಹಾಗೂ ಒಂದು ಹೆಚ್‌ಎಫ್ ಸೀಮೆಹಸು ಸೇರಿದಂತೆ ಒಟ್ಟು ಎಂಟು ಜಾನುವಾರುಗಳನ್ನು ಯಾವುದೇ ಪರವಾನಿಗೆ ಇಲ್ಲದೆ ತುಂಬಿಕೊಂಡು ಸಾಗಿಸುತ್ತಿದ್ದು, ಜಾನುವಾರುಗಳಿಗೆ ನಿಲ್ಲಲು ಸಹ ಸ್ಥಳಾವಕಾಶವಿಲ್ಲದ ರೀತಿಯಲ್ಲಿ ಹಿಂಸಾತ್ಮಕವಾಗಿ ಸಾಗಿಸಲಾಗುತ್ತಿತ್ತು ಎಂದು ಭಜರಂಗದಳದವರು ಆರೋಪಿಸಿದ್ದಾರೆ. ಚಿಕ್ಕನಾಯಕನಹಳ್ಳಿ ಮತ್ತು ತಿಪಟೂರು ಭಜರಂಗದಳದ ಪ್ರಜ್ವಲ್, ಪ್ರಸನ್ನ ಸೇರಿದಂತೆ ಮತ್ತಿತರರು ವಾಹನವನ್ನು ವಶಕ್ಕೆ ಪಡೆದು ಹುಳಿಯಾರು ಪೊಲೀಸ್ ಠಾಣೆಗೆ ಒಪ್ಪಿಸಿದ್ದಾರೆ. ರಕ್ಷಿಸಲಾದ ಎಲ್ಲಾ ಜಾನುವಾರುಗಳನ್ನು ನೊಣವಿನಕೆರೆ ಕಾಡಸಿದ್ದೇಶ್ವರ ಮಠದ ಗೋಶಾಲೆಗೆ ಕಳುಹಿಸಲಾಗಿದೆ. ವಾಹನದಲ್ಲಿ ಗಾಯಗೊಂಡಿದ್ದ ಮೂರು ಕರುಗಳಿಗೆ ಹುಳಿಯಾರು ಪಶು ಚಿಕಿತ್ಸಾಲಯದ ಸಿಬ್ಬಂದಿ ಚಿಕಿತ್ಸೆ ನೀಡಿ ಆರೈಕೆ ಮಾಡಿದರು.

ಶ್ರೀ ಸಿದ್ಧಾರ್ಥ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಮಹಿಳಾ ದಿನಾಚರಣೆ

ಮಹಿಳೆಯರ ಆರ್ಥಿಕ ಸಬಲೀಕರಣಕ್ಕೆ ಆದ್ಯತೆ

ತುಮಕೂರು: ಮಹಿಳೆಗೆ ನೀಡುವ ಯಾವುದೇ ಕೊಡುಗೆ ಮತ್ತೆ ದ್ವಿಗುಣವಾಗಿ ಸಮಾಜಕ್ಕೆ ಮರುಸಂದಾಯವಾಗುತ್ತದೆ. ಇಂತಹ ಗುಣ ಹೊಂದಿರುವ ಮಹಿಳೆಗೆ ಶಿಕ್ಷಣ, ಅಧಿಕಾರ ಮತ್ತು ಉನ್ನತ ಸ್ಥಾನ-ಮಾನ ನೀಡುವುದು ಅಗತ್ಯವಾಗಿದೆ ಎಂದು ಕರ್ನಾಟಕ ಮಹಿಳಾ ಉದ್ಯಮಿಗಳ ಸಂಸ್ಥೆಯ ಅಧ್ಯಕ್ಷೆ ಸಿ .ಭುವನೇಶ್ವರಿ ಅಭಿಪ್ರಾಯಪಟ್ಟರು.

ನಗರದ ಶ್ರೀ ಸಿದ್ಧಾರ್ಥ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಸಾಹೇ ವಿವಿ, ಕಾಲೇಜಿನ ಐಕ್ಯೂಎಸಿ ವಿಭಾಗದ ಮಹಿಳಾ ಸಂವರ್ದನಾ ಸಮಿತಿ ಸಂಯುಕ್ತ ಆಶ್ರಯದಲ್ಲಿ ಸೋಮವಾರ ಹಮ್ಮಿಕೊಳ್ಳಲಾಗಿದ್ದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯಲ್ಲಿ ಮುಖ್ಯ ಅಥಿತಿಗಳಾಗಿ ಭಾಗವಹಿಸಿ ಅವರು ಮಾತನಾಡಿದರು.

ಸಾಹೇ ಉಪಕುಲಪತಿಗಳಾದ ಡಾ.ಕೆ.ಬಿ.ಲಿಂಗೇಗೌಡ ಮಾತನಾಡಿ, ಸಮಾಜದಲ್ಲಿನ ಪ್ರತಿಯೊಂದು ಕ್ಷೇತ್ರದಲ್ಲಿಯೂ ಮಹಿಳೆ ಕೆಲಸ ಮಾಡುವುದನ್ನು ನಾವಿಂದು ಕಾಣುತ್ತಿದ್ದೇವೆ. ಇನ್ನಷ್ಟು ಆರ್ಥಿಕ ಸಬಲೀಕರಣಕ್ಕೆ ಆದ್ಯತೆ ನೀಡುವುದಕ್ಕೆ ನಾವೆಲ್ಲರೂ ಮುಂದಾಗೋಣ ಎಂದರು.



ಸಾಹೇ ವಿವಿ ಪರೀಕ್ಷಾಂಗ ನಿಯಂತ್ರಕ ಡಾ.ಜಿ.ಗುರುಶಂಕರ್ ಅವರು ಮಾತನಾಡಿ, ಶೇಕಡ 60ರಷ್ಟು ಮಹಿಳೆ ಸಮುದಾಯ ಇಂದು ಉದ್ಯೋಗ ಕ್ಷೇತ್ರದಲ್ಲಿ ನಿರತರಾಗಿರುವುದನ್ನು ನೋಡಬಹುದು. ಮಹಿಳೆಯರಶಕ್ತಿ ಏನುಎಂಬುದನ್ನು ಚುನಾವಣೆಯಲ್ಲಿ ಇತ್ತೀಚಿನ ದಿನದಲ್ಲಿ ಗಮನಿಸಬಹುದು. ಮಹಿಳೆ ಪ್ರಧಾನಮಂತ್ರಿಯಾಗಿದ್ದು ಇಂದಿರಾಗಾಂಧಿ, ಸುಧಾ ಮೂರ್ತಿ ಸೇರಿದಂತೆ ಅನೇಕ ಮಹಿಳೆಯರು ಐತಿಹಾಸಿಕವಾದ ಕೆಲಸಗಳನ್ನು ಮಾಡಿದ್ದಾರೆ ಎಂದು ಹರ್ಷ ವ್ಯಕ್ತಪಡಿಸಿದರು.

ಪರೀಕ್ಷಾಂಗ ಡೀನ್‌ಗಳಾದ ಡಾ. ಸುಮ.ಆರ್, ಡಾ.ದಿವ್ಯಪ್ರಭ, ಐಕ್ಯೂಎಸಿ ಸಂಯೋಜಕರಾದ ಡಾ.ರವಿರಾಮ್.ವಿ, ಪ್ರಾಧ್ಯಾಪಕರಾದ ಡಾ. ಅಶ್ವಿನಿ ಎಸ್. ಶಿವಣ್ಣವರ್ ಮತ್ತು ವಿದ್ಯಾರ್ಥಿಗಳು ಉಪಸ್ಥಿತಿಯಲ್ಲಿದ್ದರು.

> **ಮಹಿಳೆಯಲ್ಲಿರುವ ಧ್ವನಿಗೆ ಅಪಾರವಾದ ಶಕ್ತಿಯಿದೆ. ಆ ಧ್ವನಿಗೆ ಹೆಚ್ಚು ಬೆಂಬಲ ಸಿಕ್ಕಾಗ ಸಮಾಜದ ಅಭಿವೃದ್ಧಿಗೆ ಹೆಚ್ಚು ಅವಕಾಶಗಳು ದೊರೆಯುತ್ತವೆ. ನಾವೆಲ್ಲರೂ ಮಹಿಳೆಯರಿಗೆ ಗೌರವ ನೀಡಬೇಕು. ಬರಿ ಘೋಷಣೆ-ಚಳುವಳಿಗೆ ಸೀಮಿತವಾಗದೆ. ಮಹಿಳೆಯರಿಗೆ ಆದ್ಯತೆ ಮತ್ತು ಅವಕಾಶ ನೀಡಿ**
> ■ ಸಿ. ಭುವನೇಶ್ವರಿ, ಸಂಸ್ಥೆಯ ಅಧ್ಯಕ್ಷೆ

ಮನೆಯಿಂದ ಮಂಗಳನವರೆಗೂ ಮಹಿಳೆಯರ ಸೇವೆ ಅಪಾರ: ಶಾಸಕ

ಮಹಿಳಾ ಸಬಲೀಕರಣಕ್ಕೆ ಗ್ಯಾರಂಟಿ ಸಹಕಾರಿ

ಪಾವಗಡ: ದೇಶದ ಅಭಿವೃದ್ಧಿಗೆ ಮಹಿಳೆಯರ ಪಾತ್ರ ಅಪಾರವಾಗಿದೆ, ಮನೆ ಅಂಗಳದಿಂದ ಮಂಗಳನ ಅಂಗಳದವರೆಗೂ ಪುರುಷ ಸಮಾನವಾಗಿ ಮಹಿಳೆಯರು ಮೇಲುಗೈ ಸಾಧಿಸಿದ್ದಾರೆ. ಸರ್ಕಾರದ ಗ್ಯಾರಂಟಿ ಯೋಜನೆಗಳು ಮಹಿಳಾ ಸಬಲೀಕರಣಕ್ಕೆ ಅನುಕೂಲವಾಗಿವೆ ಎಂದು ತುಮುಲ್ ಅಧ್ಯಕ್ಷ ಹಾಗೂ ಶಾಸಕ ಎಚ್.ವಿ.ವೆಂಕಟೇಶ್ ತಿಳಿಸಿದರು.

ಪಟ್ಟಣದ ಎಸ್‌ಎಸ್‌ಕೆ ರಂಗಮಂದಿರದಲ್ಲಿ ಸೋಮವಾರ ಜಿ.ಪಂ, ತಾ.ಪಂ ಸಹಕಾರದಲ್ಲಿ ಸಂಜೀವಿನಿ ಡೇ ಎನ್‌ಆರ್‌ಎಲ್‌ಎಂ ಸಂಯುಕ್ತಾಶ್ರಯದಲ್ಲಿ ಏರ್ಪಡಿಸಿದ್ದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಹಾಗೂ ವಸ್ತುಪ್ರದರ್ಶನ ಮತ್ತು ಮಾರಾಟ ಸಮಾರಂಭ ಉದ್ಘಾಟಿಸಿ ಮಾತನಾಡಿದರು. ಕ್ಷೇತ್ರದಲ್ಲಿ ನಿವೇಶನ ರಹಿತ ಒಂದು ಸಾವಿರ ಮಹಿಳೆಯರಿಗೆ ಮನೆಗಳನ್ನು ನೀಡಲು ಮಾತುಕತೆ ನಡೆಸಿದ್ದೇನೆ. ಪ್ರತಿ ಗೃಹಿಣಿಯೂ ಸಹ ತಮ್ಮ ಮಕ್ಕಳ ಶೈಕ್ಷಣಿಕ ಪ್ರಗತಿಗೆ ಶ್ರಮಿಸಬೇಕು ಎಂದರು.



ತಾ.ಪಂ ಇಒ ಮಧುಸೂದನ್ ಮಾತನಾಡಿ ಗ್ರಾಮೀಣ ಭಾಗದಲ್ಲಿ ಮಹಿಳೆಯರು ಎನ್‌ಆರ್‌ಎಲ್‌ಎಂ ಕಾರ್ಯಕ್ರಮದ ಸದುಪಯೋಗ ಪಡೆದು ಕೊಂಡು ಉದ್ಯಮಿಗಳಾಗಿ ಅಭಿವೃದ್ಧಿಯ ಪಥದಲ್ಲಿ ಸಾಗುತ್ತಿದ್ದಾರೆ, ಧೈರ್ಯ, ಸಾಮರ್ಥ್ಯ, ವ್ಯವಹಾರಿಕ ಜ್ಞಾನಗಳ ಅರಿವು ಮಹಿಳೆಯರಲ್ಲಿ ಹೆಚ್ಚಾದಾಗ ಸುರಕ್ಷಿತಜೀವನ ನಡೆಸಲು ಸಾಧ್ಯವಾಗುತ್ತದೆ, ಸರ್ಕಾರದ ಯೋಜನೆಗಳನ್ನು ಮಹಿಳೆಯರು ಸದುಪಯೋಗ ಪಡಿಸಿಕೊಳ್ಳಬೇಕು ಎಂದರು.

ಮಾಜಿ ಸಚಿವ ವೆಂಕಟರಮಣಪ್ಪ, ಬಿಇಒ ರೇಣೂಕಮ್ಮಾ, ಸಿಡಿಪಿಒ ಸುನಿತಾ ಮಾತನಾಡಿ ಸಮಾಜದಲ್ಲಿ ಮಹಿಳೆಯರ ಪಾತ್ರಕುರಿತು ವಿವರಿಸಿದರು, ಕಾರ್ಯಕ್ರಮದಲ್ಲಿ ಮಹಿಳಾ ಸಾಧಕಿಯರನ್ನು ಸನ್ಮಾನಿಸಿ ಗೌರವಿಸಲಾಗಿತು.

ಈವೇಳೆಸಂಜೀವಿನಿಸಂಘಗಳತಾಲೂಕುಅಧ್ಯಕ್ಷೆ ಟಿ.ಲತಾ, ತಾ.ಪಂ ಎಇಒ ಮಾರುತಿಪ್ರಸಾದ್, ತುಮುಲ್ ನಿರ್ದೇಶಕಚಂದ್ರಶೇಖರರೆಡ್ಡಿ, ಪುರಸಭೆ ಮಾಜಿಅಧ್ಯಕ್ಷರಾಜೇಶ್, ರವಿ, ಸರ್ಕಾರಿ ನೌಕರರ ಸಂಘದಅಧ್ಯಕ್ಷರವಿಕುಮಾರ್ ಸೇರಿದಂತೆ ಎಂಬಿಕೆ ಗಳು, ಕೃಷಿ, ಪಶು ಸಖಿಗಳು ಇದ್ದರು.

ಕಿರುಸುದ್ದಿ

ಮದ್ಯ ಮಾರಾಟ ನಿಷೇಧ

ರಾಮನಗರ: ಚನ್ನಪಟ್ಟಣ ತಾಲೂಕಿನ ಹುಣಸನಹಳ್ಳಿ ಗ್ರಾಮದ ಶ್ರೀ ಬಿಸಲಮ್ಮ ದೇವಿ ಜಾತ್ರಾ ಮಹೋತ್ಸವದ ನಿಮಿತ್ತ ಸಾರ್ವಜನಿಕ ಶಾಂತಿ ಮತ್ತು ಕಾನೂನು ಸುವ್ಯವಸ್ಥೆ ಕಾಪಾಡುವ ಹಿತದೃಷ್ಟಿಯಿಂದ ಮಾ.10ರಂದು ಬೆಳಿಗ್ಗೆ 6 ಗಂಟೆಯಿಂದ ರಾತ್ರಿ 11 ಗಂಟೆಯವರೆಗೆ ಕೋಡಂಬಳ್ಳಿ ಗ್ರಾಮ ಪಂಚಾಯ್ತಿಯಾದ್ಯಂತ ಕರ್ನಾಟಕ ಅಬಕಾರಿ (ಭಾರತೀಯ ಮತ್ತು ವಿದೇಶಿ ಮದ್ಯ ಮಾರಾಟ) ನಿಯಮಗಳು 1968ರ ನಿಯಮ 3ರನ್ವಯ ಬರುವ ಎಲ್ಲಾ ರೀತಿಯ ಮದ್ಯ ಸನ್ನದುಗಳನ್ನು ಮುಚ್ಚಿಸಲು ಹಾಗೂ ಮದ್ಯ ಮಾರಾಟವನ್ನು ನಿಷೇಧಿಸಿ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ದಂಡಾಧಿಕಾರಿಗಳಾದ ಯಶವಂತ್ ವಿ.ಗುರುಕರ್ ಅವರು ಆದೇಶಿಸಿದ್ದಾರೆ.

ಹುಣಸನಹಳ್ಳಿ ಬಿಸಿಲಮ್ಮ ಜಾತ್ರೆಗೆ ಚಾಲನೆ

ಚನ್ನಪಟ್ಟಣ: ತಾಲೂಕಿನ ಹುಣಸನಹಳ್ಳಿ ಗ್ರಾಮದಲ್ಲಿರುವ ಶಕ್ತಿದೇವತೆ ಬಿಸಿಲಮ್ಮದೇವಿ ಅವರ ವಾರ್ಷಿಕ ಜಾತ್ರಾ ಮಹೋತ್ಸವ ಭಾನುವಾರ ಆರಂಭಗೊಂಡಿದ್ದು, ಐದು ದಿನಗಳ ಕಾಲ ಭಕ್ತಿ ಮತ್ತು ಸಂಪ್ರದಾಯದ ವೈಭವದಲ್ಲಿ ನಡೆಯಲಿದೆ. ಯುಗಾದಿಗೆ ವಾರ ಮುಂಚೆಯೇ ಆರಂಭವಾಗುವ ಈ ಜಾತ್ರೆಗೆ ಸುತ್ತಮುತ್ತಲಿನ ಗ್ರಾಮಗಳಿಂದಲೂ ಸಾವಿರಾರು ಭಕ್ತರು ಆಗಮಿಸುವುದು ವಿಶೇಷವಾಗಿದೆ. ಚೋಳರ ಕಾಲದಲ್ಲಿ ನಿರ್ಮಾಣಗೊಂಡಿದೆ ಎಂದು ಹೇಳಲಾಗುವ ಈ ಪುರಾತನ ದೇವಸ್ಥಾನವು ಇತ್ತೀಚಿನ ವರ್ಷಗಳಲ್ಲಿ ಗ್ರಾಮಸ್ಥರು ಹಾಗೂ ಭಕ್ತರ ಸಹಕಾರದಿಂದ ಜೀರ್ಣೋದ್ಧಾರಗೊಂಡಿದ್ದು, ಈಗ ಭಕ್ತರ ಆರಾಧನೆಗೆ ಮತ್ತಷ್ಟು ಸೊಬಗು ತಂದಿದೆ. ರಾಜ್ಯದ ವಿವಿಧ ಭಾಗಗಳಲ್ಲಿ ವಾಸಿಸುವ ದೇವರ ಒಕ್ಕಲು ಮನೆತನದವರು ಜಾತ್ರೆ ಸಂದರ್ಭದಲ್ಲಿ ಊರಿಗೆ ಬಂದು ದೇವಿಯ ಆರಾಧನೆ ಮಾಡುವುದು ಅನೇಕ ವರ್ಷಗಳ ಪರಂಪರೆಯಾಗಿದೆ.ಹಿರಿಸತ್ತಿಗೆಯಮ್ಮ ದೇವಿಯ ಕೊಂಡೋತ್ಸವದ ದಿನ ರಾತ್ರಿ ಪೂರ್ತಿ ಮೆರವಣಿಗೆಯಲ್ಲಿ ಹುಣಸನಹಳ್ಳಿಗೆ ಆಗಮಿಸಬೇಕು. ಆ ದೇವಿ ಆಗಮಿಸಿದ ಬಳಿಕವೇ ಬಿಸಿಲಮ್ಮ ದೇವಿಯ ಕೊಂಡ ಮಹೋತ್ಸವ ನಡೆಯುವುದು ಸಂಪ್ರದಾಯವಾಗಿದೆ. ಈ ಸಂಪ್ರದಾಯ ಅನಾದಿಕಾಲದಿಂದ ನಡೆದುಕೊಂಡು ಬರುತ್ತಿದೆ ಎಂದು ದೇವಸ್ಥಾನದ ಅರ್ಚಕರಾದ ಜನಾರ್ಧನಸ್ವಾಮಿ ಮತ್ತುಕಾಂತರಾಜು ತಿಳಿಸಿದ್ದಾರೆ. ಮಂಗಳವಾರ ಸಿಡಿ ಉತ್ಸವ ನಡೆಯಲಿದ್ದು, ಸಿಡಿರಣ್ಣ ಸಿಡಿಯಾಡುವ ವೇಳೆ ನೂರಾರು ಭಕ್ತರುಜಾತ್ರಾ ಮೈದಾನದಲ್ಲಿ ಜಮಾಯಿಸುವುದು ವಿಶೇಷ. ಅದೇ ದಿನ ರಾತ್ರಿ ಉಯ್ಯಾಲೆ ಹಾಗೂ ಮುತ್ತಿನ ಪಲ್ಲಕ್ಕಿ ಉತ್ಸವ ಭಕ್ತರ ಮನಸೆಳೆಯಲಿದೆ. ಬುಧವಾರ ವಸಂತೋತ್ಸವ ನಡೆಯಲಿದ್ದು, ರಾತ್ರಿ ಮುತ್ತಿನ ಉಯ್ಯಾಲೆ ಕಾರ್ಯಕ್ರಮ ನಡೆಯಲಿದೆ.

ಶಾಂತವೇರಿ ಗೋಪಾಲಗೌಡ ಜಯಂತಿ: ಕವನ ಸಂಕಲನ ಬಿಡುಗಡೆ

ಚನ್ನಪಟ್ಟಣ: ತಾಲೂಕಿನ ಸಿಂಗರಾಜಪುರದ ಸಿಂ ಲಿಂ ನಾಗರಾಜು ಪ್ರತಿಷ್ಠಾನ ಟ್ರಸ್ಟ್ ವತಿಯಿಂದ ಮಾರ್ಚ್ 14ರಂದು ಸಮಾಜವಾದಿ ನಾಯಕ ಶಾಂತವೇರಿ ಗೋಪಾಲಗೌಡರ ಜಯಂತಿ ಅಂಗವಾಗಿ ಹಾಗೂ ಗ್ರಾಮೀಣ ಯುವ ಪ್ರತಿಭೆ ಮೇದರದೊಡ್ಡಿ ಹನುಮಂತರವರ 'ನೆಲದಲ್ಲಿಯೂ ನಕ್ಷತ್ರಗಳಿವೆ' ಕವನ ಸಂಕಲನ ಬಿಡುಗಡೆ ಸಮಾರಂಭವನ್ನು ಆಯೋಜಿಸಲಾಗಿದೆ. ಮಾರ್ಚ್ 14ರ ಶನಿವಾರ ಮಧ್ಯಾಹ್ನ 2.30ಕ್ಕೆ ಪಟ್ಟಣದ ಜೆ.ಸಿ. ರಸ್ತೆಯ ಒಕ್ಕಲಿಗರ ಸಾರ್ವಜನಿಕ ವಿದ್ಯಾರ್ಥಿ ನಿಲಯ ವಿದ್ಯಾಸಂಸ್ಥೆಯ ದೇವಮ್ಮ, ಚಿಕ್ಕಣ್ಣಸಭಾಂಗಣದಲ್ಲಿ ಕಾರ್ಯಕ್ರಮ ನಡೆಯಲಿದೆ. ಹಿರಿಯ ಜಾನಪದ ವಿದ್ವಾಂಸ ಹಾಗೂ ಸಾಹಿತಿ ಡಾ.ಎಂ.ಬೈರೇಗೌಡ ಉದ್ಘಾಟಿಸಲಿದ್ದಾರೆ. ಸಂಸ್ಕೃತಿ ಚಿಂತಕ ಮತ್ತು ವಿಚಾರವಾದಿ ಬಂಜಗೆರೆ ಜಯಪ್ರಕಾಶ್ ಅವರು ಕವನ ಸಂಕಲನವನ್ನು ಲೋಕಾರ್ಪಣೆ ಮಾಡುವರು. ಸಿಂ.ಲಿಂ. ನಾಗರಾಜು ಪ್ರತಿಷ್ಠಾನ ಟ್ರಸ್ಟ್ ಅಧ್ಯಕ್ಷ ಶಂಭೂಗೌನಾಗವಾರ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದು, ಸಾಮಾಜಿಕ ಚಿಂತಕ ವಿವೇಕಾನಂದ ಎಚ್.ಕೆ.ಅವರು ಶಾಂತವೇರಿ ಗೋಪಾಲಗೌಡರ ಬದುಕು ಮತ್ತು ಚಿಂತನೆಗಳ ಕುರಿತು ಪ್ರಧಾನ ಭಾಷಣ ಮಾಡಲಿದ್ದಾರೆ. ಸಾಮಾಜಿಕ ಚಿಂತಕ ರೂಪೇಶ್ ಪುತ್ತೂರು 'ನೆಲದಲ್ಲಿಯೂ ನಕ್ಷತ್ರಗಳಿವೆ' ಕವನ ಸಂಕಲನವನ್ನು ಪರಿಚಯಿಸಲಿದ್ದಾರೆ.

ಚೌಡೇಶ್ವರಿ ಜಾತ್ರೆ

ಚನ್ನಪಟ್ಟಣ: ತಾಲೂಕಿನ ಮಳೂರುಪಟ್ಟಣ ಚಾಮುಂಡೇಶ್ವರಿ ಕರಗ ಮಹೋತ್ಸವ ಹಾಗೂ ಅಮ್ಮನವರ ಬ್ರಹ್ಮರಥೋತ್ಸವದಜಾತ್ರಾ ಮಹೋತ್ಸವವು ಮಾ.9ರ ಸೋಮವಾರದಿಂದ ಬುಧವಾರದವರೆಗೆ ಜರುಗಲಿದೆ. ಆನಂತರ ವಿವಿಧಧಾರ್ಮಿಕ ಕಾರ್ಯಗಳು ನಡೆಯಲಿವೆ. ಸೋಮವಾರರಾತ್ರಿ 8 ಗಂಟೆಗೆ ಶ್ರೀ ಮಂಠೇಸ್ವಾಮಿ ಹುಲಿಯ ವಾಹನದ ಮೆರವಣಿಗೆ, ಮಂಗಳವಾರ ರಾತ್ರಿ 11 ಗಂಟೆಗೆ ಶ್ರೀ ಚಾಮುಂಡೇಶ್ವರಿ ಅಮ್ಮನವರಕರಗ ಮಹೋತ್ಸವ ನಡೆಯುವುದು, ರಾತ್ರಿ 8 ಗಂಟೆಗೆ ರಸಮಂಜರಿಕಾರ್ಯಕ್ರಮದ ಜತೆಗೆ ಚೌಡೇಶ್ವರಿ ದೇವಸ್ಥಾನದ ಹತ್ತಿರ ಅನ್ನಸಂತರ್ಪಣೆ ಏರ್ಪಡಿಸಲಾಗಿದೆ.



ವಿವಿಧ ಇಲಾಖೆಗಳಲ್ಲಿ 56 ಸಾವಿರ ಹುದ್ದೆಗಳ ನೇಮಕಾತಿಯಲ್ಲಿ ಒಳಮೀಸಲಾತಿ ಅಳವಡಿಸುವಂತೆ ಒತ್ತಾಯಿಸಿ ತಾಲೂಕು ಮಾದರ ಮಹಾಸಭಾದ ಕಾರ್ಯಕರ್ತರಿಂದ ಚಿಕ್ಕನಾಯಕನಹಳ್ಳಿಯಲ್ಲಿ ತಹಸೀಲ್ದಾರ್‌ಗೆ ಮನವಿ ಸಲ್ಲಿಸಲಾಯಿತು.

ಪಬ್ಲಿಕ್ ಸ್ಕೂಲ್‌ನಲ್ಲಿ ಆರೋಗ್ಯ ಶಿಬಿರ

ಚನ್ನಪಟ್ಟಣ: ಪಟ್ಟಣದ ಹೊರವಲಯದ ಗೋವಿಂದೇಗೌಡನ ದೊಡ್ಡಿಯ ಸ್ಪಿಂಗ್ ಫೀಲ್ಡ್ ಪಬ್ಲಿಕ್ ಸ್ಕೂಲ್ ಹಾಗೂ ಬೆಂಗಳೂರಿನ ಸನ್ನೈರ ಆಸ್ಪತ್ರೆ ಮತ್ತು ಡಯಾಗ್ನೋಸ್ಟಿಕ್ಸ್ ಸಹಯೋಗದಲ್ಲಿಶನಿವಾರಬೆಳಿಗ್ಗೆ10ಗಂಟೆಯಿಂದಮಧ್ಯಾಹ್ನ1.30ರವರೆಗೆಉಚಿತ ಮೆಗಾ ವೈದ್ಯಕೀಯ ಶಿಬಿರವನ್ನು ಆಯೋಜಿಸಲಾಯಿತು. ಗೋವಿಂದೇಗೌಡನದೊಡ್ಡಿಯಲ್ಲಿರುವ ಸ್ಪಿಂಗ್ ಫೀಲ್ಡ್ ಪಬ್ಲಿಕ್ ಸ್ಕೂಲ್ ಆವರಣದಲ್ಲಿ ನಡೆದ ಈ ಆರೋಗ್ಯ ತಪಾಸಣಾ ಶಿಬಿರಕ್ಕೆ ಶಾಲೆಯ ನೂತನ ಆಡಳಿತ ಮಂಡಳಿಯ ಮುಖ್ಯಸ್ಥರಾದ ಸನ್ ಸ್ಟಾರ್‌ಗ್ರೂಪ್ ಮಾಲೀಕಡಿ.ಎನ್. ಶೇಖರ ರೆಡ್ಡಿ, ಮಳವಳ್ಳಿ ನಂಜುಂಡಸ್ವಾಮಿ, ಬೆಂಗಳೂರು ದಕ್ಷಿಣ ಜಿಲ್ಲಾ ಬಿಜೆಪಿ ಅಧ್ಯಕ್ಷ ಎಂ.ಎನ್. ಆನಂದಸ್ವಾಮಿ ಸೇರಿದಂತೆ ಗಣ್ಯರು ಚಾಲನೆ ನೀಡಿದರು. ಹಲವು ಸಮಸ್ಯೆಗಳ ಕುರಿತುತಜ್ಞ ವೈದ್ಯರು ಪರಿಶೀಲನೆ ನಡೆಸಿ ಅಗತ್ಯ ಸಲಹೆಗಳನ್ನು ನೀಡಿದರು. ಅಗತ್ಯವಿರುವವರಿಗೆ ಪ್ರಾಸ್ಟೇಟ್ ಸೇರಿದಂತೆ ವಿವಿಧ ಶಸ್ತ್ರಚಿಕಿತ್ಸೆಗಳ ಕುರಿತು ಮಾಹಿತಿ ಹಾಗೂ ಮುಂದಿನ ಚಿಕಿತ್ಸಾ ವ್ಯವಸ್ಥೆಯನ್ನೂ ಕಲ್ಪಿಸಲಾಯಿತು.

ಶಿಬಿರದಲ್ಲಿ ಮೂತ್ರಶಾಸ್ತ್ರಜ್ಞ ಡಾ.ರಾಜೇಂದ್ರ ಪ್ರಸಾದ್ ಕೆ.ಎನ್., ಪಥಾಲಜಿಸ್ಟ್ ಡಾ.ಸಹನಾ,ಆಂತರಿಕ ವೈದ್ಯಕೀಯ ತಜ್ಞ ಡಾ. ದರ್ಶನ್ ಸೇರಿದಂತೆ ವಿವಿಧ ವಿಭಾಗಗಳ ನುರಿತ ವೈದ್ಯರು ಸಾರ್ವಜನಿಕರು ಹಾಗೂ ಶಾಲೆಯ ವಿದ್ಯಾರ್ಥಿಗಳ ಆರೋಗ್ಯತಪಾಸಣೆ ನಡೆಸಿದರು. ಆರೋಗ್ಯ ಇಲಾಖೆಯ ನಿವೃತ್ತ ಫಾರ್ಮಾಸಿಸ್ಟ್ ಅಧಿಕಾರಿ ವೇದಮೂರ್ತಿ ಸೇರಿದಂತೆ ಶಿಬಿರದಲ್ಲಿ ಸೇವೆ ಸಲ್ಲಿಸಿದ ವೈದ್ಯರನ್ನು ಗೌರವಿಸಲಾಯಿತು.



ಚನ್ನಪಟ್ಟಣ ಪಟ್ಟಣದ ಹೊರವಲಯದ ಗೋವಿಂದೇಗೌಡನ ದೊಡ್ಡಿಯ ಸ್ಪ್ರಿಂಗ್ ಫೀಲ್ಡ್ ಪಬ್ಲಿಕ್ ಸ್ಕೂಲ್ ಹಾಗೂ ಬೆಂಗಳೂರಿನ ಸನ್ನೈರ ಆಸ್ಪತ್ರೆ ಮತ್ತು ಡಯಾಗ್ನೋಸ್ಟಿಕ್ಸ್ ಸಹಯೋಗದಲ್ಲಿ ಉಚಿತ ಮೆಗಾ ವೈದ್ಯಕೀಯ ಶಿಬಿರ ಆಯೋಜಿಸಲಾಯಿತು.

ಎಟಿಎಂ ಮಾದರಿಯಲ್ಲಿ ಜನರಿಗೆ ಬಟ್ಟೆ ಬ್ಯಾಗ್: ನಗರಾಧ್ಯಕ್ಷ ಶೇಷಾದ್ರಿ

ನೋಟಿನ ಬದಲು ಚೀಲ

ರಾಮನಗರ: ಜನರಿಗೆ ಬಟ್ಟೆ ಬ್ಯಾಗ್ ಸುಲಭವಾಗಿ ಸಿಗುವಂತೆ ಮಾಡಲು ಎಟಿಎಂ ಮೆಷಿನ್ ಮಾದರಿಯಲ್ಲಿ 10 ರೂ. ನಾಣ್ಯ ಹಾಕಿ ಬಟ್ಟೆ ಬ್ಯಾಗ್ ಸಿಗುವಂತೆ ನಗರದಲ್ಲಿ ಮಾಡಲಾಗುತ್ತಿದೆ ಎಂದು ನಗರಸಭೆ ಅಧ್ಯಕ್ಷ ಕೆ.ಶೇಷಾದ್ರಿ, ತಿಳಿಸಿದರು. ಎಪಿಎಂಸಿ ಮಾರುಕಟ್ಟೆ ಆವರಣದಲ್ಲಿ ಬಟ್ಟೆ ಬ್ಯಾಗ್ ವೆಂಡಿಂಗ್ ಮೆಷಿನ್ (ಎಟಿಎಂ) ವಿತರಣಾ ಯಂತ್ರಕ್ಕೆ ಚಾಲನೆ ನೀಡಿ ಮಾತನಾಡಿದರು.

ಪ್ಲಾಸ್ಟಿಕ್ ಬಳಕೆ ನಿಲ್ಲಬೇಕಾದರೆ ಅಂಗಡಿ ವರ್ತಕರೂ ಕೂಡ ಜವಬ್ದಾರಿ ವಹಿಸಬೇಕಿದೆ ಪ್ರತಿದಿನ ಎಪಿಎಂಸಿ ಮಾರುಕಟ್ಟೆಯಲ್ಲಿ ಹೆಚ್ಚಿನ ಜನರು ಸಾಮಾನು ಖರೀದಿಗೆ ಬರುವ ಕಾರಣ ಅವರಿಗೆ ಕಡಿಮೆ ದರದಲ್ಲಿ ಬಟ್ಟೆ ಬ್ಯಾಗ್ ಸಿಗುವಂತೆ ಮಾಡುವ ಸಲುವಾಗಿ 10ರೂ.ನ ಒಂದು, 5ರೂ.ನ ಎರಡು, 2 ರೂ.ನ 5, 1 ರೂನ 10 ನಾಟ್ಯ ಹಾಕಿ ಬ್ಯಾಗ್ ಪಡೆಯುವ ಎಟಿಎಂ ಮೆಷಿನ್ ಅಳವಡಿಸಲಾಗಿದೆ. ಸಾರ್ವಜನಿಕರು ಪ್ಲಾಸ್ಟಿಕ್ ಬಳಕೆಯತ್ತ ಮುಖ ಮಾಡದೆ ಬಟ್ಟೆ ಬ್ಯಾಗ್ ಮೆಷಿನ್‌ನಲ್ಲಿ ಪಡೆದು ಮಾರುಕಟ್ಟೆಯಲ್ಲಿ ಖರೀದಿ ಮಾಡಿದ ಸಾಮಾನು ಇಟ್ಟು ಮನೆಗೆ ಒಯ್ಯಬೇಕು ಎಂದರು.

ಇದರಿಂದ ನಾವು ನೀವುಗಳು ಸುಲಭವಾಗಿ ಪ್ಲಾಸ್ಟಿಕ್ ಬಳಕೆಗೆ ಕಡಿವಾಣ ಹಾಕಬಹುದು ನಮ್ಮ ಸುಂದರ ರಾಮನಗರದ ಕನಸಿಗೆ ತಮ್ಮ ಸಹಕಾರ ಬಹುಮುಖ್ಯವಾಗಿರುತ್ತದೆಮುಂದೆಅಂಗಡಿಯವರು ಪ್ಲಾಸ್ಟಿಕ್ ಕವರ್ಗಳಲ್ಲಿ ಸಾಮಾನು ಕೊಟಿದ್ದು ನಗರಸಭೆಗೆ ಕಂಡು ಬಂದರೆ ಅಂತಹ ಅಂಗಡಿಗಳ ಮೇಲೆ ಕ್ರಮ ಜರುಗಿಸಲಾಗುತ್ತದೆ ಜೊತೆಗೆ ಪ್ಲಾಸ್ಟಿಕ್ ಕವರ್ ಮಾರುಕಟ್ಟೆಯಲ್ಲಿ ಕಂಡುಬಂದರೆ ಹೆಚ್ಚಿನ ರೀತಿಯಲ್ಲಿ ದಂಡ ವಿಧಿಸಲಾಗುತ್ತದೆ ಎಂದು ತಿಳಿಸಿದರು.



> ಸರ್ಕಾರ ಈಗಾಗಲೇ ಪ್ಲಾಸ್ಟಿಕ್ ಬಳಕೆ ನಿಷೇಧಿಸಿದೆ. ನಗರಸಭೆ ಪ್ಲಾಸ್ಟಿಕ್ ನಿಷೇಧ ಮಾಡಿ ಪ್ಲಾಸ್ಟಿಕ್ ಮಾರಾಟ ಮಾಡದಂತೆ ತಡೆದು ದಂಡ ವಿಧಿಸಿದರೂ ಮಾರಾಟ ಮಾತ್ರ ಅಂಗಡಿಯವರು ನಿಲ್ಲಿಸಿಲ್ಲ. ಕಾರಣ ಅಂಗಡಿಯವರು ಬಟ್ಟೆ ಬ್ಯಾಗ್ ಬಳಸದೆ ಪ್ಲಾಸ್ಟಿಕ್ ಕವರ್ ಬಳಕೆ ಮಾಡುತ್ತಿರುವುದು. ಇದನ್ನು ಗಮನದಲ್ಲಿಟ್ಟುಕೊಂಡು ನಗರಸಭೆ ಪರಿಸರ ಸ್ನೇಯಿಯಾಗಿ ಬಟ್ಟೆ ಬ್ಯಾಗ್ ವಿತರಣೆಗೆ ಮುಂದಾಗಿದೆ.
>
> ■ ಕೆ.ಶೇಷಾದ್ರಿ, ನಗರಸಭೆ ಅಧ್ಯಕ್ಷ

ನಗರಸಭೆ ಆಯುಕ್ತ ಡಾ.ಜಯಣ್ಣ ಮಾತನಾಡಿ 10 ರೂ.ಗೆ ಒಂದು ಬಟ್ಟೆ ಬ್ಯಾಗ್ ಸಿಗುವ ಎಟಿಎಂ ಯಂತ್ರಗಳನ್ನು ಮೊದಲ ಭಾರಿಗೆ ರಾಮನಗರ ನಗರಸಭೆ ನಗರದಲ್ಲಿ ಪರಿಚಯಿಸುತ್ತಿದೆ. ಬಟ್ಟೆ ಬ್ಯಾಗ್ ಬಳಸಲು ಸುಲಭವಾಗಿದೆ ಜೊತೆಗೆ 10 ಕೆ.ಜಿ.ಯಷ್ಟು ತೂಕ ಕೂಡ ಮನೆಗೆ ಒಯ್ಯಬಹುದೆ ಎಂದರು. ಆರೋಗ್ಯ ಸ್ವಚ್ಛತಾ ಅಧಿಕಾರಿ ಎಇಇ ಸುಬ್ರಹ್ಮಣಿ ಮಾತನಾಡಿ ರಾಮನಗರದ ಎಪಿಎಂಸಿ ಮಾರುಕಟ್ಟೆ ಪ್ರದೇಶದ ಒಂದು ಸ್ಥಳದಲ್ಲಿ ಬ್ಯಾಗ್ ಎಟಿಎಂ ವೆಂಡಿಂಗ್ ಮೆಷಿನ್ ಸ್ಥಾಪಿತವಾಗಿದೆ. ಇದರ ನಿರ್ವಹಣೆ ನಗರಸಭೆ ಮಾಡುತ್ತದೆ. ಬಟ್ಟೆ ಬ್ಯಾಗ್ ಪೂರೈಕೆ ನಗರದ ಮಹಿಳಾ ಸ್ವಸಹಾಯ ಸಂಘಗಳಿಗೆ ನೀಡುವ ಜತೆಗೆ ಯಂತ್ರ ನಿರ್ವಹಣೆಯನ್ನೂ ಮಹಿಳಾ ಸಂಘಗಳೇ ನೋಡಿಕೊಳ್ಳಲಿವೆ ಜನರು ಈ ಮೂಲಕ ಮೆಷಿನ್ ಬಳಕೆ ಮಾಡಿಕೊಂಡು ಬ್ಯಾಗ್ ಪಡೆದು ಪ್ಲಾಸ್ಟಿಕ್ ಬಳಕೆಗೆ ಇತಿಶ್ರೀ ಹಾಡಬೇಕು ಎಂದರು. ನಗರಸಭೆ ಉಪಾಧ್ಯಕ್ಷೆ ಗಿರಿಜಮ್ಮ ಗುರುವೇಗೌಡ, ಸದಸ್ಯರಾದ ಬಿ.ಸಿ. ಪಾರ್ವತಮ್ಮ, ವಿಜಯಕುಮಾರಿ, ಪವಿತ್ರ, ಸೋಮಶೇಖರ್ (ಮಣಿ), ನಾಗಮ್ಮ ನಗರಸಭೆ ಅಧಿಕಾರಿಗಳಾದ ವಿಶ್ವನಾಥ್, ನಟರಾಜೇಗೌಡ, ನಿರ್ಮಲ, ಪೌರ ನೌಕರ ಕೊಲ್ಲಾಪುರಿ ಎಪಿಎಂಸಿ ಕಾರ್ಯದರ್ಶಿ ತಾಸೀಂ, ಮುಖಂಡರಾದ ಪ್ರಸನ್ನ, ಲಕ್ಷ್ಮೀಕಾಂತ್ ಹಾಗೂ ಇತರರು ಇದ್ದರು.

ಮಹಿಳೆ ಬಳೆ ತೊಡುವುದು ದೌರ್ಬಲ್ಯದ ಸಂಕೇತವಲ್ಲ

ರಾಮನಗರ: ಬಳೆ ತೊಡುವುದು ದೌರ್ಬಲ್ಯದ ಸಂಕೇತವಲ್ಲ. ಬಳೆ ತೊಡುವ ಕೈಗಳು ಪಿಸ್ತೂಲ್ ಸಹ ಹಿಡಿಯಬಲ್ಲವು. ಗಡಿಯಲ್ಲಿ ನಿಂತು ದೇಶ ಕಾಯಬಲ್ಲವು. ಅಧಿಕಾರದ ಚುಕ್ಕಾಣಿ ಹಿಡಿದು ರಾಜ್ಯ ಮತ್ತು ದೇಶವನ್ನು ಮುನ್ನಡೆಸಬಲ್ಲವು ಎಂದು ಬೆಂಗಳೂರು ದಕ್ಷಿಣ ಜಿಲ್ಲಾ ಕಾರಾಗೃಹದ ಅಧೀಕ್ಷಕಿ ಪ್ರೀತಿ ಆರ್.ತಿಳಿಸಿದರು. ರಾಯರದೊಡ್ಡಿಯಲ್ಲಿರುವ ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜಿನ ಸಹಯೋಗದಲ್ಲಿ 'ನಮ್ಮವರು ಬಳಗ' ಹಮ್ಮಿಕೊಂಡಿದ್ದ 'ಮಹಿಳಾ ದಿನಾಚರಣೆ' ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಬಳೆ ತೊಡುವ ಹೆಣ್ಣು ಅಸಹಾಯಕಳು ಎಂದು ನೋಡುವ ಮನಸ್ಥಿತಿಯಿಂದ ಸಮಾಜ ಹೊರಬರಬೇಕು ಎಂದು ತಿಳಿಸಿದರು.

ಹೆಣ್ಣು ಮತ್ತು ಗಂಡು ಪರಸ್ಪರ ಅವಲಂಬಿಗಳು. ದೈಹಿಕ ರಚನೆಯಲ್ಲಿ ಕೆಲ ವ್ಯತ್ಯಾಸ ಬಿಟ್ಟರೆ, ಉಳಿದೆಲ್ಲ ವಿಷಯಗಳಲ್ಲಿ ಸಮಾನರು. ಹೆಣ್ಣು ಮಕ್ಕಳು ವಿವಿಧ ಕ್ಷೇತ್ರಗಳಲ್ಲಿ ಸಾಧನೆಯ ಶಿಖರ ಏರಿದವರಿಂದ ಪ್ರೇರಣೆ ಪಡೆಯಬೇಕು. ಉತ್ತಮ ಶಿಕ್ಷಣ ಪಡೆದು ಅವಕಾಶಗಳ ಬಗ್ಗೆ ಅರಿತು ತಮ್ಮಿಷ್ಟದ ಕ್ಷೇತ್ರಗಳಲ್ಲಿ ಸಾಧನೆ ಮಾಡಬೇಕು ಎಂದರು.

ನಗರಸಭೆಅಧ್ಯಕ್ಷಕೆ.ಶೇಷಾದ್ರಿ, ಹಿರಿಯ ಹೋರಾಟಗಾರ್ತಿ ಅನಸೂಯಮ್ಮ, ಸಿವಿಲ್ ನ್ಯಾಯಾಧೀಶೆಯಾಗಿರುವ ಆಯ್ಕೆಯಾಗಿರುವ ಎಸ್. ಪ್ರಭಾವತಿ, ನಮ್ಮವರು ಬಳಗದ ಡಾ. ಎಚ್.ಡಿ. ಉಮಾಶಂಕರ್, ಪ್ರಾಂಶುಪಾಲೆ ರಾಧಾ ಜಿ.ಆರ್., ನಗರಸಭೆ ಉಪಾಧ್ಯಕ್ಷೆ ಗಿರಿಜಮ್ಮ, ಸದಸ್ಯೆ ಬಿ.ಕೆ. ಪವಿತ್ರ, ಪೌರ ಕಾರ್ಮಿಕ ಮಹಿಳೆ ಮಹಾದೇವಿ ಕೊಲ್ಲಾಪುರಿ, ಹಿರಿಯ ಪತ್ರಕರ್ತೆ ರಶ್ಮಿ ಎಸ್., ನಾಟಕ ಅಕಾಡೆಮಿ ಸದಸ್ಯ ಕುಂಬಾಪುರ ವಿ. ಬಾಬು ಇದ್ದರು.



ಮಹಿಳೆಯರಲ್ಲಿ ಆರೋಗ್ಯ, ಸ್ವಚ್ಛತೆಯ ಅರಿವು ಮೂಡಿಸಿ

ಚನ್ನಪಟ್ಟಣ: ತಾಲೂಕಿನ ನಾಗವಾರ ಗ್ರಾಮ ಪಂಚಾಯಿತಿ ವತಿಯಿಂದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಅರ್ಥಪೂರ್ಣವಾಗಿ ಆಚರಿಸಲಾಯಿತು. ನಾಗವಾರ ಸರ್ಕಾರಿ ಶಾಲೆಯ ಸಭಾಂಗಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಹಿಳೆಯರ ಆರೋಗ್ಯ ಮತ್ತು ಸಬಲೀಕರಣಕ್ಕೆ ಸಂಬಂಧಿಸಿದಂತೆ ವಿವಿಧ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು.

ಈ ಕಾರ್ಯಕ್ರಮದಲ್ಲಿರೋಟ್ರಾಕ್ಟ್ ಕ್ಲಬ್ ಆಫ್ ಬೆಂಗಳೂರು ನಿಯೋ ಮೈಂಡ್ಸ್ ಸಂಸ್ಥೆಯ ಸಹಯೋಗದಲ್ಲಿ ಕಿಶೋರ ವಯಸ್ಸಿನ ಹೆಣ್ಣುಮಕ್ಕಳನ್ನು ಒಳಗೊಂಡಂತೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಸುಮಾರು 200 ಮಹಿಳೆಯರಿಗೆ ಪುನಃ ಬಳಕೆ ಮಾಡಬಹುದಾದ ಆರೋಗ್ಯಕ್ಕೆ ಪೂರಕವಾದ ಕ್ಲಾತ್ ಪ್ಯಾಡ್‌ಗಳನ್ನು ಉಚಿತವಾಗಿ ವಿತರಿಸಲಾಯಿತು. ಮಹಿಳೆಯರಲ್ಲಿ ಸ್ವಚ್ಛತೆ ಹಾಗೂ ಆರೋಗ್ಯದ ಬಗ್ಗೆ ಅರಿವು ಮೂಡಿಸುವ ಉದ್ದೇಶದಿಂದ ಈ ವಿತರಣೆಕಾರ್ಯಕ್ರಮವನ್ನು ನಡೆಸಲಾಯಿತು. ಸ್ಪಂದನ ಆಸ್ಪತ್ರೆಯ ವೈದ್ಯರಾದ ಡಾ. ಆದಿತ್ಯಗೌಡ ಅವರು ಮಹಿಳೆಯರಲ್ಲಿ ಸಾಮಾನ್ಯವಾಗಿ ಕಾಣಿಸಿಕೊಳ್ಳುವ ಸ್ತನ ಕ್ಯಾನ್ಸರ್, ಗರ್ಭಕಂಠದ ಕ್ಯಾನ್ಸರ್ ಹಾಗೂ ಋತುಚಕ್ರ ಸಂಬಂಧಿತ ಸಮಸ್ಯೆಗಳ ಕುರಿತು ವಿವರವಾಗಿ ತಿಳಿಸಿದರು.

ನಾಗವಾರ ಪ್ರಾಥಮಿಕಆರೋಗ್ಯಕೇಂದ್ರದ ವತಿಯಿಂದ ಮಹಿಳೆಯರಿಗಾಗಿ ವಿಶೇಷ ಆರೋಗ್ಯ ತಪಾಸಣೆ ಶಿಬಿರ ಕೂಡ ಹಮ್ಮಿಕೊಳ್ಳಲಾಗಿತ್ತು. ಈ ಶಿಬಿರದಲ್ಲಿ ಹಲವು ಮಹಿಳೆಯರು ತಮ್ಮಆರೋಗ್ಯವನ್ನುತಪಾಸಣೆ ಮಾಡಿಸಿಕೊಂಡು ವೈದ್ಯರಿಂದ ಸಲಹೆಗಳನ್ನು ಪಡೆದರು. ಅಧ್ಯಕ್ಷತೆಯನ್ನು ನಾಗವಾರ ಗ್ರಾಮ ಪಂಚಾಯಿತಿ ಆಡಳಿತಾಧಿಕಾರಿ ಕೊಟ್ರೇಶ್ ಎಚ್.ಎಂ. ವಹಿಸಿದ್ದರು. ನಾಗವಾರಗ್ರಾಮ ಪಂಚಾಯಿತಿ ಪಿಡಿಒ ಲೀಲಾವತಿ, ರೋಟ್ರಾಕ್ಟ್ ಸಂಸ್ಥೆಯ ಅಧ್ಯಕ್ಷೆ ಶ್ವೇತಾ ಶ್ರೀನಿವಾಸ್, ಪದಾಧಿಕಾರಿಗಳಾದ ಗಿರಿಜಾ ಶ್ರೀನಿವಾಸ್ ಮತ್ತು ನಿಖಿತಾ ಸುದರ್ಶನ್ ಉಪಸ್ಥಿತರಿದ್ದರು.

ಗ್ರಾಮ ಪಂಚಾಯಿತಿ ಕಾರ್ಯದರ್ಶಿ ಶ್ರೀಕಂಠ ಕೆ.ಎನ್., ನಾಗವಾರ ಸರ್ಕಾರಿ ಶಾಲೆಯ ಮುಖ್ಯ ಶಿಕ್ಷಕ ರಾಮಚಂದ್ರಪ್ಪ ಟಿ., ನಾಗವಾರಜಿಪಿಎಲ್‌ಎಫ್ ಅಧ್ಯಕ್ಷೆ ಲಲಿತ, ಕರವಸೂಲಿಗಾರರಾದ ತಿಮ್ಮರಾಜು ಇದ್ದರು,



ಎಲ್ಲಾ ಕ್ಷೇತ್ರಗಳಲ್ಲೂ ಮಹಿಳೆಯರ ಮುನ್ನಡೆ, ಪ್ರಗತಿ ಸಂಕೇತ

ಕನಕಪುರ: ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ಕನಕಪುರ ಲಯನ್ಸ್ ಮತ್ತು ಲಿಯೋ ಸಂಸ್ಥೆ ಲಯನ್ಸ್ ಶಾಲಾ ಆವರಣದಲ್ಲಿ ಮಹಿಳಾ ದಿನಾಚರಣೆಯನ್ನು ಸಡಗರ ಸಂಭ್ರಮದಿಂದ ಆಚರಿಸಲಾಯಿತು.

ಲಯನ್ಸ್ ಕ್ಲಬ್ ಮಾಜಿ ಅಧ್ಯಕ್ಷ ಹಾಗೂ ಪರಿಸರ ಪ್ರೇಮಿ ಸಂಘದ ಅಧ್ಯಕ್ಷ ಮರಸಪ್ಪ ರವಿ ಮಾತನಾಡಿ, ಮಹಿಳೆಯರು ಎಲ್ಲಾ ಕ್ಷೇತ್ರಗಳಲ್ಲೂ ಮುನ್ನಡೆಯುತ್ತಿದ್ದು ಪ್ರಗತಿಯ ಸಂಕೇತವಾಗಿದೆ. ಇಂತಹ ಕಾರ್ಯಕ್ರಮಗಳಿಂದ ಮಹಿಳೆಯರಲ್ಲಿ ಆತ್ಮವಿಶ್ವಾಸ ಹೆಚ್ಚಿಸುವ ಜೊತೆಗೆ ಸಮಾಜಕ್ಕೆ ಉತ್ತಮ ಸಂದೇಶ ನೀಡುತ್ತವೆ ಎಂದು ತಿಳಿಸಿ ಶುಭ ಹಾರೈಸಿದರು.

ಲಯನ್ ರೋಹಿಣಿ ಪ್ರಿಯಾ ಮಾತನಾಡಿ, ಇಂದು ಮಹಿಳೆಯರು ಎಲ್ಲಾ ಕ್ಷೇತ್ರಗಳಲ್ಲೂ ಮುನ್ನಡೆಯುತ್ತಿದ್ದು ಮಹಿಳೆಯರಿಗೆ ದಕ್ಕಿರುವ ಹಕ್ಕುಗಳನ್ನು ಸಮಾಜದ ಒಳಿತಿಗಾಗಿ ಉಪಯೋಗಿಸುವಂತೆ ಕರೆ ನೀಡಿದರು. ಲಯನ್ಸ್ ಮಹಿಳಾ ಸದಸ್ಯರುಗಳಿಗೆ ಉಚಿತ ಗಿಡಗಳನ್ನು ವಿತರಿಸಲಾಯಿತು.



ಸಮಾರಂಭದ ಅಧ್ಯಕ್ಷತೆಯನ್ನು ಲಯನ್ಸ್ ಕ್ಲಬ್ ಅಧ್ಯಕ್ಷ ನಂದೀಶ್ ವಹಿಸಿದ್ದರು. ಮೋಹನ್, ಲಯನ್ಸ್ ಜಿಲ್ಲಾ ರಾಜ್ಯಪಾಲರಾದ ಅಶೋಕ್ ಕುಮಾರ್, ಕುಲಕರ್ಣಿ, ಡಾ. ನಾಗೇಶ್‌ರಾವ್, ಕಾರ್ಯದರ್ಶಿ ಶಿವಕುಮಾರ್, ಪ್ರಶಾಂತ್, ಸತೀಶ್, ಬಿಳಿಗಿರಿ ರಂಗಸ್ವಾಮಿ, ಗೋಪಾಲ್ ರಾಜ್, ಹರೀಶ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ವಿದ್ಯಾರ್ಥಿಗಳು ಕೃಷಿಗೆ ಸಹಕಾರ ನೀಡಲಿ: ಸಿಪಿವೈ

ಚನ್ನಪಟ್ಟಣ: ವಿದ್ಯಾರ್ಥಿಗಳು ಕೃಷಿ ಸಂಬಂಧಿತ ವಿಷಯಗಳಲ್ಲಿ ಉನ್ನತ ಶಿಕ್ಷಣ ಪಡೆದು, ರೈತರ ಕೃಷಿ ಚಟುವಟಿಕೆಗಳಿಗೆ ಸಲಹೆ ಹಾಗೂ ಸಹಕಾರ ನೀಡುವಂತಾಗಬೇಕು ಎಂದು ಶಾಸಕ ಸಿ.ಪಿ.ಯೋಗೇಶ್ವರ್ ಅವರು ಕರೆ ನೀಡಿದರು. ನಗರದ ಶತಮಾನೋತ್ಸವ ಭವನದಲ್ಲಿ ನಡೆದ ಬಾಲಕರ ಸರ್ಕಾರಿ ಪದವಿ ಪೂರ್ವ ಕಾಲೇಜಿನ 2025-26ನೇ ಸಾಲಿನ ಕ್ರೀಡಾಹಾಗೂ ಸಾಂಸ್ಕೃತಿಕ ಚಟುವಟಿಕೆಗಳ ಸಮಾರೋಪ ಸಮಾರಂಭ ಮತ್ತು ದ್ವಿತೀಯ ಪಿಯುಸಿ ವಿದ್ಯಾರ್ಥಿಗಳ ಬೀಳ್ಕೊಡುಗೆ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಇಂದು ಕೃಷಿ ಕ್ಷೇತ್ರಕ್ಕೆ ಸಂಬಂಧಿಸಿದ ಹಲವು ಕೋರ್ಸ್‌ಗಳು ಲಭ್ಯವಿದ್ದು, ಅವುಗಳಲ್ಲಿ ಅಧ್ಯಯನ ಮಾಡುವ ಮೂಲಕ ವಿದ್ಯಾರ್ಥಿಗಳು ಕೃಷಿಗೆ ಹೆಚ್ಚಿನ ಪ್ರಾಮುಖ್ಯತೆ ನೀಡಬೇಕು. ಶಿಕ್ಷಣದ ಜತೆಗೆ ಕೃಷಿ ಅಭಿವೃದ್ಧಿಗೆ ತಮ್ಮ ಜ್ಞಾನವನ್ನು ಬಳಸಿಕೊಳ್ಳಬೇಕು ಎಂದು ಸಲಹೆ ನೀಡಿದರು. ಕಾಲೇಜಿನ ಅಭಿವೃದ್ಧಿಗಾಗಿ 1.50 ಕೋಟಿ ರೂ.ಅನುದಾನ ಬಿಡುಗಡೆ ಮಾಡಲಾಗಿದ್ದು, ಅದನ್ನು ಸಮರ್ಪಕವಾಗಿ ಬಳಸಿಕೊಂಡು ಕಾಲೇಜಿನ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸಲಾಗುವುದು. ಜತೆಗೆ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲಾಗುವುದುಎಂದು ತಿಳಿಸಿದರು.

ಕನ್ನಡ ಉಪನ್ಯಾಸಕ, ಪತ್ರಕರ್ತಎಚ್.ಎಂ.ರಮೇಶ್ ಮಾತನಾಡಿ, ವಿದ್ಯಾರ್ಥಿಗಳು ಜೀವನದಲ್ಲಿ ಸ್ಪಷ್ಟಗುರಿ ಇಟ್ಟುಕೊಳ್ಳಬೇಕು. ಗುರಿಗಳು ಉತ್ತಮವಾಗಿದ್ದರೆ ಸಾಧನೆಗಳು ಸಹ ಅದೇ ಮಟ್ಟದಲ್ಲಿ ಉನ್ನತವಾಗಿರುತ್ತವೆ. ದ್ವಿತೀಯ ಪಿಯುಸಿ ವಿದ್ಯಾರ್ಥಿಗಳ ಜೀವನದಲ್ಲಿಇದು ಮಹತ್ವದ ಹಂತವಾಗಿದ್ದು, ಇದನ್ನುಅರಿತು ಮುಂದಿನ ಬದುಕಿಗೆ ಸಜ್ಜಾಗಬೇಕುಎಂದು ಕಿವಿಮಾತು ಹೇಳಿದರು. ಕಾಲೇಜಿನ ಆಡಳಿತ ಮಂಡಳಿಯ ಉಪಾಧ್ಯಕ್ಷ ಡಿ. ಪುಟ್ಟಸ್ವಾಮಿಗೌಡ ಅಧ್ಯಕ್ಷತೆ ವಹಿಸಿದ್ದರು. ಖಜಾಂಚಿ ಎ. ಕಾಂತರಾಜ, ಸದಸ್ಯಎಚ್.ಎಲ್. ಶಂಕರೇಗೌಡ, ಹಿರಿಯ ಉಪನ್ಯಾಸಕರಾದ ಎಚ್. ರಾಮಯ್ಯ, ಪುಟ್ಟರಾಜು ಸೇರಿದಂತೆ ಇತರರು ಉಪಸ್ಥಿತರಿದ್ದರು. ಪ್ರಾಂಶುಪಾಲ ಪಿ. ಶಿವಕುಮಾರ್ ಪ್ರಾಸ್ತಾವಿಕ ಭಾಷಣ ಮಾಡಿದರು. ಉಪನ್ಯಾಸಕಿ ಇಂದ್ರಮ್ಮ ಕಾರ್ಯಕ್ರಮ ನಿರೂಪಿಸಿದರು. ಉಪನ್ಯಾಸಕರಾದ ಸುರೇಶ್, ಅಸ್ಲಾಂ ಸೇರಿದಂತೆ ಹಲವರು ಭಾಗವಹಿಸಿದ್ದರು. 2025-26ನೇ ಸಾಲಿನಲ್ಲಿ ವಿವಿಧ ಕ್ರೀಡೆಗಳು ಹಾಗೂ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು. ವಿದ್ಯಾರ್ಥಿಗಳ ಸಾಂಸ್ಕೃತಿಕ ಕಾರ್ಯಕ್ರಮ ಮೆರುಗು ನೀಡಿತು.

ಸ್ವಯಂ ಉದ್ಯೋಗ ಉಚಿತ ತರಬೇತಿಗೆ ಚಾಲನೆ ನೀಡಿದ ಶೀಲಾ ಯೋಗೇಶ್ವರ್

ಮಹಿಳಾ ಸಬಲೀಕರಣಕ್ಕೆ ಉದ್ಯೋಗಿನಿ ಯೋಜನೆ

ಚನ್ನಪಟ್ಟಣ: ಮಹಿಳಾಸಬಲೀಕರಣಕ್ಕೆಒತ್ತುನೀಡುವ ಉದ್ದೇಶದಿಂದ ಶ್ರೀ ಕ್ಷೇತ್ರದ ವತಿಯಿಂದ ರೂಪಿಸಿರುವ 'ಉದ್ಯೋಗಿನಿ' ಯೋಜನೆ ಶ್ಲಾಘನೀಯವಾಗಿದೆ. ಮಹಿಳೆಯರಿಗೆ ಬೇಕಾಗಿರುವುದು ಸಮಾಜದ ಕನಿಕರವಲ್ಲ, ಸಹಕಾರ. ಮಹಿಳೆಯರು ಈ ಯೋಜನೆಯ ಸದುಪಯೋಗಪಡಿಸಿಕೊಳ್ಳಬೇಕು ಎಂದು ಸಮಾಜ ಸೇವಕಿ ಶೀಲಾ ಯೋಗೇಶ್ವರ್‌ಕರೆ ನೀಡಿದರು. ತಾಲೂಕಿನ ಗೌಡಗೆರೆ ಗ್ರಾಮದಲ್ಲಿರುವ ಶ್ರೀ ಚಾಮುಂಡೇಶ್ವರಿ ಬಸವಪ್ಪನ ಪುಣ್ಯಕ್ಷೇತ್ರದಲ್ಲಿ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ಭಾನುವಾರ ಹಮ್ಮಿಕೊಂಡಿದ್ದಉದ್ಯೋಗಿನಿ (ಸ್ವಯಂ ಉದ್ಯೋಗಗಳ ಉಚಿತತರಬೇತಿ) ಕಾರ್ಯಕ್ರಮಕ್ಕೆ ಚಾಲನೆ ನೀಡಿಅವರು ಮಾತನಾಡಿದರು. ಕ್ಷೇತ್ರದ ಧರ್ಮದರ್ಶಿಗಳಾದ ಡಾ. ಮಲ್ಲೇಶ್‌ಗುರೂಜೀ ಅವರು ಧಾರ್ಮಿಕ ಕ್ಷೇತ್ರದಲ್ಲಿ ತಾಲೂಕಿನ ಹೆಸರನ್ನುದೊಡ್ಡ ಮಟ್ಟಕ್ಕೆತೆಗೆದುಕೊಂಡು ಹೋಗಿದ್ದಾರೆ. ತಮ್ಮ ಧಾರ್ಮಿಕ ಕಾರ್ಯಗಳ ಜೊತೆಗೆ ಮಹಿಳೆಯರ ಸಬಲೀಕರಣಕ್ಕಾಗಿಉದ್ಯೋಗಿನಿ ಯೋಜನೆ ರೂಪಿಸಿರುವುದು ಶ್ಲಾಘನೀಯವಾಗಿದೆ.



ಮಹಿಳೆಯರಲ್ಲಿ ಹಲವಾರು ಕೌಶಲ್ಯಗಳಿದ್ದರೂ ತರಬೇತಿ ಮತ್ತು ಮಾರ್ಗದರ್ಶನದಕೊರತೆಯಿಂದ ಅವು ಹೊರಬರುತ್ತಿಲ್ಲ. ಕ್ಷೇತ್ರದ ವತಿಯಿಂದ ನೀಡುತ್ತಿರುವ ಉಚಿತ ತರಬೇತಿಯನ್ನು ಮಹಿಳೆಯರು ಸದುಪಯೋಗಪಡಿಸಿಕೊಂಡು ಆರ್ಥಿಕವಾಗಿ ಸ್ವಾವಲಂಬಿಗಳಾಗಬೇಕು ಎಂದುಅವರು ತಿಳಿಸಿದರು.

ಶ್ರೀ ಕ್ಷೇತ್ರದ ಧರ್ಮದರ್ಶಿ ಡಾ. ಮಲ್ಲೇಶ್ ಗುರೂಜೀ ಮಾತನಾಡಿ, ಪುರುಷರಷ್ಟೇ ಸಮಾನ ಸಾಮರ್ಥ್ಯ ಹೊಂದಿರುವ ಮಹಿಳೆಯರು ನಮ್ಮ ದೇಶದ ದೊಡ್ಡ ಶಕ್ತಿಯಾಗಿದ್ದಾರೆ. ಮಹಿಳೆಯರಿಗೆ ಪ್ರೋತ್ಸಾಹ ನೀಡುವಉದ್ದೇಶದಿಂದ ಶ್ರೀ ಕ್ಷೇತ್ರದ ವತಿಯಿಂದ ಉದ್ಯೋಗಿನಿ ಯೋಜನೆಯಲ್ಲಿ ಸ್ವಯಂ ಉದ್ಯೋಗಗಳ ಉಚಿತ ತರಬೇತಿ ಕಾರ್ಯಕ್ರಮ ರೂಪಿಸಲಾಗಿದೆಎಂದು ಹೇಳಿದರು. ಎಂ.ಕೆ.ದೊಡ್ಡಿ ಪಿಎಸ್‌ಐ ಸಹನಾ ಪಾಟೀಲ್ ಮಾತನಾಡಿ, ಹೆಣ್ಣನ್ನು ಪೂಜಿಸುವ ನಮ್ಮದೇಶದಲ್ಲಿಯೂ ಇಂದಿಗೂ ಮಹಿಳಾ ದೌರ್ಜನ್ಯಗಳು ಕಡಿಮೆಯಾಗಿಲ್ಲ. ಮಹಿಳೆಯರು ಜಾಗೃತರಾಗಬೇಕು. ಶ್ರೀ ಕ್ಷೇತ್ರದ ವತಿಯಿಂದ ಮಹಿಳಾ ಸಬಲೀಕರಣಕ್ಕೆಒತ್ತು ನೀಡುತ್ತಿರುವುದು ಮಾದರಿಕಾರ್ಯವಾಗಿದೆಎಂದು ಹೇಳಿದರು.

ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾ ಅಧ್ಯಕ್ಷಬಿ.ಟಿ. ನಾಗೇಶ್ ಮಾತನಾಡಿ, ಶ್ರೀ ಕ್ಷೇತ್ರ ಈಗಾಗಲೇ ಹಲವಾರು ಸಮಾಜಮುಖಿ ಕಾರ್ಯಕ್ರಮಗಳನ್ನು ನಡೆಸುತ್ತಿದೆ. ಅದರ ಮುಂದುವರೆದ ಭಾಗವಾಗಿ ಉದ್ಯೋಗಿನಿ ಕಾರ್ಯಕ್ರಮ ರೂಪಿಸಿರುವುದು ಶ್ರೀ ಕ್ಷೇತ್ರದ ಸಾಮಾಜಿಕ ಬದ್ಧತೆಯ ಸಾಕ್ಷಿಯಾಗಿದೆಎಂದು ಹೇಳಿದರು.

ಟ್ರಸ್ಟ್ ಅಧ್ಯಕ್ಷ ಬಾಬು, ಸಮಾಜ ಸೇವಕಿ ರಮ್ಯಾಜಗತ್ತು, ಕೌಶಲ್ಯಅಭಿವೃದ್ಧಿ ಅಧಿಕಾರಿ ಜ್ಯೋತಿ ಪ್ರಕಾಶ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಮಾಗಡಿ ಪೊಲೀಸ್ ಠಾಣೆಯಲ್ಲಿ ದಲಿತರ ಕುಂದುಕೊರತೆ ಸಭೆ

ಅನಧಿಕೃತ ಮದ್ಯ ಮಾರಾಟಕ್ಕೆ ಕಡಿವಾಣ ಹಾಕಿ

ಮಾಗಡಿ: ದಲಿತ ಕಾಲೋನಿಗಳಲ್ಲಿ ಮತ್ತು ಗ್ರಾಮಗಳಲ್ಲಿ ಅನಧಿಕೃತವಾಗಿ ಮದ್ಯ ಮಾಡುವುದರಿಂದ ಅನೇಕ ಕುಟುಂಬಗಳು ಅನಾಥವಾಗುತ್ತಿವೆ ಎಂದು ದಲಿತ ಮುಖಂಡರುಗಳು ಆರೋಪಿಸಿದರು. ಪಟ್ಟಣದ ಪೋಲೀಸ್ ಠಾಣೆ ನೂತನ ವೃತ್ತ ನಿರೀಕ್ಷಕರಾಗಿ ಅಧಿಕಾರ ವಹಿಸಿಕೊಂಡಿರುವ ಶ್ರೀನಿವಾಸ ಜಿ.ಟಿ ಅವರ ನೇತೃತ್ವದಲ್ಲಿ ದಲಿತರ ಕುಂದು ಕೊರತೆ ಸಭೆ ಏರ್ಪಡಿಸಲಾಗಿತ್ತು ಸಭೆಯಲ್ಲಿ ಠಾಣಾ ವ್ಯಾಪ್ತಿಯ ದಲಿತರು ಭಾಗವಹಿಸಿದ್ದರು.

ಸಭೆಯಲ್ಲಿ ಮುಖಂಡ ಗ್ಯಾರಂಟಿ ಅನುಷ್ಠಾನಗಳ ಅಧ್ಯಕ್ಷ ಕಲ್ಕೆರೆ ಶಿವಣ್ಣ ಮಾತನಾಡಿ, ಠಾಣಾ ವ್ಯಾಪ್ತಿಯ ಬಹುತೇಕ ಗ್ರಾಮಗಳಲ್ಲಿ ಅನಧಿಕೃತವಾಗಿ ಮದ್ಯ ಮಾರಾಟ ಮಾಡಲಾಗುತ್ತಿದ್ದು, ದಲಿತ ಕಾಲೋನಿಗಳ ಅಕ್ಕಪಕ್ಕದಲ್ಲಿ ಸರಳವಾಗಿ ಮದ್ಯ ಸಿಗುವುದರಿಂದ ಹದಿಹರೆಯದ ಮಕ್ಕಳು ಸೇರಿದಂತೆ ಕುಟುಂಬದ ಮುಖ್ಯಸ್ಥರು ಸಹ ಚಟಕ್ಕೆ ಬಿದ್ದು ತಮ್ಮ ಜೀವನ ಹಾಳುಮಾಡಿಕೊಳ್ಳುತ್ತಿದ್ದಾರೆ, ಈ ಬಗ್ಗೆ ಸಂಬಂದ ಪಟ್ಟ ಅಧಿಕಾರಿಗಳನ್ನು ಕೇಳಿದರೆ ಹಾರಿಕೆ ಉತ್ತರದ ಜೊತೆಗೆ ದೂರು ನೀಡಿದವರ ಮಾಹಿತಿಯನ್ನು ಸಹ ಅನಧಿಕೃತ ಮದ್ಯ ಮಾರಟಗಾರರಿಗೆ ಮಾಹಿತಿ ನಿಡುತ್ತಾರೆ, ಇದರಿಂದ ಗ್ರಾಮಗಳಲ್ಲಿ ವೈಷಮ್ಯವೂ ಸಹ ಬೆಳೆಯುತ್ತಿದೆ ಎಂದು ದೂರಿದರು.

ಮುಖಂಡ ಮಾಡಬಾಳ್ ಜಯರಾಂ ಮಾತನಾಡಿ, ಸ್ವತಂತ್ರ ಬಂದು ಏಳು ದಶಕಗಳೇ ಕಳೆದು ಹೋಗಿವೆ ಇನ್ನು ಗ್ರಾಮೀಣ ಪ್ರದೇಶದಲ್ಲಿ ಜಾತಿ ಪದ್ಧತಿ, ಅಸ್ಪೃಶ್ಯತೆ ತಾಂಡವಾಡುತ್ತಿದೆ, ಉದಾಹರಣೆಗೆ ಸ್ವಗ್ರಾಮವಾದ ಮಾಡಬಾಳ್ ಗ್ರಾಮದ ದೇವಾಲಯಕ್ಕೆ ದಲಿತರು ಪೂಜೆಗೆ ಹೋದರೆ ತೆಗೆದುಕೊಂಡು ಹೋಗಿರುವ ಪೂಜಾ ಸಾಮಗ್ರಿಗಳನ್ನು ನೆಲದಮೇಲೆ ಇಟ್ಟ ನಂತರ ಅರ್ಚಕ ಕೈಗೆತ್ತಿಕೊಂಡು ಪೂಜೆಮಾಡಿಕೊತ್ತಾರೆ, ಇದು ಕೇರವಲ ನಮ್ಮ ಗ್ರಾಮವಲ್ಲ ಅನೇಕ ಕಡೆ ಇಂತಹ ದೌರ್ಜನ್ಯಗಳು ನಡೆಯುತ್ತಲೇ ಇವೆ ಎಂದು ಆರೋಪಿಸಿದರು. ಯುವ ಮುಖಂಡ ಗೋಪಾಲ ಕೃಷ್ಣ ಮಾತನಾಡಿ, ವೀರೇಗೌಡನ ದೊಡ್ಡಿ ಗ್ರಾಮದ ಸವರ್ಣೀಯನೊಬ್ಬ ದಲಿತರ ಮೇಲೆ ಹಲ್ಲೆ ದೌರ್ಜನ್ಯ ನಡೆಸಿದ್ದರ ಪರಿಣಾಮ ಸಾಕ್ಷಿ ಸಹಿತ ಆತನ ವಿರುದ್ಧ ದೂರು ನೀಡಲಾಗಿತ್ತು ಎಂದು ತಿಳಿಸಿದರು. ಮಹಿಳಾ ಮುಖಂಡೆ ವನಜಾ, ವೃತ್ತ ನೀರೀಕ್ಷಕ ಶ್ರೀನಿವಾಸ .ಜಿ.ಟಿ. ,ಸಭೆಯಲ್ಲಿ ದೊಡ್ಡಿ ಲಕ್ಷಣ, ಗೋಪಿ ಮಾತನಾಡಿದರು, ಮುಖಂಡರಾದ ಬಿ.ಟಿ ವೆಂಕಟೇಶ್, ಜಿವಿಕಾ ಗಂಗಹನುಮಯ್ಯ, ಬೆಳಗುಂಬ ನರಸಿಂಹಯ್ಯ ಇದ್ದರು.



ಕಿರುಸುದ್ದಿ

10 ಎಕರೆಯಲ್ಲಿ ಕ್ರೀಡಾಂಗಣ: ಶಾಸಕ

ಬಂಗಾರಪೇಟೆ: ತಾಲೂಕಿನ ಕಸಬಾ ಹೋಬಳಿಯಲ್ಲಿ ಕ್ರೀಡಾಂಗಣವನ್ನು ನಿರ್ಮಾಣ ಮಾಡಲು ರಾಜ್ಯ ಸರ್ಕಾರವು 2 ಕೋಟಿ ಅನುದಾನ ಮಂಜೂರು ಮಾಡಿದ್ದು, ಸುಮಾರು 10 ಎಕರೆ ಜಮೀನಿನಲ್ಲಿ ಕ್ರೀಡಾಭಿಮಾನಿಗಳಿಗೆ ಸಹಕಾರಿಯಾಗಿ ಕ್ರೀಡಾಂಗಣವನ್ನು ನಿರ್ಮಾಣ ಮಾಡಲು ಯೋಜನೆ ರೂಪಿಸಲಾಗಿದೆ ಎಂದು ಶಾಸಕ ಎಸ್.ಎನ್ .ನಾರಾಯಣಸ್ವಾಮಿ ಹೇಳಿದರು. ತಾಲೂಕಿನ ಕೀಲುಕೊಪ್ಪ ಗ್ರಾಮದಲ್ಲಿ ಮೆಘಾ ಲೆವಲ್ಸ್ ಹಾಗೂ ಟೀಂ ಕೆಕೆ ವತಿಯಿಂದ ಟೆನಿಸ್ ಬಾಲ್ ಕ್ರಿಕೆಟ್ ಟೂರ್ನಿಮೆಂಟ್‌ಗೆ ಚಾಲನೆ ನೀಡಿ ಮಾತನಾಡಿದ ಅವರು, ಗ್ರಾಮೀಣ ಪ್ರದೇಶದಲ್ಲಿ ಕ್ರಿಕೆಟ್ ಆಟವನ್ನು ಆಡಲು ಕೇವಲ ಬೇಸಿಗೆ ಕಾಲದಲ್ಲಿ ಮಾತ್ರ ಆಡಬೇಕಾಗಿದೆ, ಏಕೆಂದರೆ ಬೇರೆ ಸಮಯದಲ್ಲಿ ರೈತರ ಬೆಳೆಗಳು ಇರುತ್ತದೆ, ಈ ಕಾರಣದಿಂದ ಕ್ರೀಡಾಭಿಮಾನಿಗಳು ವರ್ಷವಿಡೀ ಕ್ರೀಡೆಗಳನ್ನು ಆಡಲು ಸುಸಜ್ಜಿತವಾಗಿ 10 ಎಕರೆ ಭೂ ಪ್ರದೇಶದಲ್ಲಿ ಕ್ರೀಡಾಂಗಣವನ್ನು ನಿರ್ಮಾಣ ಮಾಡಲು ಯೋಜನೆ ರೂಪಿಸಲಾಗಿದೆ ಎಂದರು.

ಪಟ್ಟಣಕ್ಕೆ ಹತ್ತಿರವಾಗಿರುವ ಕೆಸರನಹಳ್ಳಿ, ಚಿನ್ನಕೋಟೆ ಗ್ರಾಮಪಂಚಾಯ್ತಿಗಳ ವಾಪ್ತಿಯಲ್ಲಿ ಸರ್ಕಾರಿ ಜಮೀನು ಇರುವುದನ್ನು ಪರಶೀಲನೆ ಮಾಡಿ 10 ಎಕರೆ ಜಮೀನು ಮಂಜೂರು ಆದ ಬಳಿ ಕ್ರೀಡಾಂಗಣ ನಿರ್ಮಾಣಕ್ಕೆ ಚಾಲನೆ ನೀಡಲಾಗುವುದು, ರಾಜ್ಯ ಕಾಂಗ್ರೆಸ್ ಸರ್ಕಾರದ ಮುಖ್ಯಮಂತ್ರಿ ಸಿದ್ದರಾಮಯ್ಯ 2 ಕೋಟಿ ಅನುದಾನವನ್ನು ಮಂಜೂರು ಮಾಡಿದ್ದಾರೆ. ಇನ್ನೂ ಹೆಚ್ಚಿನ ಅನುದಾನ ಬಿಡುಗಡೆ ಮಾಡಲು ಸರ್ಕಾರವು ಸಹಮತ ವ್ಯಕ್ತಪಡಿಸಿರುವುದರಿಂದ ತಾಲೂಕಿನ ಎಲ್ಲಾ ಕ್ರೀಢಾಭಿಮಾನಿಗಳಿಗೆ ಸಹ ಕಾರಿಯಾಗಿ ಕ್ರೀಡಾಂಗಣ ನಿರ್ಮಾಣ ಮಾಡಲಾಗುವುದೆಂದರು. ಕೀಲುಕೊಪ್ಪ ಗ್ರಾಮದ ಗ್ರಾಪಂ ಮಾಜಿ ಸದಸ್ಯ ಕೆ.ಶ್ರೀನಿವಾಸಮೂರ್ತಿ, ಗುತ್ತಿಗೆದಾರ ಆರ್.ಶ್ರೀನಿವಾಸ, ಟಿಎಪಿಸಿಎಂಎಸ್ ಉಪಾಧ್ಯಕ್ಷ ಅ.ನಾ. ಹರೀಶ್, ಹಿರಿಯ ಮುಖಂಡ ಶ್ರೀರಾಮೇಗೌಡ, ಚಂದ್ರಶೇಖರ್, ಮಂಜಪ್ಪ, ಜಿ.ವಸಂತ್ ಕುಮಾರ್, ರೈಲ್ವೆ ಇಲಾಖೆ ನಾಗರಾಜ್, ಸಂತೋಷ ಕುಮಾರ್, ಜಗನ್ನಾಥ್, ನಿಖಿಲ, ಶ್ರೀಕಾಂತ್ ಇತರರು ಇದ್ದರು.

ಕೆರೆಯಲ್ಲಿ ಅಪರಿಚಿತ ಶವ ಪತ್ತೆ

ಬಂಗಾರಪೇಟೆ: ಅಪರಿಚಿತ ವ್ಯಕ್ತಿಯ ಶವವೊಂದು ಕೊಂಡೆನಹಳ್ಳಿ ಗ್ರಾಮದ ರಾಟ್ನ ಕೆರೆಯಲ್ಲಿ ಕೊಳತ ಸ್ಥಿತಿಯಲ್ಲಿ ಪತ್ತೆಯಾಗಿದ್ದು ಬೂದಿಕೋಟೆ ಪೊಲೀಸರು ದೂರು ದಾಖಲಿಸಿಕೊಂಡು ತನಗೆ ನಡೆಸುತ್ತಿದ್ದಾರೆ.

ಸೋಮವಾರ ಬೆಳಗ್ಗೆ ವ್ಯಕ್ತಿ ಒಬ್ಬರು ತಾಲೂಕಿನ ಕೊಂಡೆನಹಳ್ಳಿ ಗ್ರಾಮದ ರಾಟ್ನ ಕೆರೆಯ ಬಳಿ ಹೋದಾಗ ಕೊಳತ ಸ್ಥಿತಿಯಲ್ಲಿ ಸುಮಾರು 45 ರಿಂದ 50 ವರ್ಷದ ಪುರುಷನ ಮೃತ ದೇಹ ಪತ್ತೆಯಾಗಿದ್ದು ತಕ್ಷಣ ಬೂದಿಕೋಟೆ ಪೊಲೀಸರಿಗೆ ಮಾಹಿತಿ ನೀಡಿದ್ದು ಸ್ಥಳಕ್ಕೆ ಪೊಲೀಸರು ಭೇಟಿ ನೀಡಿ ಶವವನ್ನು ಸ್ಥಳೀಯರ ಸಹಕಾರದೊಂದಿಗೆ ಹೊರತೆಗೆದು ದೂರು ದಾಖಲಿಸಿಕೊಂಡು ಶವವನ್ನು ಜಿಲ್ಲಾ ಆಸ್ಪತ್ರೆಗೆ ಕಳುಹಿಸಿ ತನಿಖೆ ಚುರುಕು ಗೊಳಿಸಿದ್ದಾರೆ. ಅನಾಮಧೇಯ ಮೃತನ ವ್ಯಕ್ತಿಯ ತಲೆಯ ಭಾಗ, ಕಣ್ಣುಗಳು, ಮೂಗು, ಬಾಯಿ, ಕಾಲುಗಳ ಮೇಲೆ, ಕೈಗಳ ಮೇಲೆ ಹುಳಗಳು ಕಾಣುತ್ತಿದ್ದು, ನೀರಿನಲ್ಲಿರುವ ಜಲಚರಗಳು ತಿಂದಿರುವುದು ಕಂಡು ಬಂದಿರುತ್ತದೆ, ಮೃತದೇಹದ ಮೇಲೆ ಬಿಳಿ ಬಣ್ಣದ ಷರ್ಟು, ನೀಲಿ ಬಣ್ಣದ ಬನಿಯನ್ ಮತ್ತು ನಿಕ್ಕರ್ ಇರುತ್ತದೆ, ಮೃತಪಟ್ಟ ವ್ಯಕ್ತಿ ಸುಮಾರು ಐದಾರು ದಿನಗಳ ಹಿಂದೆ ಕೆರೆಯಲ್ಲಿ ಬಿದ್ದಿರುವುದರಿಂದ ಕೊಳೆತ ಸ್ಥಿತಿಯಲ್ಲಿ ಇರುವುದರಿಂದ ಎಫ್‌ಎಸ್‌ಐಎಲ್ ತಂಡ ಹಾಗೂ ವೃತ್ತಿನಿರೀಕ್ಷಕ ಮಾರ್ಕಂಡಯ್ಯ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

ಬೆಂ.ಉತ್ತರ ವಿವಿ ಸ್ನಾತಕೋತ್ತರ ಕೇಂದ್ರದಲ್ಲಿ ಮಹಿಳಾ ದಿನಾಚರಣೆ

ಕೋಲಾರ: ನಗರ ಹೊರವಲಯದ ಮಂಗಸಂದ್ರದಲ್ಲಿನ ಬೆಂಗಳೂರು ಉತ್ತರ ವಿವಿ ಸುವರ್ಣ ಗಂಗಾ ಕ್ಯಾಂಪಾಸ್‌ನ ಸ್ನಾತಕೋತ್ತರ ಕೇಂದ್ರದ ಸೆಮಿನಾರ್ ಹಾಲ್‌ನಲ್ಲಿ ಮಾ.10 ರಂದು ಬೆಳಗ್ಗೆ 10 ಗಂಟೆಗೆ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ನಡೆಯಲಿರುವ ಒಂದು ದಿನದ ವಿಶೇಷ ಕಾರ್ಯಾಗಾರವನ್ನು ಕುಲಪತಿ ಪ್ರೊ.ಬಿ.ಕೆ.ರವಿ ಉದ್ಘಾಟಿಸಲಿದ್ದು, ಮುಖ್ಯ ಅತಿಥಿಗಳಾಗಿ ಪ್ರಿನ್ಸಿಪಲ್ ಸೀನಿಯರ್ ಸಿವಿಲ್ ಜಡ್ಜ್ ಹಾಗೂ ಸಿಜೆಎಂ ಎಸ್. ಶಂಕುಂತಲಾ ಭಾಗವಹಿಸುವರು. ಕಾರ್ಯಕ್ರಮದಲ್ಲಿ ಮುಖ್ಯ ಭಾಷಣಕಾರರಾಗಿ ಕರ್ನಾಟಕ ಲೇಖಕಿಯರ ಸಂಘದ ಅಧ್ಯಕ್ಷೆ ಆರ್.ಸುನಂದಮ್ಮ ಉಪನ್ಯಾಸ ನೀಡುವರು. ವಿವಿಯ ಕುಲಸಚಿವರಾದ ಸಿ.ಎನ್.ಶ್ರೀಧರ್, ಮೌಲ್ಯಮಾಪನ ಕುಲಸಚಿವ ಪ್ರೊ.ಎನ್.ಲೋಕನಾಥ್, ಆರ್ಥಿಕ ಅಧಿಕಾರಿ ಬಿ.ವಿ.ವಸಂತಕುಮಾರ್, ಸ್ನಾತಕೋತ್ತರ ಕೇಂದ್ರದ ನಿರ್ದೇಶಕಿ ಪ್ರೊ.ಡಿ.ಕುಮುದಾ, ಪಿಎಂ ಉಷಾ ಯೋಜನೆ ನೋಡಲ್ ಅಧಿಕಾರಿ ಡಾ.ರಮೇಶ್ ಎಂ.ಎನ್ ಸೇರಿದಂತೆ ಎಲ್ಲಾ ಸಿಂಡಿಕೇಟ್ ಸದಸ್ಯರು ಉಪಸ್ಥಿತರಿರುವರು.



ಗಂಗಾನಿಕೇತನ್ ಫೌಂಡೇಶನ್ ಹಾಗೂ ರೋಟರಿ ಸಂಸ್ಥೆಯಿಂದ ಅರ್ಥಪೂರ್ಣ ಮಹಿಳಾ ದಿನ ಆಚರಿಸಲಾಯಿತು.

ಸಮಾಜಕ್ಕೆ ಮಹಿಳೆ ಪ್ರೇರಣಾ ಶಕ್ತಿ

ಬೇತಮಂಗಲ: ಸಮಾಜದ ಅಭಿವೃದ್ಧಿಯಲ್ಲಿ ಮಹಿಳೆಯರ ಪಾತ್ರ ಅನನ್ಯವಾಗಿದ್ದು, ಮಹಿಳಾ ಸಬಲೀಕರಣದಿಂದ ಮಾತ್ರ ಸದೃಢ ಸಮಾಜ ನಿರ್ಮಾಣ ಸಾಧ್ಯ ಎಂದು ಗಂಗನಿಕೇತನ್ ಫೌಂಡೇಶನ್ ಅಧ್ಯಕ್ಷ ಎಚ್. ರಾಮಚಂದ್ರಪ್ಪ ಹೇಳಿದರು.

ಪಟ್ಟಣದ ಸಮೀಪದ ರಾಮಸಾಗರ ಗ್ರಾಮದ ಸರ್ಕಾರಿ ಶಾಲೆ ಆವರಣದಲ್ಲಿ ಆಯೋಜಿಸಲಾಗಿದ್ದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮವನ್ನು ಜ್ಯೋತಿ ಬೆಳಗಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು, ಮಹಿಳೆ ಕೇವಲ ಕುಟುಂಬದ ಕಣ್ಣಲ್ಲ, ಇಡೀ ಸಮಾಜದ ಪ್ರೇರಣಾ ಶಕ್ತಿ. ಅವರಿಗೆ ಸೂಕ್ತ ಅವಕಾಶ ಮತ್ತು ವೇದಿಕೆ ಕಲ್ಪಿಸುವುದು ನಮ್ಮ ಸಂಸ್ಥೆಯ ಮುಖ್ಯ ಉದ್ದೇಶ ಎಂದು ತಿಳಿಸಿದರು. ಮಹಿಳೆಯರು ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಸಬಲರಾದಾಗ ಮಾತ್ರ ಸದೃಢ ಸಮಾಜವನ್ನು ನಿರ್ಮಾಣ ಮಾಡಲು ಸಾಧ್ಯ ಎಂದು ಅಭಿಪ್ರಾಯಪಟ್ಟರು. ಶಿಕ್ಷಣ, ಆರೋಗ್ಯ, ಸಮಾಜ ಸೇವೆ ಮತ್ತು ಕೃಷಿ ವಿವಿಧ ಕ್ಷೇತ್ರಗಳಲ್ಲಿ ವಿಶಿಷ್ಟ ಸಾಧನೆ ಮಾಡಿದ ಮಹಿಳಾ ಮಣಿಗಳಿಗೆ ಗಂಗನಿಕೇತನ್ ಫೌಂಡೇಶನ್ ಹಾಗೂ ರೋಟರಿ ಸಂಸ್ಥೆ ವತಿಯಿಂದ ಸ್ಫೂರ್ತಿ ಪುರಸ್ಕಾರ ನೀಡಿ ಗೌರವಿಸಲಾಯಿತು. ಗಂಗನಿಕೇತನ ಫೌಂಡೇಶನ್ ಅಧ್ಯಕ್ಷ ರಾಮಚಂದ್ರಪ್ಪ, ಶಾಲೆಯ ಮುಖ್ಯಸ್ಥೆ ನುಸರತ್, ಗ್ರಾಪಂ ಮಾಜಿ ಉಪಾಧ್ಯಕ್ಷೆ ಶ್ವೇತಾ ಅಶ್ವಥ್, ಕೇಶವ ರೆಡ್ಡಿ, ಬಿ. ಎಲ್. ಕೃಷ್ಣಪ್ಪ, ಡಾ ಮುನಿರಾಜು, ಮುನಿ ಕೃಷ್ಣಪ್ಪ, ಪ್ರಭಾಕರ್, ಶಿವಕುಮಾರ್, ವೆಂಕಟಪ್ಪ, ಮಂಜುನಾಥ್, ಚಂದ್ರಶೇಖರ್, ದುರ್ಗಮ್ಮ ಇದ್ದರು.



ರಾಜ್ಯಮಟ್ಟದ ಕ್ರೀಡಾಕೂಟದಲ್ಲಿ ಜಿಲ್ಲೆಯನ್ನು ಪ್ರತಿನಿಧಿಸಿದ್ದ ಕೋಲಾರ ತಾಲೂಕಿನ ಅರಾಭಿಕೊತ್ತನೂರು ಸರ್ಕಾರಿ ಪ್ರೌಢಶಾಲೆ ಸಾಧಕರಾದ ನಾಲ್ವರು ವಿದ್ಯಾರ್ಥಿಗಳಿಗೆ ದೈಹಿಕ ಶಿಕ್ಷಣ ಶಿಕ್ಷಕಿ ಕೆ.ಲೀಲಾ ನೆನಪಿನ ಕಾಣಿಕೆ ಮತ್ತು ಬಹುಮಾನ ವಿತರಿಸಿ ಪ್ರೋತ್ಸಾಹಿಸಿದರು.

ಕೋಲಾರ ಜಿಲ್ಲಾಮಟ್ಟದ ರಸ್ತೆ ಸುರಕ್ಷತಾ ಸಭೆಯಲ್ಲಿ ಡಿಸಿ ಕಟ್ಟಪ್ಪಣೆ

ಜಿಲ್ಲೆ ಅಪಘಾತಮುಕ್ತವಾಗಲಿ

ಕೋಲಾರ: ಜಿಲ್ಲೆಯಲ್ಲಿ ರಸ್ತೆ ಅಪಘಾತಗಳ ಸಂಖ್ಯೆಯನ್ನು ಕನಿಷ್ಠ ಮಟ್ಟಕ್ಕೆ ತಗ್ಗಿಸಲು ಹಾಗೂ ಸಾರ್ವಜನಿಕರಲ್ಲಿ ರಸ್ತೆ ಸುರಕ್ಷತೆಯ ಬಗ್ಗೆ ಅರಿವು ಮೂಡಿಸಲು ಸಂಬಂಧಪಟ್ಟ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು ಎಂದು ಜಿಲ್ಲಾಧಿಕಾರಿ ಡಾ.ಎಂ.ಆರ್. ರವಿ ಅವರು ಅಭಿಪ್ರಾಯಪಟ್ಟರು.

ಇಂದು ಜಿಲ್ಲಾಧಿಕಾರಿಗಳ ಕಚೇರಿ ಕೇಸ್ವಾನ್ ಸಭಾಂಗಣದಲ್ಲಿ ಜಿಲ್ಲಾ ರಸ್ತೆ ಸುರಕ್ಷತಾ ಸಮಿತಿಯ ಸಭೆಯನ್ನು ಉದ್ದೇಶಿಸಿ ಅವರು ಮಾತನಾಡುತ್ತಿದ್ದರು. ಐ-ರಾಡ್ (ಖ-ಖಂಆ) ವರದಿಯ ಪ್ರಕಾರ, ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಲ್ಲಿ ಅಪಘಾತಗಳ ಇಂತಿದ್ದು, 2023ರಲ್ಲಿ 877 ಅಪಘಾತಗಳು ಸಂಭವಿಸಿದ್ದು, 257 ಮಂದಿ ಮೃತಪಟ್ಟಿದ್ದಾರೆ ಮತ್ತು 542 ಮಂದಿ ಗಾಯಗೊಂಡಿದ್ದಾರೆ. 2024ರಲ್ಲಿ 998 ಅಪಘಾತಗಳಲ್ಲಿ 320 ಸಾವುಗಳು ಸಂಭವಿಸಿದ್ದು, 612 ಮಂದಿ ಗಾಯಗೊಂಡಿದ್ದಾರೆ. 2025ರಲ್ಲಿ 942 ಅಪಘಾತಗಳು ನಡೆದಿದ್ದು, 305 ಮಂದಿ ಸಾವನ್ನಪ್ಪಿದ್ದಾರೆ ಹಾಗೂ 570 ಮಂದಿ ಗಾಯಗೊಂಡಿದ್ದಾರೆ ಎಂದು ಅವರು ತಿಳಿಸಿದರು.

ರಾಷ್ಟ್ರೀಯ ಹೆದ್ದಾರಿ-75 (ಎನ್‌ಹೆಚ್-75) ಜಿಲ್ಲೆಯಲ್ಲೇ ಅತಿ ಹೆಚ್ಚು ಅಪಘಾತ ಸಂಭವಿಸುವ ವಲಯವಾಗಿ ಗುರುತಿಸಲ್ಪಟ್ಟಿದ್ದು, 2025ರಲ್ಲಿ ಇಲ್ಲಿ 76 ಮಾರಣಾಂತಿಕ ಮತ್ತು 166 ಸಾಮಾನ್ಯ ಅಪಘಾತಗಳು ಸಂಭವಿಸಿವೆ. ರಾಜ್ಯ ಹೆದ್ದಾರಿಗಳ ಪೈಕಿ ಎಸ್‌ಹೆಚ್-82, ಎಸ್‌ಹೆಚ್-96 ಮತ್ತು ಎಸ್‌ಹೆಚ್ -99 ರಸ್ತೆಗಳು ಹೆಚ್ಚಿನ ಅಪಾಯದ ವಲಯಗಳಾಗಿವೆ ಎಂದು ಅವರು ತಿಳಿಸಿದರು.

ಜಿಲ್ಲೆಯಲ್ಲಿ ಗುರುತಿಸಲಾದ ಪ್ರಮುಖ ಕಪ್ಪು ಚುಕ್ಕೆಗಳಾದ ಅರಬಿಕೊತ್ತನೂರು, ಚುಂಚದೇನಹಳ್ಳಿ, ಮಡೇರಹಳ್ಳಿ ಮತ್ತು ಅಜ್ಜಪ್ಪನಹಳ್ಳಿ ಮುಂತಾದ ಸ್ಥಳಗಳಲ್ಲಿ ತಕ್ಷಣವೇ ಇಂಜಿನಿಯರಿಂಗ್ ಸುಧಾರಣೆಗಳನ್ನು ಕೈಗೊಳ್ಳಲು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರಕ್ಕೆ ಸೂಚಿಸಲಾಯಿತು. ವಡಗೂರು ಮತ್ತು ತಂಬಹಳ್ಳಿಗಳಲ್ಲಿ ಭೂಗತ ವಾಹನ ಸಂಚಾರ ವ್ಯವಸ್ಥೆ ಹಾಗೂ ನರಸಿಂಹತೀರ್ಥ ಮತ್ತು ವಡ್ಡಹಳ್ಳಿಯಲ್ಲಿ ಮೇಲ್ಸೇತುವೆ ಕಾಮಗಾರಿಗಳನ್ನು 2026ರ ಫೆಬ್ರವರಿ ಅಂತ್ಯದೊಳಗೆ ಪೂರ್ಣಗೊಳಿಸುವಂತೆ ನಿರ್ದೇಶನ ನೀಡಿದರು.

ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ರಸ್ತೆ ಸುರಕ್ಷತೆ, ಇಲಾಖೆಗೆ ಸಂಬಂಧಿಸಿದಂತೆ ಜನರಿಗೆ ಸಿಗುವ ಸೇವೆಗಳ ಕುರಿತು ಮಾಹಿತಿಯನ್ನು ಸಾರ್ವಜನಿಕರಿಗೆ ಮುಟ್ಟಿಸಲು ಸಾರಿಗೆ ಅದಾಲತ್ ನ್ನು ಇದೇ ಏಪ್ರಿಲ್ ತಿಂಗಳಿನಲ್ಲಿ ನಡೆಸಬೇಕು ಎಂದು ಆರ್‌ಟಿಒ ಅವರಿಗೆ ಸೂಚಿಸಿದರು. ಅಪರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರವಿಶಂಕರ್, ಕೆಜಿಎಫ್ ಪೊಲೀಸ್ ವರಿಷ್ಠಾಧಿಕಾರಿ ಶಿವಂಷು ರಜಪೂತ, ಸಾರಿಗೆ ಇಲಾಖೆಯ ವಿಭಾಗೀಯ ನಿಯಂತ್ರಣಾಧಿಕಾರಿ ಶ್ರೀನಾಥ್ , ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ. ಶ್ರೀನಿವಾಸ್, ಜಿಲ್ಲಾ ಸರ್ಜನ್ ಡಾ. ಜಗದೀಶ್, ನಗರಸಭೆ ಆಯುಕ್ತರಾದ ನವೀನ್ ಚಂದ್ರ, ಅಲ್ಮಾಸ್, ಲೋಕೋಪಯೋಗಿ ಇಲಾಖೆಯ ಕಾರ್ಯಪಾಲಕ ಅಭಿಯಂತರ ರಾಮಮೂರ್ತಿ ಉಪಸ್ಥಿತರಿದ್ದರು.



> **ನಾಗಲಾಪುರ ಮತ್ತು ಅರಭಿಕೊತ್ತನೂರು ಭಾಗಗಳಲ್ಲಿ ಕಾರ್ಯನಿರ್ವಹಿಸದ ಬೀದಿದೀಪಗಳನ್ನು ತಕ್ಷಣವೇ ದುರಸ್ತಿಗೊಳಿಸಿ ರಾತ್ರಿ ವೇಳೆಯ ಸುರಕ್ಷತೆಯನ್ನು ಖಚಿತಪಡಿಸಿಕೊಳ್ಳಲು ಅಧಿಕಾರಿಗಳಿಗೆ ತಿಳಿಸಲಾಯಿತು. ಅಪಘಾತಕ್ಕೀಡಾದವರಿಗೆ ಮೊದಲ 48 ಗಂಟೆಗಳ ಕಾಲ ಮುಖ್ಯಮಂತ್ರಿಗಳ ಸಾಂತ್ವನ ಯೋಜನಾಯಲ್ಲಿ 1 ಲಕ್ಷ ರೂ.ಗಳವರೆಗೆ ಉಚಿತ ಚಿಕಿತ್ಸೆ ನೀಡುವ ವ್ಯವಸ್ಥೆಯನ್ನು ಬಲಪಡಿಸಲು ಸೂಚಿಸಲಾಯಿತು.**
> ■ ಡಾ.ಎಂ.ಆರ್.ರವಿ, ಜಿಲ್ಲಾಧಿಕಾರಿ

ಬಜೆಟ್‌ನಲ್ಲಿ ವಕೀಲರ ಕಡೆಗಣನೆಗೆ ಖಂಡನೆ

ಮುಳಬಾಗಿಲು: ವಕೀಲ ವೃತ್ತಿಯಿಂದ ಮುಖ್ಯಮಂತ್ರಿಯಾಗಿ ಬಜೆಟ್ ಮಂಡನೆ ವೇಳೆ ವಕೀಲರ ಮೂಲಭೂತ ಸೌಲಭ್ಯಗಳನ್ನು ಕಡೆಗಣಿಸಿರುವ ಸಿದ್ದರಾಮಯ್ಯ ವಿರುದ್ಧಪ್ರತಿಭಟನೆಹಮ್ಮಿಕೊಂಡಿದ್ದೇವೆ ಎಂದು ವಕೀಲರ ಸಂಘದ ಗೌರವಾಧ್ಯಕ್ಷ ಎಂಎಸ್ ಶ್ರೀನಿವಾಸ ರೆಡ್ಡಿ ತಿಳಿಸಿದರು. ವಕೀಲರ ಸಂಘದ ವತಿಯಿಂದ ತಾಲೂಕು ಕಚೇರಿ ಆವರಣದಲ್ಲಿ ಸರ್ಕಾರದ ವಿರುದ್ಧ ಪ್ರತಿಭಟನೆ ಮಾಡಿ ಉಪ ತಹಶೀಲ್ದಾರ್ ಕೊಂಡಪ್ಪ ಮುಖಾ ಂತರ ರಾಜ್ಯಪಾಲರಿಗೆ ಮನವಿ ಸಲ್ಲಿಸಿ ಮಾತನಾಡಿದರು. ಸ್ವಾತಂತ್ರ್ಯ ಪೂರ್ವ ದಿಂದಲೂ ವಕೀಲ ಸಮೂಹ ಬಹಳ ಹಿತಾಸಕ್ತಿ ಯಿಂದ ಕೆಲಸ ನಿರ್ವಹಿಸಿಕೊಂಡು ಬರುತ್ತಿದ್ದು ಈಗ ನ್ಯಾಯಾಲಯಗಳಲ್ಲಿ ವ್ಯಾಜ್ಯಗಳ ಕಡತಗಳು ವಿಲೇ ಆಗಬೇಕಾದರೂ ವಕೀಲರ ಶ್ರಮ ಬಹಳ ಮುಖ್ಯವಾಗಿರುತ್ತದೆ ಎಂದು ತಿಳಿಸಿದರು. ವಕೀಲರಿಗೆ 2025-26ನೇ ಸಾಲಿನ ಬಜೆಟ್ ನಲ್ಲಿ ವಕೀಲರ ಕಲ್ಯಾಣ ನಿಧಿಗೆ ಯಾವುದೇ ಅನುದಾನ ಮೀಸಲಾಡಿದೆ ನಿರ್ಲಕ್ಷ ವಹಿಸಿರುವುದನ್ನು ಖಂಡಿಸುತ್ತೇವೆ ಎಂದು ತಿಳಿಸಿದರು.

ವಕೀಲರ ಸಂಘದ ಅಧ್ಯಕ್ಷ ಎನ್ ಸತೀಶ್ ಕುಮಾರ್ ಮಾತನಾಡಿ, ರಾಜ್ಯದಲ್ಲಿ ಮಾನ್ಯ ಮುಖ್ಯಮಂತ್ರಿ ಸಿದ್ದರಾಮಯ್ಯರವರು 17ನೇ ಬಜೆಟ್ ಮಂಡನೆ ಮಾಡಿ ದಾಖಲೆ ಮುರಿದಿದ್ದೇವೆ ಎಂದು ಹೇಳಿಕೊಳ್ಳುತ್ತಿದ್ದಾರೆ ಇದೇ ರೀತಿ ವಕೀಲರನ್ನು ನಿರ್ಲಕ್ಷಿಸಿದ್ದಾರೆ ಇಡೀ ರಾಜ್ಯದಲ್ಲಿ ವಕೀಲರು ಸರ್ಕಾರದ ವಿರುದ್ಧಪ್ರತಿಭಟನೆ ಮಾಡುತ್ತೇವೆ ಎಂದು ತಿಳಿಸಿದರು.

ವಕೀಲರ ಸಂಘದ ಉಪಾಧ್ಯಕ್ಷ ಸಿವಿ ಶ್ರೀನಿವಾಸಪ್ಪ, ಪ್ರಧಾನ ಕಾರ್ಯದರ್ಶಿ ಎಚ್ ನಾಗೇಶ್, ಹಿರಿಯ ವಕೀಲರಾದ ಬಶೀರ್, ಜಯಪ್ಪ,ಜಂಟಿ ಕಾರ್ಯದರ್ಶಿ ಎ.ಖಲೀಲ್ ಅಹಮದ್, ಶಂಕರಪ್ಪ, ಕೆ ವಿ ಗಂಗಾಧರ್, ರಮಣಾ ರೆಡ್ಡಿ, ಸುಬ್ರಮಣಿ, ಜಯರಾಮ್, ಆನಂದಪ್ಪ ಇದ್ದರು.



ಭಾರತ ದೇಶದ ಸಂವಿಧಾನವೇ ಶ್ರೇಷ್ಠ: ನ್ಯಾಯಾಧೀಶೆ ಶಿಲ್ಪಾ

ಮಾಲೂರು: ನಮ್ಮ ಭಾರತದ ಸಂವಿಧಾನವು ಶ್ರೇಷ್ಟ ಮತ್ತು ಬಲಿಷ್ಟವಾದ ಕಾನೂನು ಆಗಿದೆ ಹಾಗೂ ನಮ್ಮ ರಾಷ್ಟ್ರ ಬೃಹತ್ ರಾಷ್ಟವಾಗಿ ಹೊರಹೊಮ್ಮುತ್ತಿದೆ. ನಮ್ಮ ದೇಶವು ಯಾವುದೇ ಕಾರ್ಯ ರೂಪಿಸುವಲ್ಲಿ ಸಂವಿಧಾನ ರಚನೆಕಾರರಾದ ಡಾ.ಬಿ.ಆರ್.ಅಂಬೇಡ್ಕರ್ ರವರ ಹಾದಿಯಲ್ಲಿ ರಚಿಸಲಾಗಿದೆ. ಯಾವುದೇ ತೀರ್ಮಾನ ಕೈಗೊಂಡರು ಸಹ ಕಾಊನು ಪ್ರಕಾರ ಕಾರ್ಯರೂಪಕ್ಕೆ ತರಲಾಗುತ್ತದೆ ಎಂದು ಮಾಲೂರು ಜೆಎಂಎಫ್‌ಸಿಯ ನ್ಯಾಯಾಧೀಶರು ಮತ್ತು ಸದಸ್ಯ ಕಾರ್ಯದರ್ಶೀಗಳಾದ ಎಸ್. ಜೆ.ಶಿಲ್ಪರವರು ಅಭಿಪ್ರಾಯಪಟ್ಟರು. ಅವರು ಇಂದು ಟೇಕಲ್ ಸರ್ಕಾರಿ ಪ್ರೌಢಶಾಲೆಯಲ್ಲಿ ವಿದ್ಯಾರ್ಥಿಗಳಿಗೆ ತಾಲ್ಲೂಕು ಕಾನೂನು ಸೇವೆಗಳ ಪ್ರಾಧಿಕಾರ, ತಾಲ್ಲೂಕು ಆಡಳಿತ ವತಿಯಿಂದ ಹಮ್ಮಿಕೊಂಡಿದ್ದ ಮಕ್ಕಳ ಹಕ್ಕುಗಳ ಅರಿವು ನೆರವು ಜಾಗೃತಿ ಅಭಿಯಾನ 2026 ಕಾರ್ಯಕ್ರಮದಲ್ಲಿ ಮಕ್ಕಳ ಹಕ್ಕು ಭವಿಷ್ಯಕ್ಕೆ ಬೆಳಕು ಇದರಡಿ ಜ್ಯೋತಿ ಬೆಳಗಿಸಿ ಉದ್ಘಾಟಿಸಿ ಮಾತನಾಡುತ್ತಿದ್ದರು.

ವಿದ್ಯಾರ್ಥಿಗಳಿಗೆ ಬಾಲ ಕಾರ್ಮಿಕ ಕಾಯ್ದೆ, ಬಾಲ್ಯ ವಿವಾಹ, ಪೋಕ್ಸೋ ಕಾಯ್ದೆ, ಮಕ್ಕಳ ಹಕ್ಕುಗಳನ್ನು ಕುರಿತು ವಿವರಿಸಿ ವಿದ್ಯಾರ್ಥಿಗಳನ್ನು ಯಾವ ರೀತಿ ಸ್ನೇಹದಿಂದ ಮಾತನಾಡಿಸಬೇಕು ಮತ್ತು ವಿದ್ಯಾರ್ಥಿನಿಯರ ಬಳಿ ಅನುಚಿತವಾಗಿ ವರ್ತಿಸುವ ಬಗ್ಗೆ ಪ್ರಾತ್ಯಕ್ಷಿಕೆ ಕೊಟ್ಟು ಮಾತನಾಡಿ ವಿದ್ಯಾರ್ಥಿಗಳಿಗೆ ತಿಳುವಳಿಕೆ ನೀಡಿದರು.

ವಕೀಲ ಶ್ರೀನಿವಾಸಕಿರಣ್ ಮಾತನಾಡಿ ಪೋಕ್ಸೋ ಕಾಯ್ದೆ ಬಗ್ಗೆ ಮಾತನಾಡಿ ಮಕ್ಕಳನ್ನು ಲೈಂಗಿಕ ದೌರ್ಜನ್ಯ ಕಿರುಕುಳದಿಂದ ತಪ್ಪಿಸುವ ಕಠಿಣ ಕಾನೂನು ಆಗಿದೆ. ತಪ್ಪು ಮಾಡಿದವರು ಶಿಕ್ಷೆ ಅನುಭವಿಸಬೇಕಾಗುತ್ತದೆ ಇದನ್ನು ವಿದ್ಯಾರ್ಥಿಗಳು ಕಾನೂನು ತಿಳುವಳಿಕೆ ಅರಿತು ಕೊಳ್ಳಿ ಎಂದರು.

ವಕೀಲರಾದ ಸುಬ್ರಮಣಿ ಮಾತನಾಡಿ ಮಾಲೂರು ತಾಲ್ಲೂಕಿನಲ್ಲಿ ಹಮ್ಮಿಕೊಂಡಿರುವ ಮಕ್ಕಳ ಹಕ್ಕುಗಳ ಅರಿವು ನೆರವು ಜಾಗೃತಿ ಅಭಿಯಾನದಲ್ಲಿ 25 ಶಾಲೆಗಳನ್ನು ಆಯ್ಕೆ ಮಾಡಿಕೊಂಡಿದ್ದು 24 ಶಾಲೆಗಳಲ್ಲೂ ಕಾರ್ಯಕ್ರಮ ನಡೆದಿದೆ. ಉಳಿದ ಶಾಲೆಯಲ್ಲಿ ಕಾರ್ಯಕ್ರಮ ನೀಡಿ ಅಭಿಯಾನಕ್ಕೆ ಮುಕ್ತಾಯ ಗೊಳಿಸಲಾಗುತ್ತದೆ. ಎಸ್‌ಡಿಎಂಸಿ ಅಧ್ಯಕ್ಷ ಎ.ಕೆ.ವೆಂಕಟೇಶ, ಸಹಾಯಕ ಪ್ರಾಧ್ಯಾಪಕರು ಮಾಲೂರು ಕಾಲೇಜಿನ ಅನಂತರಾಜ್, ವಕೀಲರಾದ ರಾಜೇಶ್ ಇದ್ದರು.



ಕಾಡ್ಗಿಚ್ಚಿನಿಂದ ಕಾಡು ರಕ್ಷಿಸಲು ಜಾಗೃತಿ ಮೂಡಿಸಿ

ಬಂಗಾರಪೇಟೆ: ಬೇಸಿಗೆಯಲ್ಲಿ ಕಾಲ್ಗಿಚ್ಚು ಬಗ್ಗೆ ಜನರಲ್ಲಿ ಕರಪತ್ರದ ಮುಖಾಂತರ ಜಾಗೃತಿ ಮೂಡಿಸಿ ಅತಿಸೂಕ್ಷ್ಮ ಪ್ರದೇಶಗಳಲ್ಲಿ ಸಿಸಿಕ್ಯಾಮರ ಅಳವಡಿಸಿ ಕಾಡನ್ನು ಬೆಂಕಿಯಿಂದ ರಕ್ಷಣೆ ಮಾಡಿ ಪ್ರಾಣಿ ಪಕ್ಷಿಗಳಿಗೆ ನೀರು ಮತ್ತು ಆಹಾರವನ್ನು ಒದಗಿಸುವಂತೆ ರೈತ ಸಂಘದಿಂದ ವಲಯ ಅರಣ್ಯಾಧಿಕಾರಿಗಳಾದ ಶ್ರೀ ಲಕ್ಷ್ಮೀಗೆ ಮನವಿ ನೀಡಿ ಒತ್ತಾಯಿಸಿದರು.


ರೈತ ಸಂಘದ ರಾಜ್ಯ ಉಪಾಧ್ಯಕ್ಷ ಕೆ.ನಾರಾಯಣಗೌಡ ಮಾತನಾಡಿ ಕಾಡಿಗೆ ಬೆಂಕಿ ಹಚ್ಚುವ ಮುನ್ನ ಯೋಚಿಸಿ ನಮ್ಮ ಪ್ರಕೃತಿಯ ಶಾಶ್ವತೋಶದಂತ್ತಿರುವ ಕಾಡುಗಳು ಇಂದು ಅಪಾಯದಲ್ಲಿವೆ, ಒಂದು ಸಣ್ಣ ನಿರ್ಲಕ್ಷ್ಯ ಇಡೀ ಅರಣ್ಯವನ್ನೇ ಭಸ್ಮಮಾಡಬಹುದು, ಕಾಡಿಚ್ಚಿನಿಂದಾಗುವ ಹಾನಿಗಳು, ವನ್ಯಜೀವಿಗಳ ನಾಶ ನೂರಾರು ಪ್ರಾಣಿ ಪಕ್ಷಿಗಳು ವಾಸುಸ್ಥಾನ ಕಳೆದುಕೊಂಡು ಜೀವಂತವಾಗಿ ದಹನವಾಗುತ್ತವೆ, ಪರಿಸರ ಮಾಲಿನ್ಯ ದಟ್ಟವಾದ ಹೊಗೆಯಿಂದ ವಾಯುಮಾಲಿನ್ಯ ಉಂಟಾಗಿ ಜಾಗತಿಕ ತಾಪಮಾನ ಏರುತ್ತದೆ ಎಂದರು. ತಾಲೂಕು ಅಧ್ಯಕ್ಷ ಕದರಿನತ್ತ ಅಪ್ಪಾಜಿರಾವ್ , ಜಿಲ್ಲಾಧ್ಯಕ್ಷ ಈಕಂಬಳ್ಳಿ ಮಂಜುನಾಥ, ಗೋವಿಂದಪ್ಪ ಲಕ್ಷ್ಮಣ್, ಸಂತೋಷ್, ಗಿರೀಶ್, ತಿಮ್ಮಣ್ಣ, ಶೈಲಜ, ರತ್ನಮ್ಮ ನಯನ, ಪವಿತ್ರ, ವೆಂಕಟಮ್ಮ, ಮುಂತಾದವರು ಇದ್ದರು.



ಗ್ರಂಥಾಲಯ ನಿರ್ವಹಣಾ ನೌಕರರಿಗೆ ವೇತನವಿಲ್ಲ

ಬಂಗಾರಪೇಟೆ: ನಾಲ್ಕು ದಶಕಗಳಿಂದ ರಾಜ್ಯಾದ ವಿವಿಧ ಗ್ರಂಥಾಲಯದಲ್ಲಿ ಕೈ ರಸೀದಿ ಆಧಾರದ ಮೇಲೆ ದಿನಂಪ್ರತಿ 8 ಗಂಟೆಗಳ ಕಾಲ ಕರ್ತವ್ಯ ನಿರ್ವಹಣೆ ಮಾಡಿದರೂ ಸಮರ್ಪಕ ವೇತನ ಸಿಗದೆ ಕಂಗಾಲಾಗಿದ್ದ ಅಸಾಹಕಯ ನೌಕರರ ಪರ ಧ್ವನಿಯಾಗಿ ಇಂದು ಸದನದಲ್ಲಿ ವಿಧನಾ ಪರಿಷತ್ ಸದಸ್ಯ ರಾಮೋಜಿ ಗೌಡ ಪ್ರಸ್ತಾಪಿಸಿರುವುದು ಸಂತಸ ತಂದಿದೆ ಎಂದು ಕರ್ನಾಟಕ ರಾಜ್ಯ ಸಾರ್ವಜನಿಕ ಗ್ರಂಥಾಲಯ ಸಹವರ್ತಿ ಮತ್ತು ಇತರೆ ಕಾರ್ಮಿಕರ ಸಂಘದ ರಾಜ್ಯ ಪ್ರದಾನ ಕಾರ್ಯದರ್ಶಿ ಜಯಂತ್ ಕುಮಾರ್ ತಿಳಿಸಿದ್ದಾರೆ. ವಿಧಾನ ಪರಿಷತ್ ಸಭೆಯಲ್ಲಿ ಪ್ರಶ್ನೋತ್ತರ ವೇಳೆಯಲ್ಲಿ ವಿಷಯ ಪ್ರಸ್ತಾಪಿಸಿದ ಅವರು ಸರ್ಕಾರ ನಿಯಮದಂತೆ ಸಮಾನ ಕೆಲಸಕ್ಕೆ ಸಮಾನ ವೇತನ ನೀಡುವುದು ಧರ್ಮ ಆದರೆ ಅಧಿಕಾರಿಗಳ ನಿರ್ಲಕ್ಷ್ಯತನಕ್ಕೆ ಒಳಪಟ್ಟ ಗ್ರಂಥಾಲಯದಲ್ಲಿ 4 ದಶಕಗಳಿಂದ ಕೈ ರಸೀದಿ ಆಧಾರದಲ್ಲಿ ಕರ್ತವ್ಯ ಮಾಡುತ್ತಿರುವ ನೌಕರರಿಗೆ ಸಮಾನ ವೇತನ ನೀಡದೆ ಶೋಷಣೆ ಮಾಡಲಾಗಿದೆ ಎಂದರು.

ನ್ಯಾಯಾಲಯದ ಆದೇಶ ವಿದ್ದರೂ ಪಾಲನೆಯಿಲ್ಲ: ಅಸಹಾಯಕ ನೌಕರರು ಕಾನೂನು ಹೋರಾಟ ಮಾಡಬೇಕಾದ ಅನಿವಾರ್ಯತೆ ಉಂಟಾಗಿತ್ತು ಇವರ ಹೋರಾಟಕ್ಕೆ 2009ರಲ್ಲಿ ಗುಲ್ಬರ್ಗ ನ್ಯಾಯಾಲಯ, 2021ರಲ್ಲಿ ಸಫಾಯಿ ಕರ್ಮಚಾರಿ ಆಯೋಗ, 2022ರಲ್ಲಿ ಕೋಲಾರ ಕಾರ್ಮಿಕ ಇಲಾಖೆ, ಕನಿಷ್ಠ ವೇತನ ನೀಡುವಂತೆ ಆದೇಶ ಮಾಡಿದರೂ ಸಹ ಇಂದಿಗೂ ಕಾರ್ಯಗತವಾಗಿಲ್ಲ ಎಂದು ಬೇಸರ ಹೊರಹಾಕಿದ ಪ್ರಸಂಗ ನಡೆಯಿತು, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಸಚಿವ ಮಧು ಬಂಗಾರಪ್ಪ ಮಾತನಾಡಿ ಈ ವಿಷಯ ನನ್ನ ಗಮನಕ್ಕೆ ಈಗಾಗಲೇ ಬಂದಿದೆ ಹಾಗೂ ನ್ಯಾಯಾಲಯದ ಆದೇಶ ಪ್ರತಿಯನ್ನು ಪರಿಶೀಲಿಸಿ ಅತೀ ಶೀಘ್ರದಲ್ಲಿ ಅಧಿಕಾರಿಗಳೊಂದಿಗೆ ಚರ್ಚೆ ನಡೆಸಿ ಕನಿಷ್ಠ ವೇತನ ಒದಗಿಸಲಾಗುವುದು ಎಂದು ಭರವಸೆ ನೀಡಿದರು ಎಂದು ತಿಳಿಸಿದ್ದಾರೆ. ಕಾರ್ಮಿಕರ ಸಂಘದ ಎ.ಎನ್.ದಯಾನಂದ, ಯಾದವ್, ಮಂಡ್ಯ ಸಿದ್ದರಾಜು, ಎಂ ವೆಂಕಟೇಶ್ ಉಪಸ್ಥಿತರಿದ್ದರು.



ಲೀಡ್ ಬ್ಯಾಂಕ್‌ನ ಜಿಲ್ಲಾಮಟ್ಟದ ಪರಿಶೀಲನಾ ಸಮಿತಿ ಸಭೆ

ಬ್ಯಾಂಕುಗಳು ಸಾಲ ಸೌಲಭ್ಯ ಒದಗಿಸಲಿ

ಕೋಲಾರ: ಕೇಂದ್ರ ಪ್ರಾಯೋಜಿತ ಕಾರ್ಯಕ್ರಮಗಳಿಗೆ ಸಂಬಂಧಿಸಿದ ಸಾಲ ಸೌಲಭ್ಯಗಳನ್ನು ಬ್ಯಾಂಕ್‌ಗಳು ಫಲಾನುಭವಿಗಳಿಗೆ ಒದಗಿಸಬೇಕು. ಈ ಮೂಲಕ ಅವರ ಕಣ್ಣೀರು ಒರೆಸುವ ಮಾನವೀಯ ಪ್ರಯತ್ನ ಮಾಡಬೇಕು. ಎಂದು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ಡಾ. ಪ್ರವೀಣ್ ಪಿ.ಬಾಗೇವಾಡಿ ಅವರು ಬ್ಯಾಂಕ್ ಅಧಿಕಾರಿಗಳಿಗೆ ಎಚ್ಚರಿಕೆ ನೀಡಿದರು.

ನಗರದ ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ಲೀಡ್ ಬ್ಯಾಂಕ್‌ನ ಜಿಲ್ಲಾಮಟ್ಟದ ಪರಿಶೀಲನಾ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಕೋಲಾರ ಜಿಲ್ಲೆಯಲ್ಲಿ ನಡೆಯುತ್ತಿರುವ ವಾಣಿಜ್ಯ ವಹಿವಾಟುಗಳಿಂದಾಗಿ ಇಲ್ಲಿನ ಬ್ಯಾಂಕ್‌ಗಳಿಗೆ ಹಣ ಹೇರಳವಾಗಿ ಹರಿದುಬರುತ್ತಿದೆ.

ಇದಕ್ಕೆ ಪ್ರತಿಯಾಗಿ ಕೇಂದ್ರದ ಯೋಜನೆಗಳನ್ನು ಸರಿಯಾಗಿ ಜಾರಿಗೆ ತರದೇ ಹೋದರೆ ಹೇಗೆ? ಬಡವರಿಗೆ ಸಾಲ ಸೌಲಭ್ಯ ಕೊಡದಿದ್ದರೆ ಹೇಗೆ? ಎಂದು ಅವರು ಪ್ರಶ್ನಿಸಿದರು. ಅಲ್ಲದೆ, ಜನರಿಗೆ ಸೌಲಭ್ಯಗಳನ್ನು ಸಕಾಲದಲ್ಲಿ ಒದಗಿಸಬೇಕು ಎಂದು ಅವರು ಕಟ್ಟಪ್ಪಣೆ ವಿಧಿಸಿದರು. ಪ್ರಧಾನಮಂತ್ರಿ ಜೀವನ್ ಜ್ಯೋತಿ ಬಿಮಾ ಯೋಜನೆ ಮತ್ತು ಪ್ರಧಾನ ಸುರಕ್ಷಾ ಭೀಮಾ ಯೋಜನೆ ಪ್ರಗತಿ ಕುರಿತು ತೀವ್ರ ಅಸಮಾಧಾನ ವ್ಯಕ್ತಪಡಿಸಿದ ಅವರು ಕಳೆದ 2 ತಿಂಗಳುಗಳಿಂದ ಯಾವುದೇ ಪ್ರಗತಿ ಆಗಿಲ್ಲ ಹೀಗೇ ಮುಂದುವರೆದರೆ ಮೇಲಧಿಕಾರಿಗಳಿಗೆ ವರದಿ ನೀಡಲಾಗುವುದು ಎಂದು ಎಚ್ಚರಿಸಿದರು.

ಆದ್ಯತೆಯ ವಲಯದ ಮುಂಗಡಗಳ ಕಾರ್ಯಕ್ಷಮತೆ, ಸರ್ಕಾರಿ ಪ್ರಾಯೋಜಿತ ಯೋಜನೆಗಳ ಅನುಷ್ಠಾನದ ಕುರಿತು ಬ್ಯಾಂಕರ್‌ಗಳ ಪರಿಶೀಲನೆಗಾಗಿ ತ್ರೈಮಾಸಿಕ ಸಭೆಯಲ್ಲಿಚರ್ಚಿಸಲಾಯಿತು. ಸಿಇಒ ಎಲ್ಲಾ ಬ್ಯಾಂಕರ್‌ಗಳಿಗೆ ಎಲ್ಲಾ ಸರ್ಕಾರಿ ಯೋಜನೆಯಸಮಯದೊಳಗೆ ವಿಲೇವಾರಿ ಸಾಲಗಳನ್ನು ಮಾಡುವಂತೆ ಸೂಚಿಸಿದರು.ಮತ್ತು ಕೃಷಿ ಸೇರಿದಂತೆ ಆದ್ಯತೆಯ ವಲಯದ ಸಾಲಗಳಲ್ಲಿ ಹೆಚ್ಚಿನ ಸಾಲವನ್ನು ನೀಡುವಂತೆ ಖಾಸಗಿ ವಲಯದ ಬ್ಯಾಂಕುಗಳಿಗೆ ಸೂಚಿಸಿದರು.

ಸಭೆಯಲ್ಲಿ ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ ಬೆಂಗಳೂರು ಎಲ್‌ಡಿಒ ವಿಜಯಶ್ರೀ, ಕೆನರಾ ಬ್ಯಾಂಕ್‌ನ ಪ್ರಾದೇಶಿಕ ವ್ಯವಸ್ಥಾಪಕ ಎಂ. ಅರುಣ್ ಕುಮಾರ್., ಲೀಡ್ ಬ್ಯಾಂಕ್ ವ್ಯವಸ್ಥಾಪಕ ಮಹದೇವ್ ಜೋಷಿ, ನಬಾರ್ಡ್‌ನ ಎಜಿಎಂ ಹಿಮಾಂಶು ಶುಕ್ಲಾ, ಆರ್ ಎಸ್ ಇ ಟಿ ಐ ನಿರ್ದೇಶಕರು ಡಾ. ಯಲ್ಲೇಶ್ ವಿವಿಧ ಇಲಾಖೆಗಳ ಜಿಲ್ಲಾಮಟ್ಟದ ಅಧಿಕಾರಿಗಳು, ವಿವಿಧ ಬ್ಯಾಂಕ್‌ಗಳ ಆರ್‌ಎಂ ಅಧಿಕಾರಿಗಳು ಹಾಜರಿದ್ದರು.



ಚುಟುಕು ಸಾಹಿತ್ಯ ಪರಿಷತ್ ಹಿಂದು ಮಹಿಳಾ ದಿನಾಚರಣೆ

ಮಹಿಳೆ ದೇಶದ ಚೈತನ್ಯ ಶಕ್ತಿ: ಮಂಜುಳಾ

ಕೋಲಾರ: ಮಹಿಳೆ ಎಂಬ ಬಲವೇ ಪುರುಷನಿಗೆ ಶಕ್ತಿ ತುಂಬುವ ಮಹಾ ಚೈತನ್ಯ ಎಂದು ನಿವೃತ್ತ ಎಎಸ್‌ಐ ರವೀಂದ್ರನಾಥ್ ಅಭಿಪ್ರಾಯಪಟ್ಟರು. ನಗರದ ಕೀಲುಕೋಟೆಯ ಅರುಣ್ ಲೇಔಟ್‌ನಲ್ಲಿ ಜಿಲ್ಲಾ ಚುಟುಕು ಸಾಹಿತ್ಯ ಪರಿಷತ್ತಿನ ವತಿಯಿಂದ ಹಮ್ಮಿಕೊಂಡಿದ್ದ ಮಹಿಳಾ ದಿನಾಚರಣೆಯಲ್ಲಿ ಜಿಲ್ಲಾ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಕಲ್ಯಾಣ ಅಧಿಕಾರಿ ಆರ್.ಮಂಜುಳಾ ಅವರನ್ನು ಅಭಿನಂದಿಸಿ ಮಾತನಾಡಿದರು.

ಹೆಣ್ಣಿಲ್ಲದೆ ಜೀವವಿಲ್ಲ, ಹೆಣ್ಣಿಲ್ಲದೆ ಜೀವನವಿಲ್ಲ, ತನ್ನ ಸುತ್ತಲಿನ ಎಲ್ಲರಿಗೂ ಸ್ಫೂರ್ತಿ ನೀಡುವ ಶಕ್ತಿ ಮತ್ತು ದೃಢಸಂಕಲ್ಪ ಮಹಿಳೆ. ಮಹಿಳೆ ಕೇವಲ ಒಂದು ಕುಟುಂಬದ ಭಾಗವಲ್ಲ, ಸಮಾಜದ ಶಕ್ತಿ, ಸಂಸ್ಕೃತಿಯ ಸಾರಥಿ ಎಂದರು. ಜಿಲ್ಲಾ ಚುಟುಕು ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಪಿ ನಾರಾಯಣಪ್ಪ ಮಾತನಾಡಿ, ಮಹಿಳೆಯರ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಮತ್ತು ರಾಜಕೀಯ ಸಾಧನೆಗಳನ್ನು ಗೌರವಿಸುವ ಮತ್ತು ಲಿಂಗ ಸಮಾನತೆಗಾಗಿ ಜಾಗೃತಿ ಮೂಡಿಸುವ ದಿನ ಇದಾಗಿದೆ. ಇದು ಸಮಾನತೆ ಮತ್ತು ಮಹಿಳಾ ಸಬಲೀಕರಣಕ್ಕೆ ಒತ್ತು ನೀಡುತ್ತದೆ ಎಂದರು.

ಬೆಮೆಲ್ ಶ್ರೀನಿವಾಸ ಮಾತನಾಡಿ, ಇತ್ತೀಚಿನ ದಿನಗಳಲ್ಲಿ ಮಹಿಳೆಯರ ಮೇಲಿನ ದೌರ್ಜನ್ಯ ವಿರುದ್ಧ ಹೋರಾಟ ಮಾಡುವ ಹಾಗೂ ಮಹಿಳೆಯರ ಸಮಾನ ಹಕ್ಕುಗಳಿಗಾಗಿ ಹೋರಾಡುವ ಮಹಿಳಾ ಸಾಧಕಿಯರನ್ನು ಗೌರವಿಸುವುದು ನಮ್ಮೆಲ್ಲರ ಆದ್ಯ ಕರ್ತವ್ಯ ಎಂದರು. ಸ್ವರ್ಣಭೂಮಿ ಫೌಂಡೇಶನ್ ಅಧ್ಯಕ್ಷ ಬಿ.ಶಿವಕುಮಾರ್, 1900ರ ಆರಂಭದಲ್ಲಿ ಮಹಿಳಾ ಕಾರ್ಮಿಕರ ಚಳುವಳಿಗಳಿಂದ ಈ ದಿನ ಹೊರಹೊಮ್ಮಿದೆ ನಂತರ 1977 ರಲ್ಲಿ ವಿಶ್ವಸಂಸ್ಥೆಯು ಇದನ್ನು ಅಧಿಕೃತಗೊಳಿಸಿತು. ಕವಿ ಡಾ. ಶರಣಪ್ಪ ಗಬ್ಬೂರು, ವೇದಿಕೆಯಲ್ಲಿ ಆರ್ ಮಂಜುಳಾ ಅಧಿಕಾರಿಯನ್ನು ಚುಟುಕು ಸಾಹಿತ್ಯ ಪರಿಷತ್ತಿನ ವತಿಯಿಂದ ಅಭಿನಂದಿಸಲಾಯಿತು. ಕಾರ್ಯಕ್ರಮದಲ್ಲಿ ಬಾಲಕೃಷ್ಣ, ಕೃಷ್ಣಪ್ಪ, ಭವನ್, ರಚಿತ, ಅಜಯ್, ಚಂಗಲ್, ಶಾಂತಮ್ಮ ಉಪಸ್ಥಿತರಿದ್ದರು.



ಕಿರುಸುದ್ದಿ

ಧರ್ಮರಾಯಸ್ವಾಮಿ ಹೂವಿನ ಕರಗ ಮಹೋತ್ಸವ

ಚಿಂತಾಮಣಿ: ತಾಲೂಕಿನ ಶ್ರೀ ಕ್ಷೇತ್ರ ಕೈವಾರದಲ್ಲಿ ಶ್ರೀ ಸ್ವಾಮಿ ವಿವೇಕಾನಂದ ಮಿತ್ರ ಬಳಗ ಟ್ರಸ್ಟ್ ಹಾಗೂ ಕೈವಾರ ಗ್ರಾಮಸ್ಥರಿಂದ 16ನೇ ವರ್ಷದ ಶ್ರೀ ಧರ್ಮರಾಯಸ್ವಾಮಿ ಹೂವಿನ ಕರಗ ಮಹೋತ್ಸವ ನಡೆಸಿದರು. ಕರಗ ಪೂಜೇರಿ ಅಗ್ರಹಾರ ಎಸ್. ಶಿವರಾಜ್ ಕರಗ ಹೊತ್ತು ಗುರುವಾರ ಬೆಳಿಗ್ಗೆ 8 ಘಂಟೆಗೆ ಅಗ್ನಿ ಪ್ರವೇಶ ಮಾಡಿದರು. ಮುಂಜಾನೆ 10 ಘಂಟೆಗೆ ಶ್ರೀ ಅಮರ ನಾರಾಯಣ ಸ್ವಾಮಿ ದೇವಸ್ಥಾನ ಮುಂಭಾಗ ಒನಕೆ ಕರಗ ಏರ್ಪಡಿಸಲಾಗಿತ್ತು.



ಬುಧವಾರ ರಾತ್ರಿಯಿಂದ ಗುರುವಾರ ಬೆಳಗಿನ ವರೆಗೆ ಹಲಗೆ, ತಮಟೆ ಸದ್ದಿಗೆ ಕರಗ ಹೊತ್ತ ಶಿವರಾಜ್ ಹೆಜ್ಜೆ ಹಾಕಿ ಕುಣಿದರು. ಶಿರದ ಮೇಲೆ ಹೂವಿನ ಅಲಂಕೃತ ಕಳಸ ಹೊತ್ತು ಕುಣಿಯುವ ಕಲೆಯಾದ ಕರಗ ಆಚರಣೆ ಒಂದು ಆದಿಶಕ್ತಿ ಅವತಾರ ಎಂದು ನಂಬಲಾಗಿದೆ. ಅಮರ ನಾರಾಯಣ ಸ್ವಾಮಿ ದೇವಸ್ಥಾನ, ತಾತಯ್ಯನವರ ಮಠ, ದರ್ಗಾ, ಭೀಮಲಿಂಗೇಶ್ವರ ದೇವಸ್ಥಾನಗಳಿಗೆ ಕರಗ ದರ್ಶನ ಮಾಡಿ ಊರಿನ ಪ್ರಮುಖ ಬೀದಿಗಳಲ್ಲಿ ಮೆರವಣಿಗೆಯ ಮೂಲಕ ಸಾಗಿಬಂದಿತು.

ಗಮನ ಸೆಳೆದ ಒನಕೆ ಕರಗ ಮಹೋತ್ಸವ

ಚಿಂತಾಮಣಿ: ತಾಲೂಕಿನ ಕೈವಾರದಲ್ಲಿ ಶ್ರೀ ಸ್ವಾಮಿ ವಿವೇಕಾನಂದ ಮಿತ್ರ ಬಳಗ ಟ್ರಸ್ಟ್ ವತಿಯಿಂದ ಧರ್ಮರಾಯಸ್ವಾಮಿ ಹೂವಿನ ಕರಗ ಮಹೋತ್ಸವದ ಅಂಗವಾಗಿ ಭೀಮ ಲಿಂಗೇಶ್ವರ ದೇವಾಲಯದ ಆವರಣದಲ್ಲಿ ಒನಕೆ ಕರಗ (ವಸಂತೋತ್ಸವ) ಅದ್ದೂರಿಯಾಗಿ ನಡೆಯಿತು. ಈ ವೇಳೆ ನೆರೆದಿದ್ದ ಭಕ್ತ ಗಣ ತಮ್ಮ ಭಕ್ತಿಯನ್ನು ಸಮರ್ಪಿಸಿದರು. ಎಸ್. ಅಗ್ರಹಾರದ ಕರಗ ಪೂಜಾರಿ ಶಿವರಾಜ್ ಅವರ ಶಿಷ್ಯ ಪವನ್ ಪೂಜಾರಿ ಅವರು ಒನಕೆ ಕರಗ ಹೊತ್ತು ಒನಕೆಯ ಮೇಲೆ ಅರಿಶಿಣ ನೀರು ತುಂಬಿಟ್ಟು ತಾಮ್ರದ ಪಾತ್ರೆ ಇಟ್ಟುಕೊಂಡು ತಮಟೆಯ ವಾದನಕ್ಕೆ ತಕ್ಕಂತೆ ಆಕರ್ಷಕ ನೃತ್ಯ ಮಾಡಿ ನೆರದಿದ್ದ ಜನರನ್ನು ರಂಜಿಸಿದರು.



ಪವನ್ ತಲೆ ಮೇಲಿನ ಒನಕೆ ಸಮತೋಲನ ಕಳೆದುಕೊಳ್ಳದಂತೆ ಚಾಕಚಾಕ್ಯತೆಯಿಂದ ತಮಟೆ ವಾದ್ಯದ ಗತ್ತಿಗುಣವಾಗಿ ಗೆಜ್ಜೆಯ ಕಾಲಿನ ತಾಳದೊಂದಿಗೆ ಲಯಬದ್ಧವಾಗಿ ಎರಡೂ ಕೈಗಳನ್ನು ಬಿಟ್ಟು ಕುಣಿದು ನೆರಿದಿದ್ದವರಲ್ಲಿ ವಿಸ್ಮಯ ಮೂಡಿಸಿದರು. ಹೂವಿನ ಕರಗದ ಹೊತ್ತ ಪೂಜಾರಿ ತಮಟೆ ವಾದ್ಯದೊಂದಿಗೆ ಹೆಜ್ಜೆ ಹಾಕಿದ್ದು ಆಕರ್ಷಕವಾಗಿತ್ತು.

ಯುಪಿಎಸ್‌ಸಿಯಲ್ಲಿ 462ನೇ ರ್‍ಯಾಂಕ್

ಚಿಂತಾಮಣಿ: ಯುಪಿಎಸ್‌ಸಿ ನಾಗರೀಕ ಸೇವಾ ಪರೀಕ್ಷೆ 2026ರ ಫಲಿತಾಂಶದಲ್ಲಿ ಚಿಂತಾಮಣಿಯ ಡಾ. ಪಿ.ವರುಣ್‌ಗೌಡ 462ನೇ ರ್‍ಯಾಂಕ್ ಪಡೆದು ಜಿಲ್ಲೆ ಮತ್ತು ತಾಲ್ಲೂಕಿಗೆ ಕೀರ್ತಿಯನ್ನು ತಂದಿದ್ದಾರೆ. ನಗರದ ರಾಜೀವ್ ಬಡಾವಣೆಯ ನಿವಾಸಿಯಾದ ಕೈವಾರ ಪೊಲೀಸ್ ಹೊರ ಠಾಣೆಯ ಎಎಸ್‌ಐ ಪ್ರಕಾಶ್ ಗೌಡ ಮತ್ತು ಎಂ. ಪ್ರೇಮಾ ದಂಪತಿಗಳ ಮಗನಾದ ಡಾ. ಪಿ.ವರುಣ್‌ಗೌಡ ಯುಪಿಎಸ್‌ಸಿ ಪರೀಕ್ಷೆಯಲ್ಲಿ 462ನೇ ರ್‍ಯಾಂಕ್ ರಾಜ್ಯದ ಕೀರ್ತಿಯನ್ನು ಶಿಡ್ಲಘಟ್ಟದ ಸರಸ್ವತಿ ಕಾನ್ವೆಂಟ್, ಗೌರಿಬಿದನೂರಿನ ಮಂಚನೇಹಳ್ಳಿ ನ್ಯೂಬೆಡ್ ಶಾಲೆಯಲ್ಲೂ ನಂತರ ಚಿಂತಾಮಣಿ ನಗರದ ರಾಯಲ್ ಶಾಲೆಯಲ್ಲಿ ವ್ಯಾಸಂಗ ಮಾಡಿದ್ದು, ಪದವಿಪೂರ್ವ ಕಾಲೇಜಿನ ಶಿಕ್ಷಣವನ್ನು ದಕ್ಷಿಣ ಕನ್ನಡ ಜಿಲ್ಲೆಯ ಮೂಡಬಿದುರೆಯ ಆಳ್ವಾಸ್ ಕಾಲೇಜಿನಲ್ಲಿ ಪೂರೈಸಿದ್ದಾರೆ. ಕೊಪ್ಪಳದ ಸರ್ಕಾರಿ ಮೆಡಿಕಲ್ ಕಾಲೇಜಿನಲ್ಲಿ 5 ವರ್ಷಗಳ ವೈದ್ಯಕೀಯ ಶಿಕ್ಷಣವನ್ನು ಪೂರೈಸಿದ್ದಾರೆ.

3 ಬಾರಿ ಯುಪಿಎಸ್‌ಸಿ ಪರೀಕ್ಷೆಯನ್ನು ಎದುರಿಸಿದ್ದು 2 ಬಾರಿ ವಿಫಲವಾದರೂ 3ನೇ ಬಾರಿ ಯುಪಿಎಸ್‌ಸಿ ಪರೀಕ್ಷೆಯಲ್ಲಿ ಉತ್ತಮ ಸಾಧನೆ ಮಾಡುವಲ್ಲಿ ಯಶಸ್ವಿಯಾಗಿದ್ದು ಇದಕ್ಕೆ ಬೆಂಗಳೂರು ಮತ್ತು ದೆಹಲಿಯಲ್ಲಿ ಯುಪಿಎಸ್‌ಸಿ ಪರೀಕ್ಷೆ ತರಬೇತಿಯನ್ನು ಪಡೆದಿದ್ದರು. ಡಾ.ವರುಣ್‌ಗೌಡ 3ನೇ ಪ್ರಯತ್ನದಲ್ಲಿ ಯಶಸ್ಸನ್ನು ಸಾಧಿಸಿದ್ದು ದೇಶದಲ್ಲಿ 462 ರ್‍ಯಾಂಕ್ ಹಾಗೂ ರಾಜ್ಯಕ್ಕೆ 7ನೇ ರ್‍ಯಾಂಕ್ ಪಡೆದಿದ್ದು, ಮಗನ ಈ ಸಾಧನೆಗೆ ಎಎಸ್‌ಐ ಪ್ರಕಾಶ್‌ಗೌಡ ಮತ್ತು ಎಂ.ಪ್ರೇಮಾ ದಂಪತಿಗಳು ಹಾಗೂ ತಂಗಿ ರಚನಾ ಹರ್ಷ ವ್ಯಕ್ತಪಡಿಸಿದ್ದಾರೆ.



ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಮುಖಂಡ ಪುಟ್ಟು ಅಂಜಿನಪ್ಪ ಸೋಮವಾರ ಕೊತ್ತನೂರು ಗ್ರಾಮಕ್ಕೆ ಭೇಟಿ ನೀಡಿ ದೇವಾಲಯದ ಕಟ್ಟಡದ ನಿರ್ಮಾಣಕ್ಕೆ 2 ಲಕ್ಷ ರೂ. ಹಣ ನೀಡಿದರು. ಈ ವೇಳೆ ಕೊತ್ತೂನೂರು ಗ್ರಾಮಸ್ಥರು ಮತ್ತು ಕಾಂಗ್ರೆಸ್ ಮುಖಂಡರು ಭಾಗಿಯಾದರು.

ಆರೋಗ್ಯ ತಪಾಸಣಾ ಉಚಿತ ಶಿಬಿರ

ಚಿಕ್ಕಬಳ್ಳಾಪುರ: ತಾಲೂಕಿನ ಜರಬಂಡಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾ ಆವರಣದಲ್ಲಿ ಜಿ.ಎಸ್ .ಆಸ್ಪತ್ರೆ ಹಾಗೂ ಭಾರತೀಯ ವೈದ್ಯಕೀಯ ಸಂಘ ಚಿಕ್ಕಬಳ್ಳಾಪುರ ಜಿಲ್ಲಾ ಶಾಖೆ ಇವರ ಆಶ್ರಯದಲ್ಲಿ ಭಾನುವಾರ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಹಮ್ಮಿಕೊಳ್ಳಲಾಗಿತ್ತು. ಡಿಸಿಸಿ ಬ್ಯಾಂಕ್ ನಿರ್ದೇಶಕ ಹನುಮೇಗೌಡ ಶಿಬಿರಕ್ಕೆ ದೀಪ ಬೆಳಗುವ ಮೂಲಕ ಚಾಲನೆ ನೀಡಿ ಮಾತನಾಡಿ, 'ಆರೋಗ್ಯವೇ ನಿಜವಾದ ಸಂಪತ್ತು. ಉತ್ತಮ ಆರೋಗ್ಯ ಹೊಂದಿದವನೇ ದೊಡ್ಡ ಶ್ರೀಮಂತ. ನಾವು ಆರೋಗ್ಯವಾಗಿದ್ದರೆ, ಏನು ಬೇಕಾದರೂ ಸಾಧಿಸಿ, ಸಂಪತ್ತು ಗಳಿಸಬಹುದು ಎಂದರು. ನಮ್ಮ ಗ್ರಾಮಕ್ಕೆ ನಮ್ಮ ಬಳಿಗೆ ಬಂದಿರುವಂತಹ ವೈದ್ಯರು ತಮ್ಮ ನಿಷ್ಕಾಮ ಸೇವೆಯಿಂದ ನಮ್ಮ ಆರೋಗ್ಯದ ಸುಧಾರಣೆಗೆ ಮುಂದಾಗಿದ್ದಾರೆ ಡಾ.ಸಿದ್ದಲಿಂಗಪ್ಪ ಸೇರಿದಂತೆ ಇತರ ವೈದ್ಯರ ಸೇವೆ ಅನನ್ಯ.. ಶಿಬಿರದ ಲಾಭ ಪಡೆದುಕೊಳ್ಳಬೇಕು ಎಂದು ಮನವಿ ಮಾಡಿದರು. ಜಿ.ಎಸ್. ಆಸ್ಪತ್ರೆ ವ್ಯವಸ್ಥಾಪಕ ನಿರ್ದೇಶಕ ಹಾಗೂ ಭಾರತೀಯ ವೈದ್ಯಕೀಯ ಸಂಘ ಚಿಕ್ಕಬಳ್ಳಾಪುರ ಜಿಲ್ಲಾ ಅಧ್ಯಕ್ಷ ಡಾ ಸಿದ್ದಲಿಂಗಪ್ಪ ಜಿ.ಎಸ್., ಡಾ.ಸರ್ಕಾರಿ ಆಸ್ಪತ್ರೆಯ ನಿವೃತ್ತ ವೈದ್ಯಾಧಿಕಾರಿ ಡಾ.ಶಾಮಸುಂದರ್, ಭಾರತೀಯ ವೈದ್ಯಕೀಯ ಸಂಘದ ಜಿಲ್ಲಾ ಕಾರ್ಯದರ್ಶಿ ಡಾ. ಮೋಹನ್, ದಂತ ಪರೀಕ್ಷೆಯನ್ನು ಡಾ. ಗಿರೀಶ್, ವಿವಿಧ ಕಾಯಿಲೆಗಳ ಬಗ್ಗೆ ಡಾ.ಜಿ.ಸಿದ್ದಲಿಂಗಪ್ಪ, ಡಾ.ಲಕ್ಷ್ಮಿ ಡಾ. ಬಸವರಾಜ್, ಡಾ. ವಿಜಯಕುಮಾರ್, ಸಮುದಾಯಾಧಿಕಾರಿ ಅಶ್ವಿನಿ ಶ್ರೀಧರ್, ಜರಬಂಡಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಮುಖ್ಯ ಶಿಕ್ಷಕ ನರಸಿಂಹ ಮೂರ್ತಿ ಮತ್ತು ಗ್ರಾಮದ ಮುಖಂಡರು ಇದ್ದರು.



ಚಿಂತಾಮಣಿ ತಾಲೂಕಿನ ಶ್ರೀ ಕ್ಷೇತ್ರ ಕೈವಾರದ ಜಾತ್ರೆ ಅಂಗವಾಗಿ ಸದ್ಗುರು ಶ್ರೀ ಯೋಗಿ ನಾರಾಯಣ ಮಠದ ನಾದ ಸುಧಾರಸ ಸಂಕೀರ್ತನೆ ವೇದಿಕೆಯಲ್ಲಿ ಹಮ್ಮಿಕೊಂಡ ಭರತನಾಟ್ಯ ಕಾರ್ಯಕ್ರಮ ಜಾತ್ರೆಗೆ ಬಂದ ಭಕ್ತರ ಆಕರ್ಷಣೆ ಕೇಂದ್ರವಾಗಿತ್ತು. ಭರತನಾಟ್ಯ ಶಿಕ್ಷಕಿ ಪರಿಮಳ, ಅರಳುಮಲ್ಲಿಗೆ ಅವರ ನೇತೃತ್ವದಲ್ಲಿ ವಿದ್ಯಾರ್ಥಿಗಳಾದ ಪ್ರಜ್ಞ ಹಿರೇಮಠ್, ಕೀರ್ತನಾ, ದಕ್ಷಿತಾ, ಸ್ನೇಹಾ, ಧೃತಿ, ನಿಹಾರಿಕಾ, ದುರ್ಗಾ, ಪಾವನಿ, ತೃಪ್ತಿ ಪಾಲ್ಗೊಂಡಿದ್ದರು.

ಮಾರುಕಟ್ಟೆ ತಂತ್ರಜ್ಞಾನ ಅರಿತರೆ ಕೃಷಿಯಲ್ಲೂ ಲಾಭವಿದೆ: ನವೀನ್‌ಭಟ್ ಕರೆ

ದಾಳಿಂಬೆಗೆ ವಿಶ್ವದಾದ್ಯಂತ ಬೇಡಿಕೆ

ಚಿಕ್ಕಬಳ್ಳಾಪುರ: ದಾಳಿಂಬೆ ಭಾರತದ ಪ್ರಮುಖ ವಾಣಿಜ್ಯ ಹಣ್ಣಿನ ಬೆಳೆಯಾಗಿದ್ದು ಕರ್ನಾಟಕದ ಅದರಲ್ಲೂ ಕೋಲಾರ ಚಿಕ್ಕಬಳ್ಳಾಪುರದಲ್ಲಿ ಬೆಳೆಯುವ ಗುಣಮಟ್ಟದ ಹಣ್ಣಿಗೆ ವಿಶ್ವದಾದ್ಯಂತ ಬೇಡಿಕೆಯಿರುವುದು ಸಂತೋಷದ ಸಂಗತಿಯಾಗಿದೆ ಎಂದು ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ.ವೈ.ನವೀನ್ ಭಟ್ ತಿಳಿಸಿದರು. ನಗರದ ಕನ್ನಡ ಭವನದಲ್ಲಿ ಪೋಮೆಕ್ಸ್ ಇಂಟರ್ ನ್ಯಾಷನಲ್ ಬೆಂಗಳೂರು, ಅಯಾನ್ಸ್ ಗ್ಲೋಬಲ್ ಫ್ರೂಟ್ಸ್, ಚಿಕ್ಕಬಳ್ಳಾಪುರ ಸಮಾನ ಮನಸ್ಕ ದಾಳಿಂಬೆ ಬೆಳೆಗಾರರು ಮತ್ತುರಾಷ್ಟ್ರೀಯ ದಾಳಿಂಬೆ ಸಂಶೋಧನಾ ಕೇಂದ್ರ ಸೊಲ್ಲಾಪುರ,ತೋಟಗಾರಿಕೆ ಇಲಾಖೆ ಚಿಕ್ಕಬಳ್ಳಾಪುರ ಇವರ ಸಹಯೋಗದಲ್ಲಿ ನಡೆದ ದಾಳಿಂಬೆ ವಿಷನ್-2040 ಭವಿಷ್ಯದ ಮಾರುಕಟ್ಟೆಗೆ ಸಂಪರ್ಕ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಆಡು ಮುಟ್ಟದ ಸೊಪ್ಪಿಲ್ಲ, ಜಿಲ್ಲೆಯ ರೈತರು ಮಾಡದ ಕೃಷಿಯಿಲ್ಲ. ಜಿಲ್ಲೆಯ ರೈತರು ವಿಜ್ಞಾನಿಗಳು, ಅಧಿಕಾರಿಗಳು, ತಂತ್ರಜ್ಞರ ಸಲಹೆ ಮಾರ್ಗದರ್ಶನದಲ್ಲಿ ಬಗೆಬಗೆಯ ಪ್ರಯೋಗಗಳನ್ನು ಮಾಡುತ್ತಾ,ಕೃಷಿಯನ್ನು ಲಾಭದಾಯಕವಾಗಿಸಿದ್ದಾರೆ. ಕೃಷಿಯಲ್ಲಿ ವಿನೂತನ ಕ್ರಾಂತಿಯನ್ನೇ ಮಾಡಿದ್ದಾರೆ.ಇಂತಹ ಪ್ರಯೋಗಶೀಲ ಸ್ವಾಭಿಮಾನಿ ರೈತರಿರುವ ಜಿಲ್ಲೆಯಲ್ಲಿ ಕೆಲಸ ಮಾಡಲು ನನಗೆ ಅತೀವ ಸಂತೋಷವಾಗುತ್ತಿದೆ ಎಂದರು.

ಕೋಟಿ ಗಳಿಸಿ: ದಾಳಿಂಬೆ ಸೇರಿದಂತೆ ಎಲ್ಲಾ ವಾಣಿಜ್ಯ ಬೆಳೆಗಳಲ್ಲಿ ಕೋಟ್ಯಾಧಿಪತಿ ಕೃಷಿಕರಿರುವಂತೆ ಲಕ್ಷಾಧಿಪತಿ ಕೃಷಿಕರ ಸಂಖ್ಯೆಯೂ ಹೆಚ್ಚಬೇಕಿದೆ.ದಾಳಿಂಬೆ ಬೆಳೆಯುವ ರೈತರು ರಫ್ತು ಮಾಡಲು ಬರುವಂತಹ ಗುಣಮಟ್ಟದ ಕೃಷಿಗೆ ಒತ್ತು ನೀಡಬೇಕು.ನಮ್ಮ ಹಣ್ಣುಗಳನ್ನು ಪಡೆಯುವ ದೇಶದ ಜನ ಬಯಸುವ ರೀತಿಯಲ್ಲಿ ಕೀಟನಾಶಕ ಕಳೆನಾಶಕಗಳನ್ನು ವಿಪರೀತ ಬಳಸದಂತೆ, ಸಾವಯವ ಕೃಷಿಗೆ ಒತ್ತು ನೀಡಿ



ಬೆಳೆಯುವತ್ತ ಚಿಂತನೆ ಮಾಡಬೇಕು.ರಫ್ತಿನ ಪ್ರಮಾಣ ಹೆಚ್ಚಿದಷ್ಟು ಕೃಷಿಯಲ್ಲಿ ಕೋಟಿಗಳನ್ನು ಕಾಣಲು ಸಾಧ್ಯ ಎಂದರು. ಚಿಕ್ಕಬಳ್ಳಾಪುರದ ದಾಳಿಂಬೆ ಇದು ಗುರುತಿಸುವಂತೆ ಈ ಬೆಳೆಗೆ ಜಿಐ ಟ್ಯಾಗ್ ಪಡೆಯಲು ಪ್ರಯತ್ನಿಸಿದರೆ ಜಿಲ್ಲಾಡಳಿತದ ವತಿಯಿಂದ ಬೇಕಾದ ನೆರವನ್ನು ನೀಡಿ ಈ ಕಾರ್ಯ ಸಾಧುವಾಗುವಂತೆ ಮಾಡಲಾಗುವುದು ಎಂದರು. ಜಿ.ಐ ಟ್ಯಾಗ್ ಬಂದಲ್ಲಿ ಬೆಲೆಯೂ ಹೆಚ್ಚಿರಲಿದೆ. ಇದರಿಂದ ಗುಣಮಟ್ಟದ ಹಣ್ಣಿನ ಇಳುವರಿ ಕೊಡುವ ಎಲ್ಲಾ ದಾಳಿಂಬೆ ಬೆಳೆಗಾರರಿಗೆ ನೆರವಾಗಲಿದೆ ಎಂದರು.

ಕೃಷಿ ಲಾಭದ ಕ್ಷೇತ್ರ: ನೀವು ಕಷ್ಟಪಟ್ಟು ಬೆಳೆದ ಬೆಳೆಯನ್ನು ದಲ್ಲಾಳಿಗಳು,ಮಾರಾಟಗಾರರು,ಏಜೆಂಟರು ಮಾರುಕಟ್ಟೆ ಮಾಫಿಯಾ, ಇನ್ನಿತರರಿಗೆ ಲಾಭ ತಂದುಕೊಡದೆ, ನೇರವಾಗಿ ನಿಮಗೇ ಸಹಾಯವಾಗಬೇಕಾದರೆ ರೈತರು ಬೇರೆ ಬೇರೆ ಪ್ರೊಸೆಸಿಂಗ್ ಪಾಯಿಂಟ್‌ಗಳನ್ನು ಹಾಕಿಕೊಳ್ಳಬೇಕು. ದಾಳಿಂಬೆ ಬೆಳೆಯ ಸೆಲೆಬ್ರೆಟಿ ಆಗಿರುವ ಜಿ.ವಿ.ಕೆ ನಾಯ್ಡು ತರದವರಿಂದ ಈ ಬಗ್ಗೆ ಕೇಳಿ ತಿಳಿದುಕೊಳ್ಳಬೇಕು.ಸ್ಥಳೀಯವಾಗಿಯೇ ಸಣ್ಣ ಸಣ್ಣ ಕೈಗಾರಿಕೆಗಳನ್ನು ತೆರೆದು ದಾಳಿಂಬೆ ಉತ್ಪನ್ನಗಳನ್ನು ಮಾಡಲು ಮುಂದಾಗಬೇಕು.ಇದಕ್ಕೆ ಬೇಕಾದಲ್ಲಿ ರಾಜ್ಯ ಅಥವಾ ಕೇಂದ್ರ ಸರಕಾರದ ಸಹಯೋಗ ಒದಗಿಸಿಕೊಡಲು ಜಿಲ್ಲಾಡಳಿತ ಪ್ರಾಮಾಣಿಕ ಪ್ರಯತ್ನ ಮಾಡಲಾಗುವುದು ಎಂದು ತಿಳಿಸಿದರು.

ಮಹಿಳಾ ರೈತರಿಗೆ ನೆರವು: ಜಿಲ್ಲೆಯಲ್ಲಿ ಮಹಿಳಾ ಕೃಷಿಕರ ಸಂಖ್ಯೆ ಹೆಚ್ಚಿರುವಬಗ್ಗೆಮಾಹಿತಿಯಿದೆ.ನೀವುಸ್ವತಂತ್ರವಾಗಿಕೃಷಿ ಉಧ್ಯಮಗಳನ್ನು ಸ್ಥಾಪಿಸಲು, ಅಗ್ರಿ ಟೂರಿಸಂ ನಡೆಸಲು,ಎಫ್‌ಪಿಓ ಗುಂಪುಗಳನ್ನು ಕಟ್ಟಿ ಕೃಷಿ ಉತ್ಪನ್ನಗಳ ಮೌಲ್ಯವರ್ಧನೆಗೆ ತೊಡಗಲು ಸಹಕಾರ ಬೇಕಾದರೆ, ಬ್ಯಾಂಕುಗಳಿಂದ ತೊಂದರೆ ಇದ್ದಲ್ಲಿ ಜಿಲ್ಲಾಡಳಿತಕ್ಕೆ ತಿಳಿಸಿದರೆ ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಿ ಸಹಾಯ ಮಾಡಿಸಲಾಗುವುದು ಎಂದು ಭರವಸೆ ನೀಡಿದ ಅವರು ಮಹಿಳಾ ದಿನಾಚರಣೆಯ ಸಂದರ್ಭದಲ್ಲಿ ಸನ್ಮಾನಿತರಾದ ಎಲ್ಲಾ ಸಾಧಕ ಮಹಿಳೆಯರಿಗೆ ಜಿಲ್ಲಾಡಳಿತದ ವತಿಯಿಂದ ಅಭಿನಂದನೆ ಸಲ್ಲಿಸುತ್ತೇನೆ ಎಂದರು.

ಉತ್ಕೃಷ್ಟ ದರ್ಜೆಯ ಹಣ್ಣು: ಕೊಡಗು ವಿಶ್ವವಿದ್ಯಾಲಯದ ಕುಲಪತಿ ಡಾ.ಅಶೋಕ್ ಎಸ್.ಆಲೂರ್ ಮಾತನಾಡಿ ದಾಳಿಂಬೆ ರೈತರ ಶ್ರೇಯೋಭಿವೃದ್ಧಿ ಬೆಳೆಯಾಗಿದ್ದುನುಗ್ಗೆ, ದಾಳಿಂಬೆ,ನೆಲ್ಲಿ ಬೆಳೆಗಳನ್ನು ದೇವಬೆಳೆಗಳು ಎಂದು ಕರೆಯುತ್ತೇವೆ.2010 ರಿಂದ2015ರ ನಡುವೆ ಹನಿನೀರಾವರಿ ತಂತ್ರಜ್ಞಾನ, ಬೆಳೆಗಳನ್ನು ವೈಜ್ಞಾನಿಕವಾಗಿ ನಾಟಿ ಮಾಡುವ ರೀತಿ, ವಿಜ್ಞಾನಿಗಳ ಸಲಹೆಯಂತೆ ಔಷದೋಪಚಾರ, ಲಾಭ ತರುವ ಹಾಗೆ ಕಟಾವು, ಉತ್ಪನ್ನಗಳಿಗೆ ಬೇಡಿಕೆಯಿರುವ ಮರುಕಟ್ಟೆ ಹೀಗೆ ಸಾಕಷ್ಟು ಪ್ರಗತಿಯನ್ನು ರೈತರು ಕಂಡುಕೊಂಡಿದ್ದಾರೆ ಎಂದರು.

ಮನಸಿಟ್ಟು ಬೆಳೆಯಿರಿ; ಅದರಲ್ಲೂಕರ್ನಾಟಕದಲ್ಲಿಬೆಳೆಯುವ ದಾಳಿಂಬೆ ಅತ್ಯಂತ ಉತ್ಕೃಷ್ಟ ದರ್ಜೆಯ ದಾಳಿಂಬೆಯಾಗಿದೆ. ಇಷ್ಟಾದರೂ ಉತ್ಪಾಧನೆ ಮತ್ತು ರಫ್ತಿನಲ್ಲಿ ಕರ್ನಾಟಕದ ಪಾಲು ತೀರಾ ಕಡಿಮೆಯಿದೆ.10 ರಿಂದ 12 ಪ್ರತಿಶತ ಮಾತ್ರ ಉತ್ಪಾದನೆ ಮಾಡುತ್ತಿದ್ದೇವೆ.ಉತ್ತರ ಕರ್ನಾಟಕ ಮತ್ತು ಬೆಂಗಳೂರು ವಿಭಾಗದ ಹವಾಗುಣ ದಾಳಿಂಬೆ ಬೆಳೆಗೆ ಪೂರಕವಾಗಿದೆ.

ಒಳ ಮೀಸಲಾತಿ ಅವೈಜ್ಞಾನಿಕ: ಕೈಬಿಡಿ

ಬಾಗೇಪಲ್ಲಿ: ಕರ್ನಾಟಕ ಸರ್ಕಾರ ಒಳಮೀಸಲಾತಿ ಜಾರಿಗೆ ಮಾಡಬಾರದು. ನ್ಯಾಯಮೂರ್ತಿ ನಾಗಮೋಹನ್‌ದಾಸ್ ಒಳ ಮೀಸಲಾತಿ ವರದಿ ಅವೈಜ್ಞಾನಿಕವಾಗಿದೆ ಅದನ್ನು ತಕ್ಷಣ ಕೈಬಿಡಬೇಕು. ಹಳೆ ಮೀಸಲಾತಿ 50 ಪರ್ಸೆಂಟ್ ನೇಮಕಾತಿ ಮಾಡಲು ಭೋವಿ ಸಮಾಜದ ಮುಖಂಡ ಪಿ.ಡಿ.ವೆಂಕಟರಮಣ ಒತ್ತಾಯ ಮಾಡಿದ್ದಾರೆ. ಪಟ್ಟಣದ ಪತ್ರಿಕಾ ಭವನದಲ್ಲಿ ಆಯೋಜಿಸಲಾಗಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ ಕರ್ನಾಟಕ ಸರ್ಕಾರ ನ್ಯಾಯಮೂರ್ತಿ ನಾಗಮೋಹನ್ ದಾಸ್‌ರನ್ನು ಒಳಮಿಸಲಾತಿ ಬಗ್ಗೆ ವರದಿ ನೀಡಲು ಆಯೋಜಿಸಲಾಗಿತ್ತು. ಆದರೆ ಅವರ ವರದಿ ದೋಷಪೂರಿತ ಅವಜ್ಞಾನಿಕವಾಗಿ ಕೂಡಿರುತ್ತದೆ.

ನಮ್ಮ ಸಮಾಜದ ಜನಸಂಖ್ಯೆ ಮಾಹಿತಿಯನ್ನು ತಪ್ಪಾಗಿ ವರದಿ ಮಾಡಿರುತ್ತಾರೆ. ಒಳ್ಳೆ ಮಾತು ಒಳಮೀಸಲಾತಿಯ ಪರಿಶಿಷ್ಟ ಜಾತಿ 17% ಪರಿಶಿಷ್ಟ ವರ್ಗ 7%ಆದೇಶದಂತೆ ಕರ್ನಾಟಕ ಉಚ್ಚ ನ್ಯಾಯಾಲಯ ಸ್ಥಳ ನೀಡಿದೆ ರಾಜ್ಯಸರ್ಕಾರದಲ್ಲಿ ಖಾಲಿ ಇರುವ 56 ಸಾವಿರ ಹುದ್ದೆಗಳಿಗೆ ಭರ್ತಿ ಮಾಡಲು ಪ್ರಾರಂಭಿಸಿದ್ದು, ಹಿಂದಿನ 15 ಪರ್ಸೆಂಟ್ ಆದೇಶದಂತೆ ನೇಮಕಾತಿ ಮಾಡಬೇಕು ಹಾಗೂ 17% ಅನ್ನ 22% ಮಾಡಿ ಆರ್ಟಿಕಲ್ 9ನೇ ಸಂವಿಧಾನದಯಲ್ಲಿ ಸೇರಿಸಬೇಕಾಗಿತ್ತು. 9ನೇ ಶೆಡ್ಯೂಲ್ ನಲ್ಲಿ ಸೇರಿಸುವುದಿಲ್ಲ ರಾಜ್ಯ ಸರ್ಕಾರ ಕೇಂದ್ರ ಸರ್ಕಾರಕ್ಕೆ ವರದಿ ಸಲ್ಲಿಸಿ ಹಳೆ ಮೀಸಲಾತಿ ನಿಯಮ ಶೇ.50 ಪರ್ಸೆಂಟ್ ಖಾಲಿ ಇರುವ ನೇಮಕಾತಿಗಳನ್ನು ಮಾಡಬೇಕು.

ನ್ಯಾಯಮೂರ್ತಿ ನಾಗಮೋಹನ್ ದಾಸ್ ಒಳಮಿಸಲಾತಿಯನ್ನು ತಕ್ಷಣ ರದ್ದು ಮಾಡಬೇಕು ನಮ್ಮ ಸಹೋದರ ಸಮುದಾಯ ಒಂದು ಎ ವರ್ಗಕ್ಕೆ ಆರ್ ಪರ್ಸೆಂಟ್ ಕೊಡುತ್ತೆ. ಇನ್ನೊಂದು ವರ್ಗಕ್ಕೆ ಆರು ಪರ್ಸೆಂಟ್ ಕೊಡುತ್ತೆ 65 ಜಾತಿಗಳಿರುವ ಸಮುದಾಯಕ್ಕೆ ಕೇವಲ 5% ಕೊಡುತ್ತೆ. ಇದು ಎಲ್ಲಿಯ ನ್ಯಾಯ ಬೋವಿ ಬಂಜಾರ ಅಲೆಮಾರಿ ಚಲವಾದಿ ಸೇರಿದಂತೆ ನೂರಕ್ಕೂ ಹೆಚ್ಚು ಸಮುದಾಯಗಳು ಈ ಒಂದು ಮೀಸಲಾತಿಯನ್ನು ವಿರೋಧಿಸುತ್ತೇವೆ ಎಂದು ಸರ್ಕಾರಕ್ಕೆ ಎಚ್ಚರಿಕೆ ನೀಡಿದರು.

ಸುಪ್ರಿಯಾಗೆ ನೇತಾಜಿ ಮಹಿಳಾ ಪ್ರಶಸ್ತಿ

ಗೌರಿಬಿದನೂರು: ನಗರದ ಮಾದನಹಳಿಯಲ್ಲಿ ನೇತಾಜಿ ಯುವಕ ಸಂಘದ ವತಿಯಿಂದ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಅತ್ಯಂತ ಸಂಭ್ರಮ ಹಾಗೂ ಅರ್ಥಪೂರ್ಣವಾಗಿ ಆಚರಿಸಲಾಯಿತು. ಶಿಕ್ಷಣ ಕ್ಷೇತ್ರದಲ್ಲಿ ಶ್ಲಾಘನೀಯ ಸೇವೆ ಸಲ್ಲಿಸುತ್ತಿರುವ ಗಣ್ಯರನ್ನು ಈ ಸಂದರ್ಭದಲ್ಲಿ ಗುರುತಿಸಿ ಗೌರವಿಸಲಾಯಿತು. ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ತಾಲ್ಲೂಕು ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಜಂಟಿ ಕಾರ್ಯದರ್ಶಿ ಮಂಜುಳಾ ಮಾತನಾಡಿ, ಇಂದಿನ ಕಾಲಘಟ್ಟದಲ್ಲಿ ಮಹಿಳೆಯರು ಎಲ್ಲಾ ರಂಗಗಳಲ್ಲೂ ತಮ್ಮ ಛಾಪು ಮೂಡಿಸುತ್ತಿದ್ದಾರೆ. ಶಿಕ್ಷಣದ ಜೊತೆಗೆ ಕಾನೂನು ಅರಿವು ಕೂಡ ಸೇರಿದಾಗ ಮಾತ್ರ ಮಹಿಳೆಯರ ನಿಜವಾದ ಸಬಲೀಕರಣ ಸಾಧ್ಯವಾಗುತ್ತದೆ, ಎಂದು ಅಭಿಪ್ರಾಯಪಟ್ಟರು.

ಜಿಲ್ಲಾಸರ್ವೋದಯಮಹಿಳಾಮಂಡಳಿಯ ಅಧ್ಯಕ್ಷೆ ಪದ್ಮಾ ಮಾತನಾಡಿ, ಗ್ರಾಮೀಣ ಭಾಗದ ಮಹಿಳೆಯರು ಕೇವಲ ಮನೆಗೆ ಸೀಮಿತವಾಗದೆ, ಸಂಘಟಿತರಾಗಿ ಸಾಮಾಜಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಾಗ ಸಮಾಜದಲ್ಲಿ ದೊಡ್ಡ ಮಟ್ಟದ ಬದಲಾವಣೆ ತರಬಹುದು, ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ನೇತಾಜಿ ಯುವಕ ಸಂಘದ ಅಧ್ಯಕ್ಷರು ಹಾಗೂ ನ್ಯಾಯವಾದಿ ಅಶೋಕ್ ಎ. ಅವರು ಮಾತನಾಡಿ, ಮಹಿಳೆಯರಿಗೆ ಸಂವಿಧಾನ ನೀಡಿರುವ ಆಸ್ತಿ ಹಕ್ಕು ಮತ್ತು ರಕ್ಷಣಾ ಕಾಯ್ದೆಗಳ ಬಗ್ಗೆ ಗ್ರಾಮೀಣ ಮಟ್ಟದಲ್ಲಿ ಅರಿವು ಮೂಡಿಸುವುದು ನಮ್ಮ ಸಂಘಟನೆಯ ಪ್ರಮುಖ ಆಶಯವಾಗಿದೆ. ಸ್ತ್ರೀ ಶಕ್ತಿಯನ್ನು ಗೌರವಿಸುವ ಸಮಾಜವು ಸುಸ್ಥಿರ ಪ್ರಗತಿ ಕಾಣಲು ಸಾಧ್ಯ, ಎಂದು ತಿಳಿಸಿದರು. ಸಂಘದ ಉಪಾಧ್ಯಕ್ಷರಾಜೇಶ್,ಕಾರ್ಯದರ್ಶಿಗೌರೀಶ್, ಪ್ರಮುಖರಾದ ರವೀಂದ್ರ ಕುಮಾರ್, ವೆಂಕಟ್ ರಾವ್, ಈರೇಗೌಡ, ದೀಪಕ್, ನಂಜುಂಡಪ್ಪ ಟಿ., ರವಿ ಮುಕ್ತಾಪುರಂ ಉಪಸ್ಥಿತರಿದ್ದರು. ಶಿಕ್ಷಕರಾದ ಗಿರಿಧರ್ ಹಾಗೂ ಸಮಾಜ ಸೇವಕಿ ಲಕ್ಷ್ಮಿ, ವರಲಕ್ಷ್ಮಿ ಸೇರಿದಂತೆ ಗ್ರಾಮಸ್ಥರು ಮತ್ತು ಸಂಘದ ಸದಸ್ಯರು ಭಾಗವಹಿಸಿದ್ದರು.



ಗ್ರಾಮೀಣರಲ್ಲಿ ನಶಿಸುತ್ತಿರುವ ಜಾನಪದ ಕಲೆಗಳು

ಶಿಡ್ಲಘಟ್ಟ: ಪೂರ್ವಿಕರು ಬಳಿವಳಿ ನೀಡಿದ ಅನೇಕ ಜಾನಪದ ಕಲೆಗಳು ಮರೆಯಾಗುತ್ತಿರುವ ದಿನಗಳಲ್ಲಿ ಗ್ರಾಮೀಣ ಭಾಗದ ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರು ಕೋಲಾಟ ಕಲಿಕೆಗೆ ಮುಂದಾಗಿರುವುದು ಜನಪದ ಕಲೆಯಾದ ಕೋಲಾಟದ ಹಾಡುಗಳು ಮತ್ತು ಕುಣಿತಕ್ಕೆ ಮರುಜೀವ ನೀಡುವಂತ ಕಾಯಕ ಸಂತಸದ ಕೆಲಸವಾಗಿದೆ ಎಂದು ಕರ್ನಾಟಕ ಸಾಹಿತ್ಯ ಅಕಾಡೆಮಿ ಚಕೋರ ಸಾಹಿತ್ಯ ವಿಚಾರ ವೇದಿಕೆ ಜಿಲ್ಲಾ ಸಂಚಾಲಕ ಹಾಗೂ ಜನಪದ ಕಲಾವಿದ ಈ ಧರೆ ಪ್ರಕಾಶ್ ಕಲಿಕಾರ್ತಿಗಳಿಗೆ ಶುಭ ಕೋರಿದರು.

ನಗರದ ಹೊರ ಹೊಲಯದ ಹನುಮಂತಪುರ ಗ್ರಾಮದ ಶ್ರೀಕೃಷ್ಣಸ್ವಾಮಿ ದೇವಾಲಯದಲ್ಲಿ ಹನುಮಂತಪುರ, ವರದನಾಯಕನಹಳ್ಳಿ, ಶಿಡ್ಲಘಟ್ಟ ಮತ್ತು ಚೀಮನಹಳ್ಳಿ ಸೇರಿದಂತೆ ಸುಮಾರು ಇಪ್ಪತ್ತು ಜನರು ಕೋಲಾಟದ ಗುರುಗಳಾದ ಹಾರಹೊಳ್ಳಿ ಇ.ಮುನಿಶಾಮಪ್ಪ ಅವರಿಂದ ಕೋಲಾಟದ ಕೋಲುಗಳಿಗೆ ಪೂಜೆ ಸಲ್ಲಿಸಿ ಕೋಲಾಟ ಕಲಿಕೆ ಪ್ರಾರಂಭಿಸಿದ ವೇಳೆ ಕೋಲಾಟದಲ್ಲಿ ಪ್ರಾವಿಣ್ಯತೆ ಹೊಂದಿರುವಂತ ಹಾರಹೊಳ್ಳಿ ಮುನಿಶಾಮಣ್ಣ ಈ ಹಿಂದೆ ನಮ್ಮ ವರದನಾಯಕನಹಳ್ಳಿಯಲ್ಲಿ ಈ ಧರೆ ಕಲೆ ಮತ್ತು ಸಾಂಸ್ಕೃತಿಯ ಕೇಂದ್ರ 'ಜೀರಂಗಿ ಮೇಳ' ಬೇಸಿಗೆ ಶಿಬಿರದಲ್ಲಿ ಮಕ್ಕಳಿಗೆ ಹಾಲಕ್ಕಿ ಕುಣಿತ, ಸುಗ್ಗಿ ಕುಣಿತ, ಕೋಲಾಟ ತರಬೇತಿ ಆಗಮಿಸಿದ್ದರು.

ಕೋಲಾಟದ ಹಾಡುಗಳು ಹಾಡಿಕೊಂಡು ಒಬ್ಬರಿಗೊಬ್ಬರು ಕೋಲು ಒಡೆದು ವೃತ್ತಾಕಾರದಲ್ಲಿ ವಿವಿಧ ಭಂಗಿಗಳಿಂದ ಕುಣಿಯುತ್ತಾ ಹೆಜ್ಜೆ ಹಾಕಿ ಮುಂದೆ ಸಾಗುವಂತ ಆಕರ್ಷಕ ಕೋಲಾಟದ ಕಲೆ ಗ್ರಾಮೀಣ ಭಾಗದಲ್ಲಿ ಮತ್ತಷ್ಟು



ಜನಮನ್ನಣೆ ಆಗಲಿ ಎಂದರು.

ಇತ್ತೀಚಿಗೆ ಶಾಲಾ ಮಕ್ಕಳಿಗೆ ಪ್ರತಿಭಾ ಕಾರಂಜಿಗಳಿಗಷ್ಟೇ ಸೀಮಿತವಾಗಿದ್ದು, ಮತ್ತೆ ಹಳ್ಳಿಯ ಜನತೆ ಕಲಿಕೆಗೆ ಮುಂದಾಗಿರುವುದು ಸಂತಸದ ಕಲಿಕೆಯಾಗಿದ್ದು, ಪೂರ್ವಿಕರಿಂದ ಬಳುವಳಿ ಬಂದಿರುವಂತ ಜನಪದ ಕಲೆ ಪ್ರತಿಯೊಬ್ಬರೂ ಉಳಿಸಿ ಬೆಳೆಸುವಂತ ಕೆಲಸ ಮಾಡಬೇಕು ಎಂದರು. ಹನುಮಂತಪುರ ಮುನಿರತ್ನಮ್ಮ, ಗಾಯಿತ್ರಮ್ಮ, ಹನುಮಂತರೆಡ್ಡಿ, ವಿಮಲಮ್ಮ, ನಾಗಮ್ಮ, ವೆಂಕಟಲಕ್ಷ್ಮಮ್ಮ, ರತ್ನಮ್ಮ, ಮಂಜಮ್ಮ, ಆರ್ಮೋನಿಯಂ ಕಲಾವಿದ ಮುನಿರೆಡ್ಡಿ, ವರದನಾಯಕನಹಳ್ಳಿ ಪ್ರಭಾಕರ್, ದ್ಯಾವಣ್ಣ, ಚೀಮನಹಳ್ಳಿ ಭಾಗ್ಯಮ್ಮ, ರಾಧಮ್ಮ, ಶಾಮಲಮ್ಮ, ಮಂಜಮ್ಮ, ತಬಲಾ ಕಲಾವಿದ ರಮೇಶ್, ಶಿಡ್ಲಘಟ್ಟ ನಗರದ ಕನ್ನಪ್ಪ, ಗಿರಿಜಮ್ಮ, ಗೀತಾ ಭಾಗವಹಿಸಿದ್ದರು.

ಕಾರಿನಲ್ಲಿ ಸುಟ್ಟು ಕರಕಲಾದ ಸ್ಥಿತಿಯಲ್ಲಿ ಶವ ಪತ್ತೆ

ಬಾಗೇಪಲ್ಲಿ: ಕಾರಿನಲ್ಲಿ ಸುಟ್ಟು ಕರಕಲಾದ ಸ್ಥಿತಿಯಲ್ಲಿ ಬಾಲರೆಡ್ಡಿಪಲ್ಲಿ ಗ್ರಾಮದ ಉದಯ್ ಕುಮಾರ್(70)ಮೃತದೇಹ ಪತ್ತೆಯಾದ ಘಟನೆ ನಡೆದಿದೆ. ಇದು ಬಾಗೇಪಲ್ಲಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದ್ದು, ಮೃತ ಉದಯ್‌ಕುಮಾರ್ ಮೂಲತಃ ಬಾಗೇಪಲ್ಲಿ ತಾಲೂಕಿನ ಪೇನುಮಲೆ ಗ್ರಾಮದವರಾಗಿದ್ದು, ಕಳೆದ ಕೆಲವು ವರ್ಷಗಳಿಂದ ಕುಟುಂಬ ಸಮೇತ ಬೆಂಗಳೂರಿನಲ್ಲಿ ವಾಸವಾಗಿದ್ದರು. ಭಾನುವಾರ ಮಧ್ಯಾಹ್ನ ತಮ್ಮ ತಾಯಿಯನ್ನು ಭೇಟಿ ಮಾಡಲು ಸ್ವಗ್ರಾಮಕ್ಕೆ ಬಂದಿದ್ದರು ಎಂದು ಸ್ಥಳೀಯರು ತಿಳಿಸಿದ್ದಾರೆ. ಬೆಂಗಳೂರಿಗೆ ತೆರಳುವ ವೇಳೆ ಬಾಲರೆಡ್ಡಿಪಲ್ಲಿ ಸಮೀಪದಲ್ಲಿ ಈ ಘಟನೆ ಸಂಭವಿಸಿರುವುದಾಗಿ ತಿಳಿದು ಬಂದಿದೆ. ಘಟನೆಯ ಬಗ್ಗೆ ಮಾಹಿತಿ ತಿಳಿದ ಬಾಗೇಪಲ್ಲಿ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ ಬಳಿಕ ಮೃತದೇಹವನ್ನು ವಶಕ್ಕೆ ಪಡೆದು ಬಾಗೇಪಲ್ಲಿ ಸಾರ್ವಜನಿಕ ಆಸ್ಪತ್ರೆ ಶವಗಾರದಲ್ಲಿ ಪರೀಕ್ಷೆ ನಡೆಸಲಾಗಿದೆ.

ಇದು ಆಕಸ್ಮಿಕವಾಗಿ ಬೆಂಕಿ ಹೊತ್ತಿಕೊಂಡ ಪರಿಣಾಮವಾಗಿದೆಯೋ ಅಥವಾ ಆತ್ಮಹತ್ಯೆಯೇ ಎಂಬುದು ಇನ್ನು ಸ್ಪಷ್ಟವಾಗಿ ತಿಳಿದುಬಂದಿಲ್ಲ. ಕೆಲ ಆಯಾಮಗಳಲ್ಲಿ ಪೊಲೀಸರು ತನಿಖೆ ನಡೆಸುತ್ತಿದ್ದಾರೆ. ಕಾರಿನಲ್ಲಿ ಬೆಂಕಿ ಕಾಣಿಸಿಕೊಂಡಿರುವ ಕಾರಣ ಹಾಗೂ ಈ ಘಟನೆಯ ಬಗ್ಗೆ ಮಾಹಿತಿ ಸಂಗ್ರಹಿಸಲಾಗುತ್ತದೆ. ಘಟನೆಯಿಂದ ಗ್ರಾಮಸ್ಥರಲ್ಲಿ ಕುತೂಹಲ ಉಂಟಾಗಿದ್ದು, ಈ ಪ್ರಕರಣ ಸಂಬಂಧ ಬಾಗೇಪಲ್ಲಿ ಪೊಲೀಸ್ ಠಾಣೆಯಲ್ಲಿ ಕೇಸ್ ದಾಖಲಾಗಿದ್ದು ಮುಂದಿನ ತನಿಖೆ ಮುಂದುವರೆಯುತ್ತಿದೆ.

ಮೈತ್ರೇಯಿ ಕಲ್ಯಾಣ ಮಂಟಪ ಉದ್ಘಾಟನೆಯಲ್ಲಿ ನ್ಯಾ.ಶ್ರೀಶಾನಂದ

ಮನಸ್ಸು ದೊಡ್ಡದಿರಬೇಕು ಜಾಗವಲ್ಲ

ಗೌರಿಬಿದನೂರು: ತಾಲೂಕಿನ ವಿದುರಾಶ್ವತ್ಥದಲ್ಲಿ ಶ್ರೀ ವಿದುರಾಶ್ವತ್ಥ ನಾರಾಯಣಸ್ವಾಮಿ ಬ್ರಾಹ್ಮಣ ಸೇವಾ ಟ್ರಸ್ಟ್ ವತಿಯಿಂದ ನಿರ್ಮಿಸಲಾಗಿದ್ದ ನೂತನ ಮೈತ್ರೇಯೀ ಕಲ್ಯಾಣ ಮಂಟಪದ ಉದ್ಘಾಟನಾ ಸಮಾರಂಭವನ್ನು ಆಯೋಜಿಸಲಾಗಿತ್ತು.

ಕರ್ನಾಟಕ ಉಚ್ಚ ನ್ಯಾಯಾಲಯದ ನ್ಯಾಯ ಮೂರ್ತಿ ವೇದವ್ಯಾಸಾಚಾರ್ಯ ಶ್ರೀಶಾನಂದ ಮಾತನಾಡಿ, ಕರ್ನಾಟಕದ ದಕ್ಷಿಣ ಕಾಶಿ ಹಾಗೂ ಜಲಿಯನ್ ವಾಲಾಬಾಗ್, ವಿಧುರನು ನೆಟ್ಟ ಅಶ್ವತ್ಥ ವೃಕ್ಷಕ್ಕೆ ಪ್ರಸಿದ್ಧವಾದ ಐತಿಹಾಸಿಕ ಕ್ಷೇತ್ರದಲ್ಲಿ ಸುಂದರ ಕಲ್ಯಾಣ ಮಂಟಪ ಲೋಕಾರ್ಪಣೆ ಆಗುತ್ತಿರುವುದು ವಿಶೇಷವಾದದ್ದು, ಧರ್ಮ ಮಾರ್ಗದಲ್ಲಿ ವಂತಿಗೆ ಮತ್ತು ದೇಣಿಗೆ ಸ್ವೀಕರಿಸಿ ಈ ಕಟ್ಟಡ ನಿರ್ಮಾಣ ಮಾಡಿದ್ದಾರೆ. ಇಲ್ಲಿ ಆಗುವ ಯಾವ ಮದುವೆಗಳು ಕೋರ್ಟ್‌ಗೆ ಬಂದು ವಿಚ್ಛೇದನ ಆಗುವುದು ಬೇಡ ಎಂದು ಹಾರೈಸಿದರು.

ನನ್ನದು ಎಂದು ಮಾಡುವ ಕಾರ್ಯದಲ್ಲಿರುವ ಸುಖವೇ ಬೇರೆ. ಆದರೆ ಕಾಲಘಟ್ಟದಲ್ಲಿ ಶ್ರಮ ಕಡಿಮೆಯಾಗಿ ಮನೆಗೆ ಬಂದವರನ್ನು ಊಟಕ್ಕೆಂದು ಹೊಟೆಲ್‌ಗೆ ಕರೆದುಕೊಂಡು ಹೋಗುವ ಮನಸ್ಥಿತಿ ನಿರ್ಮಾಣವಾಗಿದೆ ಎಂದರು.



ಶಾಸಕ ಕೆ.ಎಚ್.ಪುಟ್ಟಸ್ವಾಮಿಗೌಡ ಮಾತನಾಡಿ, ವಿದುರಾಶ್ವತ್ಥದಲ್ಲಿ ಬ್ರಾಹ್ಮಣ ಸೇವಾ ಟ್ರಸ್ಟ್ ವತಿಯಿಂದ ಸುಂದರ ಕಲ್ಯಾಣ ಮಂಟಪವನ್ನು ನಿರ್ಮಿಸಲಾಗಿದೆ. ತಾಲೂಕಿನ ಜನತೆ ಇದನ್ನು ಸದುಪಯೋಗ ಪಡಿಸಿಕೊಳ್ಳಬೇಕು, ಬ್ರಾಹ್ಮಣ ಸಮಾಜವು ಕನ್ಯಾಕುಮಾರಿಯಿಂದ ಕಾಶ್ಮೀರದವರೆಗೂ ಹರಡಿಕೊಂಡಿದೆ, ಭಾರತದಾದ್ಯಂತ ಸಂಸ್ಕೃತಿ ಉಳಿಯಲು ಇವರ ಶ್ರಮ ಅಪಾರವಾದದ್ದು, ಈ ದೇಶದ ಸಂಸ್ಕೃತಿ ಉಳಿವಿಗೆ ಅವರ ಮಾರ್ಗದರ್ಶನ ಇರಲಿ ಎಂದರು.

ಅಶೋಕ ಹಾರಹಳ್ಳಿ, ಶಾಸಕ ಸಿ.ಕೆ. ರಾಮಮೂರ್ತಿ, ರವಿಸುಬ್ರಹ್ಮಣ್ಯ,ಮಾಜಿ ಸಚಿವ ಶಿವಶಂಕರರೆಡ್ಡಿ,ವಿಧುರಾಶ್ವತ್ಥ ಬ್ರಾಹ್ಮಣರ ಸಂಘದ ಅಧ್ಯಕ್ಷ ರಾಜೇಂದ್ರ ಪ್ರಸಾದ್,ಉಪೇಂದ್ರ, ಸುಬ್ಬರಾವ್ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಆತ್ಮವಿಶ್ವಾಸ ಬೆಳೆಸಿಕೊಂಡರೆ ಉತ್ತಮ ಭವಿಷ್ಯ ನಿಮ್ಮದಾಗಲಿದೆ: ಶಾಸಕ

ನಿರ್ಭೀತಿಯಿಂದ ಪರೀಕ್ಷೆ ಎದುರಿಸಿ

ಚಿಕ್ಕಬಳ್ಳಾಪುರ: ಜಿಲ್ಲೆಯಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಬರೆಯುತ್ತಿರುವ ವಿದ್ಯಾರ್ಥಿಗಳು, ವಿಶೇಷವಾಗಿ ಸರಕಾರಿ ಶಾಲೆಯ ವಿದ್ಯಾರ್ಥಿಗಳು ಆತ್ಮವಿಶ್ವಾಸ ಬೆಳೆಸಿಕೊಂಡು ನಿರ್ಭೀತಿಯಿಂದ ಪರೀಕ್ಷೆ ಎದುರಿಸಿ, ಉತ್ತಮ ಭವಿಷ್ಯ ನಿಮ್ಮದಾಗಿರಲಿದೆ ಎಂದು ಶಾಸಕ ಪ್ರದೀಪ್ ಈಶ್ವರ್ ತಿಳಿಸಿದರು.

ನಗರದ ಕನ್ನಡ ಭವನದಲ್ಲಿ ಶಾಲಾ ಶಿಕ್ಷಣ ಇಲಾಖೆ ವತಿಯಿಂದ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗಾಗಿ ಏರ್ಪಡಿಸಿದ್ದ ಪ್ರೇರಣಾ ಹಾಗೂ ಪೋಷಕ ಶಿಕ್ಷಕ ಮಹಾಸಭೆಯನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಭವಿಷ್ಯದಲ್ಲಿ ಚಿಕ್ಕಬಳ್ಳಾಪುರ ಜಾಗತಿಕ ಮಹಾನಗರವಾಗಿ ಬೆಳೆಯಲಿದೆ.2033ಕ್ಕೆ ಮೆಟ್ರೋ ಸೇವೆ ಇಲ್ಲಿಗೆ ಬರಲಿದೆ.ದೊಡ್ಡ ದೊಡ್ಡ ಕೈಗಾರಿಕೆಗಳು ಸ್ಥಾಪನೆ ಆಗಲಿವೆ. ಇಲ್ಲೆಲ್ಲಾ ಉದ್ಯೋಗ ಪಡೆಯಬೇಕಾದರೆ ಚೆನ್ನಾಗಿ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಬರೆದು ಉತ್ತೀರ್ಣರಾಗಬೇಕು. ನೀವು ಪಿಯುಸಿ ಪರೀಕ್ಷೆಯಲ್ಲೂ ಉತ್ತೀರ್ಣರಾಗಬೇಕು. ಯಾರೂ ಕೂಡ ಫೇಲ್ ಆಗಬೇಡಿ ಎಂದು ಕಿವಿ ಮಾತು ಹೇಳಿದರು.



ಈ ಬಾರಿಯ ಪರೀಕ್ಷೆಯಲ್ಲಿ ರಾಜ್ಯಕ್ಕೆ ಟಾಪರ್ ನಮ್ಮ ಕ್ಷೇತ್ರದ ವಿದ್ಯಾರ್ಥಿಯೇ ಆಗಿರಲಿ ಎಂದು ಭಗವಂತನಲ್ಲಿ ಬೇಡುತ್ತೇನೆ. ಹೆತ್ತವರಿಗೆ ಗುರುಗಳಿಗೆ ಗೌರವಕೊಟ್ಟು ಶಿಕ್ಷಣವನ್ನು ತಪಸ್ಸಿನಂತೆ ಪಡೆದರೆ ಕೀರ್ತಿವಂತರಾಗಿ ಬಾಳುತ್ತೀರಿ ಎಂದು ವಿದ್ಯಾರ್ಥಿಗಳಲ್ಲಿ ಸ್ಫೂರ್ತಿ ತುಂಬಿದರು.

ಎಸ್‌ಎಸ್‌ಎಲ್‌ಸಿ ಎಂಬುದು ವಿದ್ಯಾರ್ಥಿ ಜೀವನದ ಮೊದಲ ಘಟ್ಟ.ಇದಕ್ಕೆ ಹೆದರುವ ಅಗತ್ಯವಿಲ್ಲ,ಮೊದಲಪರೀಕ್ಷೆಯಲ್ಲಿಪಾಸಾಗಿಯೇ ತೀರುತ್ತೇನೆ ಎಂಬ ಆತ್ಮವಿಶ್ವಾಸದಲ್ಲಿ ಪರೀಕ್ಷೆ ಎದುರಿಸಿ.ಮಾಡುವ ಕೆಲಸದಲ್ಲಿ ನಂಬಿಕೆಯಿಡಿ, ಮನಸ್ಸಿಟ್ಟು ಓದಿ, ಅರ್ಥ ಮಾಡಿಕೊಂಡು ಓದಿ, ಅಪ್ಪ ಅಮ್ಮನ ಕಷ್ಟ, ಕುಟುಂಬದ ಸ್ಥಿತಿಗತಿ ನೆನೆಪಿಗೆ ತಂದುಕೊಂಡು ಅಭ್ಯಾಸ ಮಾಡಿದರೆ ಯಾವುದೂ ಕಷ್ಟವಾಗದು.ವಿಜಯ ಕಟ್ಟಿಟ್ಟ ಬುತ್ತಿ ಎಂದರು. ಕಾರ್ಯಕ್ರಮದಲ್ಲಿ ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕ ರಮೇಶ್, ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ನಾರಾಯಣಸ್ವಾಮಿ, ರಾಜ್ಯ ಕಾರ್ಯದರ್ಶಿ ಅಮರ್‌ನಾರಾಯಣಸ್ವಾಮಿ, ಬಿಇಒ ಸುಕನ್ಯ ಮತ್ತಿತರರು ಇದ್ದರು.